ವೈದ್ಯಕೀಯ
ಇತಿಹಾಸದ
ಚಿತ್ರ-ಪಯಣ

A Pictorial Journey
into History of Medicine

ನಿರಾಮಯ

Nirāmaya

Dr. Kiran V. S



ಡಾ. ಕಿರಣ್. ವಿ. ಎಸ್

ನಿರಾಮಯ | Nirāmaya

ನಿರಾಮಯ | Nirāmaya

ವೈದ್ಯಕೀಯ ಇತಿಹಾಸದ ಚಿತ್ರ-ಪಯಣ | A Pictorial Journey into History of Medicine

ಡಾ. ಕಿರಣ್ ವಿ. ಎಸ್

ಬೆಂಗಳೂರು

ನಿರಾಮಯ | Nirāmaya – ವೈದ್ಯಕೀಯ ಇತಿಹಾಸದ ಚಿತ್ರ-ಪಯಣ | A Pictorial Journey into History of Medicine written in Kannada by ಡಾ. ಕಿರಣ್ ವಿ. ಎಸ್. | Dr. Kiran V. S
Email: kannada.serendipity @ gmail.com
Cover & Page Design: Omshivaprakash for Techfiz Inc.

9789354166815

This book was produced with ePustaka - Ink and Weave initiative by Techfiz Inc. (https://techfiz.com) Reach us via info@techfiz.com.

Contents

ಮೊದಲ ಮಾತು

ನಾನು "ನಿರಾಮಯ" ಕೃತಿಯ ಲೇಖಕನಲ್ಲ!

"ನಿರಾಮಯ"ದಲ್ಲಿ ಮಾತನಾಡುವುದು ಚಿತ್ರಗಳು! ಅವನ್ನು ಸಂಗ್ರಹಿಸಿ ಒಟ್ಟು ಮಾಡಿ ಕೊಟ್ಟದ್ದು ಮತ್ತು ಅವಕ್ಕೆ ಕೆಲವು ಟಿಪ್ಪಣಿಗಳನ್ನು ಬರೆದದ್ದು ಮಾತ್ರವಷ್ಟೇ ನನ್ನ ಕೆಲಸ! ಶತಮಾನಗಳ ಕಾಲದಿಂದ ಬೆಳೆದುಬಂದ ವೈದ್ಯಕೀಯ ವ್ಯವಸ್ಥೆಯ ಇತಿಹಾಸವನ್ನು ಚಿತ್ರಗಳ ಮೂಲಕ ಬಿಂಬಿಸುವ ವಿನೂತನ ಪ್ರಯತ್ನ. ಚಿತ್ರವೊಂದು ಸಾವಿರ ಪದಗಳನ್ನು ಹೇಳುತ್ತದೆ ಎನ್ನುತ್ತಾರೆ. ಹಾಗಾಗಿ "ನಿರಾಮಯ" ಕನಿಷ್ಟ ಎರಡು ಲಕ್ಷ ಪದಗಳ ಹೊತ್ತಗೆ!

ವೈದ್ಯಕೀಯ ವಿದ್ಯಾರ್ಥಿಗಳಿಗೆ ಗಮನಿಸುವ ಗುಣ ಇರಲೇಬೇಕು. ರೋಗಿಯ ರೋಗ ಪತ್ತೆ ಮಾಡುವದು ಓರ್ವ ನುರಿತ ಪತ್ತೇದಾರನ ಕೆಲಸದಂತೆ. ಅದರ ಮೊಟ್ಟಮೊದಲ ಹೆಜ್ಜೆ – ಅವಲೋಕನ. ಅದರ ನಂತರ ಸ್ಪರ್ಶ, ತಾಡನ, ಮತ್ತು ಶ್ರವಣ. ಅನೂಚಾನವಾಗಿ ವೈದ್ಯಕೀಯ ಶಿಕ್ಷಣ ಈ ಪದ್ಧತಿಯ ಮಹತ್ವವನ್ನು ಸಾರುತ್ತಲೇ ಬಂದಿತ್ತು. ಆದರೆ, 21 ನೆಯ ಶತಮಾನದ ವೈಜ್ಞಾನಿಕ ಕ್ರಾಂತಿ ಇದನ್ನು ತಿರುವಿಹಾಕಿದೆ! ಇಂದು ಲಭ್ಯವಿರುವ ನೂರಾರು ಉನ್ನತ ಪ್ರಯೋಗಾಲಯಗಳ ಪರೀಕ್ಷೆಗಳನ್ನು ಮಾಡಿ ರೋಗವನ್ನು ಪತ್ತೆ ಮಾಡುವ ವಿಧಾನಗಳು ಅಭಿವೃದ್ಧಿ ಆಗಿವೆ. ಇದರ ಜೊತೆಗೆ ರೋಗಿ-ವೈದ್ಯರ ನಡುವೆ ಕಾನೂನು ಪ್ರವೇಶಿಸಿದೆ! ಹೀಗಾಗಿ, ರೋಗಿಯ ಚಿಕಿತ್ಸೆಯಲ್ಲಿ "ಪುರಾವೆಗಳನ್ನು ಸಂಗ್ರಹಿಸುವ" ಕಾರ್ಯಕ್ಕೆ ಇರುವ ಒತ್ತು ನಿಖರವಾದ ಗಮನಿಸುವಿಕೆಗೆ ಇಲ್ಲ!

ವೈದ್ಯಕೀಯ ಜಗತ್ತು ಬದಲಾಗುತ್ತಿದೆ. ಖುದ್ದು ವೈದ್ಯರಿಗೂ ಗತದ ಕಡೆಗೆ ಹಿಂದಿರುಗಿ ನೋಡುವ ವ್ಯವಧಾನ ಇಲ್ಲದಷ್ಟು ಧಾವಂತ! ಹೀಗಿರುವಾಗ ಆಸಕ್ತರಿಗೆ ವಿವರವಾದ ಇತಿಹಾಸ ಹೇಳುವುದು ಹೇಗೆ? ಆ ಆಲೋಚನೆಯ ಫಲಶ್ರುತಿಯಾಗಿ ಬಂದದ್ದು ಈ ಪುಸ್ತಕದ ಪ್ರೇರಣೆ. ಜಗತ್ತಿನ ಶ್ರೇಷ್ಟ ಚಿತ್ರಕಾರರು ನಮಗಾಗಿ ಇತಿಹಾಸದ ಹಲವಾರು ಘಟನೆಗಳನ್ನು ಚಿರಸ್ಥಾಯಿಯಾಗಿ ನಿರ್ಮಿಸಿ ಹೋಗಿದ್ದಾರೆ. ಅವುಗಳಲ್ಲಿ ಕೆಲವನ್ನು ವೀಕ್ಷಿಸಿ, ಪರ್ಯಾಲೋಚಿಸಿದರೆ ವೈದ್ಯಕೀಯ ಇತಿಹಾಸ ಒಂದಷ್ಟು ಗ್ರಾಹ್ಯವಾದೀತು ಎಂಬ ಹಂಬಲ.

ಆಲೋಚನೆಯೇನೋ ಸರಿ; ಆದರೆ ಮಾಡುವುದೆಂತು? ಬಹಳ ವರ್ಷಗಳಿಂದ ಜತನ ಮಾಡಿದ್ದ ಚಿತ್ರಗಳ ದೊಡ್ಡ ಸಂಗ್ರಹವೇ ಇತ್ತು. ಆದರೆ, ಅದನ್ನು ತಿದ್ದಿ, ತೀಡಿ, ನೋಟಕ್ಕೆ ಸ್ಪಷ್ಟಗೊಳಿಸಿ, ಓದುವುದಕ್ಕೆ ಅನುಕೂಲಕರವಾಗಿ ವಿನ್ಯಾಸ ಮಾಡಬಲ್ಲ ತಾಂತ್ರಿಕ ಜ್ಞಾನ ನನಗೆ ನಾಸ್ತಿ! ಜೊತೆಗೆ, ತಂತ್ರಜ್ಞಾನದ ಬಗೆಗಿನ ನನ್ನ ಸೀಮಿತ ತಿಳುವಳಿಕೆ ಇಂತಹ ದೊಡ್ಡ ಯೋಜನೆಗೆ ನ್ಯಾಯ ಒದಗಿಸಿಕೊಡಲು ಸಾಕಾಗಿರಲಿಲ್ಲ. ಪುಸ್ತಕದ ಆರಂಭವನ್ನೇನೋ ಮಾಡಿದೆ. ಆದರೆ, ಮುಂದುವರೆಯುವ ಬಗೆ ತಿಳಿದಿರಲಿಲ್ಲ. ಕನಸು ಕನಸಾಗಿಯೇ ಉಳಿದುಹೋಗುತ್ತದೆ ಅನಿಸಿತು!

ಈ ಹಂತದಲ್ಲಿ ನೆನಪಾದದ್ದು ಕನ್ನಡ ಇ-ಪುಸ್ತಕ ಮತ್ತು ಮುಕ್ತ ಜ್ಞಾನ ಪ್ರಸರಣದಲ್ಲಿ ದೊಡ್ಡ ಹೆಸರಾಗಿರುವ ಶ್ರೀಯುತ ಓಂಶಿವಪ್ರಕಾಶ್ ಅವರು. ನನ್ನ "ಸೆರೆಂಡಿಪಿಟಿ – ವೈದ್ಯಲೋಕದ ಅದ್ಭುತ ಆಕಸ್ಮಿಕಗಳು" ಎಂಬ ಉಚಿತ ಇ-ಪುಸ್ತಕಕ್ಕೆ ತಾಂತ್ರಿಕ ಸ್ಪರ್ಶ ನೀಡಿ, ಅದರ ವಿನ್ಯಾಸವನ್ನು ಬದಲಿಸಿದ್ದ ಅವರನ್ನು ಈ ಚಿತ್ರ-ಆಧಾರಿತ ಪುಸ್ತಕದ ಕುರಿತಾಗಿ ಸಲಹೆ ಕೇಳೋಣ ಅನಿಸಿತು. ನನಗೆ ಅವರ ವೈಯಕ್ತಿಕ ಪರಿಚಯ ಇರಲಿಲ್ಲ. ಒಂದು ಅವ್ಯಕ್ತ ಅಳುಕಿನಿಂದಲೇ ಅವರನ್ನು ಸಂಪರ್ಕಿಸಿದೆ. ಅದು ನನ್ನ ಪಾಲಿಗೆ ಪುಸ್ತಕದ ಕನಸನ್ನು ಮತ್ತೆ ನನಸು ಮಾಡಿತು! "ನಿರಾಮಯ"ದ ಅಂತಿಮ ರೂಪ ಶ್ರೀಯುತ ಓಂಶಿವಪ್ರಕಾಶ್ ಅವರ ಕಲ್ಪನೆಯ ಕೂಸು.

ಮುಕ್ತ ಜ್ಞಾನ ಪ್ರಸರಣದ ಅಡಿಯಲ್ಲಿ, ನನ್ನ ಹಿಂದಿನ "ಸೆರೆಂಡಿಪಿಟಿ – ವೈದ್ಯಲೋಕದ ಅದ್ಭುತ ಆಕಸ್ಮಿಕಗಳು" ಇ-ಪುಸ್ತಕದ ರೀತಿಯಲ್ಲಿಯೇ "ನಿರಾಮಯ" ಇ-ಪುಸ್ತಕ ಕೂಡ ಎಲ್ಲರಿಗೂ ಉಚಿತ! ಯಾರು ಬೇಕಾದರೂ "ನಿರಾಮಯ"ವನ್ನು ಅಂತರ್ಜಾಲದ ಮೂಲಕ ಉಚಿತವಾಗಿ ತಮ್ಮ ಕಂಪ್ಯೂಟರ್ ಅಥವಾ ಮೊಬೈಲ್ ಫೋನ್ ಗಳಿಗೆ ಇಳಿಸಿಕೊಂಡು ಓದಿ, ಆನಂದಿಸಬಹುದು.

ಪ್ರತಿಯೊಂದು ಚಿತ್ರವನ್ನೂ ಅದರ ಅಂತರ್ಜಾಲದ ಮೂಲದ ಜೊತೆಗೆ ಜೋಡಿಸಿದೆ. ಚಿತ್ರದ ಮೇಲೆ ಕ್ಲಿಕ್ ಮಾಡಿದಾಗ ಆ ಮೂಲ ಚಿತ್ರ ಪರದೆಯ ಮೇಲೆ ತೆರೆದುಕೊಳ್ಳುತ್ತದೆ. ಆಗ ಆ ಚಿತ್ರದ ಮತ್ತಷ್ಟು ವಿವರಗಳನ್ನು ನೋಡಬಹುದು. ಪ್ರತಿಯೊಂದು ಚಿತ್ರದ ಜೊತೆ ಅದರ ಹಿನ್ನೆಲೆ, ಚಿತ್ರಕಾರ, ಆತನ ಕಾಲ, ಚಿತ್ರದ ಪ್ರಸಂಗ, ಮತ್ತು ವೈದ್ಯಕೀಯ ಇತಿಹಾಸದ ಬಗ್ಗೆ ಆ ಚಿತ್ರದ ವಿವರಗಳನ್ನು ಸಂಕ್ಷಿಪ್ತವಾಗಿ ನೀಡಿದೆ. ಮುಖ್ಯವಾದ ಮಾಹಿತಿಗಳ ಕೊಂಡಿಗಳನ್ನು ಕೂಡ ನೀಡಿದೆ. ಆ ಕೊಂಡಿಗಳ ಮೂಲಕ ಅಂತರ್ಜಾಲದ ಮಾಹಿತಿ ತೆರೆದುಕೊಳ್ಳುತ್ತದೆ. ಆಸಕ್ತರು ಆಯಾ ವಿಷಯಗಳ ಬಗ್ಗೆ ಮತ್ತಷ್ಟು ವಿವರಗಳನ್ನು ತಿಳಿಯಬಹುದು. ಈ ರೀತಿಯ ಪ್ರಯೋಗ ಇದುವರೆಗೆ ಭಾರತದ ಯಾವುದೇ ಭಾಷೆಯಲ್ಲೂ ಆಗಿಲ್ಲ ಎನ್ನುವುದು ಕನ್ನಡದ ಹೆಮ್ಮೆ!

"ನಿರಾಮಯ"ವನ್ನು ಯಾರು ಓದಬಹುದು? ಚಿತ್ರಕಲೆ, ಇತಿಹಾಸ, ವೈದ್ಯಕೀಯ ವಿಷಯಗಳ ಪೈಕಿ ಯಾವುದೇ ಒಂದರಲ್ಲಿ ಆಸ್ಥೆಯುಳ್ಳ ಎಲ್ಲರಿಗೂ ಈ ಪುಸ್ತಕ ಬಹಳ ಆಪ್ತವಾಗುತ್ತದೆ. ಪುಸ್ತಕದ ಬಗ್ಗೆ ಯಾವುದೇ ಅಪೇಕ್ಷೆ ಇಲ್ಲದೆ ಕೇವಲ ಕುತೂಹಲಕ್ಕಾಗಿ ನೋಡುವವರನ್ನು ಕೂಡ "ನಿರಾಮಯ" ತನ್ನೆಡೆಗೆ ಆಕರ್ಷಿಸುತ್ತದೆ! ಒಟ್ಟಿನಲ್ಲಿ, ಇದು ಪ್ರತಿಯೊಬ್ಬರೂ ನೋಡಬೇಕಾಗಿರುವ ಪುಸ್ತಕ!

"ನಿರಾಮಯ"ದ ಮೌಲ್ಯವರ್ಧಿತ ಆವೃತ್ತಿ ಕೂಡ ಲಭ್ಯವಿದೆ. ಚಿತ್ರಕಲೆ, ಇತಿಹಾಸ, ವೈದ್ಯಕೀಯ ಸಂಶೋಧನೆ, ಚಾರಿತ್ರಿಕ ಮಾಹಿತಿಗಳ ಆಸಕ್ತರಿಗೆ "ನಿರಾಮಯ" ಇ-ಪುಸ್ತಕದಲ್ಲಿನ ಮತ್ತಷ್ಟು ವಿಶಿಷ್ಟ ವಿವರಗಳನ್ನು ನೀಡಬಲ್ಲ ಆವೃತ್ತಿಯೊಂದನ್ನು ಸಿದ್ಧಪಡಿಸಲಾಗಿದೆ. ಆಸಕ್ತರು sanchaya.org ಮತ್ತು sanchifoundation.com ಅನ್ನು ಸಂಪರ್ಕಿಸಬಹುದು.

ಶತಮಾನಗಳ ಸಾಧಕರ ಅನನ್ಯ ಪ್ರತಿಭೆಗೆ ಬೆಳಕಿಂಡಿಯಾದ ಈ ಚಿತ್ರಗಳು ಎಲ್ಲ ಓದುಗರಲ್ಲೂ ಬೆರಗು ಮೂಡಿಸಲಿ ಎಂಬ ಆಶಯ! ಭಾರತೀಯ ಭಾಷೆಗಳಲ್ಲಿ ಪ್ರಥಮ ಪ್ರಯತ್ನವಾದ "ನಿರಾಮಯ" ಕನ್ನಡ ಓದುಗರ ಅಭಿಮಾನದಿಂದ ಬೆಳೆಯಲಿ ಎಂದು ಹಾರೈಕೆ!

ಧನ್ಯವಾದಗಳು!

ಡಾ. ಕಿರಣ್ ವಿ. ಎಸ್.

Prelude

I am not the author of Nirāmaya!

The spoken words of Nirāmaya are through the paintings! I have merely compiled and annotated these paintings. This book is an attempt at graphing the centuries of development of medical history through some paintings. "A picture speaks a thousand words"! By that virtue, this is a book of at least two-hundred-thousand words!

Observation is an integral part of medical learning. Diagnosing a disease is no less an effort than a detective's job! The primary need for achieving the diagnosis is inspection. This is followed by palpation, percussion, and auscultation. This methodology has been perfected over a long time. However, the technological revolution of the 21st century has changed this equation. Hundreds of medical investigations have been incessantly developed. The medical practice has been influenced by the advent of the medico-legal angle. Collecting the evidence for treating a patient has superseded the traditional approach of patient-centric management.

The world of a doctor has undergone enormous changes in the past few decades. Even a trained physician has no time to turn back and ponder over the history! In such scenarios, who would narrate the historical medical developments to the interested? Such a thought resulted in this book! Great painters of the past have immortalized a few moments of history for us. Inspection and assimilation of a few of those paintings might serve to learn a bit of medical history.

The thought was a good one. But how about the execution? Although I had a large collection of paintings in digital versions collected over many years, I hardly had the technical knowledge of serving them for the benefit of viewers! This big venture demanded accurate know-how. My limited knowledge could hardly make justice for such a venture. Although I had made a beginning, I did not know how to proceed. I felt the time has come for the death of another dream!

It was at this juncture that I remembered Mr. Omshivaprakash. He is a big name in the field of e-books and creative commons. He had radically meta-

morphosed my earlier Kannada e-book "Serendipity" beyond my imagination! I had to overcome my hesitation in asking him for help this time. That phone call changed the further course of the fate of Nirāmaya! The Nirāmaya you are seeing is a product of his design!

My earlier Kannada e-book "Serendipity", the largest collection of incidental discoveries in medicine, was made available free of cost for everyone over the internet. Along the same lines, Nirāmaya, a bilingual book in Kannada and English, is also being given free of cost. Anyone can download Nirāmaya into their computer or mobile phone and savor it!

Every painting in Nirāmaya comes with a link to its source. A single click on the painting will take the reader to the original image, which opens on the full screen. This will enable the readers to appreciate the painting in its complete details. Each painting comes with a brief description of the image details, painter, time of the work, details of the image portrayed, and its relevance with the history of medicine. Few important entries in the description are hyperlinked to an authentic source on the internet. Clicking on any of these entries would open the page for a flood of knowledge on that subject. Such an attempt is quite novel for e-books in Indian languages.

Nirāmaya also comes with an advanced version for serious readers, art enthusiasts, medical researchers, history buffs, and all such readers who would require further details. Those interested can contact sanchaya.org and sanchifoundation.com

Whom would Nirāmaya benefit? Anyone with interest in art or medicine or history or in general, trivia! The readers can connect with the contents of Nirāmaya very easily. Thus, Nirāmaya is meant for everyone! Nirāmaya is a window to the immense talent of the great artists of the centuries! It is hoped that the work would be received with equal passion by every interested reader!

Thanking all the readers in advance,

Dr. Kiran V. S.

ನಿರಾಮಯ | Nirāmaya

ನಿರಾಮಯ ಎಂದರೆ ರೋಗರಹಿತ ಆರೋಗ್ಯಶಾಲಿ ಎಂದರ್ಥ.

ಅಥರ್ವ ವೇದದಲ್ಲಿ ಬಳಸಲಾಗಿರುವ "ನಿರಾಮಯ" ಉಪನಿಷತ್ ನ ಮಂತ್ರದಲ್ಲೂ ಕಾಣುತ್ತದೆ.

ವ್ಯಷ್ಟಿ-ಸಮಷ್ಟಿ ಮಟ್ಟದಲ್ಲಿ ಎಲ್ಲರೂ "ನಿರಾಮಯ"ರಾಗಿರಬೇಕು ಎಂಬುದು ಆರ್ಷೇಯ ಆಶಯ.

ವೈದ್ಯಕೀಯ ಶಾಸ್ತ್ರ ಆರಂಭವಾದದ್ದೇ "ನಿರಾಮಯ" ಸ್ಥಿತಿಯನ್ನು ಎಲ್ಲರಿಗೂ ಲಭ್ಯವಾಗಿಸಲು.

ವೈದ್ಯಶಾಸ್ತ್ರದ ಪರಮ ಲಕ್ಷ್ಯ "ನಿರಾಮಯ".

ವೈದ್ಯಕೀಯ ಇತಿಹಾಸದ ಅನೇಕ ಹಂತಗಳನ್ನು ಮಿಥಕಗಳಿಂದ ಹಿಡಿದು ಆಧುನಿಕ ವೈದ್ಯ ಪದ್ದತಿಯ ನಿರ್ಮಾಣದವರೆಗೆ ಚಿತ್ರಗಳ ಮೂಲಕ ಬಿಂಬಿಸಿರುವ ಈ ಕೃತಿಗೆ "ನಿರಾಮಯ" ಎಂಬುದೇ ಸೂಕ್ತ ಅಭಿಧಾನ.

ನಿರಾಮಯ ಎಂಬ ಹೆಸರನ್ನು ಪುರಸ್ಕರಿಸಿ ಪ್ರೋತ್ಸಾಹಿಸಿದ ಶತಾವಧಾನಿ ಡಾ. ಆರ್ ಗಣೇಶ್ ಅವರಿಗೂ ಮತ್ತು ವಿದ್ವಾಂಸರಾದ ಶ್ರೀಯುತ ಸದ್ಯೋಜಾತ ಭಟ್ ಅವರಿಗೂ ಲೇಖಕನ ಕೃತಜ್ಞತೆಗಳು.

Nirāmaya means healthy and disease-free.

The ancient Sanskrit term finds mention in Atharva Veda, one of the antediluvian sources of human knowledge. Nirāmaya features in the hymns of Upanishath, wishing for the eternal welfare of everyone in the world.

The science of medicine developed to achieve the state of Nirāmaya to everyone.

The final ambition of all the developments in the field of medicine is the attainment of Nirāmaya.

This book which scores the saga of the medical progress from the mythical era to the modern times through exploration of classical pictures is thus appropriately named Nirāmaya – the final objective of all these human endeavours.

The author is grateful to Shatavadhani Dr. R. Ganesh and Vidwan Sadyojata Bhat for helping finalize naming this book.

1. Dhanvantari



"File:Dhanwantari Bhagwan.jpg" by Dhanwantari4u is licensed under CC BY-SA 4.0

ಆಯುರ್ವೇದ ಹಿಂದೂ ಧರ್ಮದ ಪುರಾತನ ಆರೋಗ್ಯ ಪದ್ದತಿ. ಧನ್ವಂತರಿ ಆಯುರ್ವೇದದ ಅಧಿದೇವತೆ.

ಆತ ಸಮುದ್ರ ಮಥನ ಕಾಲದಲ್ಲಿ ಜನಿಸಿದನೆಂದು ಪುರಾಣಗಳು ಹೇಳುತ್ತವೆ. ವೇದಗಳಲ್ಲಿ ಧನ್ವ ಎನ್ನುವವರ ಪ್ರಸ್ತಾಪವಿದೆ. ಅವರ ಮಗನಾದ ಕಾಶಿರಾಜ ದಿವೋದಾಸನೇ ಧನ್ವಂತರಿ ಎನ್ನಲಾಗಿದೆ. ಇಂದ್ರದೇವನಿಂದ ಪಡೆದ ಆಯುರ್ವೇದ ವಿದ್ಯೆಯನ್ನು ಮನುಷ್ಯರ ಯೋಗಕ್ಷೇಮಕ್ಕಾಗಿ ಬಳಸಿದರೆಂದು ಧನ್ವಂತರಿಯನ್ನು ಆರೋಗ್ಯದ ದೇವತೆಯಾಗಿ ಪರಿಗಣಿಸಲಾಗುತ್ತದೆ.

Ayurveda is the ancient science of the healthcare of Hindu Dharma. The God of Ayurveda is Dhanvantari. Puranas claim that the origin of Lord Dhanvantari was from the celestial ocean churning as narrated in the Puranas. However, there is a mention of Dhanva in Vedas. His son Divodasa, who was the king of the ancient empire of Kasi is said to be Dhanvantari himself. Lord Indra bestowed Dhanvantari with the knowledge of Ayurveda and advised him to use it for the welfare of the world. Hence, Dhanvantari is considered as the God of health.

2. Birth of Aswini Twins



"Birth of the Celestial Twins, Folio from a Harivamsha (Lineage of Vishnu) LACMA M.83.1.7 (1 of 2)" by Fæ is licensed under CC BY 2.0

ಅಶ್ವಿನಿ ದೇವತೆಗಳು ವಿಶ್ವದ ಮೊದಲ ವೈದ್ಯರು. ಋಗ್ವೇದದಲ್ಲಿ ನೂರಾರು ಬಾರಿ ಉಲ್ಲೇಖವಾಗಿರುವ ಇವರು

ಸೂರ್ಯನ ಮಕ್ಕಳು. ಸೂರ್ಯ ಮತ್ತು ಆತನ ಪತ್ನಿ ಸಂಜ್ಞಾ ದೇವಿ ಕುದುರೆಗಳ ರೂಪದಲ್ಲಿ ವಿಹರಿಸುವಾಗ ಹುಟ್ಟಿದ ಅವಳಿ ಮಕ್ಕಳಾದ್ದರಿಂದ ಅವರು "ಅಶ್ವಿನಿ". ಋಗ್ವೇದದಲ್ಲಿ ಇವರನ್ನು "ನಾಸತ್ಯ ಮತ್ತು ದಶ್ರ" ಎಂದು ಕೂಡ ಕರೆಯಲಾಗಿದೆ. ವೇದ, ಪುರಾಣ, ಮತ್ತು ಮಹಾಭಾರತದಲ್ಲಿ ಅಶ್ವಿನಿ ದೇವತೆಗಳ ಚಿಕಿತ್ಸೆಗಳ ಬಗೆಗಿನ ಉಲ್ಲೇಖವಿದೆ.

1585 ರ ವೇಳೆಗೆ ಮೊಘಲರ ಆಡಳಿತದ ಕಾಲದಲ್ಲಿ, ಇಂದಿನ ಲಾಹೋರ್ ಪ್ರಾಂತ್ಯದಲ್ಲಿ, ಓರ್ವ ಅಜ್ಞಾತ ಕಲಾವಿದ ರಚಿಸಿರುವ ಜಲವರ್ಣ ಚಿತ್ರ. ಹರಿವಂಶ ಎನ್ನುವ ಸಂಸ್ಕೃತ ಕಾವ್ಯದ ಪರ್ಷಿಯನ್ ಅನುವಾದ ಮಾಡುವಾಗ ಅದಕ್ಕೆ ಸಂವಾದಿಯಾಗಿ ರಚಿಸಿರುವ ಅಶ್ವಿನಿ ದೇವತೆಗಳ ಜನ್ಮದ ಚಿತ್ರಣ.

The First documented doctors in the Vedic scriptures were the Aswini Kumara twins. Mentioned in the RigVeda as Nasatya and Dasra, these twins were the sons of the Sun God. The Goddess Sangna Devi, the wife of the Sun God, conceived them when the couple took the form of horses.
This watercolor painting by an unknown artist is found in the Persian translation of Hindu Epic Harivamsa during the Mughal rule in 1585 at Lahore. The painting shows the birth of the Aswini Twins.

3. Birth of Aesculapius



The Finding of Aesculapius. Giovanni Tognolli, Public domain, via Wikimedia Commons.

ಜನಸಾಮಾನ್ಯರು ವೈದ್ಯರನ್ನು ಸಂಕೇತಿಸುವುದು ಕೆಂಪು ಬಣ್ಣದ + ಚಿಹ್ನೆಯಿಂದ. ಆದರೆ, ಅದು ವೈದ್ಯರ ಸಂಕೇತ ಅಲ್ಲ; ರೆಡ್ ಕ್ರಾಸ್ ಎಂಬ ಸ್ವಯಂ ಸೇವಾ ಸಂಸ್ಥೆಯದ್ದು. ವೈದ್ಯರ ಸಂಕೇತ ಚಿಹ್ನೆಯೂ ಇದೆ. ಒಂದು ನೇರವಾದ ಕೋಲಿನ ಸುತ್ತ ಸುತ್ತಿಕೊಂಡಿರುವ ಸರ್ಪದ್ದು. ಇದನ್ನು ಇಸ್ಕಲಪಿಯಸ್ ನ ದಂಡ ಎನ್ನುತ್ತಾರೆ. ಈತ ಪ್ರಾಚೀನ ರೋಮನ್ ವೈದ್ಯ ದೇವತೆ. ಈತ ಅಪೋಲೋ ದೇವನಿಂದ ಮಾನವ ಮಹಿಳೆಗೆ ಜನಿಸಿದ ಮಗ. ಆತನನ್ನು ಗರ್ಭದಲ್ಲಿ ಹೊತ್ತಿದ್ದ ತಾಯಿ, ಆತ ಹುಟ್ಟುವ ಕೆಲವು ಸಮಯ ಮೊದಲೇ ತೀರಿಕೊಂಡಳು. ಆಕೆಯ ಮೃತದೇಹದ ಗರ್ಭವನ್ನು ಸೀಳಿ ಈತನ ಹೆರಿಗೆ ಮಾಡಿದರು. ಹೀಗೆ, ಪ್ರಾಯಶಃ ಪಾಶ್ಚಾತ್ಯ ಜಗತ್ತಿನ ಮೊದಲ ಸಿಜೇರಿಯನ್ ಶಿಶು ಈತ! ಈ ನವಜಾತ ಶಿಶುವನ್ನು ಅಪೋಲೋ ದೇವ ಚಿರಾನ್ ಎಂಬ ಸೆಂಟಾರ್ (ಅರ್ಧ ಮಾನವ-ಅರ್ಧ ಕುದುರೆ) ಬಳಿ ಒಯ್ದು ಮಗುವನ್ನು ಬೆಳೆಸಲು ಆಜ್ಞಾಪಿಸುತ್ತಾನೆ. ಈ ಶಿಶುವನ್ನು ಬೆಳೆಸಿದ ಚಿರಾನ್, ಅದಕ್ಕೆ ವೈದ್ಯಕೀಯ ಜ್ಞಾನವನ್ನು ಹೇಳಿಕೊಡುತ್ತಾನೆ. ಈ ಚಿತ್ರದಲ್ಲಿ ತಾಯಿಯನ್ನು ಕಳೆದುಕೊಂಡ ನವಜಾತ ಇಸ್ಕಲಪಿಯಸ್ ಮೇಕೆಯ ಹಾಲು ಕುಡಿಯುತ್ತಿರುವ ಸಂಗತಿ ತೋರಿದೆ. ಹಾವು ಮತ್ತು ನಾಯಿಗಳನ್ನೂ ತೋರಲಾಗಿದೆ. ಜಿಯೋವನಿ ಟೊಗ್ನೊಲಿ ಎಂಬ 19 ನೆಯ ಶತಮಾನದ ಪ್ರಸಿದ್ಧ

ಇಟಾಲಿಯನ್ ಚಿತ್ರಕಾರನ 1830 ರ ತೈಲ ವರ್ಣಚಿತ್ರ. ರೋಮನ್ ಮಿಥಕಗಳ ಆಸಕ್ತರಿಗೆ ಈ ಚಿತ್ರ ಸಾಕಷ್ಟು ಮಾಹಿತಿ ನೀಡುತ್ತದೆ.

This 1830 oil painting by the Italian artist Giovanni Tognolli is titled “The finding of Aesculapius”. The symbol of the medical profession across the world is a long staff surrounded by a snake. The staff belongs to Aesculapius, the Roman God of healing. He is said to be the son of the Roman God Apollo and a human mother. His pregnant mother died at the final stages of her pregnancy. The womb of her dead body was opened to deliver this child. Technically, Aesculapius is the first Cesarean-born child of western literature! Apollo left the newborn with a centaur named Chiron, who taught knowledge of medicine to Aesculapius. The painting depicts the newborn Aesculapius feeding goat milk. A serpent and a dog are also seen. This is a crucial painting for anyone interested in Roman mythology.

4. Statue of Aesculapius




Pergamon_Museum_Asclepius by Sciprogrammer / CC BY-SA

ಜರ್ಮನಿಯ ಬರ್ಲಿನ್ ನಗರದ ಪೆರ್ಗಮೊನ್ ಸಂಗ್ರಹಾಲಯದ, ಎರಡನೆಯ ಶತಮಾನದಲ್ಲಿ ಕೆತ್ತಲಾಗಿರುವ ಇಸ್ಕಲಪಿಯಸ್ ವಿಗ್ರಹ. ಆತನ ಬಲಗೈನಲ್ಲಿರುವ ದಂಡದ ಸುತ್ತ ಹಾವು ಸುತ್ತಿದೆ. ಆತ ತನ್ನ ಚಿಕ್ಕಂದಿನಲ್ಲಿ ಒಂದು ಹಾವನ್ನು ಕಾಪಾಡಿದನೆಂದೂ, ಅದು ಆತನ ಕಿವಿಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಪುರಾತನ ರಹಸ್ಯಗಳನ್ನು ಉಸಿರಿತೆಂದೂ ಐತಿಹ್ಯ.

This statue of Aesculapius is found in the Pergamon Museum in Berlin. The staff of Aesculapius with the surrounding serpent can be seen. The mythology says that Aesculapius saved a snake during his childhood and it uttered the ancient secrets of medicine in his ear.

5. Birth of Ayurveda



"Sardar Patel Medical College" by colros is licensed under CC BY-SA 2.0

ಗುಜರಾತ್ ನ ಸರ್ದಾರ್ ಪಟೇಲ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಇರುವ ಅಜ್ಞಾತ ಕಲಾವಿದನೊಬ್ಬನ ರಚನೆ. ವೇದಗಳಲ್ಲಿ ಸ್ತುತಿಸಲಾದ ಇಂದ್ರ ದೇವನಿಂದ ಬಹಳ ಕಷ್ಟಪಟ್ಟು ಆಯುರ್ವೇದವನ್ನು ಸಂಪಾದಿಸಿದ ಋಷಿ ಆತ್ರೇಯ ಮತ್ತು ಕಾಶಿರಾಜ ದಿವೋದಾಸರು ಅದನ್ನು ಜನರ ಹಿತಕ್ಕೆ ಬಳಸಿದರು. ಋಷಿಗಳಾದ ಅಗ್ನಿವೇಶ. ಭೇಲ, ಜತುಕರ್ಣ, ಪರಾಶರ, ಹರಿತ, ಕ್ಷರಪಾಣಿ ಮೊದಲಾದವರು ಈ ವಿದ್ಯೆಯನ್ನು ಪರಿಷ್ಕರಿಸಿ ಸಂಹಿತೆಗಳ ರೂಪಕ್ಕೆ ತಂದರು. ಇವುಗಳಲ್ಲಿ ಬಹುತೇಕ ಸಂಹಿತೆಗಳು ಕಾಲನ ಹೊಡೆತದಲ್ಲಿ ನಾಶವಾದವು. ಇವುಗಳ ಪೈಕಿ ಅಗ್ನಿವೇಶ ಸಂಹಿತೆಯನ್ನು ಚರಕ ಮಹರ್ಷಿಗಳು ಪರಿಷ್ಕರಿಸಿ, ಚರಕ ಸಂಹಿತೆಯನ್ನು ರಚಿಸಿದರು.

This painting at the Sardar Patel Medical College by an unknown artist depicts the refinement of the science of Ayurveda by seers. The divine

knowledge of Ayurveda was resting with Gods. Maharshi Atreya and Dhanwantari Divodasa, the King of Kasi acquired the knowledge of this science from Lord Indra. A large gathering of great seers, especially Agnivesa, Bhela, Juatukarna, Parasara, and Ksarapani, critically studied the refined version of this traditional wisdom and made textual compilations called Samhitas. Most of these were destroyed with time and got irretrievably lost. The learned sage Charaka accomplished the resurrection of the Agnivesa Samhita, thereafter called Charaka Samhita.

6. Temple of Imhotep



An invocation to I-em-hetep, the Egyptian deity of medicine. Oil painting by Ernest Board.. Credit: Wellcome Collection. Attribution 4.0 International (CC BY 4.0)

ಈಜಿಪ್ಟ್ ಅನ್ನು ಪ್ರಾಚೀನ ನಾಗರೀಕತೆಯ ತೊಟ್ಟಿಲು ಎಂದು ಪರಿಗಣಿಸಲಾಗಿದೆ. ಪ್ರಪಂಚದ ಪ್ರತಿಯೊಂದು ನಾಗರಿಕತೆಯ ಬೆಳವಣಿಗೆಯಲ್ಲೂ ಈಜಿಪ್ಟ್ ನ ಪಾತ್ರವಿದೆ ಎನ್ನಲಾಗಿದೆ. ಇಂಹೊಟೆಪ್ ಎಂಬುವರು ಪ್ರಾಚೀನ ಈಜಿಪ್ಟ್ ನ ವೈದ್ಯ ದೇವತೆ. ಅರ್ನೆಸ್ಟ್ ಬೋರ್ಡ್ ಎಂಬ ಬ್ರಿಟಿಷ್ ಕಲಾವಿದರು 1912 ರಲ್ಲಿ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಇಂಹೊಟೆಪ್ ಅವರ ದೇವಾಲಯದಲ್ಲಿ ಇದ್ದ ಬೃಹತ್ ವಿಗ್ರಹದ ಮುಂದೆ ಪ್ರಾರ್ಥಿಸುತ್ತಿರುವ ಜನರನ್ನು ತೋರಲಾಗಿದೆ. ರೋಗಗಳು ದೇವರುಗಳ ಶಾಪ ಎಂದು ನಂಬಲಾಗಿದ್ದ ಅಂದಿನ ಕಾಲದಲ್ಲಿ ಶಾಪ ನಿವಾರಣೆಗಾಗಿ ರೋಗಿಗಳು ಈ ದೇವಾಲಯವನ್ನು ಆಶ್ರಯಿಸುತ್ತಿದ್ದರು. ನಿಧಾನವಾಗಿ ಈ ದೇವಾಲಯಗಳು ಆಸ್ಪತ್ರೆಯ ಸ್ವರೂಪ ಪಡೆದವು. ಜಗತ್ತಿನ ಬಹುತೇಕ ಆರಂಭಿಕ ಆಸ್ಪತ್ರೆಗಳು ಇದೇ ರೀತಿ ಆಯಾ ನಾಗರಿಕತೆಯ ಆರೋಗ್ಯ ದೇವತೆಯ ದೇವಾಲಯದಲ್ಲೇ ಪ್ರಾರಂಭವಾದವು. ಈ ಮಾದರಿಯನ್ನು ಮುಂದೆ ಗ್ರೀಕ್ ನಾಗರಿಕತೆಯಲ್ಲೂ ಅನುಸರಿಸಿದ್ದಾರೆ.

This 1912 painting by the British artist Ernest Board is a depiction of ancient

Egyptian practice. Ancient Egypt was one of the major cradles of civilization, with many secretive practices attributed! Imhotep was an Egyptian deity associated with medicine. On the far left of the painting is a colossal statue of the God to whom the worshipers pray for health. This structure was likely to be a temple of health with Imhotep as the deity. Hospitals were usually associated with such temples. Such practice of associating care for the sick with the temple of God for medicine is prevalent in many ancient cultures across the globe. The idea for the temple of Aesculapius in Ancient Greece must have come from Egypt.

7. Temple of Aesculapius




"waterhouse_sick_child_brought_into_temple_aesculapius_1877" by ErgSap is marked with CC PDM 1.0

ಪ್ರಾಚೀನ ಗ್ರೀಕ್ ನಾಗರಿಕತೆಯಲ್ಲೂ "ದೇವತೆಗಳ ಕೋಪದಿಂದ ಕಾಯಿಲೆಗಳು ಬರುತ್ತವೆ" ಎಂಬ ಪ್ರತೀತಿ ಗಾಢವಾಗಿತ್ತು. ಹೀಗಾಗಿ, ತೀವ್ರಸ್ವರೂಪದ ಅಥವಾ ಗುಣವಾಗದ ಕಾಯಿಲೆಗಳ ಸಂದರ್ಭದಲ್ಲಿ ಆರೋಗ್ಯ ದೇವತೆಯ ದೇವಾಲಯವನ್ನು ಎಡತಾಕುತ್ತಿದ್ದರು. ಬ್ರಿಟಿಷ್ ಚಿತ್ರಕಾರ ಜಾನ್ ವಾಟರ್ಹೌಸ್ ಅವರು 1877 ರಲ್ಲಿ ರಚಿಸಿರುವ ಈ ತೈಲವರ್ಣಚಿತ್ರದಲ್ಲಿ ಕಾಯಿಲೆಗ್ರಸ್ತ ಮಗುವೊಂದನ್ನು ಪ್ರಾಚೀನ ಗ್ರೀಸ್ ನ ಆರೋಗ್ಯ ದೇವತೆ ಇಸ್ಕಲಪಿಯಸ್ ನ ದೇವಾಲಯಕ್ಕೆ ತಂದಿರುವ ಚಿತ್ರಣವಿದೆ. ಆರೋಗ್ಯ ದೇವತೆಯ ದೇವಾಲಯವೇ ಆಸ್ಪತ್ರೆಯಾಗುವ ಸಂಪ್ರದಾಯ ಈಜಿಪ್ಟ್ ಮೂಲದ್ದು. ಪ್ರಾಚೀನ ಗ್ರೀಸ್ ಗೆ ಕೂಡ ಅದೇ ಪ್ರಭಾವ ಹಬ್ಬಿರಬಹುದು.

In this 1877 oil painting, the British-Italian painter John William Waterhouse depicts a sick child brought into the ancient temple of Aesculapius in Greece. The tradition of building hospitals in the temple of God of medicine had extended from Egypt into Greece. In those days, people would trust the blessing of God to cure the disease. Hence, this practice seems appropriate from the perspective of prevalent social customs.

8. Temple of Aesculapius at Epidaurus



"File:Patients sleeping in the temple of Aesculapius at Epidaurus. Wellcome V0018154.jpg" is licensed under CC BY 4.0

ಪ್ರಾಚೀನ ಗ್ರೀಸ್ ನ ಆರೋಗ್ಯ ದೇವತೆ ಇಸ್ಕಲಪಿಯಸ್ ನ ದೇವಾಲಯ ಎಪಿಡೌರಸ್ ಎನ್ನುವ ಪ್ರಾಚೀನ ಗ್ರೀಸ್ ನ ಸಣ್ಣ ಊರಿನಲ್ಲಿತ್ತು. ಶಕಪೂರ್ವ 4ನೆಯ ಶತಮಾನದಲ್ಲಿ ಕಟ್ಟಿದ್ದಾರೆ ಎನ್ನಲಾಗುವ ಈ ದೇವಾಲಯವನ್ನು 1912 ರಲ್ಲಿ ಬ್ರಿಟಿಷ್ ಕಲಾವಿದ ಅರ್ನೆಸ್ಟ್ ಬೋರ್ಡ್ ಅವರು ಈ ತೈಲವರ್ಣಚಿತ್ರದಲ್ಲಿ ತೋರಿದ್ದಾರೆ. ಜನರು ಕಾಯಿಲೆಗ್ರಸ್ತರಾದ ಸಂದರ್ಭದಲ್ಲಿ ಆರೋಗ್ಯ ದೇವತೆಯ ದೇವಾಲಯಕ್ಕೆ ಬರುತ್ತಿದ್ದರು. ಆರೋಗ್ಯ ದೇವತೆಯ ಪೂಜಾರಿಗಳು ಸಾಮಾನ್ಯವಾಗಿ ವೈದ್ಯಕೀಯದ ಹಿನ್ನೆಲೆಯ ಮನೆತನದವರು. ಅವರೇ ಇಂತಹ ರೋಗಿಗಳಿಗೆ ಚಿಕಿತ್ಸೆ ಮಾಡುತ್ತಿದ್ದರು. ಹೀಗೆ ಕಾಲಾಂತರದಲ್ಲಿ ದೇವಾಲಯ ಆಸ್ಪತ್ರೆಯಾಗಿ ಮಾರ್ಪಾಡಾಯಿತು ಎನ್ನಲಾಗಿದೆ.

Aesculapius was the God of medicine in Ancient Greece. Epidaurus, a small city near the Saronic Gulf of Ancient Greece hosted the temple of Aesculapius. Built in the 4th century BCE, the temple was a sanctuary for the sufferers. People with varieties of diseases would arrive at the temple for blessings from God. Slowly, it developed into a hospital with many of the doctors settling in the temple for the care of the ailing. In 1912, the British artist Ernest Board recreated the ancient scene in the temple of Aesculapius in one of his paintings.

9. Indian System of Medicine - Surgical



A surgeon, sitting on the floor, attends to a patient's leg, as he lies on a bed. Gouache painting by an Indian artist, ca. 1825. Wellcome Collection. Attribution 4.0 International (CC BY 4.0)

ಭಾರತೀಯ ಚಿಕಿತ್ಸಾ ಪದ್ಧತಿಗೆ ದೀರ್ಘ ಇತಿಹಾಸವಿದೆ. ಆಯುರ್ವೇದ ಇಂದಿಗೂ ಪ್ರಚಲಿತವಿರುವ ಜಗತ್ತಿನ ಅತ್ಯಂತ ಪುರಾತನ ಪದ್ಧತಿ! ಭಾರತೀಯ ವೈದ್ಯರ ರೋಗನಿರ್ಣಯ ಕಲೆಗಾರಿಕೆ, ಸರಳ ಔಷಧಗಳು, ಮತ್ತು ನಿಷ್ಕೃಷ್ಟ ಶಸ್ತ್ರಚಿಕಿತ್ಸೆಗಳು ಬಹಳ ಮೆಚ್ಚುಗೆ ಗಳಿಸಿದ್ದವು. ಅಂತೆಯೇ, ಖೊಟ್ಟಿ ವೈದ್ಯರು ಕೂಡ ಸಾಕಷ್ಟು ಇದ್ದರು. ನೈಜ ವೈದ್ಯರನ್ನು ಪತ್ತೆ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ವೈದ್ಯಕೀಯ ಜ್ಞಾನವು ಪವಿತ್ರವಾದದ್ದು ಎಂದೂ, ಅದು ರಕ್ತದಲ್ಲೇ ಮುಂದಿನ ಪೀಳಿಗೆಗೆ ಮುಂದುವರೆಯಬೇಕು ಎನ್ನುವ ಭಾವದಿಂದ ಈ ಜ್ಞಾನರಾಶಿಯ ಬಹುಭಾಗ ಸರಿಯಾಗಿ ಪ್ರಚಲಿತವಾಗದೆ ನಷ್ಟವಾಯಿತು. 1825 ರಲ್ಲಿ ಅಂದಿನ ಬ್ರಿಟಿಷ್ ಕಮಿಷನರ್ ಆಗಿದ್ದ ಜೇಮ್ಸ್ ಸ್ಕಿನ್ನರ್ ಅವರು ಅಂದಿನ ಕಾಲದ ಭಾರತೀಯರ ವಿಭಿನ್ನ ವೃತ್ತಿಗಳ ಕುರಿತಾದ ಚಿತ್ರಮಾಲಿಕೆಯನ್ನು ಹಲವಾರು ಸ್ಥಳೀಯ ಚಿತ್ರಕಾರರಿಂದ ಮಾಡಿಸಿದರು. ಈ ಸರಣಿಯಲ್ಲಿ ವೈದ್ಯರು ಕೂಡ ಇದ್ದರು. ಇಂತಹ ಒಂದು ಚಿತ್ರದಲ್ಲಿ ಶಸ್ತ್ರಚಿಕಿತ್ಸಕರೊಬ್ಬರು ನೆಲದ ಮೇಲೆ

ಕುಳಿತು ಮಂಚದ ಮೇಲೆ ಮಲಗಿರುವ ರೋಗಿಯ ಕಾಲಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಆ ರೋಗಿಯ ಮನೆಗೆ ವೈದ್ಯರು ಭೇಟಿ ನೀಡಿರುವ ಸಾಧ್ಯತೆಗಳು ಕಾಣುತ್ತಿವೆ.

The Indian system of medicine has a lengthy legacy! Being one of the oldest systems of prevailing medical culture, Indian doctors were known for their diagnostic skills, simple medicines, and accurate surgical techniques. However, the system was not devoid of quacks. Genuine physicians were hard to find. The physicians who learned the art and science of medicine as a part of their family heritage, had an insistence for the transmission of this sacred knowledge only through blood-line, which led to a huge loss of the propagation of precious knowledge.

In 1825, British Colonel James Skinner commissioned various artists to depict different trades and occupations of India. This series also included a few doctors. In one such gouache painting, A patient is lying on the bed while a surgeon, sitting on the floor, is attending to the patient's leg. Considering the depiction of the place and the small bag of instruments the surgeon has carried, this must be a home visit for the surgeon.

10. Indian System of Medicine - Medical



An Ayurvedic medical practitioner taking the pulse. Watercolour, ca. 1825.. Credit: Wellcome Collection. Attribution 4.0 International (CC BY 4.0)

1825 ರ ಜೇಮ್ಸ್ ಸ್ಕಿನ್ನರ್ ಅವರ ಸರಣಿಯಲ್ಲಿನ ಮತ್ತೊಂದು ಚಿತ್ರ. ಇದರಲ್ಲಿ ರೋಗಿಯೊಬ್ಬರು ವೈದ್ಯರ ಚಿಕಿತ್ಸಾಲಯಕ್ಕೆ ಬಂದಿದ್ದಾರೆ. ವೈದ್ಯರು ರೋಗಿಯ ನಾಡಿ ಪರೀಕ್ಷೆ ಮಾಡುತ್ತಿದ್ದಾರೆ. ಪ್ರಪಂಚದ ಎಲ್ಲಾ ವೈದ್ಯಕೀಯ ಪದ್ಧತಿಗಳಲ್ಲೂ ನಾಡಿ ಪರೀಕ್ಷೆ ರೋಗನಿರ್ಣಯದ ಅಂಗಭಾಗ. ಆಯುರ್ವೇದದಲ್ಲಿ ನಾಡಿಪರೀಕ್ಷೆಯ ಪಾತ್ರ ಬಹಳ ದೊಡ್ಡದು. ಅದೇ ವಿಷಯದ ಬಗ್ಗೆ ಹಲವಾರು ಕೃತಿಗಳಿವೆ.

This 1825 painting is another in the series of Colonel James Skinners "different trades and occupations of India" series of paintings. This watercolor painting shows an Ayurvedic physician at his clinic, feeling the pulse of a patient. The physician is sitting on a carpet while the patient sits on the floor. Feeling the pulse or "naadi" is an important part of the physical evaluation in medicine. In Ayurveda, evaluation of pulse carries very high significance. Many books on the technique, characteristics, and interpretation of pulse as per Ayurvedic concepts are available.

11. Native American Medicine




A Native American medicine man. Oil painting. Wellcome Collection. Attribution 4.0 International (CC BY 4.0)

18-19 ನೆಯ ಶತಮಾನದ ವೇಳೆಗೆ ಪ್ರಪಂಚದ ಬಹುಭಾಗವನ್ನು ಆಕ್ರಮಿಸಿದ್ದ ಯೂರೋಪಿಯನ್ನರಿಗೆ ಇಡೀ

ವಿಶ್ವದ ಬಗ್ಗೆ ಪೂರ್ವಗ್ರಹವಿತ್ತು! ತಮ್ಮದಲ್ಲದ ಪ್ರತಿಯೊಂದನ್ನೂ ನಿಕೃಷ್ಟ ದೃಷ್ಟಿಯಲ್ಲಿ ಬಿಂಬಿಸುವ ಅವರ ಅಂದಿನ ಮನಸ್ಥಿತಿ ಇಂದಿಗೂ ಟೀಕೆಯ ವಸ್ತುವಾಗಿದೆ. 1820 ರಲ್ಲಿ ಅಮೆರಿಕನ್ ಕಲಾವಿದ ಜಾರ್ಜ್ ಕ್ಯಾಟ್ಲಿನ್ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಅಮೆರಿಕನ್ ಮೂಲನಿವಾಸಿಗಳ ವೈದ್ಯರೊಬ್ಬರನ್ನು ಚಿತ್ರಿಸಲಾಗಿದೆ. ವಾಸ್ತವಕ್ಕಿಂತ ಹೆಚ್ಚಾಗಿ ಊಹಾತ್ಮಕ ಕಲ್ಪನೆಯೇ ಪ್ರಾಧಾನ್ಯ ಪಡೆದಿದೆ ಎನ್ನುವಂತಹ ಚಿತ್ರ. ಔಷಧವಷ್ಟೇ ಅಲ್ಲದೆ ನಂಬಿಕೆ, ಜಾದೂ, ಮನಶಾಸ್ತ್ರೀಯ ಪರಿಣಾಮಗಳ ಸಂಗಮವೇ ಚಿಕಿತ್ಸೆ ಎನ್ನುವಂತಹ ಕಾಲದಲ್ಲಿ, ವೈದ್ಯರುಗಳು ಕೆಲವು ಚಿತ್ರ-ವಿಚಿತ್ರ ವೇಷಗಳನ್ನು ಅವಲಂಬಿಸುತ್ತಿದ್ದರು. ಅಂದಿನ ಹಲವಾರು ಚಿತ್ರಗಳಲ್ಲಿ ಈ ರೀತಿಯ ಚಿತ್ರಣ ಕಾಣುತ್ತದೆ.

European misconceptions and misinterpretations of the rest of the world are well known. Every European colony had to go through the impact of the prejudices of its colonial masters. Asia, Africa, and the American continents have suffered because of such bias. In this 1820 oil painting of the American artist George Catlin titled "A Native American medicine man", one such instance is shown. Although Catlin is often appreciated for a realistic depiction of Native Americans, one cannot overrule the influence of prejudices. When the practice of medicine was a combination of trust, magic, and chemicals, the psychological impact on the patient had a great influence on the outcome. Hence, the healers had the tradition of using various unnatural costumes and props.

12. Native African Medicine




A Swazi medicine man or shaman performing a ritual in front of his tribe. Colour process print after N.H. Hardy. Wellcome Collection. Attribution 4.0 International (CC BY 4.0)

ಆಫ್ರಿಕದ ಬಗ್ಗೆ ಯೂರೋಪಿಯನ್ನರ ಕುತೂಹಲ ಬಹಳವಿತ್ತು. ಆಫ್ರಿಕದ ಬಗ್ಗೆ ಹಲವಾರು ದಂತಕತೆಗಳು ಪ್ರಚಲಿತವಿದ್ದವು. ಈ ಕತೆಗಳು ಯೂರೋಪ್ ಸಂಸ್ಕೃತಿಯ ಹಲವಾರು ಪ್ರಕಾರಗಳನ್ನು ಪ್ರಭಾವಿಸಿದವು. ಚಿತ್ರಕಲೆಯಷ್ಟೇ ಅಲ್ಲದೆ ಸಾಹಿತ್ಯದಲ್ಲೂ ಆಫ್ರಿಕನ್ ಸಂಸ್ಕೃತಿಯ ಪ್ರಚಾರವಾಯಿತು. 1890 ರಲ್ಲಿ ಬ್ರಿಟಿಷ್ ಚಿತ್ರಕಾರ ನಾರ್ಮನ್ ಹಾರ್ಡಿ ಅವರು ಆಫ್ರಿಕದ ಸ್ವಾಸಿಲ್ಯಾಂಡ್ ಬುಡಕಟ್ಟಿನ ವೈದ್ಯನ ಚಿತ್ರಣ ನೀಡಿದ್ದಾರೆ. ಇದೇ ಸಮಯಕ್ಕೆ ಬ್ರಿಟಿಷ್ ಲೇಖಕ ಸರ್ ರೈಡರ್ ಹಗಾರ್ಡ್ ಅವರು ಕೂಡ ಇದೇ ವಸ್ತುವಿನ ಮೇಲೆ ಹಲವಾರು ಕಾದಂಬರಿಗಳನ್ನು ಬರೆದಿದ್ದರು. ಆಫ್ರಿಕದ ಬಗ್ಗೆ ಇದ್ದ ಯೂರೋಪಿಯನ್ನರಿಗೆ ಇದ್ದ ನಿಗೂಢ ಭಾವವನ್ನು ಈ ಕಥನಗಳು ಮತ್ತಷ್ಟು ವಿಸ್ತರಿಸಿದವು.

Africa was another fascination of Europeans! The folklore of Africa reached legendary proportions and influenced all the forms of European art. This 1890 painting by the British artist Norman H. Hardy depicts a Swazi medicine man or shaman performing a ritual in front of his tribe. Around the same time, the British writer Sir H. Rider Haggard wrote multiple novels on the adventures of explorers in the African continent. These accounts added to the mystery that was already surrounding Africa and its tribes.

13. Hippocratic Oath



The othe of Hippocratus

which he gaue vnto his deſiples and ſcollers, which profeſsing Phiſicke and Chirurgerie, is very worthie to be obſerued and kept faithfullie, of euerie true and honeſt Arteſts, althought he himſelfe were but a heathen man, and without the true knowledge of the liuing God, yet for his noble and excellent ſkil in Phiſicke and Chirurgerie, he ought not to be forgotten of vs his poſteritie, but to be had in an honorable remembrãce for euer.

I Sweare by Appollo the Phiſitian, by Æſculapius, by Higea, and Panacea: yea and I take to witnes all the Gods and Goddeſſes: that to my power I will vprightlie obſerue this my othe: I will accompte my Maiſter which taught me this arte, my father: in his caſe hee ſhall commaund my life, and whatſoeuer hee needeth I will giue it him. As for his Children I will hold his ſonnes as my brethren, and if they deſire the knowledge of this arte, I will teach it them without ſtipent or couenant. I will inſtruct my ſonnes, & my maiſters ſonns, yea & ſuch as by hand wrighting are my ſcholers & ſworne and adicted to Phiſicke, the precepts, rules, and whatſoeuer elſe belongeth to the knowledge of the ſaide profeſsion, or touching the cure of diſeaſes, I will appoint them a diet, to my power: and in my iudgement commodius. And I will defend them from hurt and iniury, neither ſhall the requeſts and petitions of any man, be they neuer ſo earneſt, ſo much preuaile with me to giue poyſon to any perſon to drinke, neither will I giue my counſell or conſent thereto:

Hippocratus Oath. 119

to: in like manner I will refuſe the miniſtration of any ſuppoſitorie, to the hurting or corrupting of the childe, in the time of my life. And in my profeſsion, I will ſhew my ſelfe pure, chaſt, and holy. I will neuer cut any perſon that hath the ſtone, but will giue place to ſtone-cutters, in the cure thereof, what houſe ſoeuer I come into, it ſhall be to the patient his profite. I will offer no iniurie voluntarelie to anie man. I will eſchew all wickedneſſe to my power, eſpeciallye the vice of Venerie, whether it bee my chaunce to deale with men or women, freeman or bondſeruaunt, whatſoeuer in any cure I ſhall either ſee, heare, or know, or in any other matter, yea though I bee not called to the cure my ſelfe. I will keepe it ſecret and vnreuealed, ſo that ſilence therein be expediẽt. God graunt that as I truelie obſerue & keepe this my oath, I may haue proſperous ſucceſſe in my Arte and liuing. And according to the performance heereof, each man may ſounde my perpetuall praiſe. But if I tranſgreſſe and breake the ſame, I wiſh to God that in all my cures and other affaires I may haue euill ſucceſſe, and that euerie one may diſcommend mee to the worldes ende.

(.:.)

Kk.iii,

F. Arcaeus, pages from 'A most excellent and compendius....'. Wellcome Collection. Attribution 4.0 International (CC BY 4.0)

ಆಧುನಿಕ ವೈದ್ಯ ಪದ್ಧತಿಯ ವ್ಯಾಸಂಗ ಮಾಡಿ ಉತ್ತೀರ್ಣರಾದ ಎಲ್ಲಾ ವೈದ್ಯರೂ "ಹಿಪ್ಪೊಕ್ರೆಟಿಸ್ ನ ಪ್ರಮಾಣವಚನ" ಸ್ವೀಕರಿಸುವುದು ವಾಡಿಕೆ. ಶಕಪೂರ್ವ ಐದನೆಯ ಶತಮಾನದಲ್ಲಿ ಜಗದ್ವಿಖ್ಯಾತ ವೈದ್ಯರಾಗಿದ್ದ ಹಿಪ್ಪೊಕ್ರೆಟಿಸ್, ಮೂಲತಃ ಗ್ರೀಸ್ ದೇಶವಾಸಿ. ಅವರು ರಚಿಸಿದ್ದಾರೆ ಎನ್ನಲಾದ, ಶಕ 275 ರ ಸುಮಾರಿಗೆ ಚಾಲ್ತಿಗೆ ಬಂದ ಈ ಪ್ರಮಾಣವಚನವನ್ನು ಆಧುನಿಕ ಕಾಲಕ್ಕೆ ಅನುಸಾರವಾಗಿ 1964 ರಲ್ಲಿ ಡಾ. ಲೂಯಿಸ್ ಲಸಾನ್ಯ ಎನ್ನುವ ಅಮೆರಿಕನ್ ವೈದ್ಯರು ಮಾರ್ಪಾಡು ಮಾಡಿದರು. ಜೀವನದ ಉದ್ದಕ್ಕೂ ಸಮ್ಯಕ್ ವೈದ್ಯಕೀಯ ಜ್ಞಾನವನ್ನು ಕಲಿಯುತ್ತಾ, ಹಂಚುತ್ತಾ, ಅನುಸರಿಸುತ್ತಾ ಇರುವೆನೆಂದೂ; ಯಾವುದೇ ಜಾತಿ, ದೇಶ, ಭಾಷೆಗಳಂತಹ ಭೇದಭಾವವಿಲ್ಲದೆ ಎಲ್ಲರಿಗೂ ಒಳಿತಾಗುವ ವೈದ್ಯವನ್ನು ಮಾಡುವೆನೆಂದೂ; ತನಗೆ ತಿಳಿಯದ್ದನ್ನು ನಿಸ್ಸಂಕೋಚವಾಗಿ ಇತರರಿಂದ ಕಲಿಯುವೆನೆಂದೂ; ರೋಗಿಗಳ ರಹಸ್ಯಗಳನ್ನು ಕಾಯುವೆನೆಂದೂ – ಹೀಗೆ ಹಲವಾರು ಅಂಶಗಳನ್ನು ಈ ಪ್ರಮಾಣವಚನ ಒಳಗೊಂಡಿದೆ. ಇದನ್ನೇ ಆಧಾರವಾಗಿ ಇಟ್ಟುಕೊಂಡು ಹಲವಾರು ಕಾಯಿದೆಗಳು ಜಾರಿಗೆ ಬಂದಿವೆ. ಏನೇ ಆದರೂ, ಸಮಾಜ

ವೈದ್ಯರಿಂದ ಅತ್ಯುತ್ತಮ ಕ್ಷಮತೆಯನ್ನೇ ಅಪೇಕ್ಷಿಸುತ್ತದೆ. ಥಾಮಸ್ ಕ್ಯಾಡ್ಮನ್ ಅವರ ಥಾಮಸ್ ಈಸ್ಟ್ ಪ್ರಕಾಶನದಿಂದ 1588 ರಲ್ಲಿ ಪ್ರಕಟವಾದ ಪ್ರಾಚೀನ ವೈದ್ಯಕೀಯ ಕೃತಿಯೊಂದರಲ್ಲಿರುವ ಹಿಪ್ಪೊಕ್ರೆಟಿಸ್ ಪ್ರಮಾಣವಚನದ ಇಂಗ್ಲೀಷ್ ಅನುವಾದವನ್ನು ಇಲ್ಲಿ ಕಾಣಬಹುದು. ಮೂಲ ಪುಸ್ತಕದ ಕೃತಿಕಾರ ಸ್ಪೇನ್ ದೇಶದ ಫ್ರಾನ್ಸಿಸ್ಕಸ್ ಆರ್ಕೆಯಸ್ ಎಂಬ ವೈದ್ಯ, ಇಂಗ್ಲೀಷ್ ಅನುವಾದ ಜಾನ್ ರೀಡ್ ಎಂಬುವರದ್ದು. ಅಪರೂಪದ ಪುಸ್ತಕ ಸಂಗ್ರಹ.

The Hippocratic oath is a ritual followed by every graduate of modern medicine. Hippocrates, who lived around 5th Century BC, was one of the most famous doctors of his time. His oath came to practice by CE 275. Dr. Louis Lasagna, an American Physician, modified this oath in 1964 to suit the present day. The oath dictates doctors to keep learning, teaching, and practising the best medical knowledge; not to discriminate against any patient based on variables such as language, country, race, creed; to keep the secrets of patients; to learn from others without any ego, and so on. Many legalities are framed based on this oath. Society expects the best of ability and behaviour from doctors. The Hippocratic oath from an ancient text authored by the Spanish physician Franciscus Arcaeus translated to English by John Read. Thomas Cadman published the English version in 1588 for Thomas East publishers. This work is from the Library for rare books.

14. Hippocrates refusing to help



"File:Hippocrates refusing the gifts of Artaxerxes Wellcome L0074544.jpg" by After Anne-Louis Girodet de Roussy-Trioson is licensed under CC BY 4.0

ಖುದ್ದು ಹಿಪ್ಪೊಕ್ರೆಟಸ್ ಅವರು ತಮ್ಮ ಪ್ರಮಾಣವನ್ನು ಇಡಿಯಾಗಿ ಪಾಲಿಸಿದ ಉದಾಹರಣೆ ಇಲ್ಲ. ಪ್ರಾಯಶಃ, ಅಂದಿನ ರಾಜಕೀಯ ಸ್ಥಿತಿಗತಿಗಳು ಅವರಿಗೆ ಕೆಲವು ನಿರ್ಬಂಧಗಳನ್ನು ತಂದಿರಬೇಕು. ಅನ್ನೆ-ಲೂಯಿ ಗಿರ್ಡೋ-ಟ್ರಿಯೊಸನ್ ಎಂಬ ಫ್ರೆಂಚ್ ಚಿತ್ರಕಾರ 1792 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಇದು ಪ್ಯಾರಿಸ್ ನ ವೈದ್ಯಕೀಯ ಇತಿಹಾಸದ ಸಂಗ್ರಹಾಲಯದಲ್ಲಿದೆ. ಈ ಚಿತ್ರದಲ್ಲಿ ಕಂದು ಬಣ್ಣದ ಬಟ್ಟೆ ತೊಟ್ಟು ಎಡಗೈ, ಎಡಗಾಲು ಚಾಚಿರುವ ವ್ಯಕ್ತಿ ಹಿಪ್ಪೊಕ್ರೆಟಸ್. ಐತಿಹ್ಯದ ಪ್ರಕಾರ, ಪ್ರಾಚೀನ ಗ್ರೀಸ್ ಮತ್ತು ಪರ್ಷಿಯ ದೇಶಗಳು ಪರಸ್ಪರ ವೈರಿಗಳು. ಒಬ್ಬರ ಕಾರಣದಿಂದ ಮತ್ತೊಬ್ಬರು ಬಹಳ ಸಂಕಷ್ಟಕ್ಕೆ ಒಳಗಾಗುತ್ತಿದ್ದರು. ಒಮ್ಮೆ ಪರ್ಷಿಯದಲ್ಲಿ ಭಯಂಕರ ಪ್ಲೇಗ್ ಕಾಯಿಲೆ ಆವರಿಸಿತು. ಪರಿಹಾರ ತೋಚದೆ, ಪರ್ಷಿಯದ ದೊರೆ ಆರ್ಟಕ್ಸರ್ಸೆಸ್ ಅವರು, ಅಂದಿನ ಕಾಲದಲ್ಲಿ ವಿಖ್ಯಾತ ವೈದ್ಯರಾಗಿದ್ದ ಹಿಪ್ಪೊಕ್ರೆಟಸ್ ಅವರ ಸಹಾಯವನ್ನು ಬಯಸಿ, ಹೇರಳ ಹಣ ಮತ್ತು ದುಬಾರಿ ಕಾಣಿಕೆಗಳ ಜೊತೆಗೆ ತಮ್ಮ ದೂತರನ್ನು ಗ್ರೀಸ್ ದೇಶಕ್ಕೆ ಕಳಿಸಿದರು. ಆದರೆ, ಇವೆಲ್ಲವನ್ನೂ ದೂರವಿಟ್ಟ ಹಿಪ್ಪೊಕ್ರೆಟಸ್, ಪರ್ಷಿಯನ್ ಪ್ರಜೆಗಳಿಗೆ ಚಿಕಿತ್ಸೆ ನೀಡಲು ನಿರಾಕರಿಸಿದರು.

“ನನಗೆ ಜೀವಿಸಲು ಬೇಕಾದದ್ದು ನನ್ನ ಬಳಿ ಇದೆ. ನನಗೆ ಪರ್ಷಿಯದ ಐಶ್ವರ್ಯ ಬೇಕಿಲ್ಲ. ನನ್ನ ದೇಶದ ವೈರಿಗಳಿಗೆ ನಾನು ಸಹಾಯ ಮಾಡುವುದಿಲ್ಲ” ಎಂದರು!

It is not sure whether Hippocrates himself followed the components of his oath! The political conditions of his times might have forbidden him from following his oath. This oil painting by French artist Anne-Louis Girodet in 1792 depicts an incident in the life of Hippocrates. This painting is presently in the Medical History Museum in Paris. Hippocrates is sitting in a brown gown. As the story goes, there was a dreaded plague in Persia, the traditional enemy of Greece. The King of Persia, Artaxerxes sends his emissaries with plenty of gifts and gold to Hippocrates to seek a remedy for his ill subjects. However, Hippocrates refused to help the enemies and declined all the gifts, saying “I have everything needed for my life. I do not seek the riches of Persia. I shall not help the enemies of my country”!

15. Death of Socrates



"Jacques Louis David- Death of Socrates" by Tiniosart is licensed under CC BY-NC 2.0

ಜಾಕ್ವೆಯಸ್ ಲೂಯಿ ಡೇವಿಡ್ ಎಂಬ ಫ್ರೆಂಚ್ ಚಿತ್ರಕಾರ 1787 ರಲ್ಲಿ ರಚಿಸಿದ "ಸೊಕ್ರಟಿಸ್ ನ ಮರಣ" ಎಂಬ ಈ ಅದ್ಭುತ ಕಲಾಕೃತಿ ಆ ಗ್ರೀಕ್ ತತ್ತ್ವಜ್ಞಾನಿಯ ಅಂತಿಮ ಕ್ಷಣಗಳ ಚಿತ್ರಣ. ಸಾವಿನ ಶಿಕ್ಷೆಗೆ ಗುರಿಯಾದ ಸೊಕ್ರಟಿಸ್ ಅವರಿಗೆ "ಹೆಮ್ಲಾಕ್" ಎಂಬ ಸಸ್ಯಜನ್ಯ ವಿಷವನ್ನು ಕೊಟ್ಟು ಕೊಲ್ಲಲಾಗಿತ್ತು. ಆ ವಿಷದ ಬಟ್ಟಲನ್ನು ಸ್ವೀಕರಿಸುವ ಘಳಿಗೆಯಲ್ಲೂ ಆತ ತತ್ತ್ವದ ಚರ್ಚೆ ಮಾಡುತ್ತಿದ್ದರು. ಈ ಘಟನೆಯ ಬಗ್ಗೆ ಪ್ಲೇಟೋ ಅವರು ಬರೆದಿರುವ ವಿವರಗಳಿಗಿಂತ ಈ ಚಿತ್ರದ ವಿವರಗಳು ಭಿನ್ನವಾಗಿವೆ. ಪೀಚುದೇಹದ ವೃದ್ಧ ಸೊಕ್ರಟಿಸ್ ಅವರನ್ನು ಇಲ್ಲಿ ಕಟ್ಟುಮಸ್ತಾಗಿ ತೋರಿದೆ. ಅವರ ಶಿಷ್ಯರ ವಯಸ್ಸನ್ನು ತಪ್ಪಾಗಿ ಬಿಂಬಿಸಲಾಗಿದೆ. ಆದರೂ ಈ ಚಿತ್ರದ ಕೀರ್ತಿ ಕಡಿಮೆಯಾಗಿಲ್ಲ. ಅಂದಿನ ಕಾಲದಲ್ಲಿ ಇದ್ದ ವಿಷಗಳ ಜ್ಞಾನ ಮತ್ತು ಅದನ್ನು ಶಿಕ್ಷೆಯ ರೂಪದಲ್ಲಿ ಪ್ರಯೋಗಿಸುವ ವಿಧಾನಗಳು ಮುಂದೆ ಔಷಧ ವಿಜ್ಞಾನದ ಬೆಳವಣಿಗೆಯಲ್ಲಿ ದೊಡ್ಡ ಪಾತ್ರ ವಹಿಸಿದವು.

"The death of Socrates" is a 1787 oil painting by the French artist Jacques-

Louis David. It depicts the last moments in the life of the Greek philosopher Socrates when he is accepting a cup of Hemlock poison as dictated by the legal system of Ancient Greece. While his disciples are grieving about the inevitable, Socrates is fiercely debating. Despite many flaws – like, frail Socrates being shown as a fit, muscular old man; Plato being shown as an old person; and so on – this painting has earned big fame. The detailing shown in this painting is different from the descriptions of Plato in his works. Using poisons as a death sentence was common in many nations in ancient times. This practice led to a systematic study of existing and potential poisons, leading to the development of pharmacology!

16. Tobias Curing His Father's Blindness



"Tobias Curing His Father's Blindness" by lluisribesmateu1969 is licensed under CC BY-NC 2.0

ಬೈಬಲ್ ನ ಹಳೆಯ ಒಡಂಬಡಿಕೆಗಳಲ್ಲಿ ಟೊಬಿಯಸ್ ಎಂಬಾತನ ಕತೆ ಬರುತ್ತದೆ. ಆತನ ತಂದೆಗೆ ಯಾವುದೋ ಹಕ್ಕಿಯ ಹಿಕ್ಕೆಯ ಕಾರಣದಿಂದ ಕುರುಡುತನ ಬಂದಿರುತ್ತದೆ. ರೆಕ್ಕೆಗಳುಳ್ಳ ರಫೆಲ್ ಎಂಬ ದೇವತೆಯ ಸಲಹೆಯಂತೆ ಟೊಬಿಯಸ್ ಯಾವುದೋ ಮೀನಿನ ಯಕೃತ್ ಸಾರವನ್ನು ಹಚ್ಚಿ, ತನ್ನ ತಂದೆಯ ಕುರುಡನ್ನು ನಿವಾರಿಸುತ್ತಾನೆ. ವೈದ್ಯಕೀಯ ದೃಷ್ಟಿಯಿಂದ ನೋಡುವುದಾದರೆ, ಮೀನಿನ ಯಕೃತ್ ನಲ್ಲಿ ಹೇರಳವಾಗಿ ವಿಟಮಿನ್ ಎ ಇರುತ್ತದೆ. ಇದು ದೃಷ್ಟಿ ಸಂಬಂಧಿ ವಿಟಮಿನ್. ಇದರ ಕೊರತೆಯಿಂದ ಇರುಳುಗುರುಡು ಆಗುತ್ತದೆ. ಕೆಲವು ತಜ್ಞರು ಈ ಚಿತ್ರಕ್ಕೆ ಮನೋವೈಜ್ಞಾನಿಕ ಭೂಮಿಕೆಯನ್ನೂ ಕಲ್ಪಿಸಿದ್ದಾರೆ. ಬರ್ನಾರ್ಡೋ ಸ್ಟ್ರೊಜಿ ಎಂಬ ಇಟಾಲಿಯನ್ ಕಲಾವಿದ 1630 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ ಈ ಐತಿಹ್ಯವನ್ನು ಬಿಂಬಿಸುತ್ತಿದೆ. ಈ ಚಿತ್ರದಲ್ಲಿ ಮೀನನ್ನು ಕೂಡ ತೋರಲಾಗಿದೆ. ಕತ್ತಿನ ಪಟ್ಟಿ ಇರುವ ನಾಯಿಯ ಚಿತ್ರಣ ಕುತೂಹಲಕಾರಿ. ರೆಕ್ಕೆಯ ದೇವತೆ ರೋಗಿಯ ಬೆನ್ನಿಗೆ ಆಸರೆಯಾಗಿ ನಿಂತಿದೆ.

Tobias is a biblical character found in the Old Testament. His father has suffered blindness due to the excreta of a bird. A winged angel named Raphael suggests Tobias to apply the liver extract of a fish to relieve the blindness of his father. The fish liver is rich in vitamin A, which is the vision-related vitamin. Deficiency of vitamin A causes nyctalopia – the night blindness. This incident has been viewed from a psychological perspective by a few art experts. This 1630 re-creation of the story by the Italian artist Bernardo Strozzi shows the fish too! Raphael is seen behind the old man and supporting Tobias. The strap around the neck of the dog is an interesting observation!

17. Medical Books - Avicenna



Doctor taking woman's pulse. Avicenna's Canon manuscript. Wellcome Collection. Attribution 4.0 International (CC BY 4.0)

10-11 ನೆಯ ಶತಮಾನದ ಪರ್ಷಿಯನ್ ವೈದ್ಯ, ತತ್ತ್ವಜ್ಞಾನಿ ಅವಿಸೆನ್ನ ಅವರು ಯುರೋಪಿನ ವೈದ್ಯಕೀಯ

ಜ್ಞಾನವನ್ನು ಪ್ರಭಾವಿಸಿದ ಮೇಧಾವಿ. ಅವರು 1025 ರಲ್ಲಿ ಬರೆದ ಐದು ಸಂಪುಟಗಳ ವೈದ್ಯಕೀಯ ಗ್ರಂಥಗಳನ್ನು ಯುರೋಪಿನ ವೈದ್ಯಕೀಯ ಮಹಾವಿದ್ಯಾಲಯಗಳು 18 ನೆಯ ಶತಮಾನದವರೆಗೆ ಪಠ್ಯವನ್ನಾಗಿ, ಆಕರ ಗ್ರಂಥವಾಗಿ ಬಳಸುತ್ತಿದ್ದವು. ಯುನಾನಿ ಪದ್ದತಿ ಇಂದು ಕೂಡ ಕಲಿಕೆಗಾಗಿ ಇವೇ ಪುಸ್ತಕಗಳನ್ನು ಬಳಸುತ್ತಿವೆ. ಈ ಗ್ರಂಥಗಳ ಹಲವಾರು ಭಾಷಾಂತರ ಆವೃತ್ತಿಗಳು ಯುರೋಪಿನ ಮತ್ತು ಏಷ್ಯಾದ ಅನೇಕ ದೇಶಗಳಲ್ಲಿ ಬಳಕೆಯಲ್ಲಿ ಇದ್ದವು. ಇಂತಹ ಕೆಲವು ಪುಸ್ತಕಗಳಲ್ಲಿ ಚಿತ್ರಗಳನ್ನು ಕೂಡ ಅಳವಡಿಸಲಾಗಿತ್ತು. ಇಂತಹ ಒಂದು ಸಚಿತ್ರ ಆವೃತ್ತಿಯ ಹಿಂಭಾಗದ ರಕ್ಷಾಪುಟದಲ್ಲಿನ ಒಂದು ಚಿತ್ರದಲ್ಲಿ ಒಬ್ಬ ಮಹಿಳೆಯ ನಾಡಿಯನ್ನು ಪರೀಕ್ಷಿಸುತ್ತಿರುವ ವೈದ್ಯನ ಚಿತ್ರವಿದೆ. ಮೂಲ ಚಿತ್ರಕಾರನ ಹೆಸರಿನ ಉಲ್ಲೇಖ ಇಲ್ಲ.

“The Canon of Medicine” is an encyclopedia of medicine in five volumes. For centuries, it had remained an authoritative reference in Medieval Europe and the Middle East. It was used as a standard medical textbook through the 18th century in Europe. It was compiled by Persian physician-philosopher Avicenna (Ibn Sina) during the 10-11 centuries and was completed in the year 1025. The book still remains a standard reference for the study of the Unani system of medicine. Various versions of the original book, often brilliantly illustrated, were found throughout Europe and Asia. This illustration by an unknown artist is seen in one of the back-cover binding board of the manuscript, depicting a doctor taking the pulse of a woman.

18. Medical Books – Arzneibuch 1



"File:Arzneibuch, Book of medical receipts. Wellcome L0028281.jpg" is licensed under CC BY 4.0

ಜರ್ಮನ್ ಭಾಷೆಯಲ್ಲಿ ಆರ್ಝ್ನೆಬುಕ್ ಎಂದರೆ ಔಷಧಗಳ ವಿವರಣೆಯುಳ್ಳ ಪುಸ್ತಕ ಎಂದರ್ಥ. 1524 ರಲ್ಲಿ

ಪ್ರಕಟವಾದ, ಅಂದಿನ ಹಲವಾರು ವಿಷಯತಜ್ಞರು ಸೇರಿ ರಚಿಸಿರುವ ಈ ಜರ್ಮನ್ ಪುಸ್ತಕದಲ್ಲಿ ಬಹಳ ಮಹತ್ವದ ವಿವರಗಳಿವೆ. ಅಂದಿನ ಕಾಲದಲ್ಲಿ ಪ್ರಸ್ತುತವಿದ್ದ ಚಿಕಿತ್ಸೆಯ ಪದ್ಧತಿಗಳು, ಹಸ್ತ ಸಾಮುದ್ರಿಕೆ, ಪಾದ ಸಾಮುದ್ರಿಕೆ, ವೈದ್ಯಕೀಯ ಜ್ಯೋತಿಷ, ರಕ್ತ ಹರಿಸುವಿಕೆ, ಮೂತ್ರ ಪರೀಕ್ಷೆ – ಇನ್ನೂ ಮುಂತಾದ ಸಂಗತಿಗಳಿವೆ. ಆ ಪುಸ್ತಕದ ಒಂದು ಪುಟದ ಈ ಚಿತ್ರದಲ್ಲಿ ಕಾಲಿನ ರಕ್ತನಾಳಗಳ ಬಗ್ಗೆ ವಿವರಣೆ ಇದೆ. ಪ್ರಾಯಶಃ ರಕ್ತ ಹರಿಸುವ ಪ್ರಕ್ರಿಯೆಯಲ್ಲಿ ಯಾವ ಯಾವ ರಕ್ತನಾಳಗಳನ್ನು ಬಳಸಬಹುದು ಎಂಬುದರ ವಿವರಣೆ.

Arzneibuch in German is “Book of medical recipes”. Published in 1524 by many experts of that era, this book has many important historical details. The medical practices prevalent in those times, Palmistry, Podiatry, medical fortune-telling, phlebotomy, urine testing, and many more. On this page, one can see the pictures of the leg with major blood vessels, probably to tell the reader about the ideal blood vessel for phlebotomy.

19. Medical Books – Arzneibuch 2




"File:WMS 93, Arzneibuch, Book of medical receipts Wellcome L0031662.jpg" is licensed under CC BY 4.0

ಅದೇ ಪುಸ್ತಕದ ಈ ಪುಟದ ಮೇಲ್ಭಾಗದಲ್ಲಿ ಅಂಗೈಗಳ ಹಿಂಭಾಗದಲ್ಲಿ ಇರುವ ಕೆಲವು ಬಿಂದುಗಳನ್ನು

ಸೂಚಸಿದೆ. ಅವು ರಕ್ತನಾಳಗಳಿಗೋ ಅಥವಾ ಒತ್ತಡದ ಬಿಂದುಗಳಿಗೋ ಸೂಚಿ ಇರಬಹುದು. ಅಂತೆಯೇ, ಪುಟದ ಕೆಳಭಾಗದಲ್ಲಿ ಶರೀರದ ಅಂಗಗಳಿಗೂ, ರಾಶಿಚಕ್ರಕ್ಕೂ ಇರುವ ಸಂಭವನೀಯ ಸಂಬಂಧದ ಕುತೂಹಲಕಾರಿ ಚಿತ್ರವಿದೆ! ಇವೆಲ್ಲಾ ಅಂದಿನ ನಂಬಿಕೆಗಳ ಚಿತ್ರಣ.

This page is from the same Arzneibuch, describing some points of importance on the back of the palm. This may either be few acupressure points or the ideal sites for phlebotomy. In the lower part of the page, there is an interesting diagram of organs of the body and the zodiac sciences which influence them. Interesting to know such developments in medieval Europe.

20. Medical Books - Latin


IO. FERNELII
AMBIANI,
vniuerſa Medicina,
TRIBVS ET VIGINTI
LIBRIS ABSOLVTA.

AB IPSO QVIDEM AVTHORE ante obitum diligenter recognita, & quatuor libris nunquam antè editis, ad praxim tamen perquamneceſſariis aucta.

Nunc autem ſtudio & diligentia Guil. Plantij Cenomani poſtremùm elimata, & in librum Therapeutices ſeptimum doctiſſimis ſcholiis illuſtrata.

LVTETIÆ PARISIORVM,
APVD ANDREAM WECHELVM,
ſub Pegaſo, in vico Bellouaco.
1567.
Cum priuilegio Regis ad ſexennium.

Universa medicina Wellcome Collection. Attribution 4.0 International (CC BY 4.0)

ಕಾರ್ಯದಕ್ಷತೆಯ ವಿಷಯದಲ್ಲಿ ನಿಸರ್ಗಕ್ಕಿಂತ ದೊಡ್ಡ ಪರಿಣತರಿಲ್ಲ! ಶರೀರದ ಯಾವುದೇ ಅಂಗವನ್ನೂ

ನಿಸರ್ಗ ಸುಖಾಸುಮ್ಮನೆ ಉಳಿಸುವುದಿಲ್ಲ! ಅಂಗರಚನಾ ಶಾಸ್ತ್ರ ಬೆಳದಂತೆ, ಮಾನವ ಶರೀರದ ರಚನೆಯ ಸೂಕ್ಷ್ಮಗಳು ಅರ್ಥವಾಗುತ್ತ ಹೋದವು. ಆಗ, ಶರೀರದ ಪ್ರತಿಯೊಂದು ಅಂಗದ ಕೆಲಸ ಏನು? ಅದರ ರಚನೆಯ ವೈಶಿಷ್ಟ್ಯ ಏನು? ಅದು ಯಾವ ರೀತಿ ಕೆಲಸ ಮಾಡುತ್ತದೆ? ಶರೀರದ ಒಟ್ಟಾರೆ ಕಾರ್ಯ ವಿಧಾನಕ್ಕೆ ಈ ಅಂಗದ ಕೊಡುಗೆ ಏನು? - ಈ ರೀತಿಯ ಪ್ರಶ್ನೆಗಳನ್ನೆಲ್ಲಾ ಉತ್ತರಿಸಬಲ್ಲ ವಿಜ್ಞಾನದ ಅಗತ್ಯ ಕಂಡುಬಂದಿತು. ಈ ಸರಳ ತರ್ಕದ ಪ್ರಶ್ನೆಗಳ ನೆರವಿನಿಂದ ಉದ್ಭವವಾದದ್ದು "ಶರೀರ ಹೇಗೆ ಕೆಲಸ ಮಾಡುತ್ತದೆ" ಎಂದು ಅರಿಯುವ ಕ್ರಿಯಾ ವಿಜ್ಞಾನ (Physiology). ವೈದ್ಯಕೀಯ ಕ್ಷೇತ್ರ ಇಂದು ಸಾಧಿಸಿರುವ ಅಗಾಧ ಬೆಳವಣಿಗೆಯ ಮೂಲಧಾತು ಈ ಶರೀರದ ಕ್ರಿಯಾ ವಿಜ್ಞಾನದ ಆರಂಭ. ಇಂದಿಗೂ ವೈದ್ಯಕೀಯ ಕ್ಷೇತ್ರದ ಯಾವುದೇ ಸಂಶೋಧನೆಯಲ್ಲಿ ಇದರ ಕೊಡುಗೆ ಇರಲೇಬೇಕು! ಶರೀರ ಕ್ರಿಯಾ ವಿಜ್ಞಾನದ ಬಗ್ಗೆ ಪ್ರಪಂಚದ ಮೊಟ್ಟ ಮೊದಲ ಪುಸ್ತಕಗಳಲ್ಲಿ ಒಂದು ಎಂದು ಹೆಸರಾಗಿರುವ ಈ ಪುಸ್ತಕ ಶಕ 1567 ರಲ್ಲಿ ಮುದ್ರಣವಾಗಿದೆ. 16 ನೆಯ ಶತಮಾನದ ಪ್ರಸಿದ್ಧ ವೈದ್ಯ ಜೀನ್ ಫರ್ನೆಲ್ ಇದರ ಕರ್ತೃ.

Efficiency is another name of nature! No body-part is spared by nature if it becomes defunct! As the knowledge of human anatomy grew, contemplation of their function increased. What is the purpose of this organ? How does it work? In what way this organ blends with the overall function of the body? Answers were sought for such critical questions. The logical compilation of such answers formed the basis for the science of Human Physiology. The enormous progress of the medical field owes its roots to human physiology. Even today, every progress in the field of medicine passes through physiology! This is one of the first books of Human Physiology, printed in Paris in 1567. This book was authored by Jean Fernel, a reputed physician of 16th century Europe.

21. Medical Books – Tibet



The_Blue_Beryl-Methods_of_Treatment by Desi Sangye Gyatso / Public domain. https://creativecommons.org/publicdomain/mark/1.0/deed.en

---

ಟಿಬೆಟ್ ನ ಚಿಕಿತ್ಸಾ ಪದ್ದತಿ ಬಹುಮಟ್ಟಿಗೆ ನಿಗೂಢವಾಗಿಯೇ ಉಳಿದಿತ್ತು. 1687 ರ ಸುಮಾರಿಗೆ, ಈ

ಪದ್ಧತಿಯನ್ನು ವಿವರಿಸುವ 79 ಚಿತ್ರಗಳು ನಿರ್ಮಾಣವಾದವು. ಐದನೆಯ ದಲೈಲಾಮಾ ಅವರು 1682 ರಲ್ಲಿ ಕಾಲವಾದ ನಂತರ ದೇಸಿ ಸಂಗ್ಯೆ ಗ್ಯಟ್ಸೊ ಎಂಬಾತ ತಾತ್ಕಾಲಿಕವಾಗಿ ಮುಖ್ಯಸ್ಥರ ಕಾರ್ಯ ನಿರ್ವಹಿಸುತ್ತಿದ್ದರು. ಸಾಂಪ್ರದಾಯಿಕ ಚಿಕಿತ್ಸೆಯ ಭವಿಷ್ಯಕ್ಕೆ ಒಂದು ಪಕ್ಕಾ ಆಧಾರ ಬೇಕಂಬುದನ್ನು ಮನಗಂಡ ಅವರು, ಅದರ ಬಗ್ಗೆ ಸಚಿತ್ರ ಕೃತಿಯನ್ನು ರಚಯಿಸುವ ನಿರ್ಧಾರ ಮಾಡಿದರು. ಠಂಗ್ಕಾ ಎಂದು ಹೆಸರಾಗಿದ್ದ ಈ ಚಿತ್ರಗಳ ಗುಚ್ಛವನ್ನು "ದ ಬ್ಲೂ ಬೆರಿಲ್" ಎಂಬ ಹೆಸರಿನಿಂದ ಕರೆದಿದ್ದಾರೆ. ಇದರ ಒಂದು ಚಿತ್ರವನ್ನು ಇಲ್ಲಿ ಕಾಣಿಸಿದೆ. ಆಹಾರದ ಪಥ್ಯ, ನಡವಳಿಕೆ, ನಾಟಿ ಮದ್ದು, ರಕ್ತ ಹರಿಸುವಿಕೆ ಮುಂತಾದ ಚಿಕಿತ್ಸೆಗಳ ಚಿತ್ರಣವನ್ನು ತೋರಿದೆ.

The Tibetan school of medicine remained mysterious for centuries. When the fifth Dalai-Lama expired in 1682, Desi Sangye Gyatso became the temporary head of the system. He decided to create a written record of the vocal tradition of the ancient therapeutics, through detailed illustrations with annotations. This compilation created between 1687 and 1703 was in a format called "Thangka" and later translated to English as "The Blue Beryl". One such picture from the compendium of Thangka is shown here, which depicts diet, behavior, traditional medicines, blood-letting, and other modes of keeping up the health.

22. Alchemy and Medicine



A three headed monster in an alchemical flask, representing the composition of the alchemical philosopher's stone: salt, sulphur, and mercury. Watercolour painting. Wellcome Collection. Attribution 4.0 International (CC BY 4.0)

ಇದೊಂದು ಕುತೂಹಲಕಾರಿ ಜಲವರ್ಣಚಿತ್ರ! 16 ನೆಯ ಶತಮಾನದಲ್ಲಿ ರಸವಿದ್ಯೆಯ ಉತ್ತುಂಗವಿತ್ತು. ಸಾಮಾನ್ಯ ಲೋಹಗಳನ್ನು ಬಂಗಾರವನ್ನಾಗಿ ಬದಲಾಯಿಸಬಲ್ಲ ಸ್ಪರ್ಶಮಣಿಯನ್ನು ಪಡೆಯುವ ಸಾಧ್ಯತೆಯ ರಸವಿದ್ಯೆಯ ಬಗ್ಗೆ ಹಲವಾರು ಮಂದಿ ಪ್ರಯತ್ನ ಮಾಡುತ್ತಿದ್ದರು. ಇವರಲ್ಲಿ ಸಾಲೊಮನ್ ಟ್ರಿಸ್ಮೊಸಿನ್ ಪ್ರಮುಖರು. ಆತ ಸ್ಪರ್ಶಮಣಿಯನ್ನು ಕಂಡುಹಿಡಿದಿದ್ದಾರೆ ಎಂದೇ ನಂಬಲಾಗಿತ್ತು! ಆತನೇ ರಚಿಸಿರುವ 1582 ರ ಒಂದು ಪುಸ್ತಕದಲ್ಲಿ ಈ ಚಿತ್ರವಿದೆ. ಗಾಜಿನ ಶೀಷೆಯಲ್ಲಿ ಮೂರು ತಲೆಯ ಕಾಲ್ಪನಿಕ ಪ್ರಾಣಿಯನ್ನು ಚಿತ್ರಿಸಲಾಗಿದೆ. ಈ ಮೂರು ತಲೆಗಳು ಉಪ್ಪು, ಗಂಧಕ ಮತ್ತು ಪಾದರಸವನ್ನು ಸೂಚಿಸುತ್ತವೆ. ಈ ಮೂರೂ ಅಂಶಗಳು ರಸವಿದ್ಯೆಯ ಆಧಾರ ಸ್ತಂಭಗಳು. ಬಿಳಿ, ಕೆಂಪು ಮತ್ತು ಕಪ್ಪು ಬಣ್ಣಗಳು ರಸವಿದ್ಯೆಯ ಹಂತಗಳನ್ನು ಸೂಚಿಸುತ್ತವೆ.

This interesting watercolor painting by Salomon Trismosin, who was a legendary Renaissance alchemist, claimed possessor of the philosopher's stone and teacher of Paracelsus. He is best known as the author of the alchemical works *Splendor Solis* and *Aureum Vellus*. This painting is from his work "Splendor Solis" published in 1582. The painting shows a three-headed monster in an alchemical flask, representing the composition of the alchemical philosopher's stone: salt, sulphur, and mercury. The three colors here (white, red, and black) are the colors through which the philosopher's stone passes in the process of transmutation. The creatures are opined to be either Lions or Cerberus.

23. Plague Pandemics in Europe – Mass Burial



Doutielt3 Pierart dou Tielt (fl. 1340-1360) / Public domain. https://creativecommons.org/publicdomain/mark/1.0/deed.en

---

ಶಕ 6ನೆಯ ಶತಮಾನದಿಂದ ಯುರೋಪಿನ ಅನೇಕ ದೇಶಗಳನ್ನು ಬಾಧಿಸುತ್ತಿದ್ದ ಪ್ಲೇಗ್ ರೋಗಕ್ಕೆ ಬಲಿಯಾದವರ ಸಂಖ್ಯೆಗೆ ಲೆಕ್ಕವೇ ಇಲ್ಲ. ಶತಮಾನಗಳ ಕಾಲ ಯೂರೋಪನ್ನು ತಲ್ಲಣಗೊಳಿಸಿದ ಪ್ಲೇಗ್ ಕಾಯಿಲೆಗಳು ಪ್ರತಿಯೊಂದು ಊರನ್ನೂ ಸ್ಮಶಾನವನ್ನಾಗಿ ಮಾಡಿದ್ದವು.

ಪೈರಾರ್ಟ್ ದೌ ಟಿಯೆಲ್ಟ್ ಎಂಬ ಬೆಲ್ಜಿಯನ್ ಕಲಾವಿದ 1353 ರಲ್ಲಿ ರಚಿಸಿದ ವರ್ಣ ಚಿತ್ರ. 14 ನೆಯ ಶತಮಾನದಲ್ಲಿ ಚೀನಾದಿಂದ ಆರಂಭವಾಗಿ, ಪಶ್ಚಿಮ ದೇಶಗಳನ್ನು ತಲುಪಿದ ಪ್ಲೇಗ್, ಯುರೋಪಿನ ಅರ್ಧಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಬಲಿ ಪಡೆದಿತ್ತು. ಇದು ಪ್ಲೇಗ್ ನ ಎರಡನೆಯ ಜಾಗತಿಕ ವಿಪತ್ತು. ಬೆಲ್ಜಿಯಂ ನ ಟೌನ್ರೈ ಎಂಬ ಸ್ಥಳದಲ್ಲಿ ಪ್ಲೇಗ್ ನಿಂದ ಮರಣಿಸಿದ ಜನರನ್ನು ಒಟ್ಟೊಟ್ಟಾಗಿ ಹೂಳುತ್ತಿದ್ದ ಚಿತ್ರಣ. “ಸತ್ತವರಿಗೆ ಸಂಸ್ಕಾರವಿಲ್ಲ; ಬದುಕಿದ್ದವರಿಗೆ ನೆಮ್ಮದಿಯಿಲ್ಲ” ಎನ್ನುವ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಬಿಂಬಿಸಲಾಗಿದೆ. ಇಂದಿಗೂ ಯುರೋಪಿನ ಅನೇಕ ಸ್ಥಳಗಳಲ್ಲಿ ಅಂದಿನ ಕಾಲದ ಇಂತಹ “ಸಮೂಹ ಗೋರಿ”ಗಳು ಕಂಡುಬರುತ್ತವೆ.

Plague pandemics have been documented across Europe since CE 6th century. Each such pandemic caused innumerable deaths. The episodes of plague devastated the European continent during the Middle Ages and beyond. Every city and village became a virtual burial ground during those epidemics.

This 1353 oil painting by the Flemish artist Pierart Dou Tielt shows the mass burial of those who died due to plague in the town of Tournai in Belgium. The second pandemic of plague started from China and spread towards the west into Europe. It is said that half the population of Europe succumbed to this pandemic of plague. Those who survived were so weak, that they could not honour the dead through a proper burial. Hence, the administration performed such mass burials. Every major town of Europe still has few sites which depict the areas of such mass burials of 14th-century plague. When medical science was not advanced and the cause or treatment for the plague was still not known, there was “no respect for the dead and no peace for the living”.

24. Plague Pandemics in Europe – Plague during the siege of Leiden



The plague in Leiden in 1574: a doctor examines a urine flask surrounded by the ill, the dying and the dead. Line engraving. Wellcome Collection. Attribution 4.0 International (CC BY 4.0)

1574 ರಲ್ಲಿ ಲೀಡನ್ ನಗರದಲ್ಲಿ ಬಂದ ಪ್ಲೇಗ್ ನ ಚಿತ್ರಣವನ್ನು ಓರ್ವ ಅಜ್ಞಾತ ಕಲಾವಿದರು ಮಾಡಿದ್ದಾರೆ. ಮೂತ್ರದ ಶೀಷೆ ಹಿಡಿದು ಪರೀಕ್ಷೆ ಮಾಡುತ್ತಿರುವ ವೈದ್ಯರು ಕಾಣುತ್ತಿದ್ದಾರೆ. ಇಡೀ ಚಿತ್ರದ ತುಂಬಾ ರೋಗಿಗಳು, ಮರಣ ಹೊಂದಿದವರು ಕಾಣುತ್ತಿದ್ದಾರೆ. ಇಂತಹದೇ ಇನ್ನೊಂದು ಚಿತ್ರವನ್ನು 1614 ರಲ್ಲಿ ಜಾನ್ ಆರ್ಲಿನ್ಸ್ ಎಂಬುವರು ರಚಿಸಿದ್ದಾರೆ ಎಂದು ತಿಳಿದುಬಂದಿದೆ.

This line engraving by an unknown artist is titled "The plague during the

siege of Leiden" in 1574. A doctor is seen examining a urine flask. Many ill, the dying, and the dead people are seen throughout the picture. An engraving similar to this is found in Leiden, attributed to Jan Orlers, is dated to 1614.

25. Plague Pandemics in Europe – Plague of Ashdod



"IMG_6505 Nicolas Poussin. 1594 1666. Rome. La peste d'Asdod. 1630. Louvre." by jean louis mazieres is licensed under CC BY-NC-SA 2.0

1630 ರಲ್ಲಿ ಫ್ರೆಂಚ್ ಚಿತ್ರ ಕಲಾವಿದ ನಿಕೋಲಸ್ ಪೌಸಿನ್ ರಚಿಸಿದ ತೈಲ ವರ್ಣಚಿತ್ರ. ಬೈಬಲ್ ನ ಹಳೆಯ ಟೆಸ್ಟ್ಮೆಂಟ್ ನಲ್ಲಿ ಬಿಂಬಿತವಾಗಿರುವ ಇಸ್ರೇಲಿನ ಅಶ್ಡೋಡ್ ಬಂದರಿನಲ್ಲಿ ಆದ ಪ್ಲೇಗ್ ಪ್ರಸಂಗವನ್ನು ಚಿತ್ರಿಸಲಾಗಿದೆ. ಇಟಲಿಯಲ್ಲಿ 1629 ರಲ್ಲಿ ನಡೆದ ಪ್ಲೇಗ್ ಕಾಯಿಲೆಯ ಬೀಭತ್ಸವನ್ನು ಕಣ್ಣಾರೆ ನೋಡಿದ ಪೌಸಿನ್, ಅದೇ ಆಧಾರದ ಮೇಲೆ ಈ ಚಿತ್ರವನ್ನು ಬರೆದರು ಎನ್ನಲಾಗಿದೆ. ಹೀಗಾಗಿ, ಈ ಚಿತ್ರದಲ್ಲಿನ ವಿವರಗಳು ಬಹಳ ಅಧಿಕೃತವಾಗಿ ಬಂದಿವೆ. ಈ ಚಿತ್ರದ ಇತಿಹಾಸವನ್ನು ಶೀಲಾ ಬಾರ್ಕರ್ ಅವರು Poussin, Plague and Early Modern Medicine ಎನ್ನುವ 2004 ದ ಲೇಖನದಲ್ಲಿ ಬರೆದಿದ್ದಾರೆ.

This 1630 oil painting by the French artist Nicolas Poussin has led to many discussions, explanations, studies, and books! Titled "The Plague of Ashdod", it depicts the incident of plague in the Ashdod port of Israel as described in the Old Testament. The inspiration for this painting was derived from the lethal plague that affected Italy during 1629. Poussin witnessed the calamities of the plague episode and painted this with authentic details of disease and the affected. Art historian and an expert in Baroque painting Sheila Barker has written a scholarly article titled "Poussin, Plague and Early Modern Medicine" in 2004 with this painting as the major subject.

26. Plague Pandemics in Europe – Plague Doctors



"File:Plague Doctor.svg" by Matankic This W3C-unspecified vector image was created with Inkscape. is licensed under CC BY-SA 4.0

17ನೆಯ ಶತಮಾನದ ವೇಳೆಗೆ "ಸಮುದಾಯ ಪ್ಲೇಗ್ ವೈದ್ಯರು" ಚಾಲ್ತಿಗೆ ಬಂದರು. 1630 ರಲ್ಲಿ ಫ್ರೆಂಚ್ ವೈದ್ಯ ಚಾರ್ಲ್ಸ್ ಡಿ ಲೋಮ್ ಇಂತಹ ಸಮುದಾಯ ಪ್ಲೇಗ್ ವೈದ್ಯರಿಗೆ ಪ್ಲೇಗ್ ಹರಡುವುದನ್ನು ತಡೆಯಲು ವಿಶೇಷ ವಸ್ತ್ರವಿನ್ಯಾಸ ಮಾಡಿದರು. ಇಟಲಿಯ ನೇಪಲ್ಸ್ ನ ದರ್ಜಿಗಳು ಇದನ್ನು ತಯಾರಿಸುತ್ತಿದ್ದರು. ಕಪ್ಪು ಬಣ್ಣದ ಹಗುರವಾದ ಹತ್ತಿ ಬಟ್ಟೆಯ ಮೇಲೆ ಮೇಣದ ಲೇಪನ ಮಾಡಿ, ತಲೆಯಿಂದ ಕಾಲಿನವರೆಗೆ ತೊಡಬೇಕಿತ್ತು. ಅದು ತಲೆಯಿಂದ ಜಾರದಂತೆ ಟೊಪ್ಪಿಗೆ ತೊಡಬೇಕಿತ್ತು. ಮುಖವನ್ನು ಮುಚ್ಚಲು ವಿಶೇಷ ಮಾದರಿಯ ಮುಖವಾಡ. ಕಣ್ಣುಗಳ ಸ್ಥಳದಲ್ಲಿ ರಂಧ್ರಗಳನ್ನು ಮಾಡಿ, ಗಾಜಿನಿಂದ ಮುಚ್ಚುತ್ತಿದ್ದರು. ಉದ್ದನೆಯ ಟೊಳ್ಳಾದ ಕೊಕ್ಕು ಈ ಮುಖವಾಡದ ಮುಖ್ಯ ಅಂಶ. ಕೊಕ್ಕಿನ ಟೊಳ್ಳಿನಲ್ಲಿ ಒಣಗಿದ ಪುದೀನಾ, ಗುಲಾಬಿ ಪಳಕೆ, ಲವಂಗ, ಕರ್ಪೂರಗಳನ್ನು ಕೆಲವು ರಾಳಗಳ ಜೊತೆಗೆ ಮಿಶ್ರಣ ಮಾಡಿ ತುಂಬುತ್ತಿದ್ದರು. ಅವರ ಕೈಲಿ ಒಂದು ಉದ್ದನೆಯ ಛಡಿ ಇತ್ತು. ಆ ಛಡಿಯಷ್ಟು ದೂರದಿಂದಲೇ ಎಲ್ಲರನ್ನೂ ಪರೀಕ್ಷೆ ಮಾಡಬೇಕಿತ್ತು. ಕಾಲಜ್ಞಾನಿ ಎಂದು ಹೆಸರಾಗಿದ್ದ ನಾಸ್ಟ್ರಡಾಮಸ್ ಕೂಡ ಇಂತಹ ಪ್ಲೇಗ್ ವೈದ್ಯರಾಗಿದ್ದರು. 1656 ರಲ್ಲಿ ಕೊಲಂಬಿನ ಎಂಬ ಕಲಾವಿದರಿಂದ ತಯಾರಾದ, ರೋಮ್ ನ ಪ್ಲೇಗ್ ವೈದ್ಯ ಡಾ. ಶ್ನಾಬೆಲ್ (ಕೊಕ್ಕಿನ ಮನುಷ್ಯ) ಅವರ ತಾಮ್ರಫಲಕ. ಪಾಲ್ ಫರ್ಸ್ಟ್ ಎಂಬ ನ್ಯುರಂಬರ್ಗ್ ಪ್ರಾಂತ್ಯದ ಜರ್ಮನ್ ಮುದ್ರಕರು ಇದನ್ನು ಮುದ್ರಿಸಿ, ಪ್ರಚಾರಗೊಳಿಸಿದರು. ಚಿತ್ರದ ಜೊತೆಗೆ ಇರುವ ಒಂದು ಪದ್ಯ, ಇಂತಹ ವೈದ್ಯರನ್ನು ಕೆಟ್ಟದಾಗಿ ಗೇಲಿ ಮಾಡುತ್ತದೆ! 1921 ರಲ್ಲಿ ಪ್ರಕಟವಾದ The Carcature and Satire in Medicine ಎಂಬ ಜರ್ಮನ್ ಪುಸ್ತಕದ 171 ನೆಯ ಪುಟದಲ್ಲಿರುವ ಈ ಚಿತ್ರ (ಆ ಪುಸ್ತಕದಲ್ಲಿನ ಚಿತ್ರ ಸಂಖ್ಯೆ 79), 20 ನೆಯ ಶತಮಾನದ ಆರಂಭದಲ್ಲಿ ವ್ಯಾಪಕ ಚರ್ಚೆಗೆ ಒಳಗಾಗಿತ್ತು.

The concept of "community plague doctors" came in vogue across the 17th century. Charles de Lome, a renowned French physician, designed a special costume for plague doctors to protect them from acquiring the disease. Famed tailors from Naples in Italy used to stitch these costumes. The costume made of light cotton cloth had special smearing of paraffin, covered the doctors from head to toes. The hat on the top would fix the head-end of the costume from slipping. The face was covered with a special mask with holes for eyes, covered with glass. A long, shallow beak was stuffed with few resins mixed with stuff like dried mint, rose petals, cloves, camphor. The plague doctors had a long staff to maintain distance from patients. Nostradamus, the soothsayer, was also a Plague doctor. An artist named Columbina has created this copper engraving of Dr. Schnabel (the beaked man), a plague doctor in 1656. Paulus Furst of Nuremberg has printed and published this picture. The poem engraved with this picture parodies the plague doctor. A German book translated as "The Caricature and Satire in Medicine", published in 1921 has this picture (page 171, picture 79). The book was widely discussed in the 20th century.

27. Plague Pandemics in Europe – Mask of a Plague doctor



"Ca' del Sol Mask Shop" by TracyElaine is licensed under CC BY 2.0

ಪ್ಲೇಗ್ ವೈದ್ಯರ ಉದ್ದ ಕೊಕ್ಕಿನ ಮುಖವಾಡದ ಪ್ರತಿಕೃತಿ. ವೆನಿಸ್ ನಗರದ ಮುಖವಾಡಗಳ ಅಂಗಡಿಯ ಪ್ರಚಾರದ ಚಿತ್ರ. ಬಲಗಣ್ಣಿನ ಅಡಿಯಲ್ಲಿ "ಪ್ಲೇಗ್ ವೈದ್ಯ" ಎಂದಿದೆ.

The long-beaked face mask of a plague doctor. Pictured from a mask shop in Venice. "Plague Doctor" is written beneath the slit for the right eye.

28. Plague Pandemics in Europe – Aesculapius scaring the Plague




Aesculapius (representing medicine) routing death, Ceres (?) supplying milk to the starving. Drawing attributed to J.-C. Bordier du Bignon, 1822. Wellcome Collection. Attribution 4.0 International (CC BY 4.0)

18-19 ನೆಯ ಶತಮಾನದ ಪ್ರಸಿದ್ಧ ಫ್ರೆಂಚ್ ಚಿತ್ರಗಾರ ಜಾಕ್ವೆಸ್ ಚಾರ್ಲ್ಸ್ ಬೋರ್ಡಿಯೊ ಅವರ 1822 ರ ಶಾಯಿಯ ಕಲಾಕೃತಿ. ಪ್ಲೇಗ್ ಕಾಯಿಲೆಯ ಆಟಾಟೋಪದಿಂದ ನೊಂದಿದ್ದ ಜನರಿಗೆ ಭರವಸೆ ನೀಡುವಂತಹ ಚಿತ್ರ. ಇದರಲ್ಲಿ ಇಸ್ಕಲಪಿಯಸ್ ಅವರು ಪ್ಲೇಗ್ ನ ಸಾವನ್ನು ಹೆದರಿಸಿ ಓಡಿಸುತ್ತಿದ್ದಾರೆ. ಅವರ ಜೊತೆಯಲ್ಲಿ ಇರುವ ಸೀರೀಸ್ ಎಂಬ ದೇವತೆ ನಿತ್ರಾಣರಿಗೆ ಹಾಲು ನೀಡಿ ನೆರವಾಗುತ್ತಿದ್ದಾರೆ. ಕಾಯಿಲೆಯ ಜೊತೆ ಬರುವ ನಿತ್ರಾಣದ ಚಿತ್ರಣ ಇದೆ. ಚಿತ್ರದಲ್ಲಿ ತೋರಿರುವ ಕತ್ತಲಿನ ವಾತಾವರಣ ಅಂದಿನ ಕಾಲದ ರೋಗಗಳು ಉಂಟುಮಾಡುತ್ತಿದ್ದ ಮನಸ್ಥಿತಿಯ ಬಿಂಬ.

This 1822 pen and ink art on a blue paper is by the French artist Jacques-Charles Bordier. This shows Aesculapius scaring the plague death and driving it away, while the Goddess Ceres gives her breast-milk to a patient with severe weakness. The depiction of dark during the dark days of the plague is very symbolic. It shows how much the divine intervention was sought for the remedial measures against a pandemic.

29. Medical pedagogy - Hippocrates lecturing his students



Hippocrates lecturing to his students under the plane tree on the island of Cos. Wellcome Collection. Attribution 4.0 International (CC BY 4.0)

ಇಂದು ವೈದ್ಯಕೀಯ ರಂಗ ಅಪಾರ ಪ್ರಗತಿ ಸಾಧಿಸಿದೆ. ಶರೀರದ ಪ್ರತಿಯೊಂದು ಅಂಗದ ವಿವರಗಳನ್ನು ತಿಳಿಯಲು ಪ್ರತ್ಯೇಕ ಪರೀಕ್ಷೆಗಳು ಇವೆ. ಆದರೂ, ರೋಗಿಯನ್ನು ಭೌತಿಕವಾಗಿ ಪರೀಕ್ಷೆ ಮಾಡುವ ವಿಧಾನ ಇಂದಿಗೂ ಪ್ರಸ್ತುತ. ಓರ್ವ ಅನುಭವಸ್ಥ ವೈದ್ಯರಿಗೆ ರೋಗಿಯ ಭೌತಿಕ ಪರೀಕ್ಷೆಯಿಂದಲೇ ಹಲವಾರು ಕಾಯಿಲೆಗಳನ್ನು ಅಂದಾಜಿಸಲು ಸಾಧ್ಯ! ಇದರಿಂದ ರೋಗಿ ಹಲವಾರು ಪರೀಕ್ಷೆಗಳನ್ನು ಮಾಡಿಸುವ ಪ್ರಮೇಯ ಕಡಿಮೆಯಾಗುತ್ತದೆ. ರೋಗಿಯ ಭೌತಿಕ ಪರೀಕ್ಷೆಗೆ ಶತಮಾನಗಳ ಇತಿಹಾಸವಿದೆ. ಆದರೆ, ಅದು ಒಂದು ವ್ಯವಸ್ಥಿತ ವಿಧಾನವಾಗಿ ಬೆಳೆದದ್ದು ಕಳೆದ ಎರಡು ಶತಮಾನಗಳಲ್ಲೇ. ಮೊದಲು ಕಣ್ಣೋಟದ ಪರೀಕ್ಷೆ; ನಂತರ ಅಂಗಾಂಗಗಳ ಸ್ಪರ್ಶ ಪರೀಕ್ಷೆ ಮಾತ್ರವೇ ಇದ್ದವು. ಶರೀರದ ಕೆಲವು ಭಾಗಗಳು ಟೊಳ್ಳಾಗಿಯೂ, ಇನ್ನೂ ಕೆಲವು ಗಡುಸಾಗಿಯೂ ಇರುವುದರಿಂದ ಅವನ್ನು ಬೆರಳುಗಳಿಂದ ತಟ್ಟುವುದರ ಮೂಲಕ ವಿವರಗಳನ್ನು ಪತ್ತೆ ಮಾಡಬಹುದು ಎಂದು ತಿಳಿಯಿತು. ಸ್ಟೆಥೊಸ್ಕೋಪ್ ಆವಿಷ್ಕಾರದ ನಂತರ, ಭೌತಿಕ

ಪರೀಕ್ಷೆಗೆ “ಕೇಳುವಿಕೆ” ಎನ್ನುವ ಹೊಸ ಆಯಾಮ ಬಂದಿತು. ಕೆಲವು ವಿಶೇಷ ಕಾಯಿಲೆಗಳಲ್ಲಿ ಶರೀರ ವಿಶಿಷ್ಟ ರಾಸಾಯನಿಕಗಳನ್ನು ಉತ್ಪತ್ತಿ ಮಾಡುತ್ತದೆ. ಆಗ ರೋಗಿಯ ಶರೀರದಿಂದ ನಿರ್ದಿಷ್ಟ ವಾಸನೆ ಸೂಸುತ್ತದೆ. ಅನುಭವಿ ವೈದ್ಯರಿಗೆ ಈ ವಾಸನೆಯ ಘ್ರಾಣ ಕೂಡ ರೋಗದ ಬಗ್ಗೆ ಹಲವಾರು ಸೂಚನೆಗಳನ್ನು ನೀಡುತ್ತದೆ. ಹೀಗೆ, ವೈದ್ಯರ ಗ್ರಹಿಕೆ, ಜ್ಞಾನ, ಮತ್ತು ಅನುಭವಗಳು ರೋಗದ ಪತ್ತೆಗೆ ಸಹಾಯಕವಾಗಬಲ್ಲವು. ಈ ಜ್ಞಾನವನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವ ಗುರುಗಳ ಪಾತ್ರ ಮಹತ್ವದ್ದು.

ಪ್ರಾಚೀನ ಗ್ರೀಸ್ ದೇಶದ ಪ್ರಸಿದ್ಧ ವೈದ್ಯ ಹಿಪೋಕ್ರೆಟಸ್ ಅವರು ಅತ್ಯಂತ ಸಮರ್ಥ ಗುರುವೂ ಆಗಿದ್ದರು. ಗ್ರೀಸ್ ನ ಭಾಗವಾದ ಕೊಸ್ ಎಂಬ ಒಂದು ದ್ವೀಪದಲ್ಲಿ ಅವರ ಗುರುಕುಲವಿತ್ತು. ಅಲ್ಲಿನ ಒಂದು ಮರದ ಕೆಳಗೆ ಅವರು ವೈದ್ಯಕೀಯ ಪಾಠಗಳನ್ನು ಮಾಡುತ್ತಿದ್ದರು ಎಂದು ಪ್ರತೀತಿ. ಆ ಮರದ ಸಂತಾನ ಎನ್ನಲಾದ 500 ವರ್ಷ ಪುರಾತನ ಮರವೊಂದು ಈಗಲೂ ಅದೇ ಸ್ಥಾನದಲ್ಲಿದೆ. ಶಕಪೂರ್ವ 4-5 ನೆಯ ಶತಮಾನದ ಆ ಸಂಗತಿಯನ್ನು 1912 ರಲ್ಲಿ ಬ್ರಿಟಿಷ್ ಕಲಾವಿದ ಅರ್ನೆಸ್ಟ್ ಬೋರ್ಡ್ ಅವರು ಪುನರ್ನಿರ್ಮಾಣ ಮಾಡಿದ್ದಾರೆ. ಹಿನ್ನೆಲೆಯಲ್ಲಿ ಆ ವೃಕ್ಷವನ್ನು ತೋರಿದೆ.

The present-day medical field has seen enormous developments. There are separate tests for every function of each organ in the body. Even then, the physical examination of the patient carries a very significant part in the diagnosis of diseases. An experienced physician can diagnose many ailments of the body only with a meticulous physical examination. A thorough physical examination can significantly reduce the need for many tests. Physical examination has a legacy of many centuries. But it grew as a systematic science only in the last two centuries. Historically, physical examination started with an inspection of the lesion, followed by careful palpation. Once the anatomy was understood better, the differentiation of a hollow viscus Vs solid organ was done through gentle percussion. The invention of the stethoscope added the fourth dimension to this evaluation called “auscultation”. The secretion of some distinct chemicals during certain illnesses rendered a specific smell through body secretions. An experienced physician can distinguish such abnormal small to aid in diagnosis. The perception, knowledge, and experience of a seasoned physician can make a huge impact on the diagnosis and management of diseases. The teachers act as conduit of the transmission of knowledge and have a vital role in history.

Cos is a Greek island. One of the centres of the robust Greek civilization and learning, it has witnessed Hippocrates, the Greek Guru of medicine, lecturing his students on the art of healing. A platene tree is identified as the location of his lectures. A platene tree, considered to be the descendent of

the original tree, still remains on the same spot. In 1912, the British artist Ernest Board recreated the ancient scene in one of his paintings. Titled “Hippocrates lecturing to his students under the plane tree on the island of Cos”, this painting shows the magnificent tree in the background.

30. Medical pedagogy – Family Tradition



"Lorenzo Lotto - Giovanni Agostino della Torre and his Son, Niccolò [c.1513-16]" by Gandalf's Gallery is licensed under CC BY-NC-SA 2.0

ಇಟಲಿಯ ಪ್ರಸಿದ್ಧ ವೈದ್ಯರಾಗಿದ್ದ ಜಿಯೋವಾನಿ ಟೊರ್ರೆ ಮತ್ತು ಆತನ ಮಗ ನಿಕ್ಕೋಲೊ ಟೊರ್ರೆ ಅವರ ವರ್ಣಚಿತ್ರ. ವೈದ್ಯವೃತ್ತಿ ಬಹುತೇಕ ಕುಟುಂಬಗಳಲ್ಲಿ ಮುಂದುವರೆಯುತ್ತಿತ್ತು. ಕುಟುಂಬದ ಹಲವಾರು ಸದಸ್ಯರು ಒಂದೇ ಕ್ಲಿನಿಕ್ ಅನ್ನು ನಿರ್ವಹಿಸುತ್ತಿದ್ದರು. ಈ ಪ್ರಸಿದ್ಧ ತಂದೆ-ಮಗನ ಜೋಡಿಯನ್ನು 1515 ರಲ್ಲಿ ಇಟಲಿಯ ಪ್ರಸಿದ್ಧ ಚಿತ್ರಕಾರ ಲೊರೆನ್ಜೋ ಲೊಟ್ಟೊ ಅವರು ಚಿತ್ರಿಸಿದ್ದಾರೆ.

Lorenzo Lotto was one of the leading Italian Venetian-trained painters of the earlier 16th century. He painted portraits and religious works exclusively. In this 1515 painting, Lotto has painted the Father-Son duo. Giovanni Agostino della Torre was a renowned Bergamo physician. He was 61 years old at the time this portrait was painted. His son Niccolò has been shown along with him in this painting. They both practised medicine and pharmacy in Bergamo. The tradition of the familial practice of medicine was very common. Many members of the family had a common clinic too. One such instance is shown in this portrait.

31. Medical pedagogy – Dr. John Dee



John Dee performing an experiment before Queen Elizabeth I. Oil painting by Henry Gillard Glindoni. Wellcome Collection. Attribution-NonCommercial 4.0 International (CC BY-NC 4.0)

19-20 ನೆಯ ಶತಮಾನದ ಬ್ರಿಟಿಷ್ ಚಿತ್ರಕಾರ ಹೆನ್ರಿ ಗಿಲ್ಲಾರ್ಡ್ ಗ್ಲಿನ್ಡೋನಿ ಅವರು 1900 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. 16 ನೆಯ ಶತಮಾನದ "ಬುದ್ಧಿಜೀವಿ" ಎಂದು ಹೆಸರಾಗಿದ್ದ ಡಾ. ಜಾನ್ ಡೀ ಅವರು ಮಾಡುತ್ತಿರುವ ಒಂದು ಪ್ರಯೋಗವನ್ನು, ತಮ್ಮ ರಾಜಪರಿವಾರದ ಜೊತೆ ನೋಡುತ್ತಿರುವ ಮೊದಲನೆಯ ಎಲಿಜಬೆತ್ ರಾಣಿಯನ್ನು ತೋರಲಾಗಿದೆ. ಡಾ. ಡೀ ಅವರ ಹಿಂದೆ ಕುಳಿತಿರುವವರು ಅವರ ಸಹಾಯಕ ಎಡ್ವರ್ಡ್ ಕೆಲ್ಲಿ. ಸುಳ್ಳು ದಾಖಲೆಯ ಸೃಷ್ಟಿ ಮಾಡಿದ್ದಕ್ಕಾಗಿ ಕೆಲ್ಲಿ ಅವರ ಎರಡೂ ಕಿವಿಗಳನ್ನು ಕತ್ತರಿಸಲಾಗಿತ್ತು. ಹೀಗಾಗಿ, ಕಿವಿಗಳು ಯಾರಿಗೂ ಕಾಣದಂತೆ ಉದ್ದನೆಯ ಟೋಪಿ ಧರಿಸುತ್ತಿದ್ದರು. ರಾಣಿಯ ಎಡಭಾಗದಲ್ಲಿ ಇರುವವರು ಸರ್ ವಾಲ್ಟರ್ ರೇಲಿ. ಅವರ ಹಿಂದೆ ಇರುವ ದಂಡಧಾರಿ ರಾಜಕೋಶಾಧಿಕಾರಿ ಲಾರ್ಡ್ ವಿಲಿಯಮ್ ಸೆಸಿಲ್. "ಹಲವಾರು ವಿಷಯಗಳಲ್ಲಿ ಪರಿಣತ" ಎಂದು ಹೆಸರಾಗಿದ್ದ ಡಾ. ಜಾನ್ ಡೀ ಅವರು, ಬ್ರಿಟನ್ ನ ವೈದ್ಯಕೀಯ ವ್ಯವಸ್ಥೆಯ ಬೆಳವಣಿಗೆಗೆ ಕೂಡ ಕಾರಣರಾಗಿದ್ದರು.

This 1900 oil painting by the British artist Henry Gillard Glindoni a scenario from the 16th century. Dr. John Dee was a British polymath with an international reputation at the court of Queen Elizabeth I. This painting depicts the house of Dr. Dee at Mortlake. He seems to be showing some experiments in chemistry related to fire. The man with a long skullcap behind Dr. Dee is his assistant Edward Kelly, who was punished with cropping of both his ears for forgery. The Queen is sitting at the center with Sir Walter Raleigh to her left. Royal Treasurer Lord William Cecil is seen holding a staff. With the royal patronage, Dr. Dee helped in the development of the British medical system.

32. Medical pedagogy – Medicine, Pharmacy, and Surgery



Personifications of medicine, pharmacy and surgery. Oil painting after (?) Nicolas de Larmessin II. Wellcome Collection. Attribution-NonCommercial 4.0 International (CC BY-NC 4.0)

17 ನೆಯ ಶತಮಾನದ ಫ್ರೆಂಚ್ ಕಲಾವಿದ ನಿಕೋಲಸ್ ದ ಲರ್ಮೆಸಿನ್ ಅವರು 1660 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಆರೋಗ್ಯ ರಕ್ಷಣೆ ಎಂಬುದು ವೈದ್ಯಕೀಯ, ಔಷಧ ಮತ್ತು ಸರ್ಜರಿ ಎಂಬ ತ್ರಿವಳಿಗಳ ಸಂಗಮ ಎಂದು ಬಿಂಬಿಸುವ ಚಿತ್ರ. ವೇದಿಕೆಯ ಮೇಲೆ ಇರುವುದು ವೈದ್ಯ. ಆತನ ದಿರುಸು ಪ್ರಾಚೀನ ಮತ್ತು (ಅಂದಿನ ಕಾಲಕ್ಕೆ) ಆಧುನಿಕ ವೈದ್ಯಕೀಯ ಪುಸ್ತಕಗಳದ್ದು. ಒಟ್ಟು ಆರು ಸೂಚನೆಗಳು ಆತನ ಬಾಯಿಂದ ಬರುತ್ತಿವೆ. ಮೇಜಿನ ಮೇಲೆ ಆತ ಬಳಸುವ ಕೆಲವು ಸಲಕರಣೆಗಳಿವೆ. ಆತನ ಟೋಪಿಯ ಮೇಲೆ ಒಂದು ಗೂಬೆ ಕುಳಿತಿದೆ! ಚಿತ್ರದ ಎಡಭಾಗದಲ್ಲಿ ಔಷಧ ವಿತರಕ ಇದ್ದಾನೆ. ತನ್ನ ವೃತ್ತಿಗೆ ಬೇಕಾದ ಸಲಕರಣೆಗಳ ದಿರುಸು ತೊಟ್ಟಿದ್ದಾನೆ. ಆಳಿಕೆಯನ್ನು ಟೋಪಿಯಾಗಿ ಧರಿಸಿದ್ದಾನೆ. ಚಿತ್ರದ ಬಲಭಾಗದಲ್ಲಿ ಇರುವುದು ಸರ್ಜನ್. ಆತನ ದಿರುಸು ಶಸ್ತ್ರಚಿಕಿತ್ಸೆಯ ಶಸ್ತ್ರಗಳದ್ದು. ನಾಯಿ ಬೆಕ್ಕುಗಳ ಸಾಂಕೇತಿಕತೆ ವಿವರಣೆಗೆ ನಿಲುಕದ್ದು!

This 1660 oil painting by the French artist Nicolas de Larmessin is titled Personifications of Medicine, Pharmacy, and Surgery. The physician representing medicine stands at the center with academic dress and books. He gives three commands each to the other two. Surgeon deals with clysters, bloodletting, and cupping. Apothecary gets the other three commands – laxatives, emetics, and juleps. Many instruments used in medical practice are seen. The surgeons' body is of instruments while the apothecary has pharmaceutical equipment. The mandatory cat and dog are also seen!

33. Medical pedagogy – Medical Society of London



The inaugural meeting of the Medical Society of London in the Society's Council Chamber, 1788. Engraving by N.C. Branwhite, 1801, after S. Medley, 1800. Wellcome Collection. Attribution 4.0 International (CC BY 4.0)

ವೈದ್ಯರ ವ್ಯಾಸಂಗ ಅವರ ಇಡೀ ಜೀವನದ ಉದ್ದಕ್ಕೂ ಜರುಗುತ್ತಲೇ ಇರುತ್ತದೆ! ರೋಗನಿರ್ಣಯ ವಿಧಾನಗಳಲ್ಲಿನ ಪ್ರಗತಿ, ಹೊಸ ಔಷಧಗಳ ತಿಳುವಳಿಕೆ, ಅದನ್ನು ರೋಗಿಗಳಲ್ಲಿ ಬಳಸುವ ಪದ್ಧತಿ – ಇವುಗಳನ್ನು ಸದಾಕಾಲ ಕಲಿತು, ಅಳವಡಿಸಿಕೊಳ್ಳುವುದು ವೈದ್ಯರ ಆವಶ್ಯಕತೆ. ಇದಕ್ಕಾಗಿ ಸೃಷ್ಟಿಯಾದದ್ದು ವೈದ್ಯಕೀಯ ಸಂಘಗಳು. ಹಲವಾರು ವೈದ್ಯರು ನಿಯಮಿತವಾಗಿ ಒಂದೆಡೆ ಸೇರಿ, ವೈದ್ಯಕೀಯ ವಿಜ್ಞಾನದಲ್ಲಿ ಆಗಿರುವ ಪ್ರಗತಿಯನ್ನು ಚರ್ಚಿಸುವುದು, ತಾವು ಕಂಡ ಕ್ಲಿಷ್ಟಕರ ವೈದ್ಯಕೀಯ ಸಮಸ್ಯೆಗಳನ್ನು ಇತರರಿಗೆ

ತಿಳಿಸಿ, ಅವರ ಅನುಭವದ ಸಲಹೆ ಪಡೆಯುವುದು – ಈ ರೀತಿಯ ಸಂವಹನ ನಡೆಯುತ್ತಿತ್ತು. 1773 ರಲ್ಲಿ ಲಂಡನ್ ನಗರದ ಅಂತಹ ಕೆಲವು ವೈದ್ಯರನ್ನು ಒಗ್ಗೂಡಿಸಿ ನಿರ್ಮಾಣ ಆದದ್ದು "ಲಂಡನ್ ವೈದ್ಯಕೀಯ ಸಂಘ". ಈ ಸಂಘದ 1788 ರ ಒಂದು ಅಧಿವೇಶನವನ್ನು ಬ್ರಿಟಿಷ್ ಚಿತ್ರಕಾರರಾದ ನಾಥನ್ ಬ್ರಾನ್ವೈಟ್ ಮತ್ತು ಸ್ಯಾಮುಯ್ಯಲ್ ಮೆಡ್ಲೆ ಅವರು 1800 ರಲ್ಲಿ ಚಿತ್ರಿಸಿದ್ದಾರೆ. ಈ ಸಂಘದಿಂದ 1805 ರಲ್ಲಿ ನಿರ್ಗಮಿಸಿದ ಕೆಲವು ಸದಸ್ಯರು ತಮ್ಮದೇ ಆದ ಪ್ರತ್ಯೇಕ ಸಂಘವನ್ನು ಕಟ್ಟಿದರು. ಇದೇ ಮುಂದೆ ಪ್ರಖ್ಯಾತ ರಾಯಲ್ ವೈದ್ಯಕೀಯ ಸಂಘ ಆಯಿತು. ವೈದ್ಯಕೀಯ ಜ್ಞಾನದ ಮಟ್ಟವನ್ನು ಎತ್ತರಿಸುವಲ್ಲಿ ಇಂತಹ ಸಂಘಗಳು ವಿಶ್ವದಾದ್ಯಂತ ಪ್ರಮುಖ ಪಾತ್ರ ವಹಿಸಿವೆ.

This 1801 engraving by the British lithographer Nathan Cooper Branwhite was of a painting done in 1800 by the British artist Samuel Medley. This shows an event of 1788, a meeting of the Medical Society of London in the Council chamber. Formed in 1773, the Medical Society of London enabled physicians, surgeons, and apothecaries to meet and exchange medical news and to confer bout difficult cases. Few of the prominent members who moved out of the Medical Society of London in 1805 later formed the Royal Society of Medicine. The formation of Medical Societies across the world has served a great purpose in improving the standards of medical practice.

34. Medical pedagogy – Teachers of St Thomas hospital




"File:St Thomas' Hospital, London; arms and teachers. Oil painting Wellcome V0018158.jpg" is licensed under CC BY 4.0

ಬ್ರಿಟನ್ ನ ಸಂತ ಥಾಮಸ್ ಆಸ್ಪತ್ರೆಯ ಐದು ಪ್ರಮುಖ ವೈದ್ಯರನ್ನು ತೋರುವ ಈ ತೈಲವರ್ಣ ಚಿತ್ರದಲ್ಲಿ ಅಜ್ಞಾತ ಕಲಾವಿದನೊಬ್ಬ ಬೆಂಜಮಿನ್ ಟ್ರವೆರ್ಸ್, ಜಾನ್ ಸೌತ್, ಕ್ಲಾರ್ಕ್, ಹೆನ್ರಿ ಕ್ಲೈನ್, ಮತ್ತು ಜೋಸೆಫ್ ಗ್ರೀನ್ ಅವರನ್ನು ಚಿತ್ರಿಸಿದ್ದಾರೆ. ವೈದ್ಯಕೀಯ ವಿದ್ಯಾರ್ಥಿಗಳು ಸಂತ ಥಾಮಸ್ ಆಸ್ಪತ್ರೆಯಲ್ಲಿ ಕಲಿಯಲು ಅನುಕೂಲ ಮಾಡಿಕೊಟ್ಟ 18-19 ನೆಯ ಶತಮಾನದ ಕೆಲವು ವೈದರನ್ನು ಹೀಗೆ ಸ್ಮರಿಸಲಾಗಿದೆ.

An oil painting depicting the arms and teachers of St Thomas hospital of London by an unknown artist adorns the walls of prominent British teaching hospitals. The five teachers depicted in this painting are recognized as Benjamin Travers, John Flint South, LeGros Clark, Henry Cline, and Joseph Henry Green – prominent physicians and surgeons of 18^{th} and 19^{th} Century Britain.

35. Medical pedagogy – Examination of a Young Surgeon



"The Examination of a young surgeon" by Thomas Fisher Rare Book Library, UofT is licensed under CC BY 2.0

ವೈದ್ಯಕೀಯ ವಿದ್ಯಾರ್ಥಿಗಳ ಪರೀಕ್ಷೆ ಎಂದರೆ, ಅದು ಚಕ್ರವ್ಯೂಹದಲ್ಲಿ ನುಗ್ಗಿ ಜೀವಂತವಾಗಿ ಹೊರ ಬಂದಷ್ಟು ಕಠಿಣ! ಹಿಂದಿನ ಕಾಲದಲ್ಲಿ ಇದು ಇನ್ನೂ ಕಷ್ಟಕರವಾಗಿ ಇರುತ್ತಿತ್ತು. 1811 ರಲ್ಲಿ ರಚಿತವಾದ ಈ ಚಿತ್ರದಲ್ಲಿ ಬ್ರಿಟಿಷ್ ಚಿತ್ರಕಾರ ಜಾರ್ಜ್ ಕ್ರೂಕ್ಶಂಕ್ ಅವರು ಇಂತಹ ಒಬ್ಬ ಬಡಪಾಯಿ ವೈದ್ಯಕೀಯ ವಿದ್ಯಾರ್ಥಿಯ ಪಾಡನ್ನು ಚಿತ್ರಿಸಿದ್ದಾರೆ. ಅರೆ-ವರ್ತುಲಾಕಾರದ ಮೇಜಿನ ಎಡಭಾಗದಲ್ಲಿ ನಿಂತಿರುವ ನೀಲಿ ಸೂಟಿನ ವಿದ್ಯಾರ್ಥಿಯನ್ನು "ಕಿವಿಯ ಭಾಗಗಳ ಬಗ್ಗೆ ವಿವರಿಸು"ವಂತೆ ಪ್ರಶ್ನೆ ಕೇಳುತ್ತಿದ್ದಾರೆ. ಇಬ್ಬರು ಪರೀಕ್ಷಕರಿಗೆ ಕಿವಿ ಕೇಳುವುದಿಲ್ಲ, ಅವರು ಕೊಳವೆಯನ್ನು ತಮ್ಮ ಕಿವಿಗೆ ಹಿಡಿದಿದ್ದಾರೆ. ಒಬ್ಬರು ಆಕಳಿಸುತ್ತಿದ್ದಾರೆ. ಒಬ್ಬರು ಕತೆ ಪುಸ್ತಕ ಓದುತ್ತಿದ್ದಾರೆ. ಒಬ್ಬರು ನಶ್ಯ ಏರಿಸುತ್ತಿದ್ದಾರೆ. ಮತ್ತೊಬ್ಬರು ಏನೋ ಮಾತನಾಡುತ್ತಿದ್ದಾರೆ. ಒಬ್ಬರು ಹಣ ಎಣಿಸುತ್ತಿದ್ದಾರೆ. ಮತ್ತೊಬ್ಬರು ಲೆಕ್ಕ ಬರೆಯುತ್ತಿದ್ದಾರೆ. ಪರೀಕ್ಷಕರಿಗೆ ಬೇಕಾದ ಪುಸ್ತಕ ಒದಗಿಸುವ ಸಹಾಯಕ ಮಧ್ಯೆ ನಿರ್ವಿಣ್ಣರಾಗಿ ನಿಂತಿದ್ದಾರೆ. ಕೆಲವು ಕಾಯಿಲೆಗಳ ಚಿತ್ರಗಳು ಗೋಡೆಯ ಮೇಲಿವೆ. ಒಂದು ಅಸ್ಥಿಪಂಜರ ಲೇಡಿ ಬ್ರೌನ್ರೈಸ್ ಎಂಬ ಓರ್ವ ಕೊಲೆಗಾತಿಯದ್ದು! ಈ ಪರೀಕ್ಷಕರನ್ನು ಸರ್ ಡೇವಿಡ್ ಡಂಡಸ್, ಸರ್ ಎವೆರರ್ಡ್ ಹೋಂ, ಸರ್ ಚಾರ್ಲ್ಸ್ ಬೀಕಲ್, ಸರ್ ಜೇಮ್ಸ್ ಅರ್ಲ್ ಎಂದು ಗುರುತಿಸಿದೆ. ಮಧ್ಯದಲ್ಲಿ ಇರುವವರು ಸರ್ ವಿಲಿಯಮ್ ಬ್ಲಿಜರ್ಡ್. ಇವರು ತಮ್ಮ 92 ನೆಯ ವಯಸ್ಸಿನಲ್ಲೂ ಬಂದು

ಪರೀಕ್ಷಕರಾಗುತ್ತಿದ್ದರು. ಇವರಿಗೆ ಆಗ ಕಣ್ಣು ಕಾಣುತ್ತಿರಲಿಲ್ಲ; ಕಿವಿ ಕೇಳುತ್ತಿರಲಿಲ್ಲ ಎನ್ನಲಾಗಿದೆ. ಜಾರ್ಜ್ ಕ್ರೂಕ್ಶ್ಯಂಕ್ ಅವರ ವಿಡಂಬನೆ ಬಹಳ ಹರಿತ!

This 1811 cartoon by the British artist George Cruikshank is titled “the examination of a young surgeon”. The final examination of medical sciences has always been a tough task! One such incident is shown in this painting. Nine examiners behind a semicircular desk are examining a hapless medical student in a blue coat, standing on the left end of the picture. He has been asked to explain the structure of the human ear. Two examiners are hard of hearing, and they are holding a horn-like instrument to their ears for better listening. One is yawning. Another one is reading a novel. One is sniffing the snuff. Two are conversing between themselves. One is writing some accounts and another is counting coins. There is a confused attendant with a pile of reference textbooks. The wall is adorned by a few paintings. One skeleton is labeled to be of a famous murderess. These examiners are identified as few senior members of the Royal College in London. The examiner in the middle was Dr. William Blizzard – who was 92-years old at that time. He could not see or hear, but still was an examiner! The situation of examination for medical students in developing countries is not much different even today! The depicted sarcasm is very sharp.

36. Medical pedagogy – Teaching with Stethoscope



Laennec By Théobald Chartran / Public domain
https://creativecommons.org/publicdomain/mark/1.0/deed.en



"Laennec's stethoscope (stethoscope; monaural stethoscope)" by René Théophile Hyacinthe Laennec is licensed under CC BY-NC-SA 4.0

ಸ್ಟೆಥೊಸ್ಕೋಪ್ ಎಂಬುದು ಒಂದು ರೀತಿಯಲ್ಲಿ ವೈದ್ಯರಿಗೆ ಪರ್ಯಾಯ ಸಂಕೇತ. ಇದನ್ನು 1816 ರಲ್ಲಿ ಅಭಿವೃದ್ಧಿಗೊಳಿಸಿದವರು ಫ್ರೆಂಚ್ ವೈದ್ಯ ಡಾ. ರೆನಿ ಹಯಸಿಂಥ್ ಲನ್ನೆಕ್. 19 ನೆಯ ಶತಮಾನದ ಫ್ರೆಂಚ್ ಚಿತ್ರಕಾರ ಥಿಯೋಬಾಲ್ಡ್ ಚಾರ್ಟ್ರನ್ ಅವರು 1870 ರ ಸುಮಾರಿಗೆ ರಚಿಸಿದ ಈ ವರ್ಣಚಿತ್ರದಲ್ಲಿ ಫ್ರಾನ್ಸ್ ನ ನೆಕರ್ ಆಸ್ಪತ್ರೆಯಲ್ಲಿ ರೋಗಿಗಳ ಪರೀಕ್ಷೆಯ ವಿಧಾನವನ್ನು ಡಾ. ಹಯಸಿಂಥ್ ಲನ್ನೆಕ್ ಅವರು ವಿದ್ಯಾರ್ಥಿಗಳಿಗೆ ಕಲಿಸುತ್ತಿರುವುದನ್ನು ಚಿತ್ರಿಸಲಾಗಿದೆ. ಅವರ ಎಡಗೈಯಲ್ಲಿ ಇರುವುದು, ಅವರೇ ವಿನ್ಯಾಸ ಮಾಡಿರುವ ಕೊಳವೆಯ ಆಕಾರದ ಸ್ಟೆಥೊಸ್ಕೋಪ್. ಮುಂದೆ ಇದರ ವಿನ್ಯಾಸ ಹಂತಹಂತವಾಗಿ ಬದಲಾಯಿತು.

ಡಾ. ರೆನಿ ಹಯಸಿಂಥ್ ಲನ್ನೆಕ್ ಅವರ ಹಲವಾರು ಸ್ಟೆಥೊಸ್ಕೋಪ್ ಗಳಲ್ಲಿ ಒಂದನ್ನು ಇಲ್ಲಿ ತೋರಿಸಲಾಗಿದೆ:

The stethoscope is the symbolic representation of a doctor! However, the stethoscope was invented by the French physician Dr. Rene Laennec in 1816. This 1870 painting by the French artist Theobald Chartran shows one of the

first models of the stethoscope used by Dr. Laennec at Necker Hospital, France while teaching the medical students. The tubular device in the left hand of Dr. Laennec is the original stethoscope. The design varied with time to reach the present form.

An early model of stethoscope designed by Dr. Laennec is shown here.

37. Medical pedagogy – Vivisection



A physiological demonstration with vivisection of a dog. Oil painting by Emile-Edouard Mouchy, 1832. Wellcome Collection. Attribution-NonCommercial 4.0 International (CC BY-NC 4.0)

ಎಮಿಲೆ ಎಡ್ವರ್ಡ್ ಮೊಷೆ ಎಂಬ 19 ನೆಯ ಶತಮಾನದ ಖ್ಯಾತ ಫ್ರೆಂಚ್ ಕಲಾವಿದರು 1832 ರಲ್ಲಿ ರಚಿಸಿರುವ ತೈಲ ವರ್ಣಚಿತ್ರ. ಶರೀರ ಶಾಸ್ತ್ರದ ಜ್ಞಾನ ಉಳ್ಳ ಸಹಾಯಕರು ಜೀವಂತ ನಾಯಿಯನ್ನು ಬಂಧಿಸಿ ಬಿಗಿದು, ಅದನ್ನು ಕತ್ತರಿಸುತ್ತ, ಶರೀರದ ಕ್ರಿಯಾ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ತೋರುತ್ತಿರುವ ಚಿತ್ರ. ಅಂದಿನ ಕಾಲದಲ್ಲಿ ಅರಿವಳಿಕೆ ವಿಧಾನಗಳು ಪತ್ತೆಯಾಗಿರಲಿಲ್ಲ. ಈ ರೀತಿಯ ಕ್ರೂರ ಪದ್ದತಿಗಳು ಸಾಮಾನ್ಯವಾಗಿದ್ದವು. ಈ ವಿಧಾನವನ್ನು Vivisection ಎನ್ನಲಾಗುತ್ತಿತ್ತು. ಈ ಚಿತ್ರಗಳು ಕ್ರೌರ್ಯವನ್ನು ಬಿಂಬಿಸುತ್ತವೆ ಎನ್ನುವ ಕಾರಣಕ್ಕಾಗಿ ಬಹಳ ಕಾಲ ಇವನ್ನು ಸಂಗ್ರಹಾಲಯದಲ್ಲಿ ಇಡುತ್ತಿರಲಿಲ್ಲ!

Oil painting dating to 1832 by French artist Emile-Edouard Mouchy, showing vivisection of a dog. The dog is being dissected alive to explain the anatomy and physiology to the medical students. Such brutal methods were common when anesthesia was not available. For long, such paintings were not displayed in museums for the gory they represented.

38. Medical pedagogy – The Gross Clinic



"The Gross Clinic PMA(13)" by rverc is licensed under CC BY 2.0

ಪ್ರಖ್ಯಾತ ಅಮೆರಿಕನ್ ಚಿತ್ರಕಾರ ಥಾಮಸ್ ಏಕಿನ್ಸ್ ಅವರಿಂದ 1875 ರಲ್ಲಿ ರಚನೆಯಾದ, 19 ನೆಯ ಶತಮಾನದ ಅತ್ಯಂತ ಶ್ರೇಷ್ಠ ವೈದ್ಯರಲ್ಲಿ ಒಬ್ಬರು ಎಂದು ಗುರುತಿಸಲಾಗುವ ಅಮೆರಿಕನ್ ವೈದ್ಯ ಡಾ. ಸ್ಯಾಮುಯ್ಯಲ್ ಡೇವಿಡ್ ಗ್ರಾಸ್ ಅವರ ಒಂದು ತೈಲ ವರ್ಣಚಿತ್ರ. ಫಿಲಡೆಲ್ಫಿಯದ ಥಾಮಸ್ ಜೆಫರ್ಸನ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 1875ರಲ್ಲಿ ನಡೆದ ಒಂದು ಶಸ್ತ್ರಚಿಕಿತ್ಸೆಯ ಪ್ರಸಂಗ. ಹಗಲು ಹೊತ್ತಿನಲ್ಲಿ, ರಂಗಮಂಟಪದಂತಹ ಸ್ಥಳದಲ್ಲಿ (amphitheatre), ಛಾವಣಿಯಿಂದ ಬೀಳುವ ಸೂರ್ಯನ ಬೆಳಕಿನಲ್ಲಿ ಇಂತಹ ಶಸ್ತ್ರಕ್ರಿಯೆ ಮಾಡಬೇಕಿತ್ತು. ಸುತ್ತಲೂ ಕುಳಿತ ವಿದ್ಯಾರ್ಥಿಗಳು ಇವನ್ನು ನೋಡಿ ಕಲಿಯುತ್ತಿದ್ದರು. ಮುಖ್ಯ ಶಿಕ್ಷಕರು ವಿವರಣೆ ನೀಡುತ್ತಿದ್ದರು. ಈ ಚಿತ್ರದಲ್ಲಿ ಡಾ. ಸ್ಯಾಮುಯ್ಯಲ್ ಡೇವಿಡ್ ಗ್ರಾಸ್ ಅವರು ನಿಂತು "ಏನು ನಡೆಯುತ್ತಿದೆ" ಎಂಬುದನ್ನು ವಿಶ್ವಾಸದಿಂದ ಎಲ್ಲರಿಗೂ ವಿವರಿಸುತ್ತಿದ್ದಾರೆ. ಚಿತ್ರದ ಬಲಬದಿಯಲ್ಲಿ ಶಸ್ತ್ರಕ್ರಿಯೆ ಮಾಡುತ್ತಿರುವವರು ಹಿರಿಯ ವೈದ್ಯ ಡಾ. ಜೇಮ್ಸ್ ಬಾರ್ಟನ್; ಡಾ. ಗ್ರಾಸ್ ಅವರ ಮುಂಬದಿ ಕೂತು, ರೋಗಿಯ ಕಾಲನ್ನು ಹಿಡಿದಿರುವವರು ಡಾ. ಚಾರ್ಲ್ಸ್ ಬ್ರಿಗ್ಸ್; ಡಾ. ಬಾರ್ಟನ್ ಅವರ ಮುಂದೆ ಕೂತು ಗಾಯದ ಚರ್ಮವನ್ನು ಅಗಲಿಸಿ ಸಹಾಯ ಮಾಡುತ್ತಿರುವವರು ಡಾ. ಡೇನಿಯಲ್ ಆಪಲ್; ರೋಗಿಯ ತಲೆಯ ಬದಿಯಲ್ಲಿ ಅರಿವಳಿಕೆ ನೀಡುತ್ತಿರುವವರು ಡಾ. ಜೋಸೆಫ್ ಹರ್ನ್; ಹಿಂಬದಿಯಲ್ಲಿ ಕೂತು ಪ್ರಸಂಗದ ವಿವರಗಳನ್ನು ದಾಖಲಿಸುತ್ತಿರುವವರು ಡಾ. ಫ್ರಾಂಕ್ಲಿನ್ ವೆಸ್ಟ್. ಇವರೆಲ್ಲಾ ಆ ಕಾಲದ ಪ್ರಸಿದ್ಧ ವೈದ್ಯರು. ಡಾ. ಗ್ರಾಸ್ ಅವರ ಬಲಬದಿ ಕೂತು, ಈ ಪ್ರಸಂಗವನ್ನು ನೋಡಲಾಗದೆ ಕಣ್ಣು ಮುಚ್ಚಿರುವವರು ಪ್ರಾಯಶಃ ರೋಗಿಯ ತಾಯಿ. ಚಿತ್ರದ ಬಲಬದಿಯ ಹಿನ್ನಲೆಯಲ್ಲಿ ಚಿತ್ರಕಾರ ಥಾಮಸ್ ಏಕಿನ್ಸ್ ಸ್ವಯಂ ತಮ್ಮನ್ನೂ ಚಿತ್ರಿಸಿದ್ದಾರೆ! ಅಂದು amphitheatre ಮಾದರಿಯ ಜಾಗಗಳಲ್ಲಿ ಶಸ್ತ್ರಕ್ರಿಯೆ ನಡೆಯುತ್ತಿದ್ದ ಈ ಸ್ಥಳಗಳನ್ನು ಆಪರೇಷನ್ ಥಿಯೇಟರ್ ಎನ್ನಲಾಗುತ್ತಿತ್ತು. ಇಂದಿನ ಕಾಲದಲ್ಲಿ ಶಸ್ತ್ರಕ್ರಿಯೆ ನಡೆಯುವುದು ಆಸ್ಪತ್ರೆಯ ಒಳಾಂಗಣದಲ್ಲಿಯೇ ಆದರೂ, ಅಂದಿನ ಹೆಸರೇ ಇಂದೂ ಉಳಿದಿದೆ!

This 1875 oil painting by the American artist Thomas Eakins was in honor of the American physician Dr. Samuel David Gross. The painting depicts an Open operation theatre in Thomas Jefferson medical college in Philadelphia. Dr. Gross was considered one of the most important physicians in America during his time. The operations were performed in an amphitheater with Sunlight. While the chief physician explained the procedure to the students sitting around, another surgeon would perform live surgery. In the picture, chief surgeon Dr. James Barton is performing the surgery while the anesthetist Dr. Joseph Hearn is seen on the head end. Dr. Gross with a blood-soaked scalpel is explaining the intricacies of the procedure to the students. The incident is being recorded by Dr. Franklin West. A relative of the patient is seen in the background adjacent to Dr. Gross. The painter himself is seen on the right side of the observer. Since the surgeries before the invention of electric lights were conducted in such amphitheaters, the term "theatre" is still retained for the places where operations are done.

39. Medical pedagogy – Claude Bernard and his pupils



"File:Claude Bernard and his pupils. Oil painting after Léon-Augus Wellcome V0017769.jpg" is licensed under CC BY 4.0

ಲಿಯೋನ್ ಅಗಸ್ಟಿನ್ ಹರ್ಮೈಟ್ ಎಂಬ 19-20 ನೆಯ ಶತಮಾನದ ಫ್ರೆಂಚ್ ಕಲಾವಿದ 1885 ರ ಸುಮಾರಿಗೆ ಚಿತ್ರಿಸಿರುವ ತೈಲ ವರ್ಣ ಕಲಾಕೃತಿ. ಮೊಲವೊಂದನ್ನು ಕತ್ತರಿಸಿ, ಅದರ ಶರೀರದ ಕ್ರಿಯೆಗಳನ್ನು ನಿರೂಪಿಸುತ್ತಿರುವ ವೃದ್ಧರು "19 ನೆಯ ಶತಮಾನದ ಅತ್ಯಂತ ಪ್ರಸಿದ್ಧ ವೈದ್ಯ" ಎಂದು ಹೆಸರಾದ ಫ್ರೆಂಚ್ ವೈದ್ಯ ಕ್ಲಾಡ್ ಬರ್ನಾರ್ಡ್. ಅವರ ಸುತ್ತಲೂ ಅವರ ಪ್ರಖ್ಯಾತ ಶಿಷ್ಯರಿದ್ದಾರೆ. ಚಿತ್ರದ ಎಡಭಾಗದಲ್ಲಿ ಪುಸ್ತಕ ಹಿಡಿದು ನಿಂತವರು ನೆಸ್ಟರ್ ಗ್ರೆಹಾಂಟ್; ಅವರ ಪಕ್ಕದಲ್ಲಿ ನಿಂತವರು ಅಮೆಡಿ ಡ್ಯೂಮಾಂಟ್ಪಾಲಿಯರ್; ಬರ್ನಾರ್ಡ್ ಅವರ ಬಲಬದಿಯಲ್ಲಿ ಇಣುಕಿ ನೋಡುತ್ತಿರುವವರು ಅರ್ಸೆನ್ ಡಿ'ಅರ್ಸನ್ವಲ್; ಬರ್ನಾರ್ಡ್ ಅವರ ಎಡಭಾಗದಲ್ಲಿರುವವರು ಲ ಪೆರ್ ಲಸಾಗ್; ಬರ್ನಾರ್ಡ್ ಅವರು ಹೇಳಿದ್ದನ್ನು ಪುಸ್ತಕದಲ್ಲಿ

ಬರೆಯುತ್ತಿರುವವರು ಆಲ್ಬರ್ಟ್ ದಾಸ್ತ್ರೆ. ಇವರೆಲ್ಲಾ ಭವಿಷ್ಯದಲ್ಲಿ ವೈಯಕ್ತಿಕವಾಗಿ ಶರೀರ ಕ್ರಿಯಾ ವಿಜ್ಞಾನದಲ್ಲಿ ಬಹಳ ದೊಡ್ಡ ಹೆಸರು ಮಾಡಿದರು.

This 1885 oil painting by the French artist Léon-Augustin Lhermitte displaying the dissection of a rabbit to study physiology. The dissection is done by Dr. Claude Bernard, “the most famous physician of 19th century”. He is surrounded by his pupils Nestor Gréhant, Amédée Dumontpallier, Jacques-Arsène d'Arsonval, and others. Albert Dastre is seen taking down the notes of the discussion. These students of Dr. Bernard made significant contributions to the field of physiology.

40. Medical pedagogy – Dr. Jean Martin Charcot



www.navigart.fr/ By André Brouillet /1887 Photo credit: Museum of the History of Medicine / Ministry of Youth, National Education and Research. In Public domain.

ಇತಿಹಾಸದ ಉದ್ದಕ್ಕೂ ವೈದ್ಯಕೀಯ ಶಿಕ್ಷಣ ಹಲವಾರು ಅದ್ಭುತ ಶಿಕ್ಷಕರನ್ನು ಕಂಡಿದೆ. ಆಂದ್ರೆ ಬ್ರೌಯಿಲ್ಲೆ ಎಂಬ 19 ನೆಯ ಶತಮಾನದ ಪ್ರಖ್ಯಾತ ಫ್ರೆಂಚ್ ಚಿತ್ರಕಾರನಿಂದ 1887 ರಲ್ಲಿ ರಚಿತವಾದ ತೈಲ ವರ್ಣಚಿತ್ರ, ಇಂತಹ ಓರ್ವ ಅಪ್ರತಿಮ ವೈದ್ಯ ಶಿಕ್ಷಕರನ್ನು ತೋರಿದೆ. ಈ ಚಿತ್ರದಲ್ಲಿ ಪಾಠ ಮಾಡುತ್ತಿರುವವವರು "ಆಧುನಿಕ ನರವ್ಯೂಹ ಶಾಸ್ತ್ರದ ಸ್ಥಾಪಕ" ಎಂದೇ ವಿಖ್ಯಾತರಾದ ಫ್ರೆಂಚ್ ನರರೋಗ ತಜ್ಞ ಜೀನ್ ಮಾರ್ಟಿನ್ ಚಾರ್ಕಾಟ್. ನರವ್ಯೂಹಕ್ಕೆ ಸಂಬಂಧಿಸಿದ ಹಲವಾರು ಕಾಯಿಲೆಗಳನ್ನು ಇವರು ಪತ್ತೆ ಮಾಡಿದರು. ಇವರ ಅಧ್ಯಯನಗಳಿಂದ ಪ್ರಭಾವಿತರಾದ ಶಿಷ್ಯರು ನರರೋಗ ಶಾಸ್ತ್ರವನ್ನು ಅಪಾರವಾಗಿ ಮುನ್ನಡೆಸಿದರು. ಪ್ಯಾರಿಸ್ ನ ಆಸ್ಪತ್ರೆಯೊಂದರಲ್ಲಿ ಚಿತ್ರಿತವಾದ ಈ ಚಿತ್ರದಲ್ಲಿ ಮೇರಿ ವಿಟ್ಮನ್ ಎನ್ನುವ ರೋಗಿಯನ್ನು ಸಮ್ಮೋಹನ ಪ್ರಕ್ರಿಯೆಗೆ ಒಳಪಡಿಸಿ, ಅವರ ಕಾಯಿಲೆಯ ವಿವರಗಳನ್ನು ಪತ್ತೆ ಮಾಡುವ ತಂತ್ರವನ್ನು ಪಾಠ ಮಾಡುತ್ತಿದ್ದಾರೆ. ರೋಗಿಗೆ ಆಸರೆಯಾಗಿ ಹಿಂಬದಿಯಲ್ಲಿ ನಿಂತಿರುವವರು, ಮುಂದೆ ಪ್ರಖ್ಯಾತ ನರಶಾಸ್ತ್ರತಜ್ಞ ಎಂದು ಹೆಸರಾದ ಜೋಸೆಫ್ ಬ್ಯಾಬಿನ್ಸ್ಕಿ. ಚಾರ್ಕಾಟ್ ಅವರ ಪಾಠ ಕೇಳುತ್ತಿರುವವರ ಪೈಕಿ ಮುಂದೆ ಖ್ಯಾತರಾದ ಜಾರ್ಜಸ್ ಟಾರೆಟ್, ಪಾಲ್ ರಿಖರ್, ಪಿಯರಿ ಮೇರಿ, ಮಥಿಯಾಸ್ ಡುವಾಲ್, ಗಿಲ್ಬರ್ಟ್ ಬ್ಯಾಲೆ ಮುಂತಾದವರಿದ್ದಾರೆ.

The field of medicine is historically bestowed with remarkable teachers. One such "all-time greats" was the French neurologist Dr. Jean Martin Charcot, who is considered as the founder of modern neurosciences. This 1887 oil painting by the French artist Andre Brouillet depicts one of the teaching sessions of Dr. Charcot in a hospital in Paris. Dr. Charcot is hypnotizing a lady named Mary Wittmann, who is supported by Dr. Joseph Babinski. The painting depicts several people like Paul Richer, Mathias Duval, Pierre Marie, Maurice Debove, and others who turned out to be big names in France by the beginning of the 20^{th} century.

41. Medical pedagogy - The Agnew Clinic



"The Agnew Clinic by Thomas Eakins" by gmbernstein is licensed under CC BY-NC-ND 2.0

ಪ್ರಖ್ಯಾತ ಅಮೆರಿಕನ್ ಚಿತ್ರಕಾರ ಥಾಮಸ್ ಏಕಿನ್ಸ್ ಅವರಿಂದ 1889 ರಲ್ಲಿ ರಚನೆಯಾದ, 19 ನೆಯ ಶತಮಾನದ ಅತ್ಯಂತ ಶ್ರೇಷ್ಠ ವೈದ್ಯರಲ್ಲಿ ಒಬ್ಬರು ಎಂದು ಗುರುತಿಸಲಾಗುವ ಅಮೆರಿಕನ್ ವೈದ್ಯ ಡಾ. ಡೇವಿಡ್ ಹೇಯ್ಸ್ ಅಗ್ನ್ಯು ಅವರ ಒಂದು ತೈಲ ವರ್ಣಚಿತ್ರ. ಪೆನ್ಸಿಲ್ವೆನಿಯ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರರಾಗಿದ್ದ ಡಾ. ಅಗ್ನ್ಯು ಅವರು 1889 ರಲ್ಲಿ ನಿವೃತ್ತರಾಗುವುದಿತ್ತು. ಆ ಸಮಾರಂಭದಲ್ಲಿ ಅವರಿಗೆ ನೆನಪಿನ ಕಾಣಿಕೆಯಾಗಿ ನೀಡಲು ಈ ಚಿತ್ರವನ್ನು ಮಾಡಿಕೊಡುವಂತೆ ಏಕಿನ್ಸ್ ಅವರನ್ನು ಅಲ್ಲಿನ ವಿದ್ಯಾರ್ಥಿಗಳು ಕೇಳಿದರು. ಸುಮಾರು ಮೂರು ತಿಂಗಳು ಬೇರೆಲ್ಲಾ ಕೆಲಸಗಳನ್ನೂ ಬದಿಗಿರಸಿ, ಏಕಿನ್ಸ್ ಅವರು ಈ ಚಿತ್ರ ರಚಿಸಿದರು. ಶಸ್ತ್ರಕ್ರಿಯೆಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಣೆ ನೀಡುತ್ತಿರುವ ವೃದ್ಧ ವೈದ್ಯರೇ ಡಾ. ಅಗ್ನ್ಯು. ಶಸ್ತ್ರಕ್ರಿಯೆ ಮಾಡುತ್ತಿರುವವರು ಡಾ. ವಿಲಿಯಮ್ ವೈಟ್. ಜೊತೆಗೆ ನಿಂತಿರುವ

ದಾದಿ ಸೂಸನ್ ಮ್ಯಾಕ್ಡೋವೆಲ್. ಓರ್ವ ಸಮರ್ಥ ವೈದ್ಯನಿಗೆ ವಿದ್ಯಾರ್ಥಿಗಳಿಂದ ಸಲ್ಲಬಹುದಾದ ದೊಡ್ಡ ಪಾರಿತೋಷಕ ಈ ಚಿತ್ರ.

This 1889 oil painting by the American artist Thomas Eakins was in honor of the American physician Dr. David Hayes Agnew. The students from the University of Pennsylvania School of Medicine commissioned Thomas Eakins for a portrait of their retiring professor of surgery Dr. David Hayes Agnew. Eakins completed the painting in three months, working day and night, and keeping all his other pending works aside, so that it could be presented on May 1, 1889. The painting depicts a discoursing Dr. Agnew with Dr. William White performing the surgery while the nurse Susan McDowell is watching. This is one of the biggest laurels a teacher can receive from his students.

42. Medical pedagogy – Medical Greats of Europe



Medicina_dos by Veloso Salgado / Public domain https://creativecommons.org/publicdomain/mark/1.0/deed.en

---

19-20 ನೆಯ ಶತಮಾನದ ಪ್ರಸಿದ್ಧ ಪೋರ್ಚುಗೀಸ್ ಚಿತ್ರ ಕಲಾವಿದ ಜೋಸ್ ಮರಿಯ ವೆಲೊಸೊ ಸಲ್ಗಡೋ ಅವರು ಲಿಸ್ಬನ್ ನ ನೋವ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 1906 ರಲ್ಲಿ ರಚಿಸಿರುವ ಗೋಡೆ ಚಿತ್ರ. ಇದರಲ್ಲಿ 18-19 ನೆಯ ಶತಮಾನದ ಯೂರೋಪಿನಲ್ಲಿ ಬಾಳಿದ ಹಲವಾರು ವೈದ್ಯಕೀಯ ಸಾಧಕರ ಚಿತ್ರಗಳಿವೆ. ವಾನ್ ಹೆಲ್ಮಾಂಟ್, ಲೆನ್ನಕ್, ಗ್ಯಾಲ್ವನಿ, ಜೆನ್ನರ್, ಲವಾಸಿಯೆ, ಮಾರ್ಗಾಗ್ನಿ, ಕಾಖ್, ಪಾಸ್ತರ್, ಎಮಿಲಿ ರೊ, ಲಾರ್ಡ್ ಬಿಲ್ರಾಥ್, ಲಿಸ್ಟರ್, ವರ್ಶೋ, ಜೀನ್ ಲ್ಯಾರಿ, ಚಾರ್ಕಾಟ್, ಕ್ಲಾಡ್ ಬರ್ನಾರ್ಡ್ ಮುಂತಾದವರನ್ನು ಇಲ್ಲಿ ಕಾಣಬಹುದು.

This 1906 wall painting by the Portuguese artist Jose Maria Veloso Salgado is displayed in Nova Medical School at Lisbon. Some of the greatest doctors in Europe find a place here. Van Helmont, Laennec, Galvani, Jenner, Morgagni, Koch, Pasteur, Lord Billroth, Lister, Virchow, Charcot, Claude Bernard, and others are depicted.

43. Medical pedagogy – Bedside Manners



"File:A medical student being examined for his bedside manner by a Wellcome V0011496.jpg" by George Morrow is licensed under CC BY 4.0

ರೋಗಿಯ ಜೊತೆ ವೈದ್ಯರು ಹೇಗೆ ವರ್ತಿಸಬೇಕು ಎನ್ನುವ ನೀತಿ ಜಿಜ್ಞಾಸೆಯನ್ನು ಕಲಿಯುವುದು ಪ್ರತಿಯೊಬ್ಬ ವೈದ್ಯಕೀಯ ವಿದ್ಯಾರ್ಥಿಗೂ ಬಹಳ ಮುಖ್ಯ. ವೈದ್ಯಕೀಯ ಎನ್ನುವುದು ವಿಜ್ಞಾನವಾದರೆ, ರೋಗಿಯ ಜೊತೆಯಲ್ಲಿನ ಮಾತುಕತೆ ಕಲೆಗಾರಿಕೆ. ಈ ಕಲೆಯನ್ನು ಕೂಡ ವೈದ್ಯಕೀಯ ವ್ಯಾಸಂಗದ ಅಂತಿಮ ಪರೀಕ್ಷೆಗಳಲ್ಲಿ ನಿರ್ಣಯಿಸಲಾಗುತ್ತಿತ್ತು. 1914 ರಲ್ಲಿ ಬ್ರಿಟಿಷ್ ಕಲಾವಿದ ಜಾರ್ಜ್ ಮ್ಯಾರೊ ಅವರು ರಚಿಸಿದ ಈ ಕೃತಿಯಲ್ಲಿ ವೈದ್ಯಕೀಯ ವಿದ್ಯಾರ್ಥಿಯೊಬ್ಬನ ಪರೀಕ್ಷೆಯಲ್ಲಿ ಇದನ್ನು ಪರೀಕ್ಷಿಸುತ್ತಿರುವ ಚಿತ್ರಣವಿದೆ. ರೋಗಿಯ ಬದಲಿಗೆ ಗೊಂಬೆ ಇದೆ. ವಿದ್ಯಾರ್ಥಿಯ ಉಡಾಫೆ ನೋಟ, ಪರೀಕ್ಷಕರ ಗಂಭೀರ ಮುಖಭಾವ ನೋಡಿದರೆ, ಈ ವಿದ್ಯಾರ್ಥಿ ಈ ಪರೀಕ್ಷೆಯಲ್ಲಿ ನಪಾಸು ಅನಿಸುತ್ತದೆ!

Bedside manners are important for any doctor. Impeccable bedside man-

ners define a good doctor. For a long time, students are given the training to improve their bedside manners during their medical education. This 1914 wood engraving by the British cartoonist and illustrator George Morrow depicts a medical student being examined for his bedside manner by a group of senior doctors. The bed has a dummy instead of an actual patient. The body language of the student and the examiners do not convey good result for the candidate.

44. Portrayal of Physical deformity



"David - self portrait" by GOC53 is licensed under CC BY 2.0

“ಸೊಕ್ರಟಿಸ್ ನ ಮರಣ” ಎಂಬ ಈ ಅದ್ಭುತ ಕಲಾಕೃತಿಯನ್ನು ರಚಿಸಿದ ಜಾಕ್ವೆಯಸ್ ಲೂಯಿ ಡೇವಿಡ್ ಎಂಬ ಫ್ರೆಂಚ್ ಚಿತ್ರಕಾರ 1794 ರಲ್ಲಿ ರಚಿಸಿರುವ ಆತನ ಸ್ವಂತ ಚಿತ್ರ. ಆತನಿಗೆ ಯೌವನದಲ್ಲಿ ಬಾಯಿಯ ಎಡಭಾಗಕ್ಕೆ ಕತ್ತಿ ಏಟು ತಗುಲಿ ಆಳವಾದ ಗಾಯವಾಗಿತ್ತು. ಇದರಿಂದ ಮೂಗು ಮತ್ತು ಬಾಯಿಯ ನಡುವಿನ ಮಾಂಸಖಂಡಗಳಿಗೆ ಶಾಶ್ವತ ಘಾಸಿಯಾಗಿ, ಎಡಗೆನ್ನೆ ಊದಿತ್ತು. ಮಾತನಾಡುವಾಗ ಮುಖದ ಎಡ-ಬಲ ಭಾಗಗಳ ವ್ಯತ್ಯಾಸ ಮತ್ತಷ್ಟು ಹೆಚ್ಚುತ್ತಿತ್ತು. ಕೆಲವು ಅಕ್ಷರಗಳ ಉಚ್ಚಾರ ಸಾಧ್ಯವಾಗುತ್ತಿರಲಿಲ್ಲ. ಆಹಾರ ಅಗಿದು ನುಂಗುವುದು ಕೂಡ ಕಷ್ಟವಿತ್ತು. ಹೀಗಾಗಿ, ಆತ ಸಾರ್ವಜನಿಕವಾಗಿ ವ್ಯವಹರಿಸಿದ ಪ್ರಸಂಗಗಳು ತೀರಾ ಕಡಿಮೆ. ಆತನ ಈ ಚಿತ್ರ ಹಲವಾರು ಸಂಶೋಧನೆಗಳಿಗೆ ಕಾರಣವಾಗಿದೆ. ಕೆಲವರು ಆತನ ಚಹರೆಯ ಲಕ್ಷಣಗಳಿಂದ “ಆತನಿಗೆ ಮುಖದ ಎಡಭಾಗದ ಮೂಳೆಯಲ್ಲಿ ಗಂತಿ ಆಗಿರಬಹುದು” ಎಂದೋ, ಅಥವಾ ಮುಖದ ನರಗಳ ಕ್ಯಾನ್ಸರ್ ಗೆಡ್ಡೆ ಆಗಿದ್ದಿರಬಹುದು ಎಂದು ತರ್ಕಿಸುತ್ತಾರೆ. ಆದರೆ, ಆತನ ಮುಖದ ಪೆಟ್ಟಿನ ಹಿನ್ನೆಲೆಯಲ್ಲಿ, ಕಾರಣಗಳನ್ನು ನಿಷ್ಕರ್ಷಿಸುವ ತರ್ಕ ಸಮಂಜಸ ಅನಿಸುತ್ತದೆ. ಓರ್ವ ಅದ್ಭುತ ಕಲಾವಿದನ ಪ್ರಾಮಾಣಿಕತೆ ಮತ್ತು ಕೌಶಲ್ಯ ಎಷ್ಟೋ ಪೀಳಿಗೆಗಳಿಗೆ ಪಾಠ ಕಲಿಸುತ್ತಾ ಇರುತ್ತದೆ ಎಂಬುದು ಮಹತ್ವದ ಸಂಗತಿ.

Self-portrait of the French artist Jacques-Louis David who painted the famous “The death of Socrates”. This portrait, which was completed in 1794, has given many insights into his life. He had sustained a deep injury to the left side of his face, cutting through the mouth. This led to a permanent injury to the muscles between the mouth and nose on the left side of his face. His left cheek appeared swollen. Due to disparity in the muscular action of both sides of his face, his speech was incongruent. He could not pronounce a few letters. The asymmetry of his face became prominent during talking. Biting and swallowing of food was a tough task for him. Due to all this, he largely kept to himself and avoided public appearance. There are speculations that a tumor of facial bones or cancer of facial nerves could have caused this facial asymmetry. However, in the light of his childhood events, a chronic injury-based explanation appears most satisfactory. Despite all the odds, he has painted his self-portrait with utmost honesty, without modifying his disability. His amazing painting skill coupled with rectitude of character makes an important historic combination.

45. Portrayal of Physical deformity – Congenital Syphilis



"File:Portrait of Mr. J. Kay, afflicted with a rodent disease. Unknown artist, c. 1820 CE. The Wellcome Collection, London.jpg" by Osama Shukir Muhammed Amin FRCP(Glasg) is licensed under CC BY-SA 4.0

ಸಿಫಿಲಿಸ್ ಎಂಬ ಲೈಂಗಿಕ ರೋಗ 15 ನೆಯ ಶತಮಾನದ ಕೊನೆಯ ವೇಳೆಗೆ ಅಮೆರಿಕ ಖಂಡದಿಂದ ನೌಕಾಯಾನಿಗಳ ಮೂಲಕ ಯೂರೋಪಿಗೆ ಬಂದು, ಅಲ್ಲಿಂದ ಇಡೀ ಜಗತ್ತಿಗೆ ವ್ಯಾಪಿಸಿತು ಎನ್ನಲಾಗಿದೆ. ಈ ಕಾಯಿಲೆಗೆ ಪಕ್ಕಾ ಚಿಕಿತ್ಸೆ ಲಭಿಸಿದ್ದು 20 ನೆಯ ಶತಮಾನದಲ್ಲಿ. ಸುಮಾರು ನಾಲ್ಕು ಶತಮಾನಗಳ ಕಾಲ ಸರಿಯಾದ ಚಿಕಿತ್ಸೆ ಇಲ್ಲದ ಈ ಕಾಯಿಲೆ ಮಾಡಿದ ಅನಾಹುತಗಳು ಅಷ್ಟಿಷ್ಟಲ್ಲ! ಸಿಫಿಲಿಸ್ ರೋಗ ದೇಹದ ಯಾವುದೇ ಅಂಗವನ್ನಾದರೂ ಘಾಸಿ ಮಾಡುವ ಸಾಮರ್ಥ್ಯ ಪಡೆದಿತ್ತು. ಅಲ್ಲದೇ, ಗರ್ಭಿಣಿಯ ಸಿಫಿಲಿಸ್ ಭ್ರೂಣವನ್ನೂ ತಲುಪಿ, ಹುಟ್ಟುವ ಮಗುವನ್ನೂ ಪ್ರಭಾವಿಸುತ್ತಿತ್ತು. ಇಂತಹ ಮಕ್ಕಳು ಜೀವನ ಉದ್ದಕ್ಕೂ ಈ ಕಾಯಿಲೆಯ ಚಿಹ್ನೆಗಳನ್ನು ಹೊತ್ತು ಬದುಕುತ್ತಿದ್ದರು. ಅಜ್ಞಾತ ಕಲಾವಿದನೊಬ್ಬ 1820 ರಲ್ಲಿ ರಚಿಸಿರುವ ಕೇ ಎಂಬುವರ ಈ ಚಿತ್ರದಲ್ಲಿ ಆ ವ್ಯಕ್ತಿಯ ಮೂಗಿನ ಹೊಳ್ಳೆಗಳ ನಡುವಿನ ಗೋಡೆ ಬಿದ್ದುಹೋಗಿ, ಮೂಗು ಜಜ್ಜಿದಂತೆ ಕಾಣುತ್ತದೆ. ಹಲ್ಲುಗಳ ಗಾತ್ರ ಸಣ್ಣವು. ಹಲ್ಲುಗಳ ನಡುವಿನ ಅಂತರ ಹೆಚ್ಚಿದೆ. ಚಾಚಿರುವ ಮುಂಭಾಗದ ಹಲ್ಲುಗಳ ಅಡಿಭಾಗ ಗರಗಸದಂತಿದೆ. ಈ ವ್ಯಕ್ತಿ ಒಟ್ಟಾರೆ ದಡ್ಡನಂತೆ ಕಾಣುತ್ತಾನೆ. ಇದನ್ನು ಭ್ರೂಣಾವಸ್ಥೆಯಲ್ಲೇ ಸಿಫಿಲಿಸ್ ಬಂದ ರೋಗಿಯ ಚಿತ್ರಣ ಎನ್ನಬಹುದು.

Syphilis is a sexually transmitted disease believed to have reached Europe from the New World, along with the voyages to the newly discovered continents of America. When the disease had no therapeutic cure, the affected would suffer heavily. Every organ system in the body could have been affected by Syphilis, including transmission from mother to fetus. Some characteristics were very evident. In this 1820 portrait of a man identified as Mr. J Kay, an unknown artist has detailed many such features. Described as Rodent disease, it reflects the gnawed-away appearance of the nose. The teeth are smaller and more widely spaced than normal and have notches on their biting surfaces. Overall, the man looks dull and demented. The picture denotes the possibilities of congenital syphilis in this man.

46. Portrayal of Doctors – Science and Belief



Miracolo_di_Aurelia_Degli_Angeli by Giovanni Battista Crespi / CC BY-SA (http://creativecommons.org/licenses/by-sa/3.0/)

16-17 ನೆಯ ಶತಮಾನದ ಇಟಲಿಯ ಪ್ರಸಿದ್ಧ ಚಿತ್ರಕಾರ ಜಿಯೋವಾನಿ ಬಟ್ಟಿಸ್ಟ ಕ್ರೆಸ್ಪಿ ಅವರು 1610 ರಲ್ಲಿ ರಚಿಸಿದ ತೈಲ ವರ್ಣಚಿತ್ರ. "ಔರೆಲಿಯ ಡೆಗ್ಲಿ ದೇವತೆಯ ಪವಾಡ" ಎಂಬ (ಪ್ರಾಯಶಃ ವಿಡಂಬನೆಯ) ಶೀರ್ಷಿಕೆಯ ಈ ಚಿತ್ರದಲ್ಲಿ ಎಡಗಾಲಿನ ತೀವ್ರ ವ್ರಣದಿಂದ ನರಳುತ್ತಿರುವ ಓರ್ವ ಮಹಿಳೆಯ ಚಿತ್ರಣವಿದೆ. ಆಕೆಯ ಕಾಲಿನ ಪರಿಸ್ಥಿತಿಯನ್ನು ಇಬ್ಬರು ವೈದ್ಯರು ದಂಗಾಗಿ ನೋಡುತ್ತಿದ್ದಾರೆ. ಇದು ಆನೆಕಾಲುರೋಗ, ಅಥವಾ ಚರ್ಮದ ಬ್ಯಾಕ್ಟೀರಿಯಾ ಸೋಂಕು, ಇಲ್ಲವೇ ಕಾಲಿನ ಮೂಳೆಯ ಮಟ್ಟದಿಂದ ಆಗಿರುವ ವ್ರಣ ಇರಬಹುದು ಎಂದು ಅಂದಾಜಿಸಲಾಗಿದೆ. ಆದರೆ ರೋಗಿ ಮಾತ್ರ, ಯಾವುದಾದರೂ ಪವಾಡ ಮಾಡುವಂತೆ ಓರ್ವ ಪಾದ್ರಿಯ ಕಡೆಗೆ ತಿರುಗಿ ಬೇಡುತ್ತಿದ್ದಾರೆ! ಚಿಕಿತ್ಸೆ ಮತ್ತು ನಂಬಿಕೆಗಳ ನಡುವಿನ ತಾಕಲಾಟ ಈ ಚಿತ್ರದಲ್ಲಿ ಬಿಂಬಿತವಾಗಿದೆ.

This 1610 oil painting by the Italian artist Giovanni Battista Crespi is ironically titled "Miracle of Aurelia Degli Angeli" and shows an obese lady with an infected left leg. The two physicians who have come to treat her are astounded with the amount of tissue damage and bad odour. The condition is speculated to be filariasis or cellulitis or osteomyelitis. However, the patient is turning towards a priest for help, ignoring the doctors! The conflict between science and belief at those times is sharply depicted in the painting.

47. Portrayal of Doctors – Doctor's Home Visit



"IMG_0748B Gérard Dou. 1613 1675. Leyde La malade. The disease. Louvre La visite du docteur ou de la guérisseuse, dans tous les milieux, est aussi un thème récurrent de la peinture néerlandaise The visit of the doctor or the healer woman, in all cir" by jean louis mazieres is licensed under CC BY-NC-SA 2.0

ವೈದ್ಯರು ರೋಗಿಯ ಮನೆಗೆ ಬಂದು ಚಿಕಿತ್ಸೆ ನೀಡುವ ಪದ್ಧತಿ ಬಹಳ ಹಳೆಯದು. ವಾಹನಗಳಾಗಲೀ, ರಸ್ತೆಯಾಗಲೀ ಸರಿಯಾಗಿ ಇಲ್ಲದಿದ್ದ ಕಾಲದಲ್ಲಿ ವೃದ್ಧ, ಅಶಕ್ತ ರೋಗಿಗಳನ್ನು ವೈದ್ಯರ ಬಳಿ ಕರೆದೊಯ್ಯುವುದು ಸಾಧ್ಯವಿರಲಿಲ್ಲ. ಹೀಗಾಗಿ, ವೈದ್ಯರೇ ರೋಗಿಯ ಬಳಿ ಬಂದು ಚಿಕಿತ್ಸೆ ನೀಡುವ ಪರಿಪಾಠ ಇತ್ತು. ಇದು ಬಹಳ ಖರ್ಚಿನ ವಿಷಯವಾದ್ದರಿಂದ ಬಡವರಿಗೆ ವೈದ್ಯಕೀಯ ಸೌಲಭ್ಯದ ಅನುಕೂಲ ಬಹುಮಟ್ಟಿಗೆ ಇರಲಿಲ್ಲ. 1650 ರ ಸುಮಾರಿಗೆ ರಚಿಸಿರುವ ಡಚ್ ಚಿತ್ರಗಾರ ಜೆರಾರ್ಡ್ ದೌ ಅವರ ಈ ತೈಲ ವರ್ಣ ಚಿತ್ರದಲ್ಲಿ ಓರ್ವ ವೃದ್ಧ ಮಹಿಳೆಯ ಚಿಕಿತ್ಸೆಗೆ ಮನೆಗೆ ಬಂದಿರುವ ವೈದ್ಯರ ಚಿತ್ರಣವಿದೆ. ಮೂತ್ರದ ಶೀಷೆಯನ್ನು ವೈದ್ಯರು ಪರೀಕ್ಷಿಸುತ್ತಿದ್ದಾರೆ. ರೋಗಿಯ ಭೌತಿಕ ಪರೀಕ್ಷೆಗೆ ಅನುಕೂಲವಾಗುವಂತೆ ನೈಸರ್ಗಿಕ ಬೆಳಕು ಬೀಳುವ ಕಿಟಕಿಯ ಮುಂದೆ ಅವರನ್ನು ಕೂರಿಸಲಾಗಿದೆ. ಈ ಬೆಳಕು-ಕತ್ತಲೆಯ ವಿನ್ಯಾಸದಲ್ಲೇ ಚಿತ್ರಕಾರನ ಪ್ರತಿಭೆ ಗೋಚರಿಸುತ್ತದೆ.

This 1650 painting by the Dutch artist Gerard Dou is titled "The visit of the doctor or the healer woman" It shows an old lady in debilitated condition visited by a doctor at her home. The doctor is examining a urine flask while the family is seen sitting anxiously with the lady. The idea of evaluating a patient is natural light is indispensable and often used to differentiate a real physician from a quack. Dou is a master of contrast and his depiction of natural light through glass, with the patient facing the light is very convincing. Only rich people could afford a true doctor in Europe during those days. The poor were just lucky to have a real doctor visit them.

48. Portrayal of Doctors – Saint Doctors



Saint Cosmas and Saint Damian dressing a chest wound. Oil painting by Antoine de Favray, 1748. Wellcome Collection. Attribution-NonCommercial 4.0 International (CC BY-NC 4.0)

ಫ್ರೆಂಚ್ ಚಿತ್ರಕಾರ ಅಂಟೋನಿ ಡೆ ಫಾವ್ರೆ ಅವರು 1748 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಆಸ್ಪತ್ರೆ ಮತ್ತು ಧಾರ್ಮಿಕ ನಂಬಿಕೆಗಳ ನಡುವಿನ ಕೊಂಡಿಯಾಗಿದ್ದ ಈ ಕಲಾವಿದ, ಇವೆರಡನ್ನೂ ಬಿಂಬಿಸುವ ಚಿತ್ರ ರಚಿಸಿದ್ದಾರೆ. ಸಂತರಾದ ಕೊಸ್ಮಸ್ ಮತ್ತು ಡ್ಯಾಮಿಯನ್ ಅವರುಗಳು ಉಚಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನೂ, ಶಸ್ತ್ರಚಿಕಿತ್ಸೆಯನ್ನೂ ಮಾಡುತ್ತಿದ್ದರು. ಹೀಗಾಗಿ, ಜನರು ಅವರನ್ನು ಸಮಾಜಕ್ಕೆ ಮಾದರಿ ಎಂದು ಪರಿಗಣಿಸಿದ್ದರು. ಈ ಚಿತ್ರದಲ್ಲಿ ಒಬ್ಬ ಸಂತ ರೋಗಿಯೊಬ್ಬನ ಎದೆಯಿಂದ ಯಾವುದೋ ವಸ್ತುವನ್ನು ಹೊರಗೆ ಎಳೆಯುತ್ತಿದ್ದಾರೆ. ಆ ಉಪಕರಣವನ್ನು ಸಾಮಾನ್ಯವಾಗಿ ಕೋವಿಯಿಂದ ಹಾರಿಸಿದ ಗುಂಡುಗಳನ್ನು ತೆಗೆಯಲು ಬಳಸಲಾಗುತ್ತದೆ. ಹೀಗಾಗಿ, ಇಲ್ಲಿಯೂ ಒಂದು ಗುಂಡು ತೆಗೆಯುತ್ತಿದ್ದಾರೆ ಎಂದು ಭಾವಿಸಬಹುದು. ಮತ್ತೊಬ್ಬ ಸಂತ ಅದೇ ವೇಳೆಯಲ್ಲಿ ರೋಗಿಗಾಗಿ ಪ್ರಾರ್ಥನೆ ಮಾಡುತ್ತಿದ್ದಾರೆ. ಮೇಜಿನ ಮೇಲೆ ಶಸ್ತ್ರಕ್ರಿಯೆಗೆ ಬಳಸುವ ಉಪಕರಣಗಳು ಮತ್ತು ಗಾಯಕ್ಕೆ ಹಚ್ಚುವ ಮದ್ದುಗಳಿವೆ. “ನಾನು ಚಿಕಿತ್ಸೆ

ಮಾಡುತ್ತೇನೆ; ದೇವರು ಗುಣಪಡಿಸುತ್ತಾನೆ” ಎಂದು ವೈದ್ಯರು ನಂಬುವುದು ಸನಾತನ ಚಿಂತನೆ. ಆ ನಂಬಿಕೆ ಪ್ರಪಂಚದ ಬಹುತೇಕ ಎಲ್ಲಾ ಧರ್ಮಗಳ ಚಿಕಿತ್ಸಕರಲ್ಲೂ ಕಾಣುತ್ತದೆ.

This 1748 oil painting by the French artist Antoine de Favray depicts two saints Cosmas and Damian dressing a chest wound of an injured patient. Favray was a link between religion and science, which usually ran in different directions in those days. These two saints were practising free medical treatment and surgery. The public considered them as role models of service for society. The instrument shown in the painting was usually used to remove the bullets from a firearm deposited in the body. One can presume a similar procedure is going on in this picture. While one is performing the surgery, the other one is praying. This is characteristic of Favray's ideology! The table has a few more instruments and medicines used for dressing the wound. The concept of "I treat; He cures" is an ancient one, seen across many religions. This is reinforced in this painting.

49. Portrayal of Doctors – Blind Healer



"Maistre Robert", a blind healer healing by laying-on of hands. Oil painting. Wellcome Collection. Attribution 4.0 International (CC BY 4.0)

18 ನೆಯ ಶತಮಾನದ ಓರ್ವ ಅಜ್ಞಾತ ಕಲಾವಿದನಿಂದ ರಚಿಸಲ್ಪಟ್ಟ ಈ ತೈಲ ವರ್ಣ ಕಲಾಕೃತಿ, ಚಾರಿತ್ರಿಕ ದೃಷ್ಟಿಯಿಂದ ಮಹತ್ವ ಪಡೆದಿದೆ. ಯುವತಿಯೊಬ್ಬಳ ಎಡಗೈಯನ್ನು ಓರ್ವ ಅಂಧ ವ್ಯಕ್ತಿ ಹಿಡಿದಿದ್ದಾರೆ. ಆ ವ್ಯಕ್ತಿಯ ಟೋಪಿಯ ಮೇಲೆ ಒಂದು ಚಿಪ್ಪಿನ ಆಕೃತಿಯನ್ನು ಹೊಲಿಯಲಾಗಿದೆ. ತಮ್ಮ ಎಡಗೈಯಲ್ಲಿ ಮಣಿಸರ ಹಿಡಿದಿದ್ದಾರೆ. ಇವೆರಡೂ "ಆತ ತೀರ್ಥಯಾತ್ರಿ" ಎಂದು ತೋರುತ್ತವೆ. ಆ ಅಂಧ ವ್ಯಕ್ತಿ ಕಾಂಪೋಸ್ಟೆಲ್ಲದ ಸಂತ ಜೇಮ್ಸ್ ದೇವಾಲಯಕ್ಕೆ ಹೊರಟಿದ್ದಾರೆ. ಚಿತ್ರದಲ್ಲಿನ ಗೋಡೆಯ ಮೇಲಿರುವ ಒಂದು ಪಟದಲ್ಲಿ ಈ ಅಂಧ ವ್ಯಕ್ತಿಯನ್ನು "ಮಾಸ್ಟರ್ ರಾಬರ್ಟ್" ಎಂದು ಗುರುತಿಸಲಾಗಿದೆ. "ಸ್ಪರ್ಶದಿಂದ ಕಾಯಿಲೆಗಳನ್ನು ಗುಣಪಡಿಸುವವರ ವಂಶದಲ್ಲಿ ಜನಿಸಿದ ಏಳನೆಯ ಮಗ" ಎಂದು ಈ ಅಂಧ ವ್ಯಕ್ತಿಯ ಬಗ್ಗೆ ವಿವರ ನೀಡಲಾಗಿದೆ. ಹಿಂಬದಿಯಲ್ಲಿ ನಿಂತಿರುವ ವೃದ್ಧ ಮಹಿಳೆ ತಮ್ಮ ಕೈಲಿ ಒಂದು ಗಾಜಿನ ಶೀಷೆ ಹಿಡಿದಿದ್ದಾರೆ. ಅದರಲ್ಲಿ ಪ್ರಾಯಶಃ ರೋಗಿಯ ಮೂತ್ರವಿದೆ. ಅಂದಿನ ಕಾಲದ "ಮೂತ್ರವೈದ್ಯ"ರ ಜೊತೆ, ಇಂತಹ "ಸ್ಪರ್ಶವೈದ್ಯ"ರ ಕೃಪೆಯನ್ನೂ ರೋಗಿಗಳು ಬೇಡುತ್ತಿದ್ದರು ಎಂದು ಬಿಂಬಿಸುವ ಚಿತ್ರ. ಚಿತ್ರದಲ್ಲಿನ ಕಪಾಟಿನಲ್ಲಿ ಮೂರು ಪುಸ್ತಕಗಳಿವೆ. ಅವುಗಳಲ್ಲಿ ಒಂದು "ಮಹಾನ್ ಸಂತರ ಮಾರ್ಗದರ್ಶನಗಳು"; ಮತ್ತೊಂದು "ನಂಬಿಕೆಗಳನ್ನು ನಿಭಾಯಿಸುವುದು ಹೇಗೆ" ಎನ್ನುವ ಪುಸ್ತಕ.

Titled "Maistre Robert", this 18th-century oil painting by an unknown artist has a historical significance. A blind man is holding the left hand of a girl. The hat of the blind man has a shell stitched to it, indicating that he is a pilgrim towards the shrine of St. James of Compostella. A chain of rosary beads is also seen in his left hand. The wall seems to have an inscription, which is giving a few details of this painting. It says that the name of this old pilgrim is Master Robert. He is the seventh son of a healer's family and is bestowed with a natural gift for healing. The accompanying old lady has a glass flask, which might contain the urine of the patient. "Healing with touch" was another practice trusted by the people in medieval Europe. Books are seen on the shelf behind, titled "Guidon des sages fames" and "La metode de manier. Par M. R. Ric".

50. Portrayal of Doctors – Podiatrist



A_visit_to_the_physician By Jan Josef Horemans II / Public domain. https://creativecommons.org/publicdomain/mark/1.0/deed.en

ಚಳಿ ಹೆಚ್ಚಾಗಿರುವ ದೇಶಗಳಲ್ಲಿ ಪಾದಗಳ ಸಮಸ್ಯೆ ಹೆಚ್ಚು. ಹೀಗಾಗಿ, ಕಾಲುಗಳಿಗೆ, ಪಾದಗಳಿಗೆ ಚಿಕಿತ್ಸೆ ನೀಡುವ "ಪೊಡಿಯಾಟ್ರಿಸ್ಟ್" ಎನ್ನುವ ಮಂದಿ ಸಾಕಷ್ಟು ಇದ್ದರು. 18 ನೆಯ ಶತಮಾನದ ಬೆಲ್ಜಿಯನ್ ಚಿತ್ರಕಾರ ಜನ್ ಜೋಸೆಫ್ ಹೊರ್ಮನ್ಸ್ ಎಂಬಾತ 1750 ರ ಸುಮಾರಿಗೆ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಪಾದಗಳಿಗೆ ಚಿಕಿತ್ಸೆ ನೀಡುವ ಓರ್ವ ವೈದ್ಯನನ್ನು ತೋರಿಸಲಾಗಿದೆ. ಅಂಗುಷ್ಟಗಳ ನಡುವೆ ಆಗಿರುವ ವ್ರಣವನ್ನು ಈ ವೈದ್ಯ ಚಿಕಿತ್ಸೆ ಮಾಡುತ್ತಿರುವುದಾಗಿ ಊಹೆ. ವ್ರಣವನ್ನು ಹೆರೆದು, ಅದಕ್ಕೆ ಔಷಧ ಹಚ್ಚುವುದು ವಾಡಿಕೆ. ಇದನ್ನು ಗಮನಿಸುತ್ತಿರುವ ಮಂದಿಯ ಮುಖಭಾವಗಳು ಪ್ರಾಯಶಃ ಅವರ ಚಿಕಿತ್ಸೆಯ ಹಿಂದಿನ ಅನುಭವಗಳ ಬಿಂಬದಂತಿವೆ!

This 1750 Oil painting by the Flemish artist Jan Josef Horemans the Younger depicts a podiatrist – the person who took care of the legs and feet. The extremities of the body, especially the feet, are a major source of health concern in cold countries. The cold would shrink the blood vessels and limit the blood supply to the peripheries. This resulted in wounds and infections in the feet, which would not heal easily. Also, the moisture accumulated between the toes would predispose the webspaces to fungal infections and the entry of worms through cuts in the skin. This painting depicts a podiatrist scraping and cleaning the toes and webspaces and applying some medication. The facial expression of the accompanying reflects their own experiences in the past during this procedure!

51. Portrayal of Doctors – Royal Physicians



Michel Schuppach in his pharmacy examining a young woman's urine who is seated opposite him awaiting the result. Line engraving by B. Hübner, 1775, after G. Locher, 1774. Wellcome Collection. Attribution 4.0 International (CC BY 4.0)

---

18 ನೆಯ ಶತಮಾನದ ಸ್ವಿಟ್ಜರ್ಲ್ಯಾಂಡ್ ನ ಪ್ರಸಿದ್ಧ ವೈದ್ಯ ಮೈಕೆಲ್ ಶುಪಾಕ್. ಆತನ ಬಳಿ ಬರುತ್ತಿದ್ದ ಬಹುತೇಕ

ರೋಗಿಗಳು ರಾಜ ಮನೆತನದವರು ಮತ್ತು ಸಿರಿವಂತರು. ಲಾಂಗ್ನಾವ್ ಎನ್ನುವ ಹಳ್ಳಿಯಲ್ಲಿ ತನ್ನದೇ ಆದ ವಿಶಿಷ್ಟ ಔಷಧ ಶಾಲೆಯನ್ನೂ ಹೊಂದಿದ್ದ ಆತ, ಅಂದಿನ ಕಾಲದ ಹಲವಾರು ಬಗೆಯ ವೈದ್ಯಕೀಯ ವಿಧಾನಗಳನ್ನು ಕರಗತ ಮಾಡಿಕೊಂಡಿದ್ದ. ಆತನ ಚಿಕಿತ್ಸೆಯ ಪದ್ದತಿ ಉಳಿದವರಿಗಿಂತ ಭಿನ್ನವಾಗಿತ್ತು. ರಾಜಪ್ರಮುಖರೊಬ್ಬರ ಮೂತ್ರ ಪರೀಕ್ಷೆಯನ್ನು ಮಾಡುತ್ತಿರುವ ಶುಪಾಕ್ ಅವರ ಚಿತ್ರಣವನ್ನು 1774 ರಲ್ಲಿ ಗಾಟ್ಫ್ರಿಡ್ ಲೋಖರ್ ಎಂಬ ಚಿತ್ರಕಾರರು ರಚಿಸಿದ್ದಾರೆ. ಇದರ ಕೆತ್ತನೆಯನ್ನು 1775 ರಲ್ಲಿ ಬಾರ್ಥೋಲೋಮಿ ಹ್ಯುಬ್ನರ್ ಎನ್ನುವವರು ಮಾಡಿದ್ದಾರೆ.

Michel Schuppach was a famous physician in Switzerland, who had predominantly rich and royal patients! Well-versed with diagnostic skills and the use of various types of medicines from different systems, he had his store of medications at a village called Langnau. His widespread knowledge of medicine made his style of treatment unique and effective. In this line engraving of 1775 by Bartholomaus Hubner is based on the 1774 original drawing by Gottfried Locher. Schuppach is seen examining the urine of a member of the royal family.

52. Portrayal of Doctors – Local Woman Doctor



"File:A woman doctor examining a young girl's finger. Coloured mez Wellcome V0016263.jpg" is licensed under CC BY 4.0

1783 ರಲ್ಲಿ ಜೇಮ್ಸ್ ವಾಕರ್ ಮತ್ತು ಜೇಮ್ಸ್ ವಾರ್ಕೋಟ್ ಎಂಬ ಬ್ರಿಟಿಷ್ ಚಿತ್ರಕಾರರು ರಚಿಸಿದ ಚಿತ್ರ. ವೈದ್ಯಕೀಯ ಸೇವೆಗಳು ಸರಿಯಾಗಿ ಲಭ್ಯವಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಅನುಭವಸ್ಥ ವೃದ್ಧ ಮಹಿಳೆಯರು ಹೆಣ್ಣು ಮಕ್ಕಳಿಗೆ ಆರೋಗ್ಯ ಸಲಹೆ ನೀಡುತ್ತಿದ್ದರು. ಅವರದ್ದು ಸಾಂಪ್ರದಾಯಿಕ ಜ್ಞಾನ; ಅನುಭವಜನ್ಯ ಪದ್ಧತಿ! ತಮ್ಮದೇ ರೀತಿಯ ಕೆಲವು ಔಷಧಗಳನ್ನೂ ನೀಡುತ್ತಿದ್ದರು. ಇಂತಹ ಒಂದು ಪ್ರಸಂಗವನ್ನು ಇಲ್ಲಿ ಚಿತ್ರಿಸಲಾಗಿದೆ.

This 1783 work by James Northcote was converted into a colored mezzotint by James Walker. Medieval Europe had a severe scarcity of professional physicians. This was a big problem in rural areas, especially for young women. Few old ladies acquired diagnostic and therapeutic skills through experience and legacy. One such incident is seen in this picture, where a young woman is seen consulting an old lady, who is examining her finger. The presence of a cat or dog or both would be very symbolic of the art culture of Europe.

53. Portrayal of Doctors – A Man Midwife



'A Man-Mid-wife'. Wellcome Collection. Attribution 4.0 International (CC BY 4.0)

ಫೋರೇಸ್ ಎಂಬುವರು ಇಂಗ್ಲೆಂಡಿನ ಪಿಕಡಿಲ್ಲಿ ಎಂಬಲ್ಲಿ 15 ಜೂನ್ 1793 ರಂದು ಪ್ರಕಾಶನ ಮಾಡಿದ ಅಜ್ಞಾತ ಕಲಾವಿದನ ವರ್ಣ ವ್ಯಂಗ್ಯಚಿತ್ರ. ಅಂದಿನ ಕಾಲದವರೆಗೆ ಹೆರಿಗೆಯನ್ನು ಸೂಲಗಿತ್ತಿಯರೇ ಮಾಡಿಸುತ್ತಿದ್ದರು. ಆದರೆ, ವೈದ್ಯಶಾಸ್ತ್ರದ ವ್ಯವಸ್ಥಿತ ಅಧ್ಯಯನ ಆರಂಭವಾದ ನಂತರ, ವೈದ್ಯಕೀಯ ಕಾಲೇಜಿನ ಮೂಲಕ ಸಮಾಜವನ್ನು ಸೇರುವ ವೈದ್ಯರ ಸಂಖ್ಯೆ ಹೆಚ್ಚಿತು. ಇಂತಹ ಹಲವಾರು ವೈದ್ಯರು ಹೆರಿಗೆಯ ವಿಷಯದಲ್ಲಿ ಆಗುತ್ತಿದ್ದ ತಪ್ಪು ಪದ್ಧತಿಗಳನ್ನು ಗಮನಿಸಿ, ಅದನ್ನು ಸುಧಾರಿಸುವ ನಿಟ್ಟಿನಲ್ಲಿ ಪ್ರಸೂತಿಶಾಸ್ತ್ರ ಎಂಬ ವಿಷಯವನ್ನು ಆರಂಭಿಸಿದರು. ಆ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ವೈದ್ಯ ವ್ಯಾಸಂಗದ ಅವಕಾಶ ಇರಲಿಲ್ಲ. ಹೀಗಾಗಿ, ಪ್ರಸೂತಿಯಂತಹ ಸೂಕ್ಷ್ಮ ವಿಷಯವನ್ನೂ ಮೊದಲ ಬಾರಿಗೆ ಪುರುಷರೇ ನಿರ್ವಹಿಸಬೇಕಾಗಿ ಬಂದಿತು. ಸಮಾಜದ ನೂರಾರು ಗೇಲಿಗಳನ್ನು ಸಹಿಸಿ, ಈ ವಿಷಯವನ್ನು ವೈಜ್ಞಾನಿಕ ಪರಿಧಿಗೆ ತಂದು, ಸಾವಿರಾರು ಗರ್ಭಿಣಿಯರ ಸಾವನ್ನು ತಪ್ಪಿಸಿದ ಕೀರ್ತಿ ಇಂತಹ ಸಾಧಕರದ್ದು. ಆದರೆ, ವಿಡಂಬನೆ ಇವರ ಬೆನ್ನು ಬಿಡಲಿಲ್ಲ. ಅಂತಹ ಒಂದು ವಿಡಂಬನೆಯ ವ್ಯಂಗ್ಯ ಚಿತ್ರ ಇದು. “ಗಂಡು ಸೂಲಗಿತ್ತಿ” ಎಂದು ಹೆಸರು ನೀಡಿದ ಈ ಚಿತ್ರದಲ್ಲಿ, ಅರ್ಧ ಹೆಣ್ಣು-ಅರ್ಧ ಗಂಡನ್ನು ಕಾಣಿಸಿದೆ. “ಇದು ಹೊಸ ಜೀವಪ್ರಭೇದ; ಇಲ್ಲಿಯವರೆಗೆ ಕಂಡಿರಲಿಲ್ಲ, ಈಚೆಗೆ ಬೆಳಕಿಗೆ ಬಂದ ಪುಸ್ತಕಗಳಲ್ಲಿ ಮಾತ್ರ ಈ ರಾಕ್ಷಸ ಕಾಣುತ್ತಾನೆ. ಈ ಪ್ರಾಣಿಯ ಗುಣಲಕ್ಷಣಗಳ ಬಗ್ಗೆ ಇನ್ನೂ ವಿವರಣೆ ಬೇಕಿದೆ” ಎಂದೆಲ್ಲಾ ಬರೆದಿದೆ. ಜೊತೆಗೆ, ಕಪಾಟಿನಲ್ಲಿ ಔಷಧಗಳ ಜೊತೆ, ಹೆಣ್ಣು ಮಕ್ಕಳು ಮಾತ್ರ ಬಳಸುವ ಕೆಲವು ವಸ್ತುಗಳನ್ನು ತೋರಿ “ಸ್ವಂತ ಉಪಯೋಗಕ್ಕೆ” ಎಂದು ಹೆಸರು ನೀಡಿದೆ. ಸಮಾಜಕ್ಕೆ ಒಳಿತು ಮಾಡುವ ಯಾವುದೇ ಕೆಲಸವೂ ವ್ಯಂಗ್ಯ, ವಿಡಂಬನೆ, ತಾತ್ಸಾರಗಳನ್ನು ದಾಟಿಯೇ ಹೋಗಬೇಕು. ಅಂದಿನ ಕಾಲದ ಅಂತಹ ಒಂದು ಚಿತ್ರಣ ಇದು.

This colored lithograph by an unknown artist was published by S W Fores on June 15, 1793, at Piccadilly, London. Until then, labor and childbirth was the domain of midwives. Once medical education got systematized, the number of professionally qualified doctors increased. They noticed the prevalent unscientific practices in the field of childbirth and started instilling a scientific approach to this area. This led to the development of the field called Obstetrics. Women were not allowed to study medicine at those times. Hence, even a delicate field like obstetrics had to be handled by male doctors. This was not easy in a conventional society. They had to go through a lot of pressures and ridicules to instill the scientific approach to childbirth and thereby prevent thousands of women from losing their lives during labor. Even after successively proving themselves, the derision always chased them. This lithograph is one such mockery of male doctors practising obstetrics. They are being called “male midwife” and shown as half man and half woman with few objectionable descriptions aimed at ridicule. Few ladies' items are stored in the cupboards with the note “for self-use”. These were the transitional times when one had to go through tough paths which led to eventual good.

54. Portrayal of Doctors – Blaming the Doctors



The refurbishment (or building) of a Lock Hospital; men with various ailments are stepping out of Pandora's box; a rich, smiling, doctor drives by in a carriage. Coloured etching by T. Williamson, 1802. Wellcome Collection. Attribution 4.0 International (CC BY 4.0)

ಥಾಮಸ್ ವಿಲಿಯಂಸನ್ ಎನ್ನುವ ಬ್ರಿಟಿಷ್ ಚಿತ್ರಕಾರ 1802 ರ ಜುಲೈ 1 ರಂದು ಪ್ರಕಟಿಸಿದ ವ್ಯಂಗ್ಯ ಚಿತ್ರ. ಲಂಡನ್ ನ ಲಾಕ್ ಆಸ್ಪತ್ರೆ ಮೂಲತಃ ಲೈಂಗಿಕ ರೋಗಿಗಳ ಚಿಕಿತ್ಸೆಗಾಗಿ ನಿರ್ಮಾಣವಾಗಿತ್ತು. 1802 ರ ಸುಮಾರಿಗೆ ಈ ಆಸ್ಪತ್ರೆಯನ್ನು ವಿಸ್ತರಿಸಿ, ಅಲ್ಲಿ ಇನ್ನೂ ಅನೇಕ ಕಾಯಿಲೆಗಳ ರೋಗಿಗಳನ್ನು ಚಿಕಿತ್ಸೆ ಮಾಡುವ ನಿರ್ಧಾರವಾಯಿತು. ಈ ನಿರ್ಧಾರದಿಂದ ಕುಪಿತರಾದ ಹಲವರು, ಇವೆಲ್ಲಾ ವೈದ್ಯರ ಷಡ್ಯಂತ್ರವೆಂದೂ, ಇದರಿಂದ ನಗರದಲ್ಲಿ ಕಾಯಿಲೆಗಳ ಪ್ರಮಾಣ ಹೆಚ್ಚುತ್ತದೆ ಎಂದೂ, ಆಸ್ಪತ್ರೆಯ ಒಳಗೇ ಒಬ್ಬರ ಕಾಯಿಲೆ ಮತ್ತೊಬ್ಬರಿಗೆ ತಗುಲಿ, ಎಲ್ಲರಿಗೂ ಕಷ್ಟವಾಗುತ್ತದೆ ಎಂದೂ ವಾದಿಸಿದರು. ಇದನ್ನೇ ಬಿಂಬಿಸುವ ಈ ವ್ಯಂಗ್ಯಚಿತ್ರದ ಹಿನ್ನೆಲೆಯಲ್ಲಿ ಲಂಡನ್ ನ ಹೈಡ್ ಪಾರ್ಕ್ ಬಳಿಯ ಲಾಕ್ ಆಸ್ಪತ್ರೆಯ ವಿಸ್ತರಣೆಯನ್ನು ತೋರಲಾಗಿದೆ. ಕೋಚುಗಾಡಿಯಲ್ಲಿ ಖುಷಿಯಾಗಿ ಹೋಗುವ ವೈದ್ಯರನ್ನು ತೋರಿದೆ. ಹಲವಾರು ವಿಧದ ರೋಗಿಗಳು ಬೀದಿಯಲ್ಲಿ ತಿರುಗಾಡುವುದನ್ನು ತೋರಿದೆ.

This colored etching by the British artist Thomas Williamson was published on July 1, 1802. The famous Lock Hospital of London, which was meant for treating only patients of venereal diseases, was to be expanded and refurbished to accommodate more patients of all diseases. This enraged many people who felt that it was unwise to let patients inside the busy city, thereby risking the entire population of London. As usual, they opined that it was a scam by doctors to earn more money. The popular opinion is depicted in this cartoon in which people with various diseases are coming out of Pandora's box. A rich doctor is moving away in a carriage with a huge smile on his face.

55. Portrayal of Doctors – Thanking Influenza



Physicians expressing their thanks to influenza. Coloured etching by T. West, 1803. Wellcome Collection. Attribution 4.0 International (CC BY 4.0)

---

18 ನೆಯ ಶತಮಾನದ ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಟೆಂಪಲ್ ವೆಸ್ಟ್ ಅವರು ರಚಿಸಿರುವ ಈ ವಿಡಂಬನಾತ್ಮಕ ಚಿತ್ರ, ಇನ್ಫ್ಲೂಯೆಂಜಾ ಕಾಯಿಲೆ ತಮ್ಮ ದೇಶಕ್ಕೆ ಭೇಟಿ ನೀಡಿದ್ದನ್ನು ಅಭಿನಂದಿಸಿ, ಧನ್ಯವಾದಗಳನ್ನು ಅರ್ಪಿಸುತ್ತಿರುವ ಇಂಗ್ಲೆಂಡಿನ ಪ್ರಸಿದ್ಧ ವೈದ್ಯರನ್ನು ಗೇಲಿ ಮಾಡುತ್ತಿದೆ. ಇದರಲ್ಲಿ ಇರುವ ವೈದ್ಯರನ್ನು ಸರ್ ವಿಲಿಯಮ್ ಫಾಲ್ಕೊನರ್, ಜೇಮ್ಸ್ ವೇರ್, ರಿಚರ್ಡ್ ಪಿಯರ್ಸನ್, ಸರ್ ವಾಲ್ಟರ್ ಫರ್ಕುಹರ್, ಮ್ಯಾಕ್ಸ್ವೆಲ್ ಗಾರ್ಥ್ಶೋರ್, ಸರ್ ಜಾರ್ಜ್ ಗಿಬ್ಸ್ ಇತ್ಯಾದಿ ಎಂದು ಗುರುತಿಸಲಾಗಿದೆ. ಈ ಚಿತ್ರವನ್ನು 1803 ರಲ್ಲಿ ಲಂಡನ್ ನ ಫೋರೇಸ್ ಎಂಬ ಮುದ್ರಕರು ಪ್ರಕಟಿಸಿದ್ದಾರೆ. ಕಾಯಿಲೆಯನ್ನು ನಿಯಂತ್ರಣ ಮಾಡುವ ಎಲ್ಲಾ ಸಾಧ್ಯತೆಗಳನ್ನೂ ಕೈಬಿಟ್ಟು, ಅದರಿಂದ ವೈದ್ಯರು ಲಾಭ ಮಾಡಿಕೊಂಡಿದ್ದಾರೆ ಎಂಬ ಗುಮಾನಿ ಇಂಗ್ಲೆಂಡ್ ನ ಆದ್ಯಂತ ಇತ್ತು. ಇದನ್ನೇ ಬಿಂಬಿಸುವ ವ್ಯಂಗ್ಯ ಚಿತ್ರ ಇದು. ಮೇಜಿನ ಅಡಿಯಲ್ಲಿ ಇರುವ “ಪೆರುವಿನ ತೊಗಟೆ” ಮುಂದೆ ಕ್ವಿನೀನ್ ಔಷಧವಾಗಿ ಮಾರ್ಪಟ್ಟಿತು.

This 1803 colored etching by the British cartoonist Temple West is titled "Physicians expressing their thanks to Influenza" published by SW Fores of Piccadilly, London. The etching shows the prominent British doctors of those times like Sir William Falconer, James Ware, Richard Pearson, Sir Walter Farquhar, Sir George Gibbs, and others showing their gratitude to the demon of Influenza, which is depicted as a French visitor. It was strongly suspected that the medical community ignored controlling the disease and deliberately allowed the spread of influenza to make profits. The barrel titled "Peruvian bark" under the table became quinine subsequently.

56. Portrayal of Doctors – The Three Virtues



nlm:nlmuid The three Virtues : Faith, Hope, Charity. Courtesy of the National Library of Medicine. https://creativecommons.org/publicdomain/mark/1.0/

1829 ರ ಡಿಸೆಂಬರ್ 5 ರಂದು ಲಂಡನ್ ನಗರದ ಸ್ಟೀಫನ್ ಗಾರ್ಸ್ ಎಂಬುವರು ಪ್ರಕಾಶನ ಮಾಡಿದ ಅನಾಮಧೇಯ ಚಿತ್ರಗಾರನೊಬ್ಬನ ವ್ಯಂಗ್ಯಚಿತ್ರ. ಇದರ ಮೂಲ ಪೀಟರ್ ಲಾಸ್ಟ್ಮನ್ ಎಂಬ ಡಚ್ ಕಲಾವಿದರು 1610 ರಲ್ಲಿ ರಚಿಸಿದ್ದ ಕ್ಯಾಥೊಲಿಕ್ ಮತದ "ನಂಬಿಕೆ, ವಿಶ್ವಾಸ, ಮತ್ತು ದಾನಗುಣ" ಎಂಬ ಮೂರು ಗುಣಗಳನ್ನು ಬಿಂಬಿಸುವ ಮೂರು ದೇವತೆಗಳ ಚಿತ್ರ. ಮೂಲ ಚಿತ್ರದ ಮೂರು ದೇವತೆಗಳ ಸ್ಥಾನದಲ್ಲಿ ಮೂರು ರೋಗಿಗಳನ್ನು ಈ ವ್ಯಂಗ್ಯ ಚಿತ್ರ ಬಿಂಬಿಸಿದೆ. ವೈದ್ಯರ ಸಲಹೆಗಳನ್ನು ಒಳ್ಳೆಯತನದ ಜೊತೆಯಲ್ಲಿ ಸೇರಿಸಿ ಲೇವಡಿ ಮಾಡುವ ಈ ಚಿತ್ರದಲ್ಲಿ, ವೈದ್ಯರು "ಕಾಯಿಲೆ ಬಂದಾಗ ಮನಸ್ಸು ಖುಷಿಯಾಗಿರಬೇಕು; ಔಷಧದಿಂದ ಕಾಯಿಲೆ ಗುಣವಾಗುತ್ತದೆ ಎಂಬ ನಂಬಿಕೆಯಿಂದ ಸೇವಿಸಬೇಕು" ಎನ್ನುವುದನ್ನು ಜೋಕರ್ ವೇಷ ಧರಿಸಿ ಔಷಧ ಸೇವಿಸುವವರ ರೂಪದಲ್ಲಿ ತೋರಲಾಗಿದೆ. "ಬಯಲಿನ ಹವೆಯಲ್ಲಿ ನಮಗೆ ಇಷ್ಟವಾದ ಕೆಲಸ ಮಾಡುತ್ತಿದ್ದರೆ, ಬೇಗ ಚೇತರಿಸಿಕೊಳ್ಳಬಹುದು" ಎಂಬ ವಿಶ್ವಾಸದ ಮಾತನ್ನು, ಮಳೆಯಲ್ಲಿ ಮರದ ಕೆಳಗೆ ಕುಳಿತು ಮೀನು ಹಿಡಿಯುತ್ತಿರುವವರ ಚಿತ್ರದಿಂದ ತೋರಿಸಿದೆ. ಕಾಲಿಗೆ

ಪಟ್ಟಿ ಕಟ್ಟಿಕೊಂಡಿರುವ ಬಡ ವ್ಯಕ್ತಿಯನ್ನು ಚಿತ್ರಿಸಿ, ದಾನದ ಮಹತ್ವ ಹೇಳಲಾಗಿದೆ. ಗಾಯಕ್ಕೆ ಪಟ್ಟಿ ಮಾಡಿ ಆತನ ಬಳಿ ಇರುವುದನ್ನೆಲ್ಲಾ ವೈದ್ಯರು ಕಸಿದ ಮೇಲೆ ಆತನ ಬಳಿ ಏನೂ ಇಲ್ಲ ಎನ್ನುವ ವಿಡಂಬನೆ!

This 1829 cartoon by an unknown artist is published by Stephan Gars of London. The original image of this theme was created by the Dutch artist Pieter Lastman in 1610. It showed three angels in one painting representing the three virtues of Catholics – Faith, Hope, Charity. Along the same lines, this allegorical work also has three parts, titled "The three virtues: Faith, Hope, Charity". The first panel ridicules doctors who advise "body and mind should be in good humor for quick clearing of the disease". A man wearing a clown's hat is taking a spoonful of medicine, trying to amuse himself. Many bottles are seen over the table. The second panel takes a dig on another piece of advice: "Doing something that gives pleasure at an open place with plenty of air and light is curative". Here, a patient is sitting under a tree in the rain and fishing. The third panel shows a lanky poor man with torn clothes with a dressing on his right foot, indicating his status after the doctor has robbed him all! The medical community could not inspire much sympathy from satirists!

57. Portrayal of Doctors – Royal Doctors



Medical and surgical treatments for a lame princess and others. Colour woodcut by Kuniyoshi, 1849/1852. Wellcome Collection. Attribution 4.0 International (CC BY 4.0)

ಉಟಗವ ಕುನಿಯೋಶಿ ಎಂಬ 19 ನೆಯ ಶತಮಾನದ ಜಪಾನ್ ದೇಶದ ಚಿತ್ರ ಕಲಾವಿದ 1830 ರ ಸುಮಾರಿಗೆ ರಚಿಸಿದ ವ್ಯಂಗ್ಯಪೂರಿತ ವರ್ಣ ಚಿತ್ರ. ಚಿತ್ರದ ಬಲಗಡೆ ತೋರಿರುವ ಕೆಂಪು ದಿರುಸಿನ ರಾಜಕುಮಾರಿಯ ಕಾಲು ಊನವಾಗಿದೆ. ಆದರೆ, ಯಾರಿಗೂ ಆ ವಿಷಯ ತಿಳಿಯಬಾರದು ಎಂಬ ಎಚ್ಚರಿಕೆ. ಕಪ್ಪು ದಿರುಸು ತೊಟ್ಟಿರುವ ಹಲವು ವೈದ್ಯರು ಚಿಕಿತ್ಸೆಗೆ ಬಂದಿದ್ದಾರೆ. ರಾಜಕುಮಾರಿಯ ಬಲಗಾಲಿಗೆ ಎತ್ತರದ ಚಪ್ಪಲಿಯೊಂದನ್ನು ತೊಡಿಸಿ, ಆಕೆಯ ಕುಂಟುಗಾಲು ಯಾರಿಗೂ ತಿಳಿಯದಂತೆ ಪ್ರಯತ್ನ ನಡೆಯುತ್ತಿದೆ. ಜೊತೆ ಜೊತೆಯಲ್ಲಿ ಹಲವಾರು ಇತರ ಆರೋಗ್ಯ ಸಮಸ್ಯೆಗಳಿಗೂ ಚಿಕಿತ್ಸೆ ಮಾಡುತ್ತಿದ್ದಾರೆ. ರಾಜಕುಮಾರಿಯ ಬಲಬದಿಯಲ್ಲಿ ಓರ್ವ ಹೆಂಗಸು ಸಿಡುಬಿನ ಕಲೆಗಳಿಗೆ ಆವಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದಾರೆ. ಕೆಲವರು ಹಲ್ಲು ಕೀಳಿಸಿಕೊಳ್ಳಲು ನಿಂತಿದ್ದಾರೆ. ಒಬ್ಬಾಕೆ ತಮ್ಮ ಗೂನು ಬೆನ್ನಿಗೆ ಕಟ್ಟಿಗೆಯ ಆಸರೆ ಪಡೆಯುತ್ತಿದ್ದಾರೆ. ಒಬ್ಬ ವ್ಯಕ್ತಿ ಕೃತಕ ಮೂಗನ್ನು ಪರಿಶೀಲಿಸುತ್ತಿದ್ದಾರೆ. ತಪ್ಪುಗಳಿಗೆ ಮೂಗು ಕುಯ್ದು ಹಾಕುವ ಶಿಕ್ಷೆ ಅಂದಿನ ಜಪಾನ್ ದೇಶದಲ್ಲೂ ಇದ್ದಿರಬಹುದು. ಒಟ್ಟಾರೆ, ರಾಜಮನೆತನದವರು ಆಡಳಿತಕ್ಕಿಂತ ತಮ್ಮ ಸ್ವಂತ ಆರೈಕೆಯ ಮೇಲೆಯೇ ಹೆಚ್ಚು ಕಾಲ ಕಳೆಯುತ್ತಾರೆ ಎಂಬ ವಾಸ್ತವವನ್ನು ಬಿಂಬಿಸುವ ವ್ಯಂಗ್ಯದ ಚಿತ್ರಣದಂತಿದೆ.

This 1830 painting by the Japanese artist Utagawa Kuniyoshi ridicules certain high-handed practices of the Royal family and physicians in Japan. The princess in the Red dress has a defective leg, with one leg shorter than the other. But the Royal family does not wish the common people to know that. Many physicians in black gowns have come to attend the problem. The princess has been offered one sandal with a high platform for the shorter leg, while the other would be of normal size. This arrangement is hoped to conceal the problem from the public eye. The other physicians are attending to the problems of a few members of the Royal family. One lady is seen using steam to soften the marks of smallpox on her face, while another is getting wooden support for her hunchback. Few are waiting to get their teeth plucked. One man is trying an artificial nose, probably indicating that the punishment of severing the nose was prevalent even in Japan. Overall, the Royal family seems to be interested in cosmetic corrections of themselves and the artist is trying to draw the attention of viewers on their priorities.

58. Portrayal of Doctors – Physician's Verdict



"The physician's verdict". Oil painting by Emile Carolus Leclercq, 1857. Wellcome Collection. Attribution 4.0 International (CC BY 4.0)

---

19 ನೆಯ ಶತಮಾನದ ಪ್ರಸಿದ್ಧ ಬೆಲ್ಜಿಯನ್ ಚಿತ್ರಕಾರ ಎಮಿಲೆ-ಕ್ಯಾರೊಲಸ್ ಲೆಕ್ಲರ್ಕ್ ಅವರು 1857 ರಲ್ಲಿ ರಚಿಸಿರುವ ತೈಲ ವರ್ಣಚಿತ್ರ. ಈ ಚಿತ್ರದಲ್ಲಿ, ಹಿರಿಯ ವೈದ್ಯರೊಬ್ಬರು ರೋಗಗ್ರಸ್ತ ಮಗುವಿನ ಪರಿಸ್ಥಿತಿಯ ಬಗ್ಗೆ ಅದರ ತಾಯಿಗೆ ತಿಳಿಸುತ್ತಿದ್ದಾರೆ. ವೈದ್ಯರ ಟೋಪಿ, ಕೈಚೀಲ, ಕೈಗೋಲು ಹಿಂಬದಿಯಲ್ಲಿದೆ. ವೈದ್ಯರ ಮುಖದಲ್ಲಿ ಕಾಣುವ ವಿಶ್ವಾಸ "ಪ್ರಾಯಶಃ ಒಳ್ಳೆಯ ಸುದ್ಧಿ ಹೇಳುತ್ತಿದ್ದಾರೆ" ಎನಿಸುತ್ತದೆ. ಆದರೆ, ವೈದ್ಯರು ತಾಯಿಯ ಕೈ ಹಿಡಿದಿರುವುದರಿಂದ, ಬೇರೆ ರೀತಿಯ ವಿಷಯವೂ ಇರಬಹುದು ಎಂಬ ಅಳುಕಿದೆ. ಇಂತಹ ಹಲವಾರು ಚರ್ಚೆಗಳಿಗೆ ಈ ಚಿತ್ರ ಕಾರಣವಾಗಿದೆ.

This 1857 oil painting by the Flemish artist Emile-Carolus Leclercq is titled "The Physician's verdict". The painting shows a senior physician talking to the family of a sick child after examining. His hat, gloves, and cane are in the background. The father is missing in the picture. Such paintings always created a puzzle in the minds of the viewers on what might the verdict of a physician be. The body language of the physician may not suggest a good outcome. But, his face is confident and kind. Many such paintings mark the social condition of the 19th Century.

59. Portrayal of Doctors – Physician During an Epidemic



A physician dispensing medicine through a window, a large group of patients are waiting their turn, a female assistant has a medicine chest suspended from her neck, Italy 17--. Coloured wood engraving by M. Klinkicht after H. Wallis. Wellcome Collection. Attribution 4.0 International (CC BY 4.0)

ಒಂದು ಭೌಗೋಳಿಕ ಮಿತಿಯಲ್ಲಿ ಕೆಲವೊಂದು ಸಾಂಕ್ರಾಮಿಕ ಕಾಯಿಲೆ ಆಗಾಗ ತೀವ್ರಗೊಂಡು, ಹಲವಾರು ಜನರನ್ನು ಕಾಡುವುದು ಬಹಳ ಸಾಮಾನ್ಯ. ಇಂತಹ ಸಂದರ್ಭದಲ್ಲಿ ಸ್ಥಳೀಯ ವೈದ್ಯರ ಜವಾಬ್ದಾರಿ ಬಹಳ ಹೆಚ್ಚು. ರೋಗವನ್ನು ಅತ್ಯಂತ ಶೀಘ್ರವಾಗಿ ಪತ್ತೆ ಹಚ್ಚಿ, ಔಷಧವನ್ನು ಹುಡುಕಿ, ಅದನ್ನು ರೋಗಿಗಳಲ್ಲಿ ವ್ಯಾಪಕವಾಗಿ ಬಳಸಿದರೆ ಮಾತ್ರ ರೋಗದ ಪ್ರಸರಣವನ್ನು ನಿಯಂತ್ರಿಸಬಹುದು. 1860 ರಲ್ಲಿ ಬ್ರಿಟಿಷ್ ಚಿತ್ರಕಾರ ಹೆನ್ರಿ ವಾಲಿಸ್ ಅವರು ಕ್ಲಿನ್ಕಿಟ್ ಎಂಬುವರ ಸಹಯೋಗದಲ್ಲಿ ರಚಿಸಿರುವ ಈ ಕೃತಿಯಲ್ಲಿ ಕೆಂಪು ವಸ್ತ್ರದ ವೃದ್ಧ ಚಿಕಿತ್ಸಕರೊಬ್ಬರು ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಊರಿನ ಜನರಿಗೆ ಔಷಧ ನೀಡುವ ಚಿತ್ರಣವಿದೆ. ಮತ್ತೊಂದು ಬದಿಯಲ್ಲಿ ಅವರ ಸಹಾಯಕಿಯೊಬ್ಬರು ಔಷಧವನ್ನು ಮಿಶ್ರಗೊಳಿಸಿ ಚಿಕಿತ್ಸೆಯಲ್ಲಿ

ಸಹಕರಿಸುತ್ತಿದ್ದಾರೆ. ಸಾಂಕ್ರಾಮಿಕ ಕಾಯಿಲೆಗಳ ಸಂದರ್ಭದಲ್ಲಿ ಕೆಲವೊಮ್ಮೆ ಸರಕಾರವೇ ವೈದ್ಯರನ್ನು ಇಂತಹ ಕೆಲಸಕ್ಕೆ ನಿಯುಕ್ತಗೊಳಿಸುತ್ತಿತ್ತು.

This 1860 wood engraving with watercolor is by the British painter and writer Henry Wallis, aided by Klinkicht. It shows a typical scenario in the 19^{th} century Italy during the times of epidemics. A physician in red drapes is seen dispensing medicine to a patient across a window barrier, while many patients are waiting in a crowd for their turn. Towards the other side of the crowd, a female assistant of the physician is carrying a medicine chest suspended from her neck. She seems to be busy in preparing the medicines as advised by the physician standing next to her. Senior physicians were often commissioned by the government to dispense medicines to peasants during epidemics.

60. Portrayal of Doctors – Visiting the Poor



Der_Landarzt by Karl Hübner / Public domain. https://creativecommons.org/publicdomain/mark/1.0/deed.en

---

19 ನೆಯ ಶತಮಾನದ ಪ್ರಸಿದ್ಧ ಜರ್ಮನ್ ಚಿತ್ರಕಾರ ಕಾರ್ಲ್ ಹ್ಯುಬ್ನರ್ 1864 ರಲ್ಲಿ ರಚಿಸಿರುವ ತೈಲ ವರ್ಣಚಿತ್ರ. ಅನಾರೋಗ್ಯದಿಂದ ಬಳಲುತ್ತಿರುವ ಓರ್ವ ಸ್ತ್ರೀ ರೋಗಿಯನ್ನು ಅವರ ಮನೆಯಲ್ಲೇ ಪರೀಕ್ಷೆ ಮಾಡಿ, ಅವರಿಗೆ ಸಾಂತ್ವನ ಹೇಳುತ್ತಿರುವ ಸಹೃದಯಿ ಹಿರಿಯ ವೈದ್ಯನ ಚಿತ್ರಣ. ಯುರೋಪಿನ ಕೆಲವು ಭಾಗಗಳಲ್ಲಿ ಹೆಣ್ಣು ಮಕ್ಕಳಿಗೆ ಮನೆ ಬಿಟ್ಟು ಹೊರಗೆ ಹೋಗುವ ವಿನಾಯತಿ ಇರಲಿಲ್ಲ. ಇಂತಹ ಸಂದರ್ಭಗಳಲ್ಲಿ ಅವರು ಅನಾರೋಗ್ಯಕ್ಕೆ ತುತ್ತಾದರೆ, ಅಪಾಯವಾಗುವ ಸಂಭವ ಹೆಚ್ಚಿತ್ತು. ಬಡವರ ಮನೆಯನ್ನು ಸಂದರ್ಶಿಸಿ ಚಿಕಿತ್ಸೆ ನೀಡುವ ವೈದ್ಯರು ಪ್ರಾಣದಾತರಿಗೆ ಸಮಾನರಾಗಿದ್ದರು. ತಾನು ಓದುತ್ತಿದ್ದ

ಪುಸ್ತಕವನ್ನು (ಪ್ರಾಯಶಃ ಧರ್ಮಗ್ರಂಥ) ನೆಲದ ಮೇಲಿಟ್ಟು ವೈದ್ಯರಿಗೆ ಕೈಮುಗಿಯುತ್ತಿರುವ ಹಿರಿಯ ಹೆಂಗಸು ಇದಕ್ಕೆ ಸಾಂಕೇತಿಕ ಸೂಚಕವಾಗಿದ್ದಾರೆ. ಮನೆಯಲ್ಲಿನ ಮಗು ಕುತೂಹಲದಿಂದ ನೋಡುತ್ತಿದೆ. ಅಂದಿನ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು ಬಿಂಬಿಸುವ ಚಿತ್ರಣ.

This 1864 oil painting by the German painter Karl Hubner depicts a compassionate senior doctor reassuring a lady about the health of another young woman. 19th century Europe was not friendly for women and the poor. Women could not go out independently. If a woman of a poor family suffered from ill-health, it was extremely difficult for them to get medical help. In such instances, few compassionate doctors voluntarily used to come for their help, without seeking any fee for their service. The family had great reverence for such doctors. One such scene is depicted in this painting. A curiously looking boy even hints at an angle of love-sickness in the sick young woman!

61. Portrayal of Doctors – The Compassionate Doctor



"IMG_2254 Luke Fildes. 1843-1927. Le docteur impuissant. The Doctor exhibited. 1891. Londres. Tate Britain." by jean louis mazieres is licensed under CC BY-NC-SA 2.0

ಸರ್ ಸ್ಯಾಮ್ಯುಯಲ್ ಲ್ಯೂಕ್ ಫಿಲ್ಡ್ಸ್ ಎಂಬ ಪ್ರಖ್ಯಾತ ಬ್ರಿಟಿಷ್ ಚಿತ್ರಕಾರ 1891 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಇದು ಫಿಲ್ಡ್ಸ್ ಅವರ ವೈಯಕ್ತಿಕ ಜೀವನದ ದುರಂತ ಪ್ರಸಂಗ. 1877 ರಲ್ಲಿ ಫಿಲ್ಡ್ಸ್ ಅವರ ಹಿರಿಯ ಪುತ್ರ ಫಿಲಿಪ್ಸ್ ಸಣ್ಣ ವಯಸ್ಸಿನಲ್ಲೇ ಮರಣ ಹೊಂದಿದ. ಆಗ ಆ ಮಗುವಿನ ಆರೈಕೆ ಮಾಡಿದವರು ಡಾ. ಮರ್ರೇ. ತನ್ನ ರೋಗಿಯ ಬಗ್ಗೆ ಆ ವೈದ್ಯರಿಗೆ ಇದ್ದ ಅಪಾರ ಕಾಳಜಿಯಿಂದ ಫಿಲ್ಡ್ಸ್ ಬಹಳ ಪ್ರಭಾವಿತರಾದರು. ಈ ಚಿತ್ರರಚನೆಗೆ ಡಾ. ಮರ್ರೇ ಅವರೇ ಸ್ಫೂರ್ತಿ. ಚಿತ್ರದ ಬಲಬದಿಯಲ್ಲಿ ಮಗುವಿನ ತಾಯಿ ದುಃಖಿಸುತ್ತಿದ್ದಾರೆ. ಅವರ ಭುಜದ ಮೇಲೆ ಕೈಯಿಟ್ಟು ಫಿಲ್ಡ್ಸ್ ಅವರು ಸಾಂತ್ವನ ತೋರುತ್ತಿದ್ದಾರೆ. ವೈದ್ಯರ ಮುಖದ ಮೇಲಿನ ಭಾವ ಚಿತ್ರದಲ್ಲಿ ಸ್ಪಷ್ಟವಾಗಿದೆ. ಈ ಚಿತ್ರ ಅಪಾರ ಜನಮನ್ನಣೆ ಪಡೆಯಿತು. 1947 ರಲ್ಲಿ ಅಮೆರಿಕದ ವೈದ್ಯಕೀಯ ಸಂಘ ತನ್ನ ಶತಮಾನೋತ್ಸವ ಸಮಾರಂಭದಲ್ಲಿ ಈ ಚಿತ್ರವನ್ನು ಅಂಚೆ ಚೀಟಿಯ ರೂಪದಲ್ಲಿ ಹೊರತಂದು ಗೌರವ ಸೂಚಿಸಿತು.

This 1891 oil painting by Sir Samuel Luke Fildes has a personal connection to the artist. In 1877, Sir Fildes lost his elder son Philips to an illness. The boy was cared for by Dr. Murray, whose deep devotion to his patients moved Sir Fildes immensely. While Dr. Murray is watching over the sick child, Sir Fildes is standing on the corner with a hand over the shoulder of his grieving wife. This painting has been the epitome of a doctor's care across the globe. There was a commemoration stamp on this painting in 1947 during the centenary celebration of the American Medical Association.

62. Portrayal of Doctors – Village Physician




Pascal Adolphe Jean Dagnan-Bouveret - An Accident Pascal Dagnan-Bouveret, Public domain, via Wikimedia Commons https://creativecommons.org/licenses/by-sa/3.0/deed.en

---

ಪ್ಯಾಸ್ಕಲ್ ದಗ್ನನ್ ಬೋವೆರೆ ಎಂಬ 19-20 ನೆಯ ಶತಮಾನದ ಪ್ರಖ್ಯಾತ ಫ್ರೆಂಚ್ ಚಿತ್ರಕಾರ 1880 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಈತ ಸಾಮಾನ್ಯ ಜನಜೀವನದ ದೃಶ್ಯಗಳನ್ನು ಬಿಡಿಸುವಲ್ಲಿ ನಿಷ್ಣಾತ. ತನ್ನ ವೈದ್ಯ ಮಿತ್ರನೊಬ್ಬನ ಜೊತೆ ಪ್ರವಾಸದಲ್ಲಿದ್ದಾಗ ಕಂಡ ಕೆಲವು ದೃಶ್ಯಗಳನ್ನು ಚಿತ್ರರೂಪಕ್ಕೆ ತಂದಿದ್ದಾನೆ. ಹಳ್ಳಿಗಾಡಿನ ಈ ಚಿತ್ರಣ, ಅಂದಿನ ಗ್ರಾಮೀಣ ಜನರ ಆರ್ಥಿಕ ದುಸ್ಥಿತಿಯನ್ನು ವಿವರವಾಗಿ ಬಿಂಬಿಸುತ್ತದೆ. ಬಾಲಕನೊಬ್ಬನ ಗಾಯವನ್ನು ತೊಳೆದು, ಮದ್ದು ಹಚ್ಚಿ, ಪಟ್ಟಿ ಮಾಡುತ್ತಿರುವ ವೈದ್ಯನ ಈ ಚಿತ್ರ ಬಹಳ ಪ್ರಶಂಸೆಗೆ ಪಾತ್ರವಾಗಿತ್ತು.

This oil painting of 1880 by the French artist Pascal Dagnan-Bouveret shows a common scenario in the village household. Dagnan-Bouveret rode around with a Physician friend in the villages of France. The scene depicted is of his physician friend cleaning and dressing the wound of a village boy. The nature of surroundings, expression of people, poverty are all depicted with great subtlety.

63. Portrayal of Doctors – Misuse of Doctors



nlm:nlmuid-101425210 The Drug store of the future. Courtesy of the National Library of Medicine. https://creativecommons.org/publicdomain/mark/1.0/

ಫ್ರೆಡ್ರಿಕ್ ಗ್ರೇಟ್ಸ್ ಎಂಬ ಪ್ರಖ್ಯಾತ ಆಸ್ಟ್ರಿಯನ್ ವ್ಯಂಗ್ಯ ಚಿತ್ರಕಾರ 1882 ರಲ್ಲಿ ರಚಿಸಿದ ವ್ಯಂಗ್ಯ ಚಿತ್ರ. ಆ ಕಾಲದಲ್ಲಿ ಅಮೆರಿಕದಲ್ಲಿ ಚಾಲ್ತಿಗೆ ಬಂದ "ಪಾನ ನಿಷೇಧ"ವನ್ನು ಲೇವಡಿ ಮಾಡುವ ಕೃತಿ. ಸಾರ್ವಜನಿಕರಿಗೆ ಮದ್ಯಪಾನವನ್ನು ನಿಷೇಧಿಸಿದ ಕೆಲವು ಸರ್ಕಾರಗಳು, "ಚಿಕಿತ್ಸೆಯ ಕಾರಣಕ್ಕೆ ಮಾತ್ರ ಆಲ್ಕೊಹಾಲ್ ಅನ್ನು ಬಳಸಬಹುದು" ಎಂದು ವಿನಾಯತಿ ನೀಡಿದ್ದವು. ಈ ವಿನಾಯತಿಯ ಲಾಭ ಪಡೆದ ಕೆಲವು ಬಾರ್ ಗಳು, ತಮ್ಮನ್ನು ತಾವು "ಔಷಧ ತಾಣಗಳು" ಎಂದು ಕರೆದುಕೊಳ್ಳುತ್ತವೆ ಎಂಬ ವಿಡಂಬನೆ! ಅದನ್ನೇ ಮುಂದುವರೆಸಿ, ಬಾರ್ ಗಳಲ್ಲಿ ಓರ್ವ ವೈದ್ಯನನ್ನು ನಿಯೋಜಿಸಿ, ಆತನಿಂದ ಮದ್ಯಕ್ಕೆ ಔಷಧ ಚೀಟಿ ಬರಸಿಕೊಂಡು, ಎಷ್ಟು ಬೇಕಾದರೂ ಕುಡಿಯಬಹುದು ಎಂಬ ಲೇವಡಿ ಈ ಚಿತ್ರದಲ್ಲಿದೆ!

This 1882 Cartoon by the Austrian artist Friedrich Gratez ridicules the concession given to the prohibition movement in America. Although the public was barred from using alcohol, an exemption was given for the medicinal use of alcohol. The crooked businessmen made use of this exemption and converted the bars into drug houses! People are seen queuing up in a line for a consultation free in the doctor's office booth appended to the bar! Men are seen sitting at a drug store counter and getting inebriated! A graphic insert shows the outer structure of the building with the window sign "saloon" crossed out and "drug store" written underneath, exposing the blatant misuse of the law!

64. Portrayal of Doctors – Female Doctors of Villages



uterweiblein By Johann Baptist Wengler / Public domain. https://creativecommons.org/publicdomain/mark/1.0/deed.en

ವೈದ್ಯಕೀಯ ಸೇವೆಗಳು ಸರಿಯಾಗಿ ಲಭ್ಯವಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಅನುಭವಸ್ಥ ವೃದ್ಧ ಮಹಿಳೆಯರು ಹೆಣ್ಣು ಮಕ್ಕಳಿಗೆ ಆರೋಗ್ಯ ಸಲಹೆ ನೀಡುತ್ತಿದ್ದ ಸಾಂಪ್ರದಾಯಿಕ, ಅನುಭವಜನ್ಯ ಪದ್ಧತಿಯ ಬಗ್ಗೆ ಜೊಹಾನ್ ವೆಂಗ್ಲರ್ ಎಂಬ ಜರ್ಮನ್ ಕಲಾವಿದ 1886 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ.

An oil painting of 1886 on the theme of old ladies with acquired diagnostic and therapeutic skills through experience and legacy, treating the local population, especially young girls - by the German artist Johann Baptist Wengler.

65. Portrayal of Doctors – Anxious Moments




"File:'Anxious moments'; a sick child and grieving parents Wellcome L0019864.jpg" by Attributed to John Whitehead Walton (1815-1895) is licensed under CC BY 4.0

ಜಾನ್ ವಾಲ್ಟನ್ ಎಂಬ ಬ್ರಿಟಿಷ್ ಚಿತ್ರಕಾರ 1894 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ತೀವ್ರ ಕಾಯಿಲೆಯಿಂದ ಬಳಲುತ್ತಿರುವ ಮಗುವಿನ ಸ್ಥಿತಿಯ ಬಗ್ಗೆ ತಂದೆ ತಾಯಿ ಕಂಗಾಲಾಗಿದ್ದಾರೆ. ಮಗುವನ್ನು ನೋಡಿಕೊಳ್ಳುತ್ತಿರುವ ದಾದಿ ಮಾತ್ರ ಅತೀವ ಕಾಳಜಿಯಿಂದ ವೈದ್ಯರ ಮಾತನ್ನು ಆಲಿಸುತ್ತಿದ್ದಾರೆ. ತಮ್ಮ ಕೈಲಿ ಗಡಿಯಾರ ಹಿಡಿದಿರುವ ವೈದ್ಯರು ಆ ದಾದಿಗೆ ಏನೋ ನಿರ್ದೇಶನ ನೀಡುತ್ತಿದ್ದಾರೆ.

An oil painting by the British painter John Whitehead Walton in 1894 depicts a doctor attending to an ailing child, being cared for by a nurse with its grieving parents. There is a watch in the hands of the doctor, who is explaining something to the attentive nurse.

66. Portrayal of Doctors – The Gratitude



"File:The doctor Wellcome L0067101.jpg" is licensed under CC BY 4.0

ಇಂಗ್ಲೆಂಡಿನ ಆಸ್ಪತ್ರೆಯೊಂದರ ಸುತ್ತಮುತ್ತಲಿನ ನೈಜ ಘಟನೆಗಳನ್ನು ಹೃದಯಂಗಮವಾಗಿ ಚಿತ್ರಿಸಿದ ಬ್ರಿಟಿಷ್ ಕಲಾವಿದ ಫ್ರೆಡ್ರಿಕ್ ರಾಬಿನ್ಸನ್ ಅವರ 1916 ರ ಚಿತ್ರ. ಆಸ್ಪತ್ರೆಯ ಹೊರ ಆವರಣದಲ್ಲಿ ಸಿಬ್ಬಂದಿಗೆ ಜನಸಾಮಾನ್ಯರು ಗೌರವ ಸಲ್ಲಿಸುತ್ತಿರುವ ಚಿತ್ರಣ. ಇಂತಹ ಗೌರವ ಸಂಸ್ಕಾರದಿಂದ ಮಾತ್ರ ಬರಲು ಸಾಧ್ಯ. ಮೂರ್ನಾಲ್ಕು ವ್ಯಕ್ತಿಗಳ ಮೂಲಕ ಎಲ್ಲಾ ಬಗೆಯ ಜನರನ್ನೂ ಸಾಂಕೇತಿಸಲಾಗಿದೆ. ಕಂದುಬಣ್ಣದ ಬಟ್ಟೆ ಧರಿಸಿರುವಾತ ಖುದ್ದು ಕಲಾವಿದ ರಾಬಿನ್ಸನ್ ಎಂದು ಹೇಳಲಾಗಿದೆ. ಇಂದಿನ ಕಾಲದಲ್ಲಿ ನಮ್ಮ ದೇಶದಲ್ಲಿ ವೈದ್ಯರ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ಈ ಚಿತ್ರದ ಜೊತೆಗೆ ಹೋಲಿಸಿದಾಗ ಅನೇಕ ವೈರುಧ್ಯಗಳು ಎದ್ದು ಕಾಣುತ್ತವೆ.

Frederick Cayley Robinson was a British painter of the late 19th century, who is known for his art of Middlesex hospital in England. In this 1916 painting, he shows the public thanking the staff of the hospital. The culture of

respecting those who helped is deeply embedded in a few cultures. The painting shows a mother nursing a baby, children, and aged people (representing different age groups) in a courtyard outside the hospital. The man wearing a brown cloak is speculated to be the painter Cayley Robinson himself. The design of the building allows an aged man to sit and rest. The painting contrasts the brutal assaults on the doctors by the relatives of patients, prevalent in developing nations.

67. Urine Doctor



A physician examining a urine flask. Oil painting after G. Dou. Wellcome Collection. Attribution 4.0 International (CC BY 4.0)

16 ನೆಯ ಶತಮಾನದಲ್ಲಿ, ಯುರೋಪ್ ನಲ್ಲಿ "ಮೂತ್ರ ತಜ್ಞ" ಎಂಬ ಕೆಲವರಿದ್ದರು. ಜನರ ಮೂತ್ರವನ್ನು

ಗಮನಿಸಿ, ಕೆಲವು ಪರೀಕ್ಷೆ ಮಾಡಿ, ಅವರ ಆರೋಗ್ಯದ ಬಗ್ಗೆ, ಭವಿಷ್ಯದ ಬಗ್ಗೆ ಹೇಳುತ್ತಿದ್ದರು. ಇಂತಹವರು, ಮಹಿಳೆಯರ ಮೂತ್ರದ ವಿಶ್ಲೇಷಣೆಯಿಂದ, "ಅವರು ಗರ್ಭಿಣಿ ಹೌದೋ; ಅಲ್ಲವೋ" ಎಂದು ಹೇಳುತ್ತಿದ್ದರು. 1552 ರಲ್ಲಿ ಪ್ರಕಟವಾದ ಒಂದು ಪುಸ್ತಕದ ಪ್ರಕಾರ, ಮಹಿಳೆಯ ಮೂತ್ರ ತೆಳುಹಳದಿ ಬಣ್ಣದಲ್ಲಿದ್ದು, ಅದರ ಮೇಲ್ಭಾಗದಲ್ಲಿ ತೆಳ್ಳನೆಯ ಬಿಳಿಯ ಮೋಡದ ರೀತಿಯ ಬಣ್ಣ ಕಂಡರೆ, "ಅಂತಹ ಮಹಿಳೆ ಗರ್ಭಿಣಿ" ಎಂದು ನಿರ್ಧರಿಸುತ್ತಿದ್ದರು. ಕೆಲವೊಮ್ಮೆ ಮಹಿಳೆಯರ ಮೂತ್ರಕ್ಕೆ ಸ್ವಲ್ಪ ವೈನ್ ಬೆರಸಿದಾಗ, ಅದು ತೆಳು ಬಿಳಿಯ ಬಣ್ಣಕ್ಕೆ ತಿರುಗಿದರೆ "ಅದು ಗರ್ಭಿಣಿಯ ಮೂತ್ರ" ಎಂದು ಹೇಳಲಾಗುತ್ತಿತ್ತು. ವೈನ್ ನಲ್ಲಿ ಇರುವ ಮದ್ಯಸಾರದ ಅಂಶ, ಗರ್ಭಿಣಿಯ ಮೂತ್ರದಲ್ಲಿ ಇರುವ ಅಧಿಕ ಪ್ರೊಟೀನ್ ಜೊತೆಗೆ ಬೆರೆತು, ಅದಕ್ಕೆ ಬಿಳಿಯ ಬಣ್ಣ ನೀಡುತ್ತಿತ್ತು. ಮೂತ್ರ ತಜ್ಞರ ತಿಳುವಳಿಕೆ ಕೆಲವೊಮ್ಮೆ ತಲಾಂತರದಿಂದ ಬರುತ್ತಿತ್ತು. ಹೀಗಾಗಿ ಅನೇಕ ವಿಷಯಗಳಲ್ಲಿ ಅವರ ತೀರ್ಮಾನ ಸಾಕಷ್ಟು ಸರಿಯಾಗಿರುತ್ತಿತ್ತು. ಆದರೆ, ಉಳಿದೆಲ್ಲಾ ವಿಷಯಗಳಂತೆ, ಇದರಲ್ಲೂ ಸಾಕಷ್ಟು ಮೋಸಗಾರರು ಇದ್ದರು! ಇಲ್ಲದ ಭಯ ಹುಟ್ಟಿಸಿ ಲೂಟಿ ಮಾಡುವವರೂ ಇದ್ದರು! ವೈದ್ಯಕೀಯ ವಿಜ್ಞಾನ ಇನ್ನೂ ಶೈಶವಾವಸ್ಥೆಯಲ್ಲಿ ಇರುವಾಗ ರೋಗಿಗಳಿಗೆ ಬೇರೆ ಪರ್ಯಾಯವೂ ಇರಲಿಲ್ಲ. ಗೆರ್ರಿಟ್ ಡೊವು ಎನ್ನುವ 17 ನೆಯ ಶತಮಾನದ ಪ್ರಸಿದ್ಧ ಡಚ್ ಕಲಾವಿದನ ತೈಲ ವರ್ಣಕೃತಿ. ಇದು ರಚನೆ ಆದದ್ದು 1650 ರ ಸುಮಾರಿಗೆ. ಅಂದಿನ ಕಾಲದ ವೃದ್ಧ "ಮೂತ್ರ ವೈದ್ಯ"ರೊಬ್ಬರ ಚಿತ್ರಣ. ವೈದ್ಯರ ಜೊತೆ ಮಹಿಳೆಯೊಬ್ಬರನ್ನು ಚಿತ್ರಿಸಲಾಗಿದೆ. ಆಕೆಯೇ ರೋಗಿ ಇರಬಹುದು ಎಂದು ಅಂದಾಜು.

Urine Doctors were widely prevalent in 16th Century Europe. They would inspect the urine of people collected in glass flasks, do some minor tests if indicated, and would predict their health. Few of these Urine Doctors would even predict the future of people with the inspection of urine! Prediction of pregnancy was one of their main jobs. A book published in 1552 had a description of such predictions: If the urine of a lady is light yellow with a cloudy upper part, then she is pregnant. On mixing some wine, if the urine turns it whitish, then the lady is likely to be pregnant. The alcohol in wine would mix with excess protein in pregnant urine to give a whitish hue. Most of the urine doctors were familial. Experiences gained by generations of observation might have given some authenticity to their predictions. However, conmen were not rare! Those who used the fear of unwed pregnant to their advantage were in plenty. However, when the medical knowledge was in its infancy, the patients hardly had an alternative. Gerrit Dou, a famous Dutch artist of the 17th Century created this oil painting in 1650. An anxious-looking old woman is visiting a urine doctor. The doctor seems to have all the other traditional equipment of those times for his trade!

68. Urine Doctor – The Alchemist



sciencehistory By Helmont, Mattheus van. The Alchemist. Science History Institute. Philadelphia. http://creativecommons.org/publicdomain/mark/1.0/

ಮ್ಯಾಥ್ಯು ವಾನ್ ಹೆಲ್ಮಾಂಟ್ ಎಂಬ ಬೆಲ್ಜಿಯನ್ ಚಿತ್ರಕಾರ 1650 ರ ಸುಮಾರಿಗೆ ರಚಿಸಿರುವ ತೈಲ ವರ್ಣಚಿತ್ರ. ಅಂದಿನ ಕಾಲದ ವೈದ್ಯರು ಕೇವಲ ವೈದ್ಯಕೀಯ ವೃತ್ತಿ ಮಾತ್ರ ಮಾಡುತ್ತಿರಲಿಲ್ಲ. ಕೆಲವೊಮ್ಮೆ ಬೇರೆ ವಿಷಯಗಳ ಅಧ್ಯಯನ ಮಾಡಿದ ವ್ಯಕ್ತಿಗಳೂ ವೈದ್ಯಕೀಯದಲ್ಲಿ ಕೈಯಾಡಿಸುವುದು ಇತ್ತು. ಶರೀರದಲ್ಲಿ ರಾಸಾಯನಿಕಗಳ ಏರು-ಪೇರಿನಿಂದ ಕಾಯಿಲೆಗಳು ಬರುತ್ತವೆ ಎಂಬ ಭಾವನೆ ಕೂಡ ಇತ್ತು. ಹೀಗಾಗಿ, ರಾಸಾಯನಿಕ ವಸ್ತುಗಳ ಬಗ್ಗೆ ತಿಳಿದವರೂ ಕೆಲವೊಮ್ಮೆ ಶರೀರದ ಕೆಲಸದ ಬಗ್ಗೆ ಆಸಕ್ತರಾಗುತ್ತಿದ್ದರು. ಇಂತಹ ಒಬ್ಬರ ಪ್ರಯೋಗಾಲಯವನ್ನು ಈ ಚಿತ್ರದಲ್ಲಿ ತೋರಲಾಗಿದೆ. ರಾಸಾಯನಿಕಗಳು ಮತ್ತು ವೈದ್ಯಕೀಯ ಸಲಕರಣೆಗಳು ಈ ಪ್ರಯೋಗಾಲಯದಲ್ಲಿವೆ. ಹಲವಾರು ಮಂದಿ ಸಹಾಯಕರು ಪ್ರಯೋಗಾಲಯದ ಕೆಲಸದಲ್ಲಿ ನೆರವಾಗುತ್ತಿದ್ದಾರೆ.

This 1650 oil painting by the Flemish artist Mattheus van Helmont is titled "The Alchemist". The scientists of medieval Europe tried their hands in multiple areas of science. Those who believed that "the human body was an ensemble of chemicals and any disequilibrium would cause disease" would try their hand as a physician to set right the chemical balance! The painting depicts one such physician-chemist who has instruments of both fields randomly spread throughout his room. Thus, one can see parts of the human skeleton along with hardware used by chemists. The alchemist is examining the urine flask, while his assistant is distilling something, with two more working in the background. Alchemists of those times worked mainly with metal, in pursuit of a sorcerer's stone to convert the base metals to gold.

69. Urine Doctor – with a sick patient



"File:A physician examining a urine-flask brought by a woman. Oil Wellcome M0013918.jpg" is licensed under CC BY 4.0

ಕ್ಯಾಸ್ಪರ್ ನೆಟ್ಶರ್ ಎನ್ನುವ 17 ನೆಯ ಶತಮಾನದ ಪ್ರಸಿದ್ಧ ಡಚ್ ಕಲಾವಿದನ ತೈಲ ವರ್ಣಚಿತ್ರ. ಇದು ರಚನೆ ಆದದ್ದು 1670 ರ ಸುಮಾರಿಗೆ. ಅಂದಿನ ಕಾಲದ ವೃದ್ಧ "ಮೂತ್ರ ವೈದ್ಯ"ರೊಬ್ಬರ ಚಿತ್ರಣ. ಸಾಕಷ್ಟು ವಿವರಗಳಿರುವ ಈ ಚಿತ್ರದಲ್ಲಿ, ಬಳಲಿರುವ ರೋಗಿ ಬೆಂಕಿಗೂಡಿನ ಗೋಡೆಗೆ ಒರಗಿ ಕುಳಿತಿದ್ದಾರೆ. ಆ ರೋಗಿಗೆ ಆಸರೆಯಾಗಿ ಕುಳಿತಿರುವ ವ್ಯಕ್ತಿಯ ಮುಖದಲ್ಲಿ ಆತಂಕ ಕಾಣುತ್ತಿದೆ. ಮೂತ್ರ ಸಂಗ್ರಹಿಸಿ ತಂದಿರುವ ಮಹಿಳೆ ಕೂಡ ಚಿಂತಾಕ್ರಾಂತರಾಗಿದ್ದಾರೆ. ಕಾಯಿಲೆಗಳ ನಿರ್ಧಾರಕ್ಕೆ ಆ ವೈದ್ಯರು ಕೇವಲ ಮೂತ್ರ ಮಾತ್ರವಲ್ಲದೆ, ಬೇರೆ ಆಧಾರಗಳನ್ನೂ ಬಳಸುವವರಂತೆ ತೋರಲಾಗಿದೆ.

Another 1670 oil painting by the Dutch artist Caspar Netscher shows a senior Urine Doctor examining a urine flask. The strained patient has leaned over the wall of the hearth. An anxious-looking man is supporting the patient. The lady standing adjacent to the urine doctor also seems worried. The confident urine doctor looks formidable with many books and other paraphernalia supporting his profession.

70. Urine Doctor in his clinic



Interior with a medical practitioner, a woman holding a flask, and five other people. Oil painting in manner of Balthasar van den Bossche. Wellcome Collection. Attribution 4.0 International (CC BY 4.0)

ಮಧ್ಯಕಾಲೀನ ಯೂರೋಪಿನಲ್ಲಿ ವೈದ್ಯರ ಕ್ಲಿನಿಕ್ ಚಿತ್ರಣ. ಬಲ್ಥಸರ್ ವಾನ್ ಡೆನ್ ಬೋಷ್ ಎಂಬ ಬೆಲ್ಜಿಯನ್ ಕಲಾವಿದ 1710 ರ ಸುಮಾರಿಗೆ ರಚಿಸಿರುವ ತೈಲ ವರ್ಣಚಿತ್ರ. ವೈದ್ಯರೊಬ್ಬರ ಕ್ಲಿನಿಕ್ ಗೆ ಓರ್ವ ಸ್ತ್ರೀ ಮೂತ್ರದ ಫ್ಲಾಸ್ಕ್ ಹಿಡಿದು ಬಂದಿದ್ದಾರೆ. ಓರ್ವ ದಾದಿ ಮತ್ತು ಸಣ್ಣ ಬಾಲಕ ಆ ಕ್ಲಿನಿಕ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂದಿನ ಕ್ಲಿನಿಕ್ ಗಳ ಹೋಲಿಕೆಯಲ್ಲಿ ಅಂದಿನ ಪೂರಾ ಕ್ಲಿನಿಕ್ ನ ವ್ಯವಸ್ಥೆ ಅಯೋಮಯವಾಗಿದೆ!

This 1710 oil painting by the Flemish artist Balthasar van den Bossche shows the interiors of a clinic. A woman from a humble background has come to the clinic of a physician with a urine flask, probably to check her pregnancy

status. Two female assistants and a boy are seen helping in the clinic. The patient's child is looking at the artefacts of the clinic with a wide eye! The haphazard setting of this clinic is in contrast with the ultramodern clinics of the present day!

71. Urine Doctor attending a Lady



"File:A physician examining a urine-flask. Oil painting in the sty Wellcome V0023494.jpg" is licensed under CC BY 4.0

17-18 ನೆಯ ಶತಮಾನದ ಬೆಲ್ಜಿಯಂ ದೇಶದ ಪ್ರಸಿದ್ಧ ಚಿತ್ರಕಾರ ಜೆರಾರ್ಡ್ ಥಾಮಸ್ 1710 ರಲ್ಲಿ ರಚಿಸಿರುವ ತೈಲ ವರ್ಣಚಿತ್ರ. ಅಂದಿನ ಕಾಲದ ವೃದ್ಧ "ಮೂತ್ರ ವೈದ್ಯ"ರೊಬ್ಬರ ಚಿಕಿತ್ಸಾಲಯದ ಚಿತ್ರಣ. ವೈದ್ಯರ ಸಹಾಯಕರು ಇತರ ಕೆಲಸಗಳಲ್ಲಿ ನಿರತರಾಗಿದ್ದಾರೆ. ವೈದ್ಯರ ಇಬ್ಬರು ಸ್ತ್ರೀ-ಸಹಾಯಕರಲ್ಲಿ ಒಬ್ಬರು ದೊಡ್ಡ ಮನೆತನದ "ಲೇಡಿ"ಗೆ ಕೂರುವಂತೆ ಸೂಚಿಸುತ್ತಿದ್ದಾರೆ. ಆ ಲೇಡಿಯ ಮಗು ಮತ್ತು ನಾಯಿ ಕೂಡ ಆಕೆಯ ಜೊತೆ ಬಂದಿವೆ. ವೈದ್ಯರ ಚಿಕಿತ್ಸಾಲಯದ ಬೆಕ್ಕಿನ ಜೊತೆ ಆ ನಾಯಿ ಜಗಳಕ್ಕೆ ಇಳಿಯುತ್ತಿದೆ! "ತಾನು ಗರ್ಭ ಧರಿಸದ್ದೇನೆಯೇ" ಎಂಬುದನ್ನು ತಿಳಿಯಲು ಆ ಲೇಡಿ ವೈದ್ಯರ ಬಳಿ ಬಂದಿರುತ್ತಾರೆ ಎಂದು ಅಂದಾಜು. ಅಂದಿನ ಕಾಲದ ಚಿಕಿತ್ಸಾಲಯದ ಸಾಕಷ್ಟು ವಿವರಗಳುಳ್ಳ ಚಿತ್ರ.

This oil painting was created in 1710 by the Flemish artist Gerard Thomas, depicting the place of a senior urine doctor. Other assistants of the doctor are busy with their work. One of the female assistants of the urine doctor is indicating the lady patient to sit on a chair. The lady has come to test her pregnancy. Her child has accompanied her. A dog and a cat are symbolic in such paintings!

72. Urine Doctor – The Iatrochemist



digital.sciencehistory.org By Bilcoq, Marie-Marc-Antoine. The Iatrochemist. https://creativecommons.org/publicdomain/mark/1.0/

ಕಾಯಿಲೆ, ಅನಾರೋಗ್ಯ, ವೈದ್ಯ – ಇವೆಲ್ಲಾ ಇತಿಹಾಸದ ಬಹಳ ಕಾಲ ನಿಗೂಢವಾಗಿಯೇ ಇದ್ದವು. "ಶರೀರ ವಿವಿಧ ರಾಸಾಯನಿಕಗಳ ಮೇಳ" ಎಂಬ ಭಾವನೆ ಹೊಂದಿದ್ದ ರಸಾಯನ ತಜ್ಞರು ಕೂಡ ಹೇರಳವಾಗಿದ್ದರು. ಇವರು ಅನಾರೋಗ್ಯದ ಲಕ್ಷಣಗಳನ್ನು "ಯಾವುದೋ ರಾಸಾಯನಿಕದ ಕೊರತೆ / ಹೆಚ್ಚುವರಿ" ಎಂದು ಭಾವಿಸಿ, ಅದಕ್ಕೆ ತಕ್ಕುದಾದ ರಾಸಾಯನಿಕಗಳನ್ನು ನೀಡುತ್ತಿದ್ದರು. ಅವರ ಅಂದಾಜು ಬಹುಮಟ್ಟಿಗೆ ತಪ್ಪೇ ಆಗಿದ್ದರೂ, ಔಷಧ ವಿಜ್ಞಾನದ ಬೆಳವಣಿಗೆಯಲ್ಲಿ ಮುಂದೆ ಈ ಅಂಶ ಕೂಡ ಪಾತ್ರ ವಹಿಸಿತು. ಮೇರಿ ಮಾರ್ಕ್ ಅಂಟೋನಿ ಬಿಲ್ಕೊ ಎಂಬ ಫ್ರೆಂಚ್ ಚಿತ್ರಗಾರ 1788 ರಲ್ಲಿ ರಚಿಸಿದ ತೈಲ ವರ್ಣಚಿತ್ರದಲ್ಲಿ ಇಂತಹ ಓರ್ವ

ರಸಾಯನ ತಜ್ಞ, ಪೇಲವ ಮುಖಭಾವದ ಸ್ತ್ರೀ ಓರ್ವರಿಗೆ ಯಾವುದೋ ರಾಸಾಯನಿಕ ಮಿಶ್ರಣ ನೀಡುತ್ತಿದ್ದಾರೆ. ಸಣ್ಣ ಮಗುವೊಂದು ಕೆಳಗೆ ಬಿದ್ದಿರುವ ಹೂಜಿಗಳ ಜೊತೆ ಆಡುತ್ತಿದೆ.

This 1788 oil painting by the French artist Marie-Marq-Antoine Bilcoq depicts an iatrochemist. These people believed that the body was an ensemble of chemicals and any disarray in the equilibrium of these chemicals caused illness. Their treatment often consisted of using "corrective chemicals" based on the nature of the illness. Although they were wrong in most of the counts, this approach helped in the development of pharmacology. The painting shows a large stone chamber with such an iatrochemist giving some medication to a pale lady, while her child looks at a few broken pots on the floor. One can see the equipment of iatrochemist in the background.

73. Barber Surgeons with King Henry VIII



"'Henry VIII and the Barber Surgeons', by Hans Holbein the Younger (between 1497 and 1543) and others" by Snapshooter46 is licensed under CC BY-NC-SA 2.0

ವೈದ್ಯಕೀಯ ಚಿಕಿತ್ಸೆಯ ಆರಂಭದಿಂದಲೂ ಔಷಧಿಗಳು ಜೊತೆಯಾಗಿವೆ. ಪ್ರಾಚೀನ ಭಾರತದಲ್ಲಿ ಇದರ ಜೊತೆಗೆ ಶಸ್ತ್ರಚಿಕಿತ್ಸೆ ಕೂಡ ಬೆಳೆದಿತ್ತು. ಆದರೆ, ಗ್ರೀಸ್ ನಾಗರಿಕತೆಯ ಪತನದ ನಂತರ, ಯುರೋಪಿನ ಬಹುತೇಕ ದೇಶಗಳು ಜ್ಞಾನದ ಬೆಳಕನ್ನು ಕಂಡದ್ದು ಕಡಿಮೆ. ಇದಕ್ಕೆ ಕಾರಣಗಳು ಹಲವಾರು. ಶಸ್ತ್ರಚಿಕಿತ್ಸೆಯ ವಿಷಯದಲ್ಲಿ ಮಧ್ಯಕಾಲೀನ ಯುರೋಪ್ ಹೆಚ್ಚೇನೂ ಸಾಧಿಸಲಿಲ್ಲ. ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದವರು ವೈದ್ಯಕೀಯ ತಜ್ಞರಲ್ಲ; ಬದಲಿಗೆ, ಸಣ್ಣ ಗಾತ್ರದ ಚಾಕುಗಳನ್ನು ಸರಿಯಾಗಿ ಬಳಸಬಲ್ಲವರು! ಇದರಲ್ಲಿ ಮುಖ್ಯರಾದವರು ಇತರರ ತಲೆಗೂದಲನ್ನು ಒಪ್ಪವಾಗಿ ಹೆರೆಯುತ್ತಿದ್ದ, ಮುಖಕ್ಷೌರ ಮಾಡುತ್ತಿದ್ದ ಮಂದಿ. ಇವರನ್ನು ಯೂರೋಪಿನಲ್ಲಿ ಆ ದಿನಗಳಲ್ಲಿ ಬಾರ್ಬರ್-ಸರ್ಜನ್ ಎಂದೇ ಕರೆಯುತ್ತಿದ್ದರು. ಇವರು ಯಾವುದೇ ರೀತಿಯ ತರಬೇತಿ ಪಡೆದವರಲ್ಲ. ಬಹುತೇಕರಿಗೆ, ಶರೀರದ ಭಾಗಗಳ ಯಾವುದೇ ಜ್ಞಾನವೂ ಇರಲಿಲ್ಲ! ಆದರೆ, ಸಣ್ಣ ಕತ್ತಿಯನ್ನು ನಾಜೂಕಾಗಿ ಬಳಸುವ ಕಲೆಗಾರಿಕೆ ಇತ್ತು! ಜೊತೆಗೆ, ಅಂದಿನ ಕಾಲದಲ್ಲಿ ಇಂತಹ ಕಲೆಗಳು ಒಂದೇ ಪೀಳಿಗೆಯಲ್ಲಿ ಮುಂದುವರೆಯುತ್ತಿದ್ದವು. ಹೀಗಾಗಿ, ಸಣ್ಣ ವಯಸ್ಸಿನಿಂದ ನೋಡಿ, ಕಲಿತ ಅನುಭವ ಇವರಿಗೆ ಹೇರಳವಾಗಿತ್ತು. ಅನುಭವಜನ್ಯವಾದ ಈ ಕೆಲಸಗಳೇ ಮುಂದೆ ವೈಜ್ಞಾನಿಕ ಶಸ್ತ್ರಚಿಕಿತ್ಸೆಯನ್ನು ಬೆಳೆಸಲು ಕಾರಣವಾದವು. ಮೂಲತಃ ಹ್ಯಾನ್ಸ್ ಹೊಲ್ಬೀನ್ ಎಂಬ ಪ್ರಸಿದ್ಧ ಜರ್ಮನ್

ಚಿತ್ರಕಾರನಿಂದ 1543 ರಲ್ಲಿ ರಚಿಸಲಾದ ತೈಲ ಚಿತ್ರ. 17 ನೆಯ ಶತಮಾನದವರೆಗೆ ಇದನ್ನು ಹಲವಾರು ಚಿತ್ರಕಾರರು ಆಗಾಗ ತಿದ್ದಿದ್ದಾರೆ! 16 ನೆಯ ಶತಮಾನದಲ್ಲಿ ಬ್ರಿಟನ್ ಸಾಮ್ರಾಜ್ಯವನ್ನು ಆಳುತ್ತಿದ್ದ 8 ನೆಯ ಹೆನ್ರಿ ರಾಜ, 1540 ರಲ್ಲಿ ಬಾರ್ಬರ್-ಸರ್ಜನ್ ರಿಗೆ ಸ್ವಾಯತ್ತತೆ ನೀಡಿದ ಚಿತ್ರ. ಅಂದಿನ ಹಲವಾರು ಪ್ರಸಿದ್ಧ ಬಾರ್ಬರ್-ಸರ್ಜನ್ ರನ್ನು ಚಿತ್ರಿಸಲಾಗಿದೆ. ರಾಜನ ಬಲಭಾಗದಲ್ಲಿ ವಿಲಿಯಮ್ ಬಟ್ಸ್ ಮತ್ತು ಜಾನ್ ಛೇಂಬರ್ಸ್, ರಾಜನ ಎಡಭಾಗದಲ್ಲಿ ಥಾಮಸ್ ವಿಕ್ರೆ, ಕ್ರಿಸ್ ಸಮ್ಮನ್, ರಿಚರ್ಡ್ ಫೆರ್ರಿಸ್ ಮುಂತಾದವರು ಚಿತ್ರದಲ್ಲಿದ್ದಾರೆ.

Medications are a part of the treatment from time immemorial. In ancient India, there was a robust development of surgical specialty too. After the fall of Ancient Greece, the academic progress in the European continent was at a very slow pace. Even during the medieval period, Europe had not achieved much in the field of surgery. Those who could use knives performed surgery! This led to the term “barber-surgeon”! These people had no formal training in medicine or human anatomy. Their only advantage was their skill in handling small-sized knives! Since the profession of barbers ran in families, they were exposed to minor surgeries from a young age. The field of scientific surgery stemmed from the experience-based knowledge of barber-surgeons. Originally attributed to the German artist Hans Holbein in 1543, this oil painting has gone through many upgrades from various artists until the end of the 17th century! The painting shows British monarch King Henry the VIII handing over a Royal proclamation to the barber-surgeons of Britain in 1540. One can find the names of various famous barber-surgeons of that era named in the picture.

74. Barber Surgeon – Stone of Madness



Credit: Jan_Sanders_van_Hemessen by Jan Sanders van Hemessen / Public domain https://creativecommons.org/publicdomain/mark/1.0/deed.en

---

16 ನೆಯ ಶತಮಾನದ ಬೆಲ್ಜಿಯಂ ಚಿತ್ರಕಾರ ಜಾನ್ ಸ್ಯಾಂಡರ್ಸ್ ವಾನ್ ಹೆಮೆಸನ್ ಅವರು 1550 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಅಂದಿನ ಕಾಲದಲ್ಲಿ ಮಾನಸಿಕ ವ್ಯಾಧಿಗಳಿಗೆ "ತಲೆಯಲ್ಲಿ ಇರುವ ಹುಚ್ಚಿನ ಕಲ್ಲು ಕಾರಣ" ಎಂದು ನಂಬಲಾಗಿತ್ತು. ತಲೆಯನ್ನು ತೂತು ಮಾಡಿ ಆ ಕಲ್ಲನ್ನು ತೆಗೆಯುವ ಪ್ರಯತ್ನಗಳು ನಡೆದಿದ್ದವು. ಈ ಪ್ರಯತ್ನದಲ್ಲಿ ಆಗುವ ಅಸಾಧ್ಯ ಯಾತನೆಯಿಂದ ರೋಗಿ ಮರಣಿಸಿದ್ದೂ ಉಂಟು. ಅರಿವಳಿಕೆ ಇಲ್ಲದ ಆ ಕಾಲದಲ್ಲಿ ರೋಗಿಯನ್ನು ಗಟ್ಟಿಯಾಗಿ ಕಟ್ಟಿಹಾಕಿ ಇಂತಹ ಕೆಲಸಗಳು ನಡೆಯುತ್ತಿದ್ದವು. ವೈದ್ಯನ ಮುಖಭಾವವನ್ನು ಮೋಸಗಾರನಂತೆ ತೋರಲಾಗಿದೆ. ಈ ಪ್ರಯತ್ನ ನಿಷ್ಫಲ ಎಂದು ಆ ವೈದ್ಯನಿಗೂ ಮತ್ತು ಚಿತ್ರಕಾರನಿಗೂ ತಿಳಿದಿರಬೇಕು. ಮಾನಸಿಕ ವ್ಯಾಧಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಬಹಳ ಕಾಲ ಹಿಡಿಯಿತು.

The famous Flemish artist of 16th century Jan Sanders van Hemessen created this oil painting in 1550. During medieval Europe, the cause of the mental illness was believed to be a stone in the head. Barber-Surgeons of that era performed a procedure to remove the stone by opening the skull. There was no anesthesia during those times. Many people died during such painful procedures. The patient was firmly tied and immobilized before this horrendous procedure. It took many centuries to understand mental disorders.

75. Barber Surgeons – Attending to Soldiers



A barber and a surgeon attending to soldiers. Oil painting by a follower of Hieronymus Janssens. Wellcome Collection. Attribution 4.0 International (CC BY 4.0)

ಯುದ್ಧ ಘೋರವಾದಷ್ಟೂ ವೈದ್ಯರ ಆವಶ್ಯಕತೆ ಹೆಚ್ಚು! ಯುರೋಪಿನ ದೇಶಗಳ ಸಂಘರ್ಷಗಳ ಕತೆ ಇಪ್ಪತ್ತನೆಯ ಶತಮಾನದವರೆಗೂ ನಿಲ್ಲಲಿಲ್ಲ! ಒಂದಲ್ಲ ಒಂದು ಕದನಗಳು ಸಾಮಾನ್ಯವಾಗಿದ್ದವು. ಗಾಯಗೊಂಡ ಸೈನಿಕರಿಗೆ ಪಟ್ಟಿ ಮಾಡಲು, ಚಿಕಿತ್ಸೆ ನೀಡಲು ಸರ್ಜನ್ ರ ಅಗತ್ಯ ಇತ್ತು. ಹಿರೊನೈಮಸ್ ಜನ್ಸೆನ್ ಎಂಬ ಬೆಲ್ಜಿಯನ್ ಚಿತ್ರಕಾರ 17 ನೆಯ ಶತಮಾನದಲ್ಲಿ ರಚಿಸಿದ ಈ ಚಿತ್ರದಲ್ಲಿ ಬಾರ್ಬರ್-ಸರ್ಜನ್ ರು ಗಾಯಗೊಂಡ ಸೈನಿಕರ ಚಿಕಿತ್ಸೆ ಮಾಡುವ ಚಿತ್ರಣವಿದೆ.

Hieronymus Janssens was a 17th Century Flemish genre painter. His school of art is known for compositions depicting elegance in cultured societies. Contrary to the usual works, this painting titled "A barber and a surgeon attending to soldiers" depicts a rustic picture of soldiers being given medical attention.

76. Barber Surgeon at work



The_Surgeon By David Teniers the Younger / Public domain. https://creativecommons.org/publicdomain/mark/1.0/deed.en

---

ಕಿರಿಯ ಡೇವಿಡ್ ಟೆನಿಯರ್ಸ್ ಎಂಬ ಬೆಲ್ಜಿಯಂ ದೇಶದ ಪ್ರಸಿದ್ಧ ಚಿತ್ರಕಾರ 1670 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಅಂದಿನ ಕಾಲದ ಶಸ್ತ್ರಚಿಕಿತ್ಸಕರ ಚಿತ್ರಣ. ಬಿಳಿಯ ಟೋಪಿ ಧರಿಸಿ, ರೋಗಿಯ ಬೆನ್ನನ್ನು ಚುಚ್ಚುತ್ತಿರುವ ವ್ಯಕ್ತಿ ಅಂದಿನ ಬಾರ್ಬರ್-ಸರ್ಜನ್. ಚಿತ್ರದ ಹಿಂಬದಿಯಲ್ಲಿ, ಆತನ ಸಹಾಯಕನೊಬ್ಬ ಮತ್ತೊಬ್ಬ ರೋಗಿಯ ರಕ್ತ ತೆಗೆಯುವ ಸಿದ್ಧತೆ ಮಾಡುತ್ತಿದ್ದಾನೆ. ಇಡೀ ಕೋಣೆಯಲ್ಲಿ ಔಷಧಗಳು, ಮೂಳೆಗಳು ತುಂಬಿವೆ. ಒಂದು ಮಂಗ ಕೂಡ ಇದೆ! ಅಂದಿನ ಕಾಲದ ಬಾರ್ಬರ್-ಸರ್ಜನ್ ಗಳನ್ನು ಲೇವಡಿ ಮಾಡಲು ಟೆನಿಯರ್ಸ್ ಸೇರಿದಂತೆ ಹಲವಾರು ಚಿತ್ರಕಾರರು ಮಂಗಗಳನ್ನು ರೂಪಕವಾಗಿ ಬಳಸಿಕೊಂಡ ಉದಾಹರಣೆಗಳೂ ಇವೆ!

Oil painting by David Teniers the Younger in 1670, showing the surgical set up of a barber-surgeon of the 17th century. The barber-surgeon in the front

is using a sharp instrument over the back of the patient, either to remove something or for phlebotomy. His assistant in the background is tying a tourniquet (for preparation of phlebotomy) in a pale looking man. The place is filled with bones of various animals with many medications. The quintessential monkey is a part of such setups, an allegory used by many painters of those times who ridiculed barber-surgeons.

77. Barber Surgeon in his clinic



Interior of a surgery with a surgeon treating a wound in the arm of a man, with a boy and five other figures. Oil painting by Matthijs Naiveu. Wellcome collection Attribution Attribution 4.0 International (CC BY 4.0)

ಮಥಿಸ್ ನೈವ್ಯು ಎಂಬ ಪ್ರಸಿದ್ಧ ಡಚ್ ಕಲಾವಿದ 1700 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ರೋಗಿಯ ಬಲತೋಳಿಗೆ ಗಾಯ ಮಾಡಿ ರಕ್ತ ಹರಿಸಲು ಆರಂಭಿಸುತ್ತಿರುವ ಬಾರ್ಬರ್-ಸರ್ಜನ್. ಆತನ ಜೊತೆಯಲ್ಲಿ ಸಣ್ಣ ವಯಸ್ಸಿನ ಸಹಚರ ಇದ್ದಾನೆ. ಬದಿಯಲ್ಲಿ ಇಬ್ಬರು ಹೆಂಗಸರು ಮಾತನಾಡುತ್ತಿದ್ದಾರೆ. ಆ ಯುವತಿ ಈ ರೋಗಿಯ ಪತ್ನಿ ಇರಬಹುದು. ಒಳಗಿನ ಕೋಣೆಯಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿರುವ ವ್ಯಕ್ತಿ ಕಾಣುತ್ತಾರೆ. ಇಡೀ ಪ್ರಾಂಗಣ ಉಳ್ಳವರ ಸ್ವತ್ತಿನಂತೆ ಕಾಣುತ್ತದೆ. ಬಾರ್ಬರ್-ಸರ್ಜನ್ ಗಳು ಶಸ್ತ್ರಚಿಕಿತ್ಸೆಯ ಪ್ರವರ್ತಕರು.

This 1700 oil painting by the Dutch artist Matthijs Naiveu shows a barber-surgeon making an incision over the right arm of a person for blood-letting. A young boy is seen assisting him. Two ladies are seen conversing, the younger one is likely the wife of this patient. A person is getting shaved in the interior. The place looks affluent. Barber-surgeons were the pioneers of surgery. Many of them had a good practice and had amassed wealth.

78. Barber Surgeon – Phlebotomy



https://commons.wikimedia.org/wiki/File:1753_Traversi_Operation_anagoria.JPG By Gaspare Traversi / Public domain https://creativecommons.org/publicdomain/mark/1.0/deed.en

---

ಗ್ಯಾಸ್ಪರೆ ಟ್ರವೆರ್ಸಿ ಎಂಬ 18 ನೆಯ ಶತಮಾನದ ಪ್ರಸಿದ್ಧ ಇಟಾಲಿಯನ್ ಚಿತ್ರಕಾರ 1753 ರಲ್ಲಿ ರಚಿಸಿದ್ದ ತೈಲ ವರ್ಣ ಕಲಾಕೃತಿ. ಶರೀರದ ನೋವಿನ ಭಾಗವನ್ನು ಕತ್ತರಿಸಿ, ಅದರಿಂದ "ಕೆಟ್ಟ-ರಕ್ತ" ತೆಗೆದುಹಾಕುವ ಪ್ರಕ್ರಿಯೆ ಓರ್ವ ಬಾರ್ಬರ್-ಸರ್ಜನ್ ರಿಂದ ನಡೆಯುತ್ತಿದೆ. ರೋಗಿಗೆ ಪ್ರಾಯಶಃ ಅಪೆಂಡಿಕ್ಸ್ ಸಮಸ್ಯೆ ಇದ್ದಿರಬಹುದು. ಅವರ ಇಬ್ಬರು ಸಹಾಯಕರು ರೋಗಿಯನ್ನು ಬಲವಾಗಿ ಹಿಡಿದಿದ್ದಾರೆ. ಆ ಕಾಲಕ್ಕೆ ಇನ್ನೂ ಅರಿವಳಿಕೆ ಪತ್ತೆಯಾಗಿರಲಿಲ್ಲ. ಹೀಗಾಗಿ, ರೋಗಿಗಳಿಗೆ ಇಂತಹ ಯಾತನೆ ಸಹಿಸದೆ ಬೇರೆ ದಾರಿ ಇರಲಿಲ್ಲ.

Another famous oil painting by the famous Italian painter Gaspare Traversi in 1753. A barber-surgeon is using a sharp instrument for the phlebotomy of

a man, who was possibly suffering from appendicitis. Two assistants of the barber-surgeon are holding the man tight to ensure immobilization. Anesthesia was still a distant dream at that time. Hence, patients had hardly an option other than bearing the pain.

79. Human Anatomy and Dissection



Rembrandt – The Anatomy Lesson of Dr Nicolaes Tulp. Rembrandt, Public domain, via Wikimedia Commons https://creativecommons.org/publicdomain/mark/1.0/deed.en

---

ಮಾನವ ಶರೀರದ ರಚನೆಯ ಬಗ್ಗೆ ಅರಿಯಲು ಮೃತ ದೇಹಗಳನ್ನು ಕತ್ತರಿಸಿ ಪರೀಕ್ಷಿಸುವ ವಿಧಾನಕ್ಕಿಂತ ಉತ್ತಮವಾದದ್ದು ಮತ್ತೊಂದಿಲ್ಲ. ಆದರೆ, ಪ್ರಾಚೀನ ಕಾಲದಲ್ಲಿ ಸಾಮಾಜಿಕ ಕಟ್ಟಳೆಗಳು ಇದಕ್ಕೆ ಅಡ್ಡಿಯಾಗುತ್ತಿದ್ದವು. ಹೀಗಾಗಿ, ಪ್ರಾಣಿಗಳನ್ನು ಕತ್ತರಿಸಿ, ಅದರಿಂದ “ಮನುಷ್ಯನ ಶರೀರದ ರಚನೆಯೂ ಹೀಗೆಯೇ ಇರಬಹುದು” ಎಂಬ ಅಂದಾಜಿನ ತಿಳುವಳಿಕೆ ಇರುತ್ತಿತ್ತು. ಜೊತೆಗೆ, ಶಸ್ತ್ರಚಿಕಿತ್ಸೆ ಅಭಿವೃದ್ಧಿ ಆಗದಿದ್ದ ಕಾಲದಲ್ಲಿ ಇದರಿಂದ ಹೆಚ್ಚೇನೂ ವ್ಯತ್ಯಾಸ ಆಗುತ್ತಿರಲಿಲ್ಲ! ಆದರೆ, ಮಾನವ ದೇಹದ ರಚನೆಯನ್ನು ನಿಖರವಾಗಿ ಅರಿಯುವುದು ಭವಿಷ್ಯದ ಜ್ಞಾನಪ್ರಾಪ್ತಿಯ ದೃಷ್ಟಿಯಿಂದ ಬಹಳ ಮುಖ್ಯ ಎಂದು ಅರಿತ ಕೆಲವು ಸಾಹಸಿಗರು, ಇದನ್ನು ಕಷ್ಟಪಟ್ಟು ಸಾಧಿಸಿದರು. 16 ನೆಯ ಶತಮಾನದಲ್ಲಿ ಬೆಲ್ಜಿಯಂ ದೇಶದ ವೈದ್ಯ ಅಂಡ್ರೆ ವೆಸಲಿಯಸ್ ಸಾಕಷ್ಟು ವಿರೋಧಗಳ ನಡುವೆಯೂ ಈ ನಿಟ್ಟಿನಲ್ಲಿ ಗಮನೀಯ ಪ್ರಗತಿ ಸಾಧಿಸಿದರು. ನಂತರ, ವೈದ್ಯಕೀಯ ವ್ಯಾಸಂಗದಲ್ಲಿ ಈ ವಿಧಾನ ಅಧಿಕೃತವಾಯಿತು. ರೆಂಬ್ರಾಂಟ್ ಹರ್ಮನ್ಸೂನ್ ಎನ್ನುವ 17 ನೆಯ

ಶತಮಾನದ ಅಸಾಧಾರಣ ಖ್ಯಾತಿಯ ಡಚ್ ಕಲಾವಿದನ ತೈಲ ವರ್ಣಕೃತಿ. ಇದು ರಚನೆ ಆದದ್ದು 1634 ರಲ್ಲಿ. ನಿಕೋಲಸ್ ಟೂಲ್ಪ್ ಎಂಬ ಪ್ರಸಿದ್ಧ ವೈದ್ಯ ಇತರ ವೈದ್ಯರಿಗೆ ಶರೀರ ಶಾಸ್ತ್ರದ ಪಾಠ ಮಾಡುತ್ತಿರುವುದನ್ನು ಸೂಚಿಸುವ ಚಿತ್ರ. ಮೃತದೇಹದ ಎಡಗೈ ಮಾಂಸಖಂಡಗಳ ವಿವರಣೆಯನ್ನು ನೀಡಲಾಗುತ್ತಿದೆ. ಮೃತ ದೇಹವನ್ನು ಅರಿಸ್ ಕಿಂಡ್ಟ್ ಎಂಬ ಅಪರಾಧಿಯದ್ದು ಎಂದು ಗುರುತಿಸಲಾಗಿದೆ. ಮೃತನ ಮುಖದ ಮೇಲೆ ಭಾಗಶಃ ನೆರಳಿನ ಛಾಯೆ ಇದೆ. ಇದು ರೆಂಬ್ರಂಟ್ ಅವರು ತಮ್ಮ ಚಿತ್ರಗಳಲ್ಲಿ ಮೃತರನ್ನು ತೋರುವ ವಿಶಿಷ್ಟ ಶೈಲಿ. ಮುಖದ ಭಾವಗಳಿಂದ ಮೊದಲುಗೊಂಡು, ಪ್ರತಿಯೊಂದು ವಿವರವೂ ಅತ್ಯಂತ ಸ್ಪಷ್ಟವಾಗಿ ಮೂಡಿದೆ.

There is no better alternative to the dissection of cadavers for learning human anatomy. However, many social customs of medieval Europe prevented this. Anatomy was taught by dissecting animals and extrapolating the speculations to humans. This led to inaccurate learning. As the surgical practice was not prevalent, accurate assessment of human anatomy did not matter much. Few of the brave physicians by the 16th century realized the need for an accurate understanding of human anatomy and ventured into the dissection of the human cadavers despite stiff opposition from society. One of such pioneers was the 16th century Flemish anatomist Andreas Vesalius. Over a while, the opposition from society weaned and the dissection of the human cadaver became a standard of learning. An artist of extraordinary fame, Rembrandt Harmenszoon created this oil painting by 1634, depicting the anatomy lesson of Dr. Nicolaes Tulp. The painting is presently located in the Mauritshuis museum at Hague in the Netherlands. Dr. Tulp is seen explaining the muscles of the left forearm to medical men of those times. The cadaver belonged to a criminal named Aris Kindt. It is Rembrandt’s signature style to partially shade the faces of the dead, in contrast to those alive.

80. Human Anatomy and Dissection of a dead newborn



"File:The anatomy of Dr Frederick Ruysch. Oil painting by B. F. La Wellcome V0017132.jpg" is licensed under CC BY 4.0

ಬಿ ಎಫ್ ಲ್ಯಾಂಡಿಸ್ ಎನ್ನುವ 20 ನೆಯ ಶತಮಾನದ ಬ್ರಿಟಿಷ್ ಕಲಾವಿದನ ತೈಲ ವರ್ಣಕೃತಿ. ಮೂಲತಃ, 17 ನೆಯ ಶತಮಾನದ ಜಾನ್ ವಾನ್ ನೆಕ್ ಎನ್ನುವ ಡಚ್ ಕಲಾವಿದನ ಕೃತಿಯನ್ನು ಲ್ಯಾಂಡಿಸ್ ಅವರು 1910 ರಲ್ಲಿ ಮಾರ್ಪಡಿಸಿದರು. ಫ್ರೆಡ್ರಿಕ್ ರುಯ್ಷ್ ಎಂಬ ಡಚ್ ಅಂಗರಚನಾ ಶಾಸ್ತ್ರಜ್ಞ, ಹುಟ್ಟುತ್ತಲೇ ಮರಣಿಸಿದ್ದ ನವಜಾತ ಶಿಶುವಿನ ಶರೀರದ ರಚನೆಯನ್ನು ಕೆಲವು ವೈದ್ಯರಿಗೆ ವಿವರಿಸುವ ಚಿತ್ರ.

An artistic modification of a 17th-century painting of Dutch artist Jan Van Neck by another 20th-century British artist B. F. Landis in 1910. The painting depicts Dr. Frederick Ruysch dissecting the body of a dead newborn with the intact placenta and explaining the anatomy to a few reputed medical personnel of that era.

81. Human Anatomy and Dissection Classes



"Michiel van Mierevelt - Anatomy Lessons of dr. Willem van der Meer" by farlukar is licensed under CC BY-NC-SA 2.0

ಮೈಕೆಲ್ ವಾನ್ ಮೀರೆವೆಲ್ಟ್ ಮತ್ತು ಪೀಟರ್ ವಾನ್ ಮೀರೆವೆಲ್ಟ್ ಎನ್ನುವ ಸುಪ್ರಸಿದ್ಧ ತಂದೆ-ಮಗ ಜೋಡಿ ಡಚ್ ಕಲಾವಿದರು 1617 ನೆಯ ಇಸವಿಯಲ್ಲಿ ರಚಿಸಿದ ತೈಲ ವರ್ಣಚಿತ್ರ. 16 ನೆಯ ಶತಮಾನದ ಸುಪ್ರಸಿದ್ಧ ಡಚ್ ವೈದ್ಯ ವಿಲ್ಲೆಮ್ ವಾನ್ ಡೆರ್ ಮೀರ್ ನಡೆಸುತ್ತಿದ್ದ ಅಂಗರಚನಾ ಶಾಸ್ತ್ರದ ತರಗತಿಗಳು ಬಹಳ ಹೆಸರು ಮಾಡಿದ್ದವು. ಮೃತದೇಹದ ಒಳಗಿನ ಅಂಗಗಳನ್ನು ಬಹಳ ವಿವರವಾಗಿ ತೋರುತ್ತಿದ್ದ ಈ ವೈದ್ಯರ ತರಗತಿಗಳಿಗೆ ಅಂದಿನ ಹೆಸರಾಂತ ವೈದ್ಯರೆಲ್ಲರೂ ಬರುತ್ತಿದ್ದರು.

A famous Dutch artist father-son duo of Michiel van Mierevelt and Pieter

van Mierevelt created this oil painting in 1617, commemorating the anatomy classes of the renowned Dutch physician Dr. Willem van der Meer. These sessions were very famous for their detail, precision, and craft. Many of the famed physicians came from far off places to attend these sessions.

82. Human Anatomy and Dissection Demonstrations



"File:John Banester giving the visceral lecture at Barber-Surgeons Wellcome V0017773.jpg" is licensed under CC BY 4.0

ಜಾನ್ ಬ್ಯಾನಿಸ್ಟರ್ ಎಂಬ ಬ್ರಿಟಿಷ್ ವೈದ್ಯರು 1581 ರಲ್ಲಿ ಮೃತದೇಹಗಳನ್ನು ಕತ್ತರಿಸಿ, ಅಂದಿನ ಕಾಲದ ವೈದ್ಯರಿಗೆ ಮಾನವ ಶರೀರ ರಚನೆಯ ಪರಿಚಯ ಮಾಡಿಸುವಲ್ಲಿ ನಿಪುಣರಾಗಿದ್ದರು. ಜೀವಂತ ಶರೀರದ ಮೇಲ್ಭಾಗ, ಮೃತದೇಹದ ಒಳಭಾಗ, ಮತ್ತು ಮಾನವ ಅಸ್ಥಿಪಂಜರಗಳ ನೆರವಿನಿಂದ ಬಹಳ ವಿವರವಾಗಿ ಮಾಡುತ್ತಿದ್ದ ಅವರ ಪ್ರವಚನಗಳು ಬಹಳ ಜನಪ್ರಿಯವಾಗಿದ್ದವು. ಇಂತಹ ಒಂದು ತರಗತಿಯನ್ನು 1920 ರಲ್ಲಿ ಬ್ರಿಟಿಷ್ ಚಿತ್ರಕಾರ ಜಾಕ್ ಓರ್ ಅವರು ಪುನರ್ನಿರ್ಮಾಣ ಮಾಡಿ ತೋರಿದ್ದಾರೆ.

This 1920 oil painting by the British artist Jack Orr shows an event of 1581. The famous 16th-century anatomist John Banister is seen in the painting conducting dissection of a cadaver and teaching an elite group of Barber-Surgeons in London with the help of a human skeleton. The instruments used for the surgery are found on the table.

83. Portrayal of Five Senses – Blind Leading the Blind



"File:The blind leading the blind. Oil painting after Pieter Brueg Wellcome V0017252.jpg" is licensed under CC BY 4.0

"ಒಬ್ಬ ಕುರುಡನಿಗೆ ಮತ್ತೊಬ್ಬ ಕುರುಡ ದಾರಿ ತೋರುವ" ಸಂಕೇತ ಬಹಳ ಪ್ರಾಚೀನ. ಈ ಮಾತಿಗೆ ಮೂಲ ಕಠೋಪನಿಷತ್ತಿನಲ್ಲಿ ಹೇಳುವ "???????? ??????? ?????????" ಎಂಬ ನುಡಿ. 1568 ರಲ್ಲಿ ಡಚ್ ಕಲಾವಿದ ಹಿರಿಯ ಪೀಟರ್ ಬ್ರುಯ್ಗೆಲ್ ಈ ಪ್ರಸಿದ್ಧ ಚಿತ್ರವನ್ನು ರಚಿಸಿದ್ದಾರೆ. ಬೈಬಲ್ ನಲ್ಲಿ ಕೂಡ ಮ್ಯಾಥ್ಯೂ ಅವರ ಸುವಾರ್ತೆಯಲ್ಲಿ ಈ ಸಂಕೇತವಿದೆ. ಇದರಲ್ಲಿ ಆರು ಮಂದಿ ಅಂಧರು ಇದ್ದಾರೆ. ಅವರ ಅಂಧತ್ವಕ್ಕೆ ವಿಭಿನ್ನ ಕಾರಣ ಸೂಚಿಸಿದೆ. ಒಬ್ಬರಿಗೆ ಮಸೂರದ ಮುಂದಿನ ಕಾರ್ನಿಯಾ ಮಸುಕಾಗಿದೆ. ಒಬ್ಬರ ಕಣ್ಣುಗುಡ್ಡೆ ತೆಗೆದುಹಾಕಲಾಗಿದೆ. ಒಬ್ಬರು ಜನ್ಮತಃ ಕಣ್ಣಿಲ್ಲದವರು – ಹೀಗೆ. ಕೆಲವರು ಮುಖ ಮೇಲೆ ಎತ್ತಿ ನಡೆದಿದ್ದಾರೆ. ಎಲ್ಲರಿಗಿಂತ ಮುಂದೆ ಇರುವ ಅಂಧ ಹಳ್ಳದಲ್ಲಿ ಬಿದ್ದಿದ್ದಾರೆ. ಅವರ ಹಿಂದೆ ಇರುವವರು ತಾವು ಬೀಳುವ ಕ್ರಿಯೆಯನ್ನು ಗ್ರಹಿಸಿ, ಮುಖವನ್ನು ಬದಿಗೆ ತಿರುಗಿಸಿದ್ದಾರೆ. ಕೋಲು ಹಿಡಿದಿರುವ ಮೂರನೆಯ ಅಂಧ ನಿಂತಂತಿದೆ. ಆದರೆ ಹಿಂದೆ ಇರುವವರಿಗೆ ಇದು ತಿಳಿದಿಲ್ಲ, ಅವರು ಮುಂದೆ ಚಲಿಸಿ, ಎಲ್ಲರೂ ಬೀಳುವ ಸಾಧ್ಯತೆ ಇದೆ. ಚಿತ್ರದ ಪ್ರತಿಯೊಂದು ವಿವರವೂ ಅತ್ಯಂತ ನೈಜವಾಗಿ ಮೂಡಿದೆ. ಈ ಚಿತ್ರದ ವಿನ್ಯಾಸ, ಕಲೆಗಾರಿಕೆ, ತಂತ್ರಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ!

"Blind Leading the Blind" is a famous allegory which can be traced to the ancient Indian wisdom. The "Katha" Upanishad of Vedas gives this allegory. This parable is found in the Bible, as given by the Gospel of Matthew the Apostle. This 1568 painting by the Dutch artist Pieter Bruegel the Elder has been of enormous interest to artists worldwide. The painting shows six blind men following one-another. One has corneal opacity; the eyes of another are enucleated; one seems to be congenitally blind; one seems to be blind due to some disease. The first blind man in the line has fallen into a ditch. The one next to him has sensed the inevitable falling and has turned his face to a side to avoid facial injury. The third blind man in the series has stood steady sensing the event, but the other three are still in their movement. If they continue, then everyone will trip and fall. Every single detail in the painting is extremely accurate – be the expressions of blind people or the creation of the depth. From an artistic and medical perspective, this is a widely analyzed painting.

84. Portrayal of Five Senses – Blind Leading the Blind



The_Blind_leading_the_Blind.jpg by Sebastiaen Vrancx / Public domain https://creativecommons.org/publicdomain/mark/1.0/deed.en

ಇದೇ ವಿಷಯದ ಬಗ್ಗೆ ಡಚ್ ಕಲಾವಿದ ಸೆಬಾಸ್ಟಿಯನ್ ವ್ರಂಕ್ಸ್ ಅವರು 1610 ರಲ್ಲಿ ರಚಿಸಿರುವ ತೈಲ ವರ್ಣಚಿತ್ರವನ್ನು ಗಮನಿಸಬಹುದು. ಇದರಲ್ಲಿ ಐದು ಮಂದಿ ಅಂಧರನ್ನು ತೋರಿದ್ದಾರೆ. ಕಿರಿದಾದ ಸೇತುವೆಯನ್ನು ದಾಟುವ ಯತ್ನದಲ್ಲಿ ಎಲ್ಲರಿಗಿಂತ ಮುಂದೆ ಇರುವವರು ನೀರಿಗೆ ಬಿದ್ದು ಹೋಗಿದ್ದಾರೆ. ಅವರನ್ನು ಮಾರ್ಗದರ್ಶನ ಮಾಡುತ್ತಿದ್ದ ನಾಯಿ ಕೂಡ ಬೀಳುವುದರಲ್ಲಿದೆ. ಗಾಬರಿಗೊಂಡಿರುವ ಎರಡನೆಯ ಅಂಧ ಬಹಳ ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದಾರೆ. ಅವರು ಮೂರನೆಯವರ ನಿಲುವಂಗಿಯನ್ನು ಜಗ್ಗಿದ್ದಾರೆ. ಹಿಂದೆ ನಿಂತಿರುವ ಇಬ್ಬರಿಗೆ ಪರಿಸ್ಥಿತಿಯ ಅರಿವು ಇನ್ನೂ ಬಂದಿಲ್ಲ.

A similar 1610 oil painting on the same theme by the Dutch artist Sebastian Vrancx shows five blind men trying to cross a narrow bridge. The one leading them has already fallen into the water. The guiding dog is about to fall. The second blind man is in a very difficult position of helping the first and stooping the rest. He is pulling the coat of the third. The last two are blissfully unaware of what has happened. Landscape and detailing are done with finesse.

85. Portrayal of Five Senses – Olfaction



"Unconscious patient / Allegory of smell / Rembrandt" by FlickrDelusions is licensed under CC BY-NC-SA 2.0

17 ನೆಯ ಶತಮಾನದ ಪ್ರಸಿದ್ಧ ಡಚ್ ಚಿತ್ರಕಾರ ರೆಂಬ್ರಾಂಟ್ ಅವರು ಜ್ಞಾನೇಂದ್ರಿಯಗಳ ಬಗ್ಗೆ ರಚಿಸಿರುವ ಚಿತ್ರಗಳಲ್ಲಿ ಒಂದು. ಇದರಲ್ಲಿ ಪ್ರಜ್ಞೆ ತಪ್ಪಿರುವ ವ್ಯಕ್ತಿಗೆ ತೀಕ್ಷ್ಣವಾದ ವಾಸನೆಯನ್ನು ಮೂಗಿಗೆ ಹಿಡಿದು, ಮೆದುಳನ್ನು ಎಬ್ಬಿಸುವ ಪ್ರಯತ್ನ ನಡೆಯುತ್ತಿದೆ. ಇದು ಘ್ರಾಣೇಂದ್ರಿಯಕ್ಕೆ ಉದಾಹರಣೆ. ಚಿತ್ರದ ರಚನೆ 1624 ನೆಯ ಇಸವಿ.

This is another oil painting in the “Senses” series of Rembrandt, painted in 1624. This painting is about the sense of olfaction or smell. A strong smell is held across the nose of an unconscious person to enable the awakening of his brain. A worried rich man is witnessing the proceedings.

86. Portrayal of Five Senses - Hearing



"Three Musicians (Allegory of Hearing" by lluisribesmateu1969 is licensed under CC BY-NC 2.0

17 ನೆಯ ಶತಮಾನದ ಪ್ರಸಿದ್ಧ ಡಚ್ ಚಿತ್ರಕಾರ ರೆಂಬ್ರಾಂಟ್ ಅವರು ಜ್ಞಾನೇಂದ್ರಿಯಗಳ ಬಗ್ಗೆ ರಚಿಸಿರುವ ಚಿತ್ರಗಳಲ್ಲಿ ಒಂದು. 1625 ರಲ್ಲಿ ರಚಿತವಾದ ಇದರಲ್ಲಿ ಮೂವರು ಹಾಡುಗಾರರ ಚಿತ್ರಣವಿದೆ. ಇದು ಶ್ರವಣೇಂದ್ರಿಯಕ್ಕೆ ಉದಾಹರಣೆ.

This is another oil painting in the “Senses” series of Rembrandt, painted in 1625. This painting is about the sense of hearing. The painting shows three singers involved in the recitation of an epic. The man with glasses has the book to guide them through.

87. Portrayal of Five Senses – Pain and Skin



"The Stone Operation (Allegory of Touch)" by lluisribesmateu1969 is licensed under CC BY-NC 2.0

17 ನೆಯ ಶತಮಾನದ ಪ್ರಸಿದ್ಧ ಡಚ್ ಚಿತ್ರಕಾರ ರೆಂಬ್ರಾಂಟ್ ಅವರು ಜ್ಞಾನೇಂದ್ರಿಯಗಳ ಬಗ್ಗೆ ರಚಿಸಿರುವ ಚಿತ್ರಗಳಲ್ಲಿ ಒಂದು. 1625 ರಲ್ಲಿ ರಚಿತವಾದ ಈ ಚಿತ್ರದಲ್ಲಿ ಚೂಪಾದ ವಸ್ತುವಿನಿಂದ ತಲೆಯನ್ನು ಚುಚ್ಚುತ್ತಿರುವ ದೃಶ್ಯವಿದೆ. ಇದು ಸ್ಪರ್ಶೇಂದ್ರಿಯಕ್ಕೆ ಉದಾಹರಣೆ

This is another oil painting in the “Senses” series of Rembrandt, painted in 1625. This painting is about the sense of touch. A barber-surgeon appears to be pricking the head of a man, who is stiffening his entire body to bear the pain. An aged assistant is holding the candle for light. A set of surgical instruments are also shown.

88. Portrayal of Five Senses - Taste



"The bitter potion, Adriaen Brouwer" by moedermens is licensed under CC BY 2.0

ಕೇವಲ 33 ವರ್ಷಗಳ ಕಾಲ ಮಾತ್ರ ಬದುಕಿದ್ದ ಬೆಲ್ಜಿಯನ್ ಚಿತ್ರಕಾರ ಅಡ್ರಿಯನ್ ಬ್ರೌವರ್ 1638 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಅತ್ಯಂತ ಕಹಿಯಾದ ಔಷಧ ಕುಡಿದಿರುವ ಈ ವ್ಯಕ್ತಿಯ ಮುಖಭಾವ ವರ್ಣಿಸಲು ಅತೀ ಕಷ್ಟ! ಬಹಳ ನೈಜವಾಗಿ ಮೂಡಿ ಬಂದಿರುವ ಈ ಚಿತ್ರದಲ್ಲಿ ಈ ವ್ಯಕ್ತಿ ಪ್ರಾಯಶಃ ಪೆರು ದೇಶದಿಂದ ಬರುತ್ತಿದ್ದ ಸಿಂಕೊನಾ ತೊಗಟೆಯಿಂದ ಮಾಡಿದ ಮಲೇರಿಯಾ ಔಷಧಿ ಸೇವಿಸಿದ್ದಾನೆ ಎಂದು ಪರಿಣತರ ಅಭಿಮತ! ಒಳ್ಳೆಯ ಆಹಾರ ಸೇವಿಸಿದಾಗ ಅರಳುವ ಇಂದ್ರಿಯಗಳು, ಕಹಿಯನ್ನು ಸೇವಿಸಿದಾಗ ಹೇಗೆ ಮುದುಡುತ್ತವೆ ಎಂಬ ಚಿತ್ರಣ. ಇದು ಸ್ವತಃ ಚಿತ್ರಕಾರನ ತನ್ನ ಸ್ವಂತ ಚಿತ್ರ ಎಂದು ಕೆಲವರ ನಂಬಿಕೆ! ಬ್ರೌವರ್ ಅವರ ಚಿತ್ರಗಳ ಪೈಕಿ ಇದು ಬಹಳ ಹೆಸರು ಮಾಡಿದ ಚಿತ್ರ. ಜೊತೆಗೆ, ಸಿಂಕೊನಾ ತೊಗಟೆಯ ಕಷಾಯದ ಕಹಿ ಎಷ್ಟಿತ್ತು ಎಂದು ಇಂದಿನ ಪೀಳಿಗೆಗೆ ತೋರುವ ಕೃತಿ ಕೂಡ.

The famed Flemish artist Adrian Brouwer died at a young age of 33 before leaving a few wonderful paintings. This 1638 oil painting is the honest facial expression of a man consuming an extremely bitter medicine – most likely the decoction of cinchona bark for the treatment of a fever episode due to malaria! While most of the painters would present happy faces during a gastronomic feast, Brouwer chose the other side! Few believe that the painting was of his own! One can speculate the taste of cinchona bark based medicine, which later was transformed to Quinine!

89. Portrayal of Five Senses – Pain and Skin



"File:A man removing a plaster; representing the sense of touch. Wellcome L0076240.jpg" by Lucas Franchoys the Younger is licensed under CC BY 4.0

ಚರ್ಮಕ್ಕೆ ಬಿಗಿಯಾಗಿ ಹಚ್ಚಿರುವ ಅಂಟುಪಟ್ಟಿಯನ್ನು ಕೀಳುವುದು ಎಷ್ಟು ನೋವಿನ ಅನುಭವ ಎಂಬುದು ಪ್ರಾಯಶಃ ಎಲ್ಲರಿಗೂ ತಿಳಿದಿದೆ! ಚರ್ಮದ ಸ್ಪರ್ಶ ಸಂವೇದನೆಯನ್ನು ತೋರುವ ಈ ತೈಲವರ್ಣ ಚಿತ್ರವನ್ನು

1650 ರಲ್ಲಿ ಬೆಲ್ಜಿಯನ್ ಕಲಾವಿದ ಕಿರಿಯ ಲೂಕಸ್ ಫ್ರಾಂಕಾಯ್ಸ್ ರಚಿಸಿದ್ದಾರೆ. ಚರ್ಮದ ಮೇಲಿನ ಅಂಟುಪಟ್ಟಿ ಕೀಳುತ್ತಿರುವ ವ್ಯಕ್ತಿಯ ಮುಖದಲ್ಲಿ ನೋವು ಎದ್ದು ಕಾಣುತ್ತಿದೆ.

This 1650 oil painting titled "A man removing a plaster; representing the sense of touch" by the 17th century Flemish Baroque painter Lucas Franchoys II is an allegory representing the sense of touch, one of the five senses, illustrated by the pain experienced by the man removing plaster from his arm.

90. Portrayal of Five Senses - Taste



A man standing by a fire place, pulling a peculiar face after taking some medicine. Coloured etching by J. Gillray, 1800. Wellcome Collection. Attribution 4.0 International (CC BY 4.0)

ಬ್ರಿಟಿಷ್ ವ್ಯಂಗ್ಯಚಿತ್ರಕಾರ ಜೇಮ್ಸ್ ಗಿಲ್ರೇ ಅವರು 1800 ರಲ್ಲಿ ರಚಿಸಿದ ವರ್ಣಚಿತ್ರ. ಥಂಡಿ ದೇಶಗಳಲ್ಲಿ ಬಿಸಿ ಕಾಯಿಸಲು ಇರುವ ಬೆಂಕಿಯ ಸ್ಥಾನದ ಮುಂದೆ ನಿಂತಿರುವ ವ್ಯಕ್ತಿಯೊಬ್ಬ ಪ್ರಾಯಶಃ ಕಹಿ ಔಷಧವನ್ನು ಭಾಗಶಃ ಕುಡಿದ ನಂತರ ತೋರುತ್ತಿರುವ ಮುಖಭಾವ. ಮಲೇರಿಯಾ ರೋಗಕ್ಕೆ ನೀಡುತ್ತಿದ್ದ ಸಿಂಕೋನ ತೊಗಟೆಯ ಔಷಧ ವಿಪರೀತ ಕಹಿ ಇತ್ತು. ಅಂದಿನ ದಿನಗಳಲ್ಲಿ ಔಷಧ ಎಂದರೆ, ಅದರ ಕಹಿಗೆ ಮುಖ ಮುದುಡುವಂತೆ ಆಗುತ್ತಿತ್ತು. ಅದೇ ವಿಷಯದ ಚಿತ್ರ ಇದು.

This 1800 colored lithograph by the British artist James Gillray shows a sick-looking man standing in front of a hearth with a dull face after drinking some bitter medicine, probably the decoction of cinchona bark. Medicine was always equated with bitterness on those days! Apart from suffering the hardships of disease, the patient had to tolerate the problems of bitter medicines. This picture effectively depicts the feelings of such a situation.

91. Dentists of yore - Tooth Plucking Horseman



An Italian market-place with a tooth-drawer on horseback. Oil painting by or after Hendrick Mommers. Wellcome Collection. Attribution 4.0 International (CC BY 4.0)

---

17 ನೆಯ ಶತಮಾನದ ಪ್ರಖ್ಯಾತ ಡಚ್ ಚಿತ್ರಕಾರ ಹೆಂಡ್ರಿಕ್ ಮೊಮ್ಮೆರ್ಸ್ 1650 ರ ಸುಮಾರಿಗೆ ರಚಿಸಿರುವ ತೈಲ ವರ್ಣಚಿತ್ರ. ಶರೀರದ ವೈದ್ಯವೇ ಸರಿಯಾಗಿ ಬೆಳೆಯದ ಅಂದಿನ ಕಾಲದಲ್ಲಿ ದಂತವೈದ್ಯವನ್ನು ಕೇಳುವವರು ಯಾರೂ ಇರಲಿಲ್ಲ. "ಹೆರಿಗೆಯ ನೋವನ್ನು ಬಿಟ್ಟರೆ ಹಲ್ಲಿನ ನೋವೇ ಎಲ್ಲ ನೋವುಗಳಿಗಿಂತ ತೀವ್ರ" ಎನ್ನುವ ಮಾತು ಜನಜನಿತವಾಗಿತ್ತು. ನೋವು ಕೊಡುತ್ತಿದ್ದ ಹಲ್ಲುಗಳನ್ನು ಕಿತ್ತು ಹಾಕುವುದೊಂದೇ ಚಿಕಿತ್ಸೆ! ಆದರೆ, ಅದೂ ಕೂಡ ಯಾತನಾಮಯ. ಹೀಗಾಗಿ, ಊರಿಂದ ಊರಿಗೆ ತಿರುಗುತ್ತಾ, ಸಂತೆಗಳಲ್ಲಿ "ಹಲ್ಲು ಕೀಳುವ ಅಶ್ವಾರೋಹಿ"ಗಳು ಇರುತ್ತಿದ್ದರು. ತಮ್ಮ ಕುದುರೆಯ ಮೇಲೆ ಕೂತು, ಆ ಎತ್ತರದಿಂದ ಸಾಧ್ಯವಾದಷ್ಟೂ ಕಡಿಮೆ ಸಮಯದಲ್ಲಿ ಹಲ್ಲು ಕೀಳುತ್ತಿದ್ದ ಇವರ ವೃತ್ತಿ ಲಾಭದಾಯಕವಾಗಿತ್ತು. ಸಂತೆಗಳಲ್ಲಿ

ಸ್ವಲ್ಪ ನಶೆ ಏರಿಸಿ, ಈ ರೀತಿ ಹಲ್ಲು ಕೀಳಿಸಿಕೊಳ್ಳುವ ಧೈರ್ಯಸ್ಥ ಮಂದಿ ಇದ್ದರು! ಈ ಚಿತ್ರದಲ್ಲಿ ಇಂತಹ ಒಂದು ಪ್ರಸಂಗವನ್ನು ತೋರಿದೆ.

17th-century Italian painter Hendrick Mommers has created this oil painting in 1650. Scientific dentistry was yet to develop in those times. “Dental pain is only next to the delivery pain” is a popular saying in many countries! Plucking the tooth that pained formed the treatment! Since there was no anesthesia, plucking the tooth was a very painful procedure. Few “tooth plucking horsemen” used to roam around various places. They would do the work sitting on horseback, which gave them a vantage view. Their expertise enabled them to do the work very fast. During gathering or fests, dental patients would get this painful job done under the influence of alcohol. One such incident is seen in this painting.

92. Dentists of yore - Blacksmith Dentist



A rustic blacksmith turned tooth-drawer extracting a tooth from an anxious female patient, her husband observes the situation smugly. Coloured mezzotint after J. Harris the elder. Wellcome Collection. Attribution 4.0 International (CC BY 4.0)

ಹಲ್ಲು ಕಿತ್ತುವ ಅಭಿಯಾನವನ್ನು ಇತಿಹಾಸದಲ್ಲಿ ಮೊದಲ ಆರಂಭಸಿದವರು ಲೋಹದ ಕೆಲಸ ಮಾಡುತ್ತಿದ್ದ ಕಮ್ಮಾರರು. ತಮ್ಮ ಕೌಶಲ್ಯವನ್ನು ಬಳಸಿ, ಅದಕ್ಕೆ ತಕ್ಕುದಾದ ಚಿಮ್ಮಟಗಳನ್ನು ತಯಾರಿಸಿ ಇಟ್ಟುಕೊಳ್ಳುತ್ತಿದ್ದರು. ಅದನ್ನು ಬಳಸಿದರೂ ಹಲ್ಲು ತೆಗೆಯುವ ಕೆಲಸ ಸುಲಭವೇನೂ ಆಗಿರಲಿಲ್ಲ! ವಯಸ್ಸಾದವರು ಮತ್ತು ಹೆಂಗಸರು ಜಾತ್ರೆಗಳಲ್ಲಿ ಹಲ್ಲು ತೆಗೆಸಿಕೊಳ್ಳುವುದು ಶಕ್ಯವಿರಲಿಲ್ಲ. ಅಂತಹವರಿಗೆ ಕಮ್ಮಾರರು ನೆರವಾಗುತ್ತಿದ್ದರು. 18-19 ನೆಯ ಶತಮಾನದ ಪ್ರಸಿದ್ಧ ಬ್ರಿಟಿಷ್ ಕಲಾವಿದ “ಹಿರಿಯ ಜಾನ್ ಹ್ಯಾರಿಸ್” ಅವರ 1810 ರ ಕೆತ್ತನೆ ಇದ್ದ ತಾಮ್ರಫಲಕದಿಂದ ತಯಾರಿಸಿದ ಚಿತ್ರವನ್ನು ಬಣ್ಣ ಹಚ್ಚಿ ಈ ರೀತಿ ಮಾರ್ಪಾಡು ಮಾಡಲಾಗಿದೆ. ಕಾಯಿಲೆ, ನೋವು, ಚಿಕಿತ್ಸೆ, ಮಾನವೀಯತೆ – ಎಲ್ಲವನ್ನೂ ಬಿಂಬಿಸುವ ಇಂತಹ ಚಿತ್ರಗಳು ವೈದ್ಯಕೀಯ ಇತಿಹಾಸದ ಮಾನವೀಯ ನೆಲೆಗಟ್ಟನ್ನು ಬಿಂಬಿಸುತ್ತವೆ.

The early dentists were black-smiths, largely due to their skills and custom-made instruments they could make! Even then, the pain of the patient during the plucking of the tooth would not come down! It was not easy for ladies and aged to reach mass gatherings for the treatment of dental problems. Such patients would go to local black-smiths for help. This 1810 colored mezzotint is created by the original copper engraving of the British artist John Harris the Elder.

93. Dentists of yore - Travelling Tooth-drawer



"File:A travelling tooth-drawer holding a tooth up in the air to a Wellcome L0019559.jpg" is licensed under CC BY 4.0

ಜಾತ್ರೆಗಳಲ್ಲಿ ಹಲ್ಲು ಕಿತ್ತುವ ಮತ್ತೊಂದು ಪ್ರಸಂಗದ ವ್ಯಂಗ್ಯಚಿತ್ರ. ಗೆಬ್ರಿಯಲ್ ಗೊಸ್ಸಿಯೋ ಎಂಬ 19 ನೆಯ ಶತಮಾನದ ಫ್ರೆಂಚ್ ಕಲಾಕಾರನ ವ್ಯಂಗ್ಯ ವರ್ಣಚಿತ್ರ. ಅಂದಿನ ಕಾಲದಲ್ಲಿ ದಂತವೈದ್ಯನೆಂದು ಹೆಸರಾಗಿದ್ದ ಸಾನ್-ದೊಲಿಯೊ ಎಂಬ ವ್ಯಕ್ತಿಯ ವಿಡಂಬನೆ ಮಾಡುವ ಈ ಚಿತ್ರ 1875 ರ ಸುಮಾರಿಗೆ ಪ್ರಕಟವಾಗಿತ್ತು. ತನ್ನದೇ ಕುದುರೆ ಕೋಚುಗಾಡಿ ಹೊಂದಿದ್ದ ಈ ವೈದ್ಯನ ಮುಖ್ಯ ಉದ್ದೇಶ ಊರೂರು ತಿರುಗುತ್ತಾ "ಬುಡ ಸಮೇತ ಹಲ್ಲು ಕಿತ್ತುವುದು"! ಆತನ ರೋಗಿಗಳ ಯಾತನೆ ಹೇಳತೀರದು. ಆತನ ಮುಂದಿನ ರೋಗಿಗಳಿಗೆ ಆತಂಕ; ಇತರರಿಗೆ ಮನರಂಜನೆ! ಹಲ್ಲು ಕಿತ್ತುವ ಆತನ ಆಯುಧವನ್ನು ಬೇಕೆಂತಲೇ ಪಿಸ್ತೂಲಿನ ರೀತಿಯಲ್ಲಿ ಚಿತ್ರಿಸಲಾಗಿದೆ.

Gabriel Gostiaux was a French cartoonist of the 19^{th} century. This 1875 cartoon ridicules a man called Sans-Douleur, who was a show-off dentist of those times. This “dentist” had his horse-drawn coach with all the dental equipment. He would go to various gatherings and fests to “help” dental ailments. He specialized in plucking the tooth from the roots and keeping them as mementos! One such incident with the hapless patient is shown in his cartoon. The instrument of the dentist is deliberately shown as a revolver!

94. Phlebotomy and Blood letting



"File:A surgeon binding up a woman's arm after bloodletting. Oil p Wellcome L0016891.jpg" is licensed under CC BY 4.0

ಇಂದು ಪ್ರಪಂಚದಾದ್ಯಂತ ಅನುಸರಿಸುವ ಆಧುನಿಕ ವೈದ್ಯ ಪದ್ಧತಿಯನ್ನು ಬಹಳಷ್ಟು ಜನರು ತಪ್ಪುತಪ್ಪಾಗಿ

ಅಲೋಪತಿ ಎನ್ನುತ್ತಾರೆ. ಆದರೆ, ಅಲೋಪತಿ ಎಂಬ ಅಸ್ತವ್ಯಸ್ತ ಚಿಕಿತ್ಸಾ ಪದ್ಧತಿಯೂ ಹಿಂದಿನ ಕಾಲದಲ್ಲಿ ಇತ್ತು. ಅಲೋಪತಿ ಎಂದರೆ, “ಅಲ್ಲಿಯವರೆಗಿನ ಚಿಕಿತ್ಸಾ ಪದ್ಧತಿಗಿಂತ ಭಿನ್ನವಾದುದು” ಎಂದಷ್ಟೇ ಅರ್ಥ! “ಶರೀರದಿಂದ ಕೆಟ್ಟ ರಕ್ತ ತೆಗೆದುಹಾಕಿದರೆ ರೋಗಿ ಗುಣವಾಗುತ್ತಾನೆ; ಧಮನಿಗಳು ಉಸಿರಾಡುತ್ತವೆ” ಎನ್ನುವ ತರ್ಕರಹಿತ ಚಿಕಿತ್ಸೆ ಆಲೋಪತಿಯ ಒಂದು ಭಾಗ! ಈ ನಿಟ್ಟಿನಲ್ಲಿ, ಎಷ್ಟೋ ರೋಗಿಗಳ ರಕ್ತ ಹರಿಸಿ, ಅವರನ್ನು ಕೊಂದು ಹಾಕಿದ ಉದಾಹರಣೆಗಳೂ ಇದ್ದವು. 17 ನೆಯ ಶತಮಾನದ ಪ್ರಸಿದ್ಧ ಡಚ್ ಚಿತ್ರಕಾರ ಜೇಕಬ್ ಟೂರೆನ್ಲಿಯೆಟ್ ಅವರು 1666 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಅಲೋಪತಿ ಚಿಕಿತ್ಸೆಯ ಮತ್ತೊಂದು ಉದಾಹರಣೆ. “ಶರೀರದಲ್ಲಿ ಉಷ್ಣವೋ, ಶೀತವೋ ಆದಾಗ ಮಲಿನ ರಕ್ತವನ್ನು ತೆಗೆದುಹಾಕಬೇಕು” ಎಂಬ ತತ್ತ್ವದ ಹಿನ್ನೆಲೆಯಲ್ಲಿ, ಈಗಾಗಲೇ ರಕ್ತಹೀನತೆಯಿಂದ ಬಳಲುತ್ತಿರುವ ಯುವತಿಯಿಂದ ಮತ್ತಷ್ಟು ರಕ್ತ ತೆಗೆದು ಆಕೆಯನ್ನು ಹೈರಾಣು ಮಾಡಿ, ಗಾಯಕ್ಕೆ ಪಟ್ಟಿ ಕಟ್ಟುತ್ತಿರುವ ದೃಶ್ಯ.

The system of modern medicine followed throughout the world is wrongly termed as Allopathy by many. Contrary to the popular belief, this is far from allopathy! The system of allopathy flourished in the past. It was named Allopathy, as it was different from the existing systems of those times (allo – different). Allopathy involved unconventional and unscientific methods but became quite popular due to the rhetoric of its practitioners, who were mainly quacks. One of the hypotheses of Allopathic practitioners was phlebotomy or “blood-letting”. They followed the school of Galen who considered veins as the ducts of internal breathing of organs. Hence, blood was thought to be a choker for veins, and letting blood from the body allowed better breathing of organs. This was thought to cure the illness. Huge volumes were written about the location of major blood vessels of the body and where to puncture them! Many patients used to die after such an episode of phlebotomy. This 1666 oil painting by the famous Dutch artist Jacob Toorenvliet depicts the impact of phlebotomy on a tender girl. Blood-letting was a powerful weapon with Allopathic quacks on medieval Europe. The painting shows two bowls used for the collection of blood from this young woman, who has consequently turned very pale. Since the incision wound of the lancet is not seen, the surgeon must be dressing the wound with a bandage after the session of phlebotomy.

95. Phlebotomy and Blood letting - Cupping



A woman surgeon and her assistant cupping a patient. Oil painting after Cornelis Dusart. Public Domain Mark https://creativecommons.org/publicdomain/mark/1.0

17 ನೆಯ ಶತಮಾನದ ಡಚ್ ಚಿತ್ರಕಾರ ಕಾರ್ನೆಲಿಸ್ ದುಸಾರ್ಟ್ ಅವರು 1700 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಅಲೋಪತಿ ಪದ್ದತಿಯ ಮತ್ತೊಂದು ವಿಧಾನವನ್ನು ಇಲ್ಲಿ ಚಿತ್ರಿಸಲಾಗಿದೆ. "ಕಪ್ಪಿಂಗ್" ಎಂದು ಕರೆಯಲಾಗುವ ಈ ವಿಧಾನದಲ್ಲಿ ಗಾಜಿನ ಅಥವಾ ಲೋಹದ ಬಟ್ಟಲುಗಳನ್ನು ಬಳಸಲಾಗುತ್ತಿತ್ತು. ಬಟ್ಟಲನ್ನು ಚೆನ್ನಾಗಿ ಕಾಯಿಸಿ, ಅದನ್ನು ಚರ್ಮದ ಮೇಲೆ ಒತ್ತುವುದು; ಇಲ್ಲವೇ, ಚರ್ಮವನ್ನು ರಂಧ್ರ ಮಾಡಿ ಅದರ ಮೇಲೆ ಬಟ್ಟಲಿನ ಒತ್ತಡ ಹಚ್ಚಿ, ರಕ್ತ ತೆಗೆಯುವುದು; ಅಥವಾ, ಬಟ್ಟಲಿನಲ್ಲಿ ಬೆಂಕಿ ಹಚ್ಚಿದ ಹತ್ತಿಯನ್ನು ಹಾಕಿ, ಅದರಲ್ಲಿನ ಗಾಳಿಯೆನ್ನೆಲ್ಲಾ ಈ ಉರಿಗೆ ಬಳಸಿ, ನಂತರ ಆ ಬಟ್ಟಲನ್ನು ಚರ್ಮಕ್ಕೆ ಹಚ್ಚುವುದು – ಇಂತಹ ಘೋರವಾದ ಪದ್ದತಿಗಳು ಚಾಲ್ತಿಯಲ್ಲಿ ಇದ್ದವು. ಈ ಚಿತ್ರದಲ್ಲಿ ಕೂಡ ಒಂದು ರೋಗಿಯ ಬಲಗಾಲಿಗೆ, ತಲೆಯ ಮೇಲೆ ಆಳಿಕೆ ತೊಟ್ಟ ವೃದ್ಧೆಯೊಬ್ಬರು ಕಪ್ಪಿಂಗ್ ಮಾಡುತ್ತಿದ್ದಾರೆ. ಹಿಂದೆ ನಿಂತಿರುವ ಸಹಾಯಕರು ಒಂದು ಚಾಕುವನ್ನು ಹರಿತಗೊಳಿಸುತ್ತಿದ್ದಾರೆ. ರೋಗಿಯ ನೋವು ಎದ್ದು ಕಾಣುತ್ತಿದೆ.

This oil painting of 1700 by the Dutch artist Cornelis Dusart shows another form of blood-letting called cupping. A glass or metal cup was used in this method. The cup was heated and pressed over the skin or skin was incised and negative pressure was created over the incision using the cup to suck out the blood. Worse – a cotton wick was lighted and put into the cup to drain out the air and the hot cup was pressed into the skin to burst it open. An old lady is performing cupping to a patient. Her assistant is probably sharpening a knife for making an incision. The plight of the poor patient can be imagined in the painting.

96. Phlebotomy and Blood letting - Physician and Surgeon




A physician and a surgeon attending to a woman patient. Oil painting by Matthijs Naiveu. Wellcome Collection. Attribution-NonCommercial 4.0 International (CC BY-NC 4.0)

17-18 ನೆಯ ಶತಮಾನದ ಪ್ರಸಿದ್ಧ ಡಚ್ ಚಿತ್ರಕಾರ ಮಥಿಸ್ ನೈವು ಅವರು 1700 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಕೆಟ್ಟ ಚಿಕಿತ್ಸೆ ಎಂಬುದು ಬಡವ-ಶ್ರೀಮಂತ ಭೇದವಿಲ್ಲದೆ ಎಲ್ಲರಿಗೂ ಸಿಗುತ್ತಿತ್ತು ಎಂಬುದರ ಮಾರ್ಮಿಕ ನಿದರ್ಶನ. ವಿಪರೀತ ರಕ್ತಹೀನತೆಯಿಂದ ಬಳಲುತ್ತಿರುವ ಶ್ರೀಮಂತ ಹೆಂಗಸರೊಬ್ಬರಿಗೆ ಎಡಗಾಲಿನಿಂದ ರಕ್ತ ಹರಿಸುತ್ತಿರುವ ಸರ್ಜನ್ ಮತ್ತು ಆಕೆಗೆ ಆಸರೆ ನೀಡುತ್ತಾ ಅವರ ನಾಡಿಯನ್ನು ಪರೀಕ್ಷಿಸುತ್ತಿರುವ ವೈದ್ಯ. “ಕೆಟ್ಟ ರಕ್ತವನ್ನು ಶರೀರದಿಂದ ತೆಗೆದುಹಾಕುವ” ಅಲೋಪತಿ ಹೆಸರಿನ ಕೆಟ್ಟ ಚಿಕಿತ್ಸೆಗೆ ಮತ್ತೊಂದು ಉದಾಹರಣೆ. ಆ ರೋಗಿಗೆ ರಕ್ತಪೂರಣ ಬೇಕಾದ ಸಮಯದಲ್ಲಿ ಮತ್ತಷ್ಟು ರಕ್ತವನ್ನು

ಹೊರತೆಗೆದು ಆಕೆಯ ಶೀಘ್ರ ಸಾವಿಗೆ ಕಾರಣವಾಗಿದ್ದಾರೆ ಎನ್ನುವ ಅಭಿಪ್ರಾಯವಿದೆ. ಇವರು 17-18 ನೆಯ ಶತಮಾನಗಳಲ್ಲಿ ಇದ್ದ ಜೀನ್ ಬ್ಯಾಪ್ಟಿಸ್ಟೆ ಸಿಲ್ವ ಮತ್ತು ಫಿಲಿಪ್ ಹೆಕ್ವೆಟ್ ಎಂಬ ಫ್ರೆಂಚ್ ವೈದ್ಯರು ಇರಬಹುದು ಎಂಬ ಅಂದಾಜು ಇದೆ. ರೋಗಿಯ ಖುರ್ಚಿ, ವಸ್ತ್ರ, ನೆಲಹಾಸು, ಹಾಸಿಗೆ – ಇವುಗಳಿಂದ ಬಹಳ ಶ್ರೀಮಂತ ಮನೆತನದ ಕುರುಹು ಸಿಗುತ್ತದೆ.

This 1700 oil painting by the Dutch artist Matthijs Naiveu is titled “A physician and surgeon attending to a woman patient”. Going by the surroundings of the event, the patient seems to be extravagantly rich. Silk drapes, oriental carpet, artistic chair, and her costume adds to the details. The woman sitting on the chair is moribundly pale. The physician is checking her pulse and the surgeon is removing “bad blood” from her left leg. The doctors in the picture are speculated to be Jean-Baptiste Silva and Philippe Hecquet, who were pioneers of blood-letting in Europe. The pale lady needs a blood transfusion. But instead, a substantial amount of blood is removed from her body! This might have accelerated her death. Allopathy, like any other ignorance, is cruel.

97. Phlebotomy and Blood letting - Cupping by Galen



nlm:nlmuid History of medicine in pictures Galen cupping a patient Courtesy of the National Library of Medicine. https://creativecommons.org/publicdomain/mark/1.0/

---

20 ನೆಯ ಶತಮಾನದ ಅಮೆರಿಕದ ಅದ್ಭುತ ಚಿತ್ರ ಕಲಾವಿದ ರಾಬರ್ಟ್ ಆಲನ್ ಥಾಮ್ ಅವರ ವೈದ್ಯಕೀಯ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ಸರಣಿ ಚಿತ್ರಗಳಲ್ಲಿ ಒಂದು. ಶಕ 2-3 ನೆಯ ಶತಮಾನದ ಪ್ರಸಿದ್ಧ ರೋಮನ್ ವೈದ್ಯ ಕ್ಲಾಡಿಯಸ್ ಗಲೇನ್ ಅವರನ್ನು ತೋರಿಸುವ ದೃಶ್ಯ. ಗಲೇನ್ ಅವರು ಸಣ್ಣ ಬಾಲಕನಿಗೆ "ಕಪ್ಪಿಂಗ್" ಮಾಡುತ್ತಿದ್ದಾರೆ. ಅವರ ಸಹಾಯಕರೊಬ್ಬರು ನೆರವು ನೀಡುತ್ತಿದ್ದಾರೆ. ಈ ಮಾದರಿಯ ಚಿಕಿತ್ಸೆ ಬಹಳ ಪುರಾತನ ಎನ್ನುವುದನ್ನು ಸೂಚಿಸಲಾಗಿದೆ.

In a series called “History of medicine in pictures”, the celebrated American artist Robert Alan Thom gave few spectacular pieces of art. This painting is one of the series, showing the famous Roman physician of CE 2-3rd century Claudius Galen performing cupping on a boy and accompanied by an assistant and relative of the child. Cupping for removal of “bad blood” might have a very long history in medical treatment.

98. Phlebotomy and Blood letting by a Quack



An ill man being bled by a surgeon. Coloured etching after J. Gillray, 1804, after J. Sneyd. Wellcome Collection. Attribution 4.0 International (CC BY 4.0)

ಜೇಮ್ಸ್ ಗಿಲ್ರೇ ಎಂಬ 18 ನೆಯ ಶತಮಾನದ ಬ್ರಿಟಿಷ್ ವ್ಯಂಗ್ಯಚಿತ್ರಕಾರನಿಂದ ರಚಿತವಾದ ಚಿತ್ರಕ್ಕೆ 1804 ರಲ್ಲಿ ಬಣ್ಣದ ಸ್ಪರ್ಶ ನೀಡಿದ ಜಾನ್ ಸ್ನೇಡ್ ಎಂಬ ಬ್ರಿಟಿಷ್ ಚಿತ್ರಕಾರನಿಂದ ಪೂರ್ಣಗೊಳಿಸಲ್ಪಟ್ಟ ಚಿತ್ರ. "ಶರೀರದಿಂದ ಕೆಟ್ಟ ರಕ್ತ ತೆಗೆದುಹಾಕಿದರೆ ಧಮನಿಗಳು ಉಸಿರಾಡುತ್ತವೆ" ಎನ್ನುವ ತರ್ಕರಹಿತ ಆಲೋಪತಿ ಚಿಕಿತ್ಸೆ ಯ ಒಂದು ಭಾಗ! ಆ ಚಿಕಿತ್ಸೆಯ ಚಿತ್ರಣ ಇದು. ಮುಖಭಾವಗಳನ್ನು ಸೂಚಿಸುವುದರಲ್ಲಿ ಗಿಲ್ರೇ ನಿಷ್ಣಾತರು!

This water-colored etching was done in 1804 by British artist John Sneyd, based on the cartoon by another British artist James Gillray, who has captured the facial expressions of the patient and the quack during phlebotomy in their right perspective. Equating the present-day modern medicine with its stern scientific structure with something as illogical as allopathy is criminal!

99. Lovesickness – Confused Physician



doctor By Jan Steen / Public domain https://creativecommons.org/publicdomain/mark/1.0/deed.en

ಜನ್ ಸ್ಟೀನ್ ಎಂಬ ಪ್ರಖ್ಯಾತ ಡಚ್ ಚಿತ್ರಕಾರ 1660 ರಲ್ಲಿ ಚಿತ್ರಿಸಿದ ತೈಲ ವರ್ಣ ಕಲಾಕೃತಿ. ಈ ಚಿತ್ರಕ್ಕೆ ಅನೇಕ ಮಂದಿ ಹಲವಾರು ವಿವರಣೆಗಳನ್ನು ನೀಡಿದ್ದಾರೆ. ನಾಟಕದವರಂತೆ ವೇಷ ಧರಿಸಿರುವ ವೈದ್ಯ ನಾಡಿ ನೋಡುತ್ತಿದ್ದಾರೆ. ಪ್ರಾಯಶಃ ಆತನಿಗೆ ಏನೂ ಅರ್ಥವಾದಂತಿಲ್ಲ. ಸಹಾಯಕಿ ಹಿಡಿದಿರುವ ಶೀಷೆಯಲ್ಲಿ ಪ್ರಾಯಶಃ ರೋಗಿಯ ಮೂತ್ರವಿದೆ. ಕೆಳಗೆ ಕುಳಿತು ಆಡುತ್ತಿರುವ ಮಗುವಿನ ಮುಖದಲ್ಲಿ ಕಿರುನಗೆಯಿದೆ. ಯಾರಿಗೂ ತಿಳಿಯದ ಯಾವುದೋ ಒಂದು ಸಂಗತಿ ಪ್ರಾಯಶಃ ಆ ಮಗುವಿಗೆ ತಿಳಿದಿದೆ! ಚಿತ್ರದಲ್ಲಿ ಈ ರೀತಿಯ ಮಕ್ಕಳ ಇರುವಿಕೆ ಆ ರೋಗಿಯದ್ದು "ಪ್ರೇಮರೋಗ" ಎಂದು ಸೂಚಿಸುತ್ತದೆ! ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲದ ವೈದ್ಯರನ್ನು ಲೇವಡಿ ಮಾಡಲು ಬರೆದಿರುವ ಚಿತ್ರ ಅನಿಸುತ್ತದೆ!

A 1660 oil painting by the Dutch artist Jan Steen has many interpretations! The patient is too melodramatic and the physician is too pretentious! The theatrical costume of the doctor adds to the fun! The ailment of this young woman has been a matter of worry to the family. The old lady next to the physician is holding the urine flask. The symbolism of the boy shows the angle of lovesickness as the cause of the girl's condition! Such a boy with a bow or arrow is a constant feature of such a condition across many genres of paintings.

100. Lovesickness – Confident Physician



"IMG_2124MZG Jan Havicksz Steen. 1626-1679. Leyde." by jean louis mazieres is licensed under CC BY-NC-SA 2.0

ಜನ್ ಸ್ಟೀನ್ ಎಂಬ ಡಚ್ ಕಲಾವಿದ 1665 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಅಸ್ವಸ್ಥ ಯುವತಿಯನ್ನು ಚಿಕಿತ್ಸೆ ಮಾಡಲು ಬಂದ ವೈದ್ಯನ ಚಿತ್ರಣ. ಆ ಯುವತಿ ಪ್ರಾಯಶಃ ಪ್ರೇಮಜ್ವರ ಪೀಡಿತೆ! ಈ ವಿಷಯವನ್ನು ಪತ್ತೆ ಮಾಡಿದ ವೈದ್ಯ ಆದನು ಸೂಚ್ಯವಾಗಿ ಮನೆಯ ಇತರರಿಗೆ ತಿಳಿಸುತ್ತಾನೆ. ವೈದ್ಯನ ಮುಖದಲ್ಲಿ ಕಿರುನಗೆ ಇದೆ. ಆದರೆ, ಮನೆಯ ಇತರರಿಗೆ ಈ ರಹಸ್ಯ ತಿಳಿದು, ಅವರ ಆತಂಕ ನಗುವಿನಲ್ಲಿ ಕೊನೆಯಾಗುತ್ತದೆ! ಇಂತಹ ಚಿತ್ರಗಳಲ್ಲಿ ನಗುಮುಖದ ಒಬ್ಬ ಬಾಲಕನ ಉಪಸ್ಥಿತಿ ಸಾಮಾನ್ಯ. ಇಲ್ಲೂ ಆ ಸಂಪ್ರದಾಯವನ್ನು ಹಾಗೆಯೇ ಬಿಂಬಿಸಿದೆ. ನೆಲದ ಮೇಲೆ ಬಿದ್ದಿರುವ ಹಾಳೆ ಅಪ್ರಾಸಂಗಿಕ ಅನಿಸಿದರೂ, ಅದು ಚಿತ್ರಕಾರನ ಕರಾಮತ್ತು! ಈ ಹಾಳೆಯಲ್ಲಿ ಚಿತ್ರಕಾರನ ಸಹಿಯ ಚಿತ್ರವಿದೆ!

This 1665 oil painting by the Dutch artist Jan Havicksz Steen is another example of a lovesick girl being treated. This time, the physician seems to have guessed the correct cause of the problem. The tensed household is now smiling after knowing the reason for illness. The presence of the young boy and the painting on the wall are usually clues in such situations. The paper on the floor appears incidental, but is deliberate! The artist has signed his name on that paper!

101. Lovesickness – Confused Physician



A bewildered doctor checking the pulse of lovesick young woman, her concerned mother comforts her, in the background Cupid is grinning and pointing to one of his arrows. Coloured mezzotint by W. Ward, 1802, after J. Opie. Wellcome Collection. Attribution 4.0 International (CC BY 4.0)

ಜಾನ್ ಓಪೀ ಎಂಬ ಬ್ರಿಟಿಷ್ ಚಿತ್ರ ಕಲಾವಿದ 1802 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಇದನ್ನು ವಿಲಿಯಮ್ ವಾರ್ಡ್ ಎನ್ನುವವರು ಕೆತ್ತನೆ ಮಾಡಿದ್ದಾರೆ. ಆರೋಗ್ಯ ಪರಿಸ್ಥಿತಿ ಬಿಗಡಾಯಿಸಿದ ಓರ್ವ ಯುವತಿಯನ್ನು ಪರೀಕ್ಷೆ ಮಾಡಲು ಬಂದ ವೈದ್ಯರಿಗೆ ಆಕೆಯ ನಾಡಿ ಪರೀಕ್ಷೆಯಿಂದ ಯಾವುದೇ ಸುಳಿವು ದೊರೆಯುತ್ತಿಲ್ಲ. ಈ ಯುವತಿಯ ಅಸೌಖ್ಯಕ್ಕೆ ಕಾರಣ ಅವರಿಗೆ ತಿಳಿದು ಬಂದಿಲ್ಲ. ಯುವತಿಯ ಜೊತೆ ಇರುವ ವೃದ್ಧ ಸ್ತ್ರೀ ಕಂಗಾಲಾಗಿದ್ದಾರೆ. ಆದರೆ, ಹಿಂಬದಿಯಲ್ಲಿರುವ ಬಾಲಕನಿಗೆ ವಿಷಯ ತಿಳಿದಿದೆ. ಆತನ ಕೈಲಿ ಇರುವ ಬಾಣ, ಈ ಯುವತಿಯ ಅಸೌಖ್ಯಕ್ಕೆ ಪ್ರೇಮಜ್ವರದ ಸಾಂಕೇತಿಕ ಕಾರಣವನ್ನು ಹೇಳುತ್ತಿದೆ! ಲಿಯೊ ಟಾಲ್ಸ್ಟಾಯ್ ಅವರ ಅನ್ನಾ ಕರೆನೀನಾ ಕೃತಿಯಲ್ಲಿ ಕೂಡ ಇಂತಹುದೇ ಪ್ರಸಂಗವಿದೆ.

This 1802 work by the British artist John Opie was converted into a colored mezzotint by William Ward, which shows the clueless physician checking the pulse of a lovesick young woman. The elderly lady is anxious. The presence of a small boy with the symbolism of cupid is usually the artistic clue for love-sickness as the theme. Also tells about the time when senior physicians were not aware of the psychological problems of subsequent generations! It is said that the konsilium scene in Leo Tolstoy’s Anna Karenina is an enactment of this picture.

102. Lovesickness – Confused Physician



"File:A young woman is brought to visit a sick young man in the Wellcome L0034624.jpg" is licensed under CC BY 4.0

---

19 ನೆಯ ಶತಮಾನದ ಪ್ರಖ್ಯಾತ ಫ್ರೆಂಚ್ ಚಿತ್ರಕಾರ ಪಾಲ್-ಎಮಿಲೆ ಡೆಸ್ತೋಷ್ ಅವರ 1830 ರ ಚಿತ್ರ. ರೋಗದಿಂದ ಬಳಲುತ್ತಿರುವ ಓರ್ವ ಯುವಕನನ್ನು ನೋಡಲು ಓರ್ವ ಯುವತಿ ಬರುತ್ತಾಳೆ. ಆಕೆಯನ್ನು ನೋಡಿ ರೋಗಿಯ ಮುಖದಲ್ಲಿ ಸ್ವಲ್ಪ ಕಳೆ ಬಂದಿದೆ. ಆ ಯುವಕನ ಮನೆಯವರು ಕಪ್ಪು ಬಟ್ಟೆ ತೊಟ್ಟಿದ್ದಾರೆ. ಇದರ ಅರ್ಥ, “ಆ ಯುವಕ ಮರಣಶಯ್ಯೆಯಲ್ಲಿ ಇದ್ದಾನೆ” ಎಂದು ಚಿತ್ರ ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. 17 ನೆಯ ಶತಮಾನದ ಫ್ರೆಂಚ್ ನಾಟಕಕಾರ ಮೋಲಿಯೆರ್ ಅವರ 1665 ರ ಒಂದು ನಾಟಕದಲ್ಲಿ ರೋಗದಿಂದ ಬಳಲುವ ಯುವತಿಯನ್ನು ಕಾಣಲು ಓರ್ವ ಯುವಕ ಬರುವ ಚಿತ್ರಣವಿದೆ. ಆ ನಾಟಕದಲ್ಲಿ ಈ ಯುವಕನ ಆಗಮನದ ಕಾರಣದಿಂದ ಆ ರೋಗಿಷ್ಟ ಯುವತಿ ಚೇತರಿಸಕೊಳ್ಳುತ್ತಾಳೆ. ಈ ಚಿತ್ರದಲ್ಲಿ ಅದರ ವಿರುದ್ಧ ದೃಶ್ಯ ಇದೆ. ಮಾನಸಿಕ ಪ್ರಫುಲ್ಲತೆ ರೋಗಿಯ ಚೇತರಿಕೆಗೆ ಕಾರಣವಾಗುತ್ತದೆ ಎಂಬ ನಂಬಿಕೆ ಜಗತ್ತಿನ

ಎಲ್ಲಾ ದೇಶಗಳಲ್ಲೂ ಬಹಳ ಕಾಲದಿಂದ ಇದೆ. ಇವನ್ನು ತೋರುವ ಚಿತ್ರಗಳು, ನಾಟಕಗಳು ಯುರೋಪ್ ಸಂಸ್ಕೃತಿಯ ಭಾಗವಾಗಿದ್ದವು.

This 1830 oil painting by the French artist Paul-Emile Destouches shows a bedridden sick young man becoming cheerful on the arrival of a young woman. The black clothes of the family members indicate the possible bad prognosis of the young man. A similar incident is seen in French dramatist Moliere's play in 1665, wherein a sick young woman is visited by a young man to cheer her up. The relationship between mental and physical health has been the subject of many literary works in Europe.

103. Quacks – Generals Consulting a Quack



Larevellière-Lépeaux sits in a disordered quack doctor's room, in the presence of seven wounded French generals, one of them vomiting; representing French defeats in 1799 and Bonaparte's failed imperial ambitions in the east. Coloured etching by J. Gillray, 1799. Wellcome Collection. Attribution 4.0 International (CC BY 4.0)

ಮಧ್ಯಕಾಲೀನ ಯೂರೋಪಿನಲ್ಲಿ ಖೊಟ್ಟಿ ವೈದ್ಯರ ಹಾವಳಿ ಹೆಚ್ಚು! ಎಲ್ಲರೂ quack ಎಂದು ಕರೆಯುತ್ತಿದ್ದ ಈ ಮಂದಿಯ ಪೈಕಿ ಹಲವರು ಸಾಕಷ್ಟು ಪ್ರಸಿದ್ಧರೂ ಆಗಿದ್ದರು. ಬಹುಮಟ್ಟಿಗೆ, ನಂಬಲು ಸಾಧ್ಯವಿಲ್ಲದ ಪರಿಣಾಮಗಳನ್ನು ಘೋಷಿಸುತ್ತಾ ತಮ್ಮ ಬಳಿ ಇದ್ದ ವಸ್ತುಗಳನ್ನು "ಔಷಧ"ದ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದರು. ವ್ಯಂಗ್ಯ ಚಿತ್ರ ಬರೆಯುವವರಿಗೆ ಇವರನ್ನು ಕಂಡರೆ ಹಬ್ಬ! ಇಂತಹ ಚಿತ್ರಗಳಲ್ಲಿ ಮಾನವ ಅಸ್ತಿಪಂಜರದ ಬಳಕೆ ಖೊಟ್ಟಿ ವೈದ್ಯರ ಸೂಚಕವಾಗಿತ್ತು. ಜೇಮ್ಸ್ ಗಿಲ್ರೇ ಎಂಬ ಪ್ರಸಿದ್ಧ ಬ್ರಿಟಿಷ್ ವ್ಯಂಗ್ಯಚಿತ್ರಕಾರ 1799 ರಲ್ಲಿ ಬರೆದ ಈ ವ್ಯಂಗ್ಯ ಚಿತ್ರದಲ್ಲಿ ಫ್ರೆಂಚ್ ಸೈನ್ಯಾಧಿಕಾರಿಗಳನ್ನು ಓರ್ವ ಖೊಟ್ಟಿ ವೈದ್ಯನ ಮೂಲಕ ಸಂಕೇತಿಸಿ, ಅವಮಾನಿಸಲಾಗಿದೆ. ಪೂರ್ವ ದಿಕ್ಕಿನೆಡೆ ಸಾಮ್ರಾಜ್ಯ ವಿಸ್ತರಿಸಲು ಸೋತ ನೆಪೋಲಿಯನ್ ಸೈನ್ಯ ಅದಕ್ಕೆ ಸಬೂಬು ಹೇಳುವ ಪ್ರಯತ್ನದಲ್ಲಿ ಓರ್ವ quack ನ ಸಹಾಯ ಪಡೆಯುತ್ತಿದೆ

ಎಂದು ಸೂಚಿಸಿದೆ. ಚಿತ್ರದ ಎಡ ಭಾಗದಲ್ಲಿ ಕೂತಿರುವ ವ್ಯಕ್ತಿ ಸೇನಾನಾಯಕ ಲಾರ್ವಿಲ್ಲೆ ಲೆಪೊ. ಆತನ ಪಕ್ಕದಲ್ಲಿ ಮತ್ತೊಬ್ಬ ಅಧಿಕಾರಿ ವಾಂತಿ ಮಾಡುತ್ತಿದ್ದಾನೆ. ಬ್ರಿಟಿಷ್ ಸೈನ್ಯದ ಜೊತೆ ಕಾದಾಡಿ ಬಲವಾಗಿ ಪೆಟ್ಟು ತಿಂದ ಇನ್ನೂ ಐವರು ಸೈನ್ಯಾಧಿಕಾರಿಗಳು quack ನ ಬಳಿ ಚಿಕಿತ್ಸೆಗಾಗಿ ತಮ್ಮ ಸರದಿಗೆ ಕಾದಿದ್ದಾರೆ. ಆ ಖೊಟ್ಟಿ ವೈದ್ಯನ ಕೋಣೆಯ ಗೋಡೆ ಅಂದಿನ ಕಾಲದ ದೊಡ್ಡ quack ಗಳ ಚಿತ್ರಗಳನ್ನು ಬಿಂಬಿಸುತ್ತದೆ!

Medieval Europe was full of quacks! It is probably the price they paid for ignoring the development of scientific temper and medicine. Despite being called “Quacks” some of these fake doctors were extremely famous! The quacks were known for extraordinary claims of their proprietary formulations! The satirists of those days made a merry out of these quacks! The use of the human skeleton in active or passive roles used to be a prominent feature in the depiction of quacks in cartoons. A 1799 cartoon by the famous British cartoonist James Gillray depicting the French defeats and failure of Napoleon’s conquest to the east. General Larevellière-Lépeaux is among the seven wounded army generals who retreated on the account of the health and are at the place of a quack. The audacious set-up of the quack is skillfully done!

104. Quacks – Metallic Tractors



James Gillray, "Metallic Tractors", showing Elisha Perkins. Wellcome Collection. Attribution 4.0 International (CC BY 4.0)

ಜೇಮ್ಸ್ ಗಿಲ್ರೇ ಎಂಬ ಬ್ರಿಟಿಷ್ ವ್ಯಂಗ್ಯಚಿತ್ರಕಾರ 1801 ರಲ್ಲಿ ರಚಿಸಿರುವ ಚಿತ್ರ. 18 ನೆಯ ಶತಮಾನದಲ್ಲಿದ್ದ ಎಲಿಶ ಪರ್ಕಿನ್ಸ್ ಎಂಬ ಅಮೆರಿಕನ್ ವಂಚಕ ವೈದ್ಯನ ಮೋಸದ ಚಿಕಿತ್ಸೆಯ ಬಗೆಗಿನ ಲೇವಡಿ. ಹಿತ್ತಾಳೆ ಮತ್ತು ಉಕ್ಕಿನ ಸೂಜಿಗಳನ್ನು "ಅಪರೂಪದ ಲೋಹಗಳ ಸೂಜಿಗಳು" ಎಂದು ಹಕ್ಕುಸ್ವಾಮ್ಯ ಪಡೆದುಕೊಂಡು, ಅವುಗಳನ್ನು ಶರೀರದ ನೋವಿನ ಭಾಗಗಳಲ್ಲಿ ತೂರಿಸಿ, "ಈ ಸೂಜಿಗಳು ನೋವು ನೀಡುವ ಎಲ್ಲಾ ಕೆಟ್ಟ ಅಂಶಗಳನ್ನೂ ತಮ್ಮ ಅಸಾಧಾರಣ ಸಾಮರ್ಥ್ಯವನ್ನು ಬಳಸಿ ಸೆಳೆದು ಹಾಕುತ್ತವೆ" ಎಂದು ಜನರನ್ನು ನಂಬಿಸುತ್ತಿದ್ದ ಪಾಖಂಡಿ ವೈದ್ಯ. "ತಾನು ಐದು ಸಾವಿರ ರೋಗಿಗಳನ್ನು ಈ ಮೂಲಕ ಗುಣಪಡಿಸಿದ್ದೇನೆ" ಎಂದು ಹೇಳಿಕೊಳ್ಳುತ್ತಿದ್ದ. ತನ್ನ ಚಿಕಿತ್ಸೆಯಿಂದ ಗುಣವಾದ ಅನೇಕ ಹೆಸರಾಂತ ವ್ಯಕ್ತಿಗಳು ನೀಡಿರುವ ಪ್ರಮಾಣಪತ್ರಗಳನ್ನು ತೋರುತ್ತಿದ್ದ. ವೈದ್ಯಕೀಯ ಸಂಘಗಳು ಆತನನ್ನು ಹೊರದಬ್ಬಿದರೂ, ಆತನ ಜನಪ್ರಿಯತೆ ಏರುತ್ತಲೇ ಹೋಯಿತು! ಈ ಸೂಜಿಗಳನ್ನು ಆತನ ಮಗ ಯೂರೋಪಿಗೂ ಪರಿಚಯಿಸಿದ! ನೈಜ ಔಷಧದ ಬದಲಿಗೆ, ಕೇವಲ ಔಷಧದ ಭ್ರಮೆ ನೀಡುವ "ಪ್ಲಸಿಬೊ" ಚಿಕಿತ್ಸೆಯ ಉದಾಹರಣೆ ಈತನದ್ದು.

“ಜನ ಮರುಳೋ ಜಾತ್ರೆ ಮರುಳೋ” ಎಂಬಂತೆ, ಈತನ ಬಳಿ ಚಿಕಿತ್ಸೆಗೆ ಜನ ಸರದಿ ನಿಲ್ಲುತ್ತಿದ್ದರು. ಈ ವ್ಯಂಗ್ಯ ಚಿತ್ರದಲ್ಲಿ ಓರ್ವ ರೋಗಿಯ ಮೂಗಿನ ಗಾಯಕ್ಕೆ ಒಂದು ಸೂಜಿ ಚುಚ್ಚಿರುವ ಪರ್ಕಿನ್ಸ್, ಮತ್ತೊಂದು ಸೂಜಿಯನ್ನು ಬಾಯಲ್ಲಿ ಕಚ್ಚಿ ಹಿಡಿದಿದ್ದಾನೆ! ರೋಗಿಯ ಪರಿಸ್ಥಿತಿ ಹೇಳಲಾಗದಷ್ಟು ಘೋರವಾಗಿದೆ! ಮೇಜಿನ ಮೇಲೆ ಒಂದು ದಿನಪತ್ರಿಕೆಯಲ್ಲಿ ಆತನ ಜಾಹೀರಾತು ಕಾಣುತ್ತಿದೆ. ಕೆಲವು ಅಸಾಂಪ್ರದಾಯಿಕ ಚಿಕಿತ್ಸೆಗಳನ್ನೂ ಮೇಜಿನ ಮೇಲೆ ಕಾಣಬಹುದು. ಗೋಡೆಯ ಮೇಲಿನ ಚಿತ್ರ, ರೋಗಿಯ ಬದಿಯಲ್ಲಿ ನಿಂತ ನಾಯಿ – ಇವುಗಳ ಸಂಕೇತ ಬಹಳ ಸೂಚ್ಯವಾಗಿದೆ! ವಿಡಂಬನೆಯಲ್ಲಿ ಗಿಲ್ರೇ ಬಹಳ ಚಾಣಾಕ್ಷ!

This colored lithograph published in 1801 by the British artist James Gillray is titled “Metallic Tractors”. This picture ridicules an American quack named Elisha Perkins, who had developed “metallic tractors of rare metals” and had patented them. These hollow needles of brass and steel were advertised as magical. Perkins convinced people that his tractors were capable of sucking out all the bad elements which caused disease when inserted into the affected areas. He claimed to have treated more than 5000 patients with many certificates of appreciation. Despite getting boycotted by the medical academies, he had immense popularity among common people. His son introduced these metallic tractors to Europe. The placebo effect produced by these tractors were impressive, largely due to support by people and vocal publicity. In this lithograph, Perkins is shown holding one tractor in his mouth while inserting another on the infected nose of a patient, who seems to be struggling in intense pain. A newspaper on the table carries Perkins' advertisement. The picture on the wall and the presence of a dog are symbolic! Gillray conveys sarcasm very effectively!

105. Quacks – Dance of Death



"File:The dance of death; the apothecary. Coloured aquatint by T. Wellcome V0042009.jpg" is licensed under CC BY 4.0

ಥಾಮಸ್ ರೋಲ್ಯಾಂಡ್ಸನ್ ಎಂಬ ಬ್ರಿಟಿಷ್ ಚಿತ್ರಕಾರ 1819 ರಲ್ಲಿ ರಚಿಸಿದ ವ್ಯಂಗ್ಯಚಿತ್ರ. ಇವುಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಕಟಿಸಿ, ಮಾರುಕಟ್ಟೆಗೆ ತಲುಪಿಸಿದ್ದು ಆತನ ಗೆಳೆಯ ರುಡಾಲ್ಫ್ ಆಕೆರ್ಮನ್ ಎಂಬ ಮುದ್ರಕ. ಎಲ್ಲಾ ಆರೋಗ್ಯ ಸಮಸ್ಯೆಗಳಿಗೂ ಪರಿಹಾರ ನೀಡುವ ಖೊಟ್ಟಿ ವೈದ್ಯ ಮತ್ತು ಆತನ ಸಹಾಯಕ, ಜೋರಾಗಿ ಚರ್ಬಿ ಬೆಳೆದು ಗುಡಾಣದಂತೆ ಆಗಿದ್ದಾರೆ. ರೋಗದಿಂದ ನರಳುತ್ತಿರುವ ಮಂದಿ ಔಷಧಕ್ಕಾಗಿ ಸಾಲಾಗಿ ನಿಂತಿದ್ದಾರೆ. ನಿಧಾನವಾಗಿ ಕೆಲಸ ಮಾಡುವ ವಿಷವನ್ನು ಅಸ್ತಿಪಂಜರವೊಂದು ತಯಾರು ಮಾಡುತ್ತಿದೆ. ಅದು ಜನರ ಕಣ್ಣಿಗೆ ಕಾಣದಂತೆ ಆ quack ಎಚ್ಚರ ವಹಿಸುತ್ತಿದ್ದಾರೆ. ಸಾಧಾರಣವಾಗಿ ಬಹಳ ಜತನದಿಂದ ಚಿತ್ರಗಳನ್ನು ರಚಿಸುತ್ತಿದ್ದ ಥಾಮಸ್ ರೋಲ್ಯಾಂಡ್ಸನ್, ಈ ಚಿತ್ರದಲ್ಲಿ ಸಾರ್ವತ್ರಿಕ ಭಾವನೆ ಪ್ರದರ್ಶಿಸಿದ್ದಾರೆ. ಹೀಗಾಗಿ, ಇದು ವ್ಯಂಗ್ಯಚಿತ್ರವಾಗಿ ನೆಲೆ ನಿಂತಿದೆಯೇ ಹೊರತು, ಗಂಭೀರ ಕಲೆ ಆಗಲಿಲ್ಲ.

This 1816 cartoon by the British Cartoonist Thomas Rowlandson ridicules an obese quack who promises panacea for all the ailments. Patients with vari-

ous diseases have queued up for this miracle medicine. A human skeleton is preparing the slow poison which is feigned as medicine. The obese quack is taking care to cover up the skeleton.

106. Quacks – Sarah Sally Mapp



Sarah Mapp. Coloured etching by G. Cruikshank, 1819, after W. Hogarth. Wellcome Collection. Attribution 4.0 International (CC BY 4.0)



Hogarth's The Company of Undertakers. Wellcome Collection. Attribution 4.0 International (CC BY 4.0)

ಬ್ರಿಟಿಷ್ ವ್ಯಂಗ್ಯ ಚಿತ್ರಕಾರ ಜಾರ್ಜ್ ಕ್ರೂಕ್ಯಾಂಕ್ ಅವರು 1819 ರಲ್ಲಿ ರಚಿಸಿದ ವ್ಯಂಗ್ಯ ಚಿತ್ರ. ಆ ಮುನ್ನ ವಿಲಿಯಮ್ ಹೊಗರ್ಥ್ ಎನ್ನುವವರು ಮಾಡಿದ್ದ ಕೆತ್ತನೆಯನ್ನು ಆಧರಿಸಿ ಮಾಡಿದ ಚಿತ್ರ. ಈ ಮಹಿಳೆಯ ಹೆಸರು ಸಾರಾ ಸ್ಯಾಲಿ ಮ್ಯಾಪ್. ಆಕೆ 18 ನೆಯ ಶತಮಾನದ ಬ್ರಿಟನ್ ನ ಅತ್ಯಂತ ಪ್ರಸಿದ್ಧ ಮೂಳೆ-ಜೋಡಕಿ! ಅಂದಿನ ವೈದ್ಯ ಪ್ರಪಂಚದಲ್ಲಿ ವಿಶೇಷ ತಜ್ಞರು ಕಡಿಮೆ. ಬಹುತೇಕ ಎಲ್ಲಾ ವೈದ್ಯರೂ ಎಲ್ಲಾ ರೀತಿಯ ಕಾಯಿಲೆಗಳಿಗೂ ಚಿಕಿತ್ಸೆ ಮಾಡುತ್ತಿದ್ದರು. ಪ್ರತ್ಯೇಕ ವಿಶೇಷ ತಜ್ಞರು ಆರಂಭವಾದದ್ದು ಮೂಳೆ-

ಜೋಡಕರಿಂದ! ನಂತರ ಬಂದವರು ಹಲ್ಲಿನ ವೈದ್ಯರು; ಕಣ್ಣಿನ ವೈದ್ಯರು; ಹೆರಿಗೆ ದಾದಿಯರು; ಹರ್ನಿಯಾ ಸರ್ಜನ್ ಗಳು; ಮತ್ತು ತಲೆಯಿಂದ ಹುಚ್ಚಿನ ಕಲ್ಲನ್ನು ತೆಗೆಯುವ ವೈದ್ಯರು! ಕುದುರೆ ಸವಾರಿ ಅಂದಿನ ಕಾಲದ ಗಂಡಸರ ಅಗತ್ಯವೂ ಹೌದು; ಶೋಕಿಯೂ ಹೌದು! ಜೊತೆಗೆ, ಹಲವಾರು ಕಾರಣಗಳಿಂದ ಕುದುರೆ ಸವಾರಿಯ ಸಮಯದಲ್ಲಿ ಬೀಳುವುದೂ ಇತ್ತು. ಪರಿಣಾಮ – ಮೂಳೆ ಮುರಿತ ಅಥವಾ ಕೀಲುಗಳ ಜೊಡಣೆಯಲ್ಲಿ ವ್ಯತ್ಯಾಸ. ಧಡೂತಿ ಮಹಿಳೆಯಾಗಿದ್ದ ಸಾರಾ ಮ್ಯಾಪ್ ಈ ರೀತಿ ತೊಂದರೆಗೆ ಒಳಗಾದ ಮೂಳೆಗಳನ್ನು ಸರಿಯಾದ ಜಾಗದಲ್ಲಿ ಮತ್ತೆ ಕೂಡಿಸುವಲ್ಲಿ ನಿಷ್ಣಾತರು ಎಂದು ಹೆಸರಾಗಿದ್ದರು. ವಿಪರೀತ ಒರಟು ಸ್ವಭಾವದ, ಕೆಟ್ಟ ಬಾಯಿನ, ಮಹಾ ಕೋಪಿಷ್ಟ ಹೆಂಗಸು ಎಂದೇ ಅವರ ಖ್ಯಾತಿ! 1730 ರ ದಶಕದಲ್ಲಿ ಸಾರಾ ಅವರ ಪ್ರಸಿದ್ಧಿ ಮುಗಿಲು ಮುಟ್ಟಿತ್ತು! ಕೆಲವು ವೈಯಕ್ತಿಕ ಸಮಸ್ಯೆಗಳಿಂದ ಅವರು ತಮ್ಮೆಲ್ಲ ಹಣ ಕಳೆದುಕೊಂಡು ನಿರ್ಗತಿಕರಾದರು ಎಂದು ಹೇಳಲಾಗಿದೆ. ವಿಲಿಯಮ್ ಹೊಗರ್ಥ್ ಅವರ ಅಂದಿನ ಕಾಲದ ಪ್ರಸಿದ್ಧ ವೈದ್ಯಕೀಯ ನಿಪುಣರ ಕೆತ್ತನೆಯಲ್ಲಿ ಸಾರಾ ಮ್ಯಾಪ್ ಅವರು ಎಲ್ಲರಿಗಿಂತ ಮೇಲೆ, ನಡು ಮಧ್ಯೆ ಇದ್ದಾರೆ!

This 1819 colored etching by the British artists George Cruikshank based on the work by William Hogarth shows an obese woman called Sarah Sally Mapp, the most famous bone-setter of 18th century England! The era of specialization was far from reality at those times. Most of the physicians treated everyone and every disease. However, specialization in the medical field started from orthopedics! It was followed by dentists, eye doctors, mid-wives, hernia surgeons, and those who removed the insanity stone from the head. Horse-riding was both a need and fashion of those times. Falling from the horseback often resulted in a fracture of bones or dislocation of joints – both requiring attention and setting. In the absence of x-ray and other diagnostic tools, it was largely to the expertise and fame of the bone setters that the injured would be drawn in. Thus, the bone-setters had a significantly high income and the resultant high status in society. Sally Mapp was famed as an expert in this regard. She had extremely rough attitude with bad language and an equally bad temper to match! She was at the peak of her career in 1730. However, she lost all her fortune due to some personal issues and ended up destitute. In a 1736 etching of the famous medical personalities of the 18th century by William Hogarth, titled “The Company of Undertakers”, Sarah Sally Mapp occupies the highest position in the center!

107. Quacks – Journey to Eternity




A couple buy some narcotics from an apothecary whose assistant, Death, works with a pestle and mortar in the back room. Coloured lithograph by J. Grandville. Wellcome Collection. Attribution 4.0 International (CC BY 4.0)

ಜೀನ್ ಜಾಕ್ವೆಸ್ ಗ್ರಾಂಡ್ವಿಲ್ ಎನ್ನುವ ಫ್ರೆಂಚ್ ಚಿತ್ರಕಾರ 1840 ರ ಸುಮಾರಿಗೆ ರಚಿಸಿರುವ ವರ್ಣ ವ್ಯಂಗ್ಯಚಿತ್ರ. ಮಗುವಿನ ಜೊತೆ ಔಷಧಾಲಯಕ್ಕೆ ಬಂದಿರುವ ದಂಪತಿ, ಮತ್ತಿನ ಔಷಧ ಖರೀದಿ ಮಾಡುತ್ತಿದ್ದಾರೆ. ಹಿನ್ನೆಲೆಯಲ್ಲಿ ಖುದ್ದು ಸಾವು ಅಪೋಥಕರಿಯ ಸಹಾಯಕನಾಗಿ ಮದ್ದು ಅರೆಯುತ್ತಿದೆ! ತನ್ನ ಮುಖಭಾವ ತಿಳಿಯದಂತೆ ಅಂಗಡಿಯಾತ ಕಪ್ಪು ಕನ್ನಡಕ ಹಾಕಿದ್ದಾನೆ. ಮತ್ತಿನ ಔಷಧಗಳಿಂದ ಇಡೀ ಪೀಳಿಗೆ ಹಾಳಾಗುವ ತಲ್ಲಣವನ್ನು ಇಲ್ಲಿ ತೋರಿದೆ.

This 1840 lithograph by the French artist Jean-Jacques Grandville is titled "Journey to Eternity". The couple with a small child is visiting an apothecary to buy narcotics. Death himself is preparing the medicine. The shopkeeper is wearing a black spectacle to hide his looks. The overall feel of the picture is gloomy and warns the damaging effects of narcotics on generations.

108. Quacks – Home Rule Bill



W.E. Gladstone as a quack doctor selling remedies from his caravan; representing his advocacy of the Home Rule Bill in Parliament. Chromolithograph by T. Merry, 1889. Wellcome Collection. Attribution 4.0 International (CC BY 4.0)

ಟಾಮ್ ಮೆರ್ರಿ ಎಂಬ ಬ್ರಿಟಿಷ್ ಕಲಾವಿದ 1889 ರಲ್ಲಿ ರಚಿಸಿದ ವ್ಯಂಗ್ಯ ಚಿತ್ರ. ಈ ಚಿತ್ರದಲ್ಲಿ ಕಾಣುವವರು ಆ ಹಿಂದೆ ಬ್ರಿಟಿಷ್ ಪ್ರಧಾನಮಂತ್ರಿ ಆಗಿದ್ದ ವಿಲಿಯಮ್ ಗ್ಲಾಡ್ ಸ್ಟೋನ್. ಈ ಚಿತ್ರದಲ್ಲಿ ಗ್ಲಾಡ್ ಸ್ಟೋನ್ ಅವರನ್ನು ಖೊಟ್ಟಿ ಔಷಧ ಮಾರುವವನ ರೂಪದಲ್ಲಿ ಚಿತ್ರಿಸಲಾಗಿದೆ. ಬ್ರಿಟನ್ ನ ಭಾಗವಾಗಿದ್ದ ಐರ್ಲೆಂಡ್ ಪ್ರಾಂತ್ಯಕ್ಕೆ ಸ್ವಾಯತ್ತತೆ ಪ್ರಕಟಿಸಿ ಹೋಂ ರೂಲ್ ಎನ್ನುವ ಶಾಸನವನ್ನು ತಂದರು. “ಹೋಂ ರೂಲ್ ಎನ್ನುವುದು ಐರ್ಲೆಂಡ್ ನ ಗಾಯಗಳಿಗೆ ಚಿಕಿತ್ಸೆ” ಎನ್ನುವ ಅವರ ಮಾತನ್ನು ವಿರೋಧಿಸಿ ಬರೆದ ವ್ಯಂಗ್ಯ ಚಿತ್ರ ಇದು. ಹೋಂ ರೂಲ್ ಹೆಸರಿನಲ್ಲಿ ಖೊಟ್ಟಿ ಔಷಧ ಮಾರುತ್ತಿರುವ ಧೂರ್ತ ವೈದ್ಯನಂತೆ ಅವರನ್ನು ಚಿತ್ರಿಸಲಾಗಿದೆ.

This 1889 by the British cartoonist Tom Merry depicts the then British Prime Minister Mr. William Gladstone. The cartoon takes a dig at Mr. Gladstone’s Home Rule advocacy for the autonomy of Ireland. The cartoon portrays Mr. Gladstone as a quack in retaliation for his statement that “Home Rule would be the treatment for the wounds inflicted on Ireland”. In the cartoon, Mr. Gladstone’s caravan bears inscriptions reading 'Dr. Gladstone's infallible Home Rule Ointment'; 'The heart Midlothian'; 'Gladstonia glamour'; and 'Capacity of a radical voter’s stomach'. The cartoon is titled “The Travelling Quack”.

109. Phrenology - Edinburgh Phrenological Society



George Combe lecturing on phrenology to a large mixed audience in his Edinburgh home?; presented with protuberances covering his head. Coloured lithograph by L. Bump, 1826, after J. Lump. Wellcome Collection. Attribution 4.0 International (CC BY 4.0)

ಪ್ರಾಚೀನ ವೈದ್ಯಕೀಯದಲ್ಲಿ ಖೊಟ್ಟಿ ಜನರಿಗೇನೂ ಕಡಿಮೆ ಇರಲಿಲ್ಲ! ಇದರಲ್ಲಿ ಒಂದು "ಫ್ರೀನಾಲಜಿ" - ತಲೆಬುರುಡೆಯ ಮೇಲಿದ್ದ ಉಬ್ಬು-ತಗ್ಗುಗಳಿಂದ ಓರ್ವ ಮನುಷ್ಯನ ಮೆದುಳಿನ ಸಾಮರ್ಥ್ಯವನ್ನು ಊಹಿಸುವುದು! ಮೆದುಳು ಯಾವ ದಿಕ್ಕಿನಲ್ಲಿ ಬೆಳೆದರೆ, ತಲೆ ಬುರುಡೆ ಆ ದಿಕ್ಕಿನಲ್ಲಿ ಉಬ್ಬುತ್ತದೆ ಎಂದು ನಂಬಿಕೆ. ಅಂದರೆ, ತಲೆ ಬುರುಡೆ ಎಲ್ಲಿ ಉಬ್ಬಿದ್ದರೆ, ಮೆದುಳಿನ ಆ ಭಾಗ ಚೆನ್ನಾಗಿ ವಿಕಸನವಾಗಿದೆ ಎಂದು ಅಂದಾಜು! ವಿಕಸಿತ ಭಾಗಕ್ಕೆ ಸಂಬಂಧಿಸಿದ ವಿಷಯಗಳ ನಿರ್ವಹಣೆಯಲ್ಲಿ ಆ ವ್ಯಕ್ತಿ ಸಮರ್ಥ ಎಂದು ಹೇಳುವ ವಿಧಾನ! ಹಳೆಯ ಕಾಲದ ನಂಬಿಕೆಗಳನ್ನು ಆಧರಿಸಿ ಜರ್ಮನ್ ವೈದ್ಯ ಫ್ರಾನ್ಜ್ ಗಾಲ್ ಅವರು 1796 ರಲ್ಲಿ ಆರಂಭಿಸಿದ ಈ ಸಿದ್ಧಾಂತ, ಯುರೋಪಿನ ಹಲವೆಡೆ ಬಲವಾಗಿ ಸ್ಥಾನ ಕಂಡುಕೊಂಡಿತು! 1820 ರಲ್ಲಿ

ಇಂಗ್ಲೆಂಡ್ ನ ಎಡಿನ್ಬರೋ ನಲ್ಲಿ ಇದರ ಸಂಘವೂ ಆರಂಭವಾಯಿತು! ಜಾರ್ಜ್ ಕೂಂಬ್ ಎಂಬ ಸ್ಕಾಟ್ಲ್ಯಾಂಡ್ ವಕೀಲರು 1820 ರಲ್ಲಿ ಎಡಿನ್ಬರೋ ಫ್ರೀನಾಲಜಿ ಸಂಘವನ್ನು ಹುಟ್ಟು ಹಾಕಿದರು. ಈ ಚಿತ್ರದಲ್ಲಿ ಕೂಂಬ್ ಅವರು ಫ್ರೀನಾಲಜಿ ಬಗ್ಗೆ ಉಪನ್ಯಾಸ ನೀಡುತ್ತಿರುವುದನ್ನು ತೋರಿದೆ. ಖುದ್ದು ಕೂಂಬ್ ಅವರ ತಲೆಯನ್ನು ಹಲವಾರು ಉಬ್ಬುತಗ್ಗುಗಳು ಇರುವಂತೆ ಚಿತ್ರಿಸಲಾಗಿದೆ. ಈ ಚಿತ್ರವನ್ನು 1826 ರಲ್ಲಿ “ಲಂಪ್ ಮತ್ತು ಬಂಪ್” ಎನ್ನುವವರು ರಚಿಸಿದ್ದಾರೆ ಎಂದೇ ವ್ಯಂಗ್ಯ ಮಾಡಲಾಗಿದೆ! ವಿಜ್ಞಾನ ಬೆಳೆಯುತ್ತಿದ್ದಂತೆ, ಫ್ರೀನಾಲಜಿ ಮೂಲೆಗುಂಪಾಯಿತು. ಮೆದುಳಿನ ಬಗ್ಗೆ ಏನೇನೂ ತಿಳಿಯದ ಕಾಲದಲ್ಲಿ ಅದನ್ನು ಅರ್ಥ ಮಾಡಿಕೊಳ್ಳಲು ಯಾರೋ ಶ್ರಮಿಸಿದರು ಎಂಬ ಐತಿಹಾಸಿಕ ಕಾರಣಕ್ಕೆ ಇದನ್ನು ಪರಿಗಣಿಸಬಹುದು.

Quackery flourished in Europe for a long time. Phrenology was one such scam! It referred to understand the nature of the brain and intellect of the person by feeling the shape of the skull and its indentations. It was thought that the skull grows in the place where the underlying brain has grown. This particular part of brain growth is due to the inherent capability of the person. Thus, by assessing the shape of the skull, one could identify the basic strength and weaknesses of the person! Although practised for a long time, it was “systematized” by the German physician Franz Joseph Gall in 1796. It was received with a lot of enthusiasm throughout Europe. In 1820, a society for Phrenology began at Edinburgh! Except as an attempt to understand the nature of the brain when no other option was available, phrenology has no other significance. As the science of neurology progressed, phrenology passed away! In this 1826 colored lithograph, attributed to artists called Lump and Bump, is likely satirizing the picture even at the cost of its creators! George Combe was a Scottish lawyer of the 19th century and was the leader and spokesman of the phrenology movement for over 20 years. He founded the Edinburgh Phrenological Society in 1820. In this cartoon titled “Calves' heads and brains or a phrenological lecture”, he is depicted lecturing on phrenology to a large mixed audience in his Edinburgh home. He is represented with multiple protuberances covering his head. Roasting a phrenologist was a favorite pastime of the satire artists of those times!

110. Phrenology - Phrenologist's consultation




A phrenologist in his consulting room, examining the head of a young man and dictating the results to his assistant while a woman looks on. Coloured etching by George Cruikshank, 1826, after H.T.D.B. Wellcome Collection. Attribution 4.0 International (CC BY 4.0)

ಫ್ರೀನಾಲಜಿ ಎಂಬ ಖೊಟ್ಟಿ ವಿದ್ಯೆಯ ಲೇವಡಿ ಮಾಡುವ ಜಾರ್ಜ್ ಕ್ರೂಕ್ಶ್ಯಂಕ್ ಅವರ 1826 ರ ಒಂದು ವ್ಯಂಗ್ಯ ಚಿತ್ರ! ಅದನ್ನು ಬೇಕೆಂದೇ ಬಂಪಾಲಜಿ ಎಂದು ಕರೆದಿದ್ದಾರೆ. ಪುಸ್ತಕದ ಮೇಲೆ ಕೂತಿರುವ (ಅಂದರೆ ವಿದ್ಯೆಯನ್ನು ನಿರಾಕರಿಸುವ) ಪೆದ್ದು ವ್ಯಕ್ತಿಯ ತಲೆ ಸೋಕುತ್ತಾ, ಅದರ ಲಕ್ಷಣಗಳನ್ನು ತಮ್ಮ ಸಹಾಯಕನಿಗೆ ಹೇಳುವ ಜಾನ್ ಡಿ ವಿಲ್ಲೆ ಎಂಬ ಖೊಟ್ಟಿ ವೈದ್ಯ; "ಬಹಳ ಜಾಣ ಬುದ್ಧಿಯ 32 ನೆಯ ಸಂಖ್ಯೆಯ ಬುರುಡೆ" ಎಂದು ಬರೆದುಕೊಳ್ಳುತ್ತಿರುವ ಸಹಾಯಕ; ಬದಿಯಲ್ಲಿ ನಿಂತಿರುವ ಅಷ್ಟೇ ಪೆಚ್ಚು ಮುಖದ ಮಹಿಳೆ ಕಾಣುತ್ತಾರೆ. ಆಕೆ ಒಂದು ದೊಡ್ಡ ಗಾತ್ರದ ಟಾಯ್ಲೆಟ್ ಪೇಪರ್ ಹೊತ್ತಿದ್ದಾರೆ! ಮೇಜಿನ ಮೇಲೆ ಇರುವ ಬುರುಡೆಯ ಬದಿಯಲ್ಲಿ "ಜಾನ್ ಥರ್ಟೆಲ್ ಎಂಬ ಒಳ್ಳೆಯ ಗುಣದವನ ಬುರುಡೆ" ಎಂದು ಬರೆದಿದೆ. ಆ ಜಾನ್ ಥರ್ಟೆಲ್ ಎಂಬಾತ ಕೊಲೆ ಮಾಡಿ ಗಲ್ಲು ಶಿಕ್ಷೆಗೆ ಈಡಾಗಿದ್ದ! ಒಟ್ಟಾರೆ, ಒಂದು ಖೊಟ್ಟಿ ಪದ್ದತಿಯನ್ನು ಅದ್ಭುತವಾಗಿ ಲೇವಡಿ ಮಾಡುವ ಶ್ರೇಯ ಅಂದಿನ ಚಿತ್ರಗಾರರಿಗೆ ಸಲ್ಲಬೇಕು!

A colored lithograph by the British artist George Cruikshank 1826 ridicules phrenology by calling it Bumpology! The man sitting in the book symbolizes denial of education. But being rich, he wished for social adulation! A quack named Jean de Ville is feeling the head of this man and dictating the features to his assistant, who has written "very large wit number 32"! The facial features of the man sitting on the book are matched by another lady, who seems to be carrying a massive roll of toilet paper! A skull placed on the table is identified as belonging to a good man called John Thurtell, who was sentenced to death for a murder! Overall, the cartoon reminds one of conferring Knighthood by the Queen! The cartoonists of those times could include a lot of sarcasm in one picture!


111. Phrenology - Phrenologist's Quandary



ಫ್ರೀನಾಲಜಿ ಎಂಬ ಖೊಟ್ಟಿ ಪದ್ಧತಿಯ ಬಗ್ಗೆ ಚಿತ್ರಕಾರರ ವಿಡಂಬನೆ ಸಾಕಷ್ಟಿದೆ! ಈ ಚಿತ್ರವನ್ನು ಆಲ್ಬರ್ಟ್ ವಿಲಿಯಮ್ ಹೊಲ್ಡೆನ್ ಎಂಬ ಬ್ರಿಟಿಷ್ ಕಲಾವಿದ 1890 ರ ಸುಮಾರಿಗೆ ರಚಿಸಿದ್ದಾರೆ ಎಂದು ಊಹಿಸಲಾಗಿದೆ. ಇದರಲ್ಲಿ ಓರ್ವ ಫ್ರೀನಾಲಜಿ ವೈದ್ಯ ತನ್ನ ತಲೆಯನ್ನು ಒಂದು ಬುರುಡೆಯ ಮಾದರಿಯ ಜೊತೆ ಹೋಲಿಸಿಕೊಂಡು ಕಂಗಾಲಾಗುತ್ತಿದ್ದಾರೆ!

This 1890 oil painting by the British artist Albert William Holden mocks the practice of “Phrenology”! This painting depicts the anxiety of a person who seems to be comparing the shape of his head with a skull of a person probably known to him! Phrenology has always been a matter of ridicule for the 19^{th}-century artists!

112. Cholera – Confusion of a Patient



"File:A cholera patient experimenting with remedies. Coloured Wellcome L0003051.jpg" is licensed under CC BY 4.0

ಜಗತ್ತಿನ ಇತಿಹಾಸದಲ್ಲಿ 19 ನೆಯ ಶತಮಾನ ಕಷ್ಟಗಳ ಕಾಲಾವಧಿ. ಒಂದೆಡೆ ಯುದ್ಧಗಳು; ಮತ್ತೊಂದೆಡೆ ನಗರೀಕರಣ; ಜೊತೆಗೆ ಕಾರ್ಖಾನೆಗಳ ನಿರ್ಮಾಣ; ಬಡವರ ಮತ್ತು ಸಿರಿವಂತರ ನಡುವೆ ಏರುತ್ತಿರುವ ಅಂತರ; ಅವ್ಯವಸ್ಥಿತ ಮಹಾನಗರಗಳ ಆರಂಭ; ಗಗನಕುಸುಮವಾಗಿದ್ದ ಸಮಷ್ಟಿ ನೈರ್ಮಲ್ಯ; ಕೊಚ್ಚೆ ಕೊಳಕು, ಮತ್ತು ಮಾಲಿನ್ಯಗಳ ದೆಸೆಯಿಂದ ಹೆಚ್ಚುತ್ತಿದ್ದ ಸಾಂಕ್ರಾಮಿಕ ಕಾಯಿಲೆಗಳು; ಅವುಗಳ ಬಗ್ಗೆ ಕಿಂಚಿತ್ತೂ ಪರಿವೆಯಿಲ್ಲದ ರಾಜಕೀಯ ವ್ಯವಸ್ಥೆ; ಈ ರೋಗಗಳ ವಿರುದ್ಧ ವ್ಯವಸ್ಥಿತವಾಗಿ ಸೆಣಸಾಡಲು ಇನ್ನೂ ಸಿದ್ಧವಿಲ್ಲದ ಆರೋಗ್ಯ ರಕ್ಷಕರು - ಒಟ್ಟಾರೆ, ಬಹಳ ದುರ್ಭರ ಪರಿಸ್ಥಿತಿ. ಅಂತಹ ಕಾಲಘಟ್ಟದ ಒಂದು ಭಯಂಕರ ವ್ಯಾಧಿ – ಕಾಲರಾ. 1817 ರಲ್ಲಿ ಆರಂಭವಾದ ಮೊದಲ ಕಾಲರಾ ಜಾಗತಿಕ ಸಾಂಕ್ರಾಮಿಕ ಒಟ್ಟು ಏಳು ಆವೃತ್ತಿಗಳನ್ನು ಕಂಡು, ಇಂದಿಗೂ ಮುಂದುವರೆದಿದೆ. ಈವರೆಗೆ ಕೋಟ್ಯನುಕೋಟಿ ಮಂದಿಯನ್ನು ಕಾಲರಾ ಸಂಹರಿಸಿದೆ. ಇಂದಿಗೂ ಜಗತ್ತಿನಾದ್ಯಂತ ಪ್ರತೀವರ್ಷ ಒಂದು ಲಕ್ಷ ಮಂದಿ ಕಾಲರಾಗೆ ಬಲಿಯಾಗುತ್ತಾರೆ. ರಾಬರ್ಟ್ ಕ್ರೂಕ್ಶ್ಯಾಂಕ್ ಎಂಬ ವ್ಯಂಗ್ಯಚಿತ್ರಕಾರರು 1832 ರಲ್ಲಿ ರಚಿಸಿದ ಚಿತ್ರ. ಕಾಲರಾ ಚಿಕಿತ್ಸೆಯ ಬಗ್ಗೆ ರೋಗಿಯೊಬ್ಬರ ದ್ವಂದ್ವಗಳನ್ನು ಬಿಂಬಿಸುತ್ತದೆ. ಯಾವುದೇ ಅಧಿಕೃತ ಚಿಕಿತ್ಸೆ ತಿಳಿಯದಿರುವಾಗ, ತಾನೇನು ಮಾಡಬೇಕು ಎಂದು ನಿರ್ಧರಿಸಲಾಗದೆ, ಅವೆಲ್ಲವನ್ನೂ ಒಟ್ಟಿಗೆ ಇಟ್ಟುಕೊಂಡು ನಿರ್ಧರಿಸಲಾಗದೇ ತೊಳಲಾಡುತ್ತಿರುವ ರೋಗಿಯ ಸ್ಥಿತಿ.

The 19th Century was a period of difficulties for human civilization. It faced wars, urbanization, industrialization, the distinction between rich and poor, growth of cities, cleanliness of public spaces, increasing filth, contagious diseases, careless political systems, unequipped medical personnel – led to dangerously grand chaos. One of such mayhems manifested in the form of a Cholera pandemic. The first pandemic of Cholera began in 1817. Currently, the seventh pandemic of Cholera is still going on. It has killed millions of people. Even now, over a hundred thousand people die of Cholera annually. This colored lithograph by Robert Cruikshank in 1832 shows the confusion of a Cholera patient. When the people are ignorant coupled with the absence of definitive treatment, the proposed therapeutic options are a source of confusion. This is the picture of one such patient.

113. Cholera in France



"JOHANNOT Alfred,1832 - Le Duc d'Orléans à l'Hôtel-Dieu Visitant les Malades du Choléra (Carnavalet) - Détail 1-P1520344-" by L'art au présent is licensed under CC BY-NC-ND 2.0

ಎರಡನೆಯ ಜಾಗತಿಕ ಕಾಲರಾ ವ್ಯಾಧಿ 1829ರಲ್ಲಿ ಆರಂಭವಾಯಿತು. ಯುರೋಪು ಮತ್ತು ಅಮೆರಿಕದ ದೇಶಗಳನ್ನು ಇನ್ನಿಲ್ಲದಂತೆ ಕಂಗೆಡಿಸಿತು. ಫ್ರಾನ್ಸ್ ದೇಶ ಕಾಲರಾ ಹತ್ತಿಕ್ಕುವಲ್ಲಿ ವಿಶೇಷ ಗಮನ ಹರಿಸಿತು. ಆಸ್ಪತ್ರೆಗಳನ್ನು ಸಜ್ಜುಗೊಳಿಸಿತು; ಹೋಟೆಲ್ ಗಳನ್ನು ವಶಕ್ಕೆ ಪಡೆದು ರೋಗಿಗಳ ವಸತಿಗೆ ಬಳಸಿತು; ಕಾಯಿಲೆ ನಿಯಂತ್ರಣದ ಬಗ್ಗೆ ಅರಿಯಲು ಅಧಿಕಾರಿಗಳನ್ನು ವಿದೇಶಕ್ಕೆ ಕಳಿಸಿತು; ಸೈನ್ಯದ ನೆರವಿನಿಂದ ಎಲ್ಲೆಡೆ ನೈರ್ಮಲ್ಯ ಪಾಲನೆ ಜಾರಿಮಾಡಿತು. ಆದರೂ ಕಡೆಗೆ ಗೆದ್ದದ್ದು ಕಾಯಿಲೆಯೇ! 1832ರಲ್ಲಿ ಸುಮಾರು 100,000 ಮಂದಿ ಫ್ರಾನ್ಸ್ ನಲ್ಲಿ ಕಾಲರಾದಿಂದ ಮರಣಿಸಿದರು. ಫ್ರೆಂಚ್ ಕಲಾವಿದ ಆಲ್ಫ್ರೆಡ್ ಜೊಹಾನ್ನೊ ಅವರು 1832 ರಲ್ಲಿ ರಚಿಸಿರುವ ಈ ತೈಲ ವರ್ಣಚಿತ್ರದಲ್ಲಿ ರಾಜಮನೆತನದ ಪ್ರಮುಖರೊಬ್ಬರು ಪ್ಯಾರಿಸ್ ನ ಹೋಟೆಲ್ ಒಂದರಲ್ಲಿ ಇದ್ದ ಕಾಲರಾ ರೊಗಿಗಳನ್ನು ನೋಡಲು ಬಂದಿರುವ ದೃಶ್ಯವಿದೆ. ರೋಗಿಗಳ ಪರಿಸ್ಥಿತಿ ಚಿಂತಾಜನಕವಾಗಿದೆ.

As the Second Cholera Pandemic of 1829 progressed, France was one of the first countries to prepare itself for fighting the disease. Many hospitals were upgraded; many hotels were taken over to house the diseased; experts were dispatched to other affected nations to learn the strategies of disease management; sanitary measures were enforced with the help of the military, and so on. However, none of these measures worked. The death toll in France alone was 100,000 in the year 1832. This 1832 painting by the French artist Alfred Johannot shows the Duke of Orleans visiting the cholera patients put up in a hotel in Paris during the cholera epidemic of 1832. The plight of patients is vividly picturized.

114. Cholera – Hunting for a Patient



A London Board of Health hunting after cases like a cholera. Credit: Wellcome Collection. Attribution 4.0 International (CC BY 4.0)

ಲಂಡನ್ ನಗರದಲ್ಲಿ ಕಾಲರಾ ಪತ್ತೆ ಮಾಡುವ ಅಧಿಕಾರಿಗಳು. ದಿನಕ್ಕೆ 20 ಗಿನಿ ನಾಣ್ಯಗಳಂತೆ ಭತ್ಯೆ ಪಡೆಯುತ್ತಿದ್ದ ಈ ಅಧಿಕಾರಿಗಳು ಕಾಲರಾ ರೋಗಿಗಳನ್ನು ಪತ್ತೆ ಮಾಡಿ, ನಗರ ನಿರ್ವಾಹಕರಿಗೆ ನೀಡಬೇಕಿತ್ತು. ಅಜ್ಞಾತ ಕಲಾವಿದನೊಬ್ಬ 1832 ರಲ್ಲಿ ಅವರನ್ನು ಬಿಂಬಿಸಿರುವ ವ್ಯಂಗ್ಯಚಿತ್ರ.

This 1832 cartoon by an unknown artist ridicules the healthcare officials of London. The primary job of these people was to detect the Cholera patients and hand them over to the city officials. For this, they were paid 20 guineas per day. Their dress and work contradict each other!

115. Cholera during the First Balkan War



Cholera By Unknown author / Public domain. Source gallica.bnf.fr/ Bibliothèque nationale de France

1912-13 ರಲ್ಲಿ ಮೊದಲನೆಯ ಬಾಲ್ಕನ್ ಕದನ ನಡೆಯಿತು. ಬಲ್ಗೇರಿಯಾ, ಸೆರ್ಬಿಯ, ಗ್ರೀಸ್ ಮತ್ತು ಮಾಂಟೆನಿಗ್ರೊ ಎಂಬ ಬಾಲ್ಕನ್ ದೇಶಗಳು ಒಟ್ಟಾಗಿ ಟರ್ಕಿಯ ಒಟ್ಟೊಮನ್ ಸಾಮ್ರಾಜ್ಯದ ಮೇಲೆ ಯುದ್ಧ ಮಾಡಿದವು. ಅಗಾಧ ಸೈನ್ಯಶಕ್ತಿಯ ಒಟ್ಟೊಮನ್ ಸಾಮ್ರಾಜ್ಯಕ್ಕೆ ಭೀಕರ ಸೋಲಾಯಿತು. ಕಾಲರಾ ಧಾಳಿಗೆ ತುತ್ತಾದ ಟರ್ಕಿ ಸೈನ್ಯಕ್ಕೆ ಚೇತರಿಸಿಕೊಳ್ಳುವ ಅವಕಾಶ ದೊರಕಲೇ ಇಲ್ಲ. ವೈರಿಗಳಿಗಿಂತ ಹೆಚ್ಚಾಗಿ ಕಾಲರಾ ರೋಗವೇ ಟರ್ಕಿ ಸೈನಿಕರನ್ನು ಕೊಂದಿತು. ಅಜ್ಞಾತ ಕಲಾವಿದರೋರ್ವರು ಇದನ್ನು ಸೂಚಿಸಲು ರಚಿಸಿರುವ ಚಿತ್ರವೊಂದು 1912 ರಲ್ಲಿ ಫ್ರೆಂಚ್ ಪತ್ರಿಕೆಯೊಂದರ ಮುಖಪುಟದಲ್ಲಿ ಬಂದಿತು. ಮೇಲೆ ಹಾರುತ್ತಿರುವ ಸಾವು, ತನ್ನ ಕತ್ತಿಯನ್ನು ಬೀಸಿ ಟರ್ಕಿಯ ನೂರಾರು ಸೈನಿಕರನ್ನು ಕೊಲ್ಲುತ್ತಿರುವ ಚಿತ್ರ.

The first Balkan war happened during 1912-13. Balkan states of Bulgaria, Serbia, Greece, and Montenegro came together against the Ottoman Empire of Turkey. Despite possessing an enormous army, the Ottoman Empire was defeated. One of the main reasons for this was the Cholera attack on the Turkish army. This picture by an unknown artist was published in 1912 by a French magazine. The flying death is sweeping its weapon shaped like a Turkish Scimitar, killing hundreds of Turkish army men.

116. Nursing – Sisters of Mercy



The_Sisters_of_Mercy By Henriette Browne / Public domain. https://creativecommons.org/publicdomain/mark/1.0/deed.en

19 ನೆಯ ಶತಮಾನದ ಹೆನ್ರಿಯೆಟ್ ಬ್ರೌನ್ ಎಂಬ ಅಭಿಜಾತ ಫ್ರೆಂಚ್ ಕಲಾವಿದೆ 1859 ರಲ್ಲಿ ರಚಿಸಿದ

ಪ್ರಸಿದ್ಧ ತೈಲ ವರ್ಣಚಿತ್ರ. ಮಿಲಾನ್ ನ ಆರ್ಚ್ ಬಿಷಪ್ ಆಗಿದ್ದ ಸಂತ ಚಾರ್ಲ್ಸ್ ಬೊರೋಮಿಯೊ ಅವರ ಗೌರವಾರ್ಥ 1626 ರಲ್ಲಿ "ಸಿಸ್ಟರ್ಸ್ ಆಫ್ ಮರ್ಸಿ" ಎನ್ನುವ ಸಂಘ ಸ್ಥಾಪನೆ ಆಯಿತು. ಇಲ್ಲಿ ಸೇವೆ ಸಲ್ಲಿಸುತ್ತಿದ್ದ ಹೆಣ್ಣು ಮಕ್ಕಳು ರೋಗಿಗಳ ಶುಶ್ರೂಷೆ ಮಾಡುತ್ತಿದ್ದರು. 18 ನೆಯ ಶತಮಾನದ ವೇಳೆಗೆ ಇವರ ನೆರವನ್ನು ಹಲವಾರು ಆಸ್ಪತ್ರೆಗಳು ಪಡೆಯುತ್ತಿದ್ದವು. ಅನಾರೋಗ್ಯದಿಂದ ಬಳಲುತ್ತಿರುವ ಒಂದು ಮಗುವನ್ನು "ಸಿಸ್ಟರ್ಸ್ ಆಫ್ ಮರ್ಸಿ" ಸಂಸ್ಥೆಯ ಇಬ್ಬರು ದಾದಿಯರು ಆರೈಕೆ ಮಾಡುವ ಈ ಚಿತ್ರದಲ್ಲಿ ಪ್ರತಿಯೊಂದು ವಿವರವೂ ಅತ್ಯಂತ ಸೊಗಸಾಗಿ ಮೂಡಿ ಬಂದಿದೆ.

This 1859 oil painting by the French artist Henriette Browne shows a sick child being cared for by nurses of the "Sisters of Mercy" organization. The organization was started in 1626 in the honor of Arch Bishop of Milan, Saint Charles Borromeo. Several dedicated ladies were performing many service-oriented works, such as caring for the sick, provision of homes for the poor, establishing schools for the underprivileged, and so on. A commemorative German postal stamp was released on this painting in 1951. The painting is appreciated for its life-like imagery and the compassion it depicts.

117. Nursing - Florence Nightingale



Florence Nightingale. Coloured lithograph. Wellcome Collection. Attribution 4.0 International (CC BY 4.0)

1853 ರಿಂದ 1856 ರವರೆಗೆ ನಡೆದ ಕ್ರಿಮಿಯನ್ ಯುದ್ಧದಲ್ಲಿ ಟರ್ಕಿಯ ಒಟ್ಟೊಮನ್ ಸಾಮ್ರಾಜ್ಯದ ಸಹಭಾಗಿಗಳಾದ ಬ್ರಿಟನ್, ಫ್ರಾನ್ಸ್ ಮತ್ತು ಸಾರ್ಡಿನಿಯ ದೇಶಗಳು ಒಟ್ಟುಗೂಡಿ ರಷ್ಯಾ ದೇಶವನ್ನು ಸೋಲಿಸಿದವು. ಈ ಯುದ್ಧದಲ್ಲಿ ಗಾಯಗೊಂಡ ಸೈನಿಕರ ಸೇವೆಗೆ ತನ್ನ 38 ಜೊತೆಗಾತಿಯರನ್ನು ಸೇರಿಸಿ ಬಂದ ಫ್ಲಾರೆನ್ಸ್ ನೈಟಿಂಗೇಲ್, ಅಮೋಘ ಸೇವೆ ಸಲ್ಲಿಸಿ ಎಲ್ಲರ ಮನ ಗೆದ್ದರು. ರೋಗಿಗಳ, ಗಾಯಗೊಂಡವರ ಆರೈಕೆಯನ್ನಷ್ಟೇ ಅಲ್ಲದೇ, ಹಲವಾರು ಆರೋಗ್ಯ ಸಮಸ್ಯೆಗಳನ್ನು ಚಿತ್ರ-ಗಣಿತದಲ್ಲಿ ತೋರುವ ಸಾಮರ್ಥ್ಯ ಫ್ಲಾರೆನ್ಸ್ ನೈಟಿಂಗೇಲ್ ಅವರಿಗಿತ್ತು. ನರ್ಸಿಂಗ್ ಕ್ಷೇತ್ರದಲ್ಲಿ ಅವರು ಮನೆಮಾತಾಗಿದ್ದಾರೆ. 1880 ರ ದಶಕದಲ್ಲಿ ಹೆನ್ರಿಯೆಟ್ಟಾ ರೇ ಎಂಬ ಬ್ರಿಟಿಷ್ ಚಿತ್ರಗಾರ್ತಿ ರಚಿಸಿದ ವರ್ಣಚಿತ್ರ. ಫ್ಲಾರೆನ್ಸ್ ನೈಟಿಂಗೇಲ್ ಅವರು ರಾತ್ರಿ ವೇಳೆ ದೀಪದ ನೆರವಿನಿಂದ ರೋಗಿಗಳ ಆರೈಕೆ ಮುಂದುವರೆಸುತ್ತಿದ್ದರು. ಫ್ಲಾರೆನ್ಸ್ ನೈಟಿಂಗೇಲ್ ಅವರು "The Lady with the Lamp" ಎನ್ನುವ ಅಭಿದಾನಕ್ಕೆ ಕಾರಣವಾದ ಚಿತ್ರ.

The Crimean war happened between 1853-56. Britain, France, and Sardinia joined the Ottoman Empire of Turkey to defeat Russia. Florence Nightingale came with a group of 38 like-minded ladies to serve the wounded soldiers. Her dedicated work won laurels from everyone. Not only she cared for the health of the needy, but she also analyzed the practical issues affecting healthcare using graphs and pictures. Florence Nightingale is a household name in the field of nursing. This painting titled "Lady with the Lamp" was created by the British artist Henrietta Rae around 1880, showing Florence Nightingale moving around with a lamp in the hand during nighttime to care for the sick.

118. Nursing - Franco-Prussian War



Franco-Prussian War: two nurses treating a soldier on the battlefield; part of an exhibition from the German widows' and orphans fund. Wood engraving by W. Hollidge. Wellcome Collection. Attribution 4.0 International (CC BY 4.0)

ವಿಲಿಯಮ್ ಹೋಲಿಜ್ ಎಂಬ ಬ್ರಿಟಿಷ್ ಕಲಾವಿದ ಮರದ ಫಲಕದ ಮೇಲೆ 1890 ರ ಸುಮಾರಿಗೆ ಮಾಡಿರುವ ಕುಸುರಿ ಚಿತ್ರ. 1870-71 ರಲ್ಲಿ ನಡೆದ ಜರ್ಮನ್-ಫ್ರಾನ್ಸ್ ಕದನದ ಒಂದು ಚಿತ್ರಣ. ಯುದ್ಧಭೂಮಿಗೆ ತೆರಳಿ, ಅಲ್ಲಿ ಗಾಯಗೊಂಡವರ ಸೇವೆ ಮಾಡಿದ ನರ್ಸ್ ಗಳ ಧೈರ್ಯ ಅಪಾರ ಶ್ಲಾಘನೆ ಪಡೆಯಿತು. ಅಂತಹ ಇಬ್ಬರು ನರ್ಸ್ ಗಳನ್ನು ಈ ಚಿತ್ರ ತೋರುತ್ತದೆ. ಯುದ್ಧ ಮುಗಿದ ನಂತರ ಸೇನಾನಾಯಕರ ಕೃತ್ಯಗಳು ಸಾರ್ವಜನಿಕ ಖಂಡನೆಗೆ ಗುರಿಯಾದವು. ಅದಕ್ಕೆ ಪ್ರಮುಖ ಕಾರಣ ಈ ನರ್ಸ್ ಗಳು ತಮ್ಮ ಜೀವವನ್ನು ಪಣಕ್ಕಿಟ್ಟು ಮಾಡಿದ್ದ ಸೇವೆ. ನರ್ಸ್ ಗಳು ತೋರಿದ ಈ ಧೈರ್ಯವನ್ನು ಗಮನಿಸಿದ ಮೇಲೆ, ಕೊಲ್ಲುವವರು ಮತ್ತು ಉಳಿಸುವವರ ನಡುವಿನ ಚರ್ಚೆ ಸಾರ್ವಜನಿಕರಲ್ಲಿ ಮೊದಲಾಯಿತು.

This 1890 wooden engraving by the British artist William Hollidge depicts two nurses serving a wounded soldier during the Franco-Prussian war of 1870-71. The services of nurses during this war were applauded by the public. After the war, the public sentiment was against the army and for the nurses, who staked their lives to attend to the wounded. This led to a fierce debate on those who killed and those who saved. Many battlefield reformations were brought in to ensure the safety of medical personnel during the subsequent wars.

119. Nursing – The Nursemaid



The_Nursemaid by George Goodwin Kilburne / Public domain. https://creativecommons.org/publicdomain/mark/1.0/deed.en

---

19-20 ನೆಯ ಶತಮಾನದ ಪ್ರಖ್ಯಾತ ಬ್ರಿಟಿಷ್ ಚಿತ್ರಕಾರ ಜಾರ್ಜ್ ಗುಡ್ವಿನ್ ಕಿಲ್ಬರ್ನ್ ಅವರು 1924 ರಲ್ಲಿ

ರಚಿಸಿದ ಜಲವರ್ಣಚಿತ್ರ. ಸಿರಿವಂತರ ಮನೆಯಲ್ಲಿ ಅಸ್ವಸ್ಥರಾಗಿದ್ದವರನ್ನು ನೋಡಿಕೊಳ್ಳಲು ದಾದಿಯರನ್ನು ನೇಮಕ ಮಾಡಲಾಗುತ್ತಿತ್ತು. ಅಂತಹ ಅನುಕೂಲ ಇಲ್ಲದಾಗ, ಅಥವಾ ಅದಕ್ಕೆ ಸಂವಾದಿಯಾಗಿ ಸಣ್ಣ ವಯಸ್ಸಿನ ಬಾಲಕಿಯರನ್ನು ಈ ಕೆಲಸಕ್ಕೆ ಹಚ್ಚಲಾಗುತ್ತಿತ್ತು. ಇಂತಹ ಬಾಲಕಿಯರನ್ನು "ನರ್ಸ್-ಮೇಡ್" ಎನ್ನುತ್ತಿದ್ದರು. ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲದ ಅಂದಿನ ಕಾಲದಲ್ಲಿ ಇದು ಸಾಮಾನ್ಯ ಪದ್ಧತಿಯಾಗಿತ್ತು. ರೋಗಿಯ ಸಮೀಪ ಇದ್ದು, ಅವರ ಸಣ್ಣ ಪುಟ್ಟ ಆವಶ್ಯಕತೆಗಳಿಗೆ ನೆರವಾಗುವುದು ಈ ಬಾಲಕಿಯರ ಮುಖ್ಯ ಕೆಲಸ. ಇಂತಹ ಒಂದು ಪ್ರಸಂಗವನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ.

This 1924 watercolor painting by the British artist George Goodwin Kilburne is titled "The Nursemaid". It depicts a sick lady being helped by a young girl. These girls assisted the chores of the house assisting the nurse and other servants in the care of the sick. Universal education of girls was still an ill-defined concept at those times. These young girls, unaware of the entire scenario, worked as helpers to the family. The innocence in the face of the young girl is striking.

120. Relief of Leiden



"Distribution of Herring and White Bread at the Relief of Leiden, 3 October 1574, Otto van Veen, 1574 - 1629" by Otto van Veen is marked with CC0 1.0

ಒಟ್ಟೊ ವಾನ್ ವೀನ್ ಎಂಬ ಡಚ್ ಕಲಾವಿದ 1574 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಹಾಲೆಂಡ್ ನ ಲೀಡನ್ ನಗರವನ್ನು 3 ನೆಯ ಅಕ್ಟೋಬರ್ 1574 ರಂದು ಆಕ್ರಮಣದಿಂದ ಮುಕ್ತಗೊಳಿಸಿದ ನಂತರ, ಅಲ್ಲಿ ಹಸಿವಿನಿಂದ ನರಳುತ್ತಿದ್ದ ಜನರಿಗೆ ಸೈನಿಕರು ಮೀನು ಮತ್ತು ರೊಟ್ಟಿಯನ್ನು ನೀಡಿದ ಚಿತ್ರ. ಎಂಭತ್ತು ವರ್ಷಗಳ ಆಂಗ್ಲೋ-ಸ್ಪಾನಿಷ್ ಕದನದ ಸಮಯದಲ್ಲಿ ಈ ನಗರವನ್ನು ವಶಪಡಿಸಿಕೊಳ್ಳಲು ಸ್ಪೇನ್ ಆಕ್ರಮಣಕಾರರಿಂದ 1573-74 ರಲ್ಲಿ ವಿಫಲ ಪ್ರಯತ್ನ ನಡೆಯಿತು. ಆ ಸಮಯದಲ್ಲಿ ನಡೆದ ಹಸಿವು, ರೋಗ, ಹಾಹಾಕಾರ, ಕಷ್ಟ ನಷ್ಟಗಳನ್ನು ಚಿತ್ರಕಾರರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಈ ಸಮಯದಲ್ಲಿ ಕಾಯಿಲೆ ಬಿದ್ದಿದ್ದ ಹಲವಾರು ರೋಗಿಗಳ ಚಿತ್ರಣವೂ ಈ ಚಿತ್ರದಲ್ಲಿದೆ. ಅನೇಕ ಮಂದಿ ಈ ವಿವರಗಳ ಅಧ್ಯಯನ ಮಾಡಿದ್ದಾರೆ. ಆ ದಿನ ಸಂಜೆ ಸ್ಪೇನ್ ಸೈನಿಕರು ಬಿಟ್ಟುಹೋಗಿದ್ದ ಕ್ಯಾರೆಟ್-ಈರುಳ್ಳಿಯ ಗಟ್ಟಿ ಸೂಪ್ ಅನ್ನೂ ಈ ಜನ ಸವಿದರು ಎನ್ನುವ ಐತಿಹ್ಯ ಇದೆ!

This 1574 oil painting by the Dutch artist Otto van Veen depicts the city of

Leiden in Holland on 3rd October 1574. In the 80-years' war and Anglo-Spanish war, the Spanish army tried to take over this city but failed during 1573-74. During those times, nothing could enter the city due to the occupancy of the Spanish army outside the city limits. This led to severe scarcity of food leading to diseases, difficulties, and commotion. People assembled on the streets hoping for someone to rescue and provide them some food. Many people died. Finally, the Spanish army was driven away by the Dutch soldiers and the city gates were opened. The people were given fish and bread which the soldiers had. On the evening of the same day, few ventured outside the city gates to discover a large quantity of carrot-onion stew left behind by the enemy soldiers! People enjoyed this stew the entire night! Many researchers have studied this historical incident.

121. Wartime hospitals in the War field



wellcomecollection A battle with a scene of military surgery. Oil painting attributed to a Flemish painter, ca. 1700(?). Public Domain Mark

---

ಯುದ್ಧಕಾಲದ ತಾತ್ಕಾಲಿಕ ಚಿಕಿತ್ಸಾಲಯಗಳು ಪ್ರತಿಯೊಂದು ಯುದ್ಧದಲ್ಲೂ ಅತ್ಯವಶ್ಯಕವಾಗಿದ್ದವು. 1700 ರ ಸುಮಾರಿಗೆ ಅಜ್ಞಾತ ಬೆಲ್ಜಿಯನ್ ಕಲಾವಿದನೊಬ್ಬ ರಚಿಸಿದ ಈ ಚಿತ್ರದಲ್ಲಿ ಅಂತಹ ಒಂದು ಚಿಕಿತ್ಸಾಲಯದ ಡೇರೆಯನ್ನು ತೋರಲಾಗಿದೆ. ಇಂತಹ ಚಿಕಿತ್ಸಾಲಯಗಳು ಯುದ್ಧಭೂಮಿಯಿಂದ ಹೊರಗೆ, ಆದರೆ ಸಾಧ್ಯವಾದಷ್ಟೂ ಸಮೀಪವಾಗಿ ಇರಬೇಕು; ಸ್ವಲ್ಪ ಮರೆಯಾಗಿ ಇದ್ದರೆ ಒಳಿತು; ಔಷಧ ಚಿಕಿತ್ಸಕರು ಮತ್ತು ಶಸ್ತ್ರಚಿಕಿತ್ಸಕರು – ಇಬ್ಬರೂ ಇರಬೇಕು. ;ಕಿತ್ಸಾಲಯದ ಪರಿಧಿಯನ್ನು ಒಂದು ಬಾವುಟದಿಂದ ನಿರ್ದೇಶಿಸಬೇಕು; ಅದರ ಮೇಲೆ ಯಾರೂ ಧಾಳಿ ಮಾಡಬಾರದು - ಎನ್ನುವ ಷರತ್ತುಗಳು ಇದ್ದವು. ಈ ಚಿತ್ರದಲ್ಲಿ ಅವೆಲ್ಲವನ್ನೂ ಸೊಗಸಾಗಿ ಬಿಂಬಿಸಲಾಗಿದೆ.

This 1700 oil painting by an unknown Flemish artist shows the scene of a temporary military hospital beside the battlefield. Such hospital tents were out of the battlefield zone but close enough for transporting the injured, covered from direct vision. The hospital tent should have both physicians and surgeons and the perimeter of the hospital zone should be designated by a white flag. There was an agreement on not to attack these temporary hospitals of either. The painting describes all these subtle details.

122. Wartime hospitals - Transportation



A badly wounded soldier being carried off the battlefield on a makeshift stretcher made of bayonets. Coloured aquatint. Wellcome Collection. Attribution 4.0 International (CC BY 4.0)

ಗಾಯಗೊಂಡವರನ್ನು ಚಿಕಿತ್ಸೆಯ ತಾಣಕ್ಕೆ ತಲುಪಿಸುವ ವಿಧಾನ ಇಂದು ಮುಂದುವರೆದ ದೇಶಗಳಲ್ಲಿ ಬಹಳ ಅಭಿವೃದ್ಧಿಗೊಂಡಿದೆ. ರೋಗಿಗಳನ್ನು ನಿಭಾಯಿಸುವ ಮೊದಲನೆಯ ಸುತ್ತಿನ ಆರೋಗ್ಯ ರಕ್ಷಕರಿಗೆ ವಿದೇಶಗಳಲ್ಲಿ ವಿಶೇಷ ತರಬೇತಿ ಇರುತ್ತದೆ. ಈ ಪ್ರಕ್ರಿಯೆಯ ಆರಂಭವಾದದ್ದು ಯುದ್ಧದಲ್ಲಿ ಗಾಯಗೊಂಡ ಸೈನಿಕರನ್ನು ಶುಶ್ರೂಷೆಗೆ ತಲುಪಿಸುವ ವಿಧಾನಗಳಿಂದ. 18 ನೆಯ ಶತಮಾನದ ಓರ್ವ ಅಜ್ಞಾತ ಕಲಾವಿದನಿಂದ ರಚಿತವಾದ ಈ ಜಲವರ್ಣ ಚಿತ್ರದಲ್ಲಿ ಕೋವಿಗಳಿಂದ ಮಾಡಿದ ಒಂದು ತಾತ್ಕಾಲಿಕ ಆಸನದಲ್ಲಿ ಗಾಯಗೊಂಡ ಓರ್ವ ಸೈನಿಕನನ್ನು ಕುಳ್ಳಿರಿಸಿ, ಆತನನ್ನು ಶುಶ್ರೂಷೆಗೆ ಒಯ್ಯುತ್ತಿದ್ದಾರೆ.

This 18th-century watercolor painting by an unknown artist shows how wounded soldiers were transported to the medical facility in the battlefront. Today, transportation and mobility of the sick is a very systematic science in developed nations, where primary healthcare workers are given special training in handling the injured and sick people with minimal disturbance of the body and maximum possible comfort. This has not percolated into the developing nations yet. The concept of “transporting the sick” started with battlefields and injured men.

123. Wartime hospitals near the War field



"Ambulancia y triaje, inventos de Dominique-Jean Larrey" by Mikel Agirregabiria Agirre is licensed under CC BY-NC-SA 2.0

ನೆಪೋಲಿಯನ್ ನ ಸೇನೆಯಲ್ಲಿ ಮುಖ್ಯ ಸರ್ಜನ್ ಆಗಿದ್ದ ಬ್ಯಾರನ್ ಜೀನ್ ಲ್ಯಾರಿ ಅವರು 1812 ರ ಫ್ರಾನ್ಸ್-ರಷ್ಯಾ ಸಂಗ್ರಾಮದಲ್ಲಿ ಗಾಯಗೊಂಡಿದ್ದ ಸೈನಿಕರ ಚಿಕಿತ್ಸೆ ಮಾಡುವುದನ್ನು ತೋರುವ ವರ್ಣಚಿತ್ರ. ಇದನ್ನು 1820 ರಲ್ಲಿ ಫ್ರೆಂಚ್ ಕಲಾವಿದ ಲೂಯಿ ಲೆಜೂನ್ ರಚಿಸಿದ್ದಾರೆ. ಲ್ಯಾರಿ ಅವರು ಬಹಳ ಸಮರ್ಥ ಸರ್ಜನ್ ಆಗಿದ್ದರೆಂದೂ, ಯುದ್ಧಭೂಮಿಯಲ್ಲಿ ಅವರ ಉಪಸ್ಥಿತಿ ಸೈನಿಕರ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸುತ್ತಿತ್ತು ಎನ್ನಲಾಗಿದೆ.

This 1820 painting by the French artist Louis-François Lejeune shows Baron

Jean Dominique Larrey tending the wounded at the Battle of Moscow, 7th September 1812. Larrey was the French military surgeon and surgeon-in-chief of Napoleon's Grand Army. His presence on the battlefield was reassuring for the soldiers.

124. Wartime hospital during Crimean War



Crimean War: Florence Nightingale at Scutari Hospital. Coloured lithograph by E. Walker, 1856, after W. Simpson. Wellcome Collection. Attribution 4.0 International (CC BY 4.0)

ಆರಂಭಿಕ ಆಸ್ಪತ್ರೆಗಳು ಇಂದು ನಾವು ಕಾಣುವ ರೀತಿಯಲ್ಲಿ ಇರಲಿಲ್ಲ! ಅವು ಮೂಲತಃ ಶುಶ್ರೂಷಾಲಯಗಳು. 19 ನೆಯ ಶತಮಾನದ ಬ್ರಿಟಿಷ್ ಚಿತ್ರಕಾರ ವಿಲಿಯಮ್ ಸಿಂಪ್ಸನ್ ಅವರ ಈ 1856 ರ ಚಿತ್ರವನ್ನು ವಾಕರ್ ಎಂಬುವರು ವರ್ಣದಲ್ಲಿ ಮೂಡಿಸಿದ್ದಾರೆ. ಕ್ರಿಮಿಯನ್ ಯುದ್ಧದ ವೇಳೆ ಟರ್ಕಿಯ ಸ್ಕುಟಾರಿ ಎಂಬಲ್ಲಿ ಸ್ಥಾಪಿಸಿದ್ದ ಆಸ್ಪತ್ರೆಯೊಂದರ ವಾರ್ಡ್ ಅನ್ನು ತೋರಲಾಗಿದೆ. ಕಪ್ಪು ದಿರಿಸಿನಲ್ಲಿ ಇರುವವರು ಫ್ಲಾರೆನ್ಸ್ ನೈಟಿಂಗೇಲ್. ರೋಗಿಗಳ ಸೇವೆ ಮತ್ತು ಚಿಕಿತ್ಸೆಗೆ ಬೇಕಾದ ರೀತಿಯಲ್ಲಿ ಎಲ್ಲಾ ಅಗತ್ಯ ವಸ್ತುಗಳ ಮತ್ತು ಮಂಚಗಳ ಜೋಡಣೆಯಿದೆ. ಸ್ವಚ್ಛತೆ ಕಣ್ಣಿಗೆ ಬಹಳ ಹಿತವಾಗಿದೆ. ಫ್ಲಾರೆನ್ಸ್ ನೈಟಿಂಗೇಲ್ ಅವರು ಒತ್ತು ನೀಡಿದ ಶುಶ್ರೂಷೆಯ ತತ್ತ್ವಗಳು ಆಚರಣೆಯಲ್ಲಿವೆ.

This 1856 watercolor lithograph by the British artist William Simpson and Edmund Walker shows Florence Nightingale in a black gown at the barracks of the temporary military hospital at Scutari in Turkey during the Crimean war. The hospital ward is very clean – a hallmark of what Ms. Nightingale proposed throughout her career. Many of nursing principles are seen implemented in this picture.

125. Wartime hospitals during the First World War



"File:World War I; an advanced dressing station in World War I. Oi Wellcome V0018186.jpg" is licensed under CC BY 4.0

ಮೊದಲನೆಯ ಮಹಾಯುದ್ಧ ಆರಂಭವಾಗುವ ವೇಳೆಗೆ, ಪತ್ರಿಕೋದ್ಯಮ ಸಾಕಷ್ಟು ಬೆಳೆದಿತ್ತು. ಕೆಲವು ಪ್ರಮುಖ ಪತ್ರಿಕೆಗಳು ಮಹಾಯುದ್ಧವನ್ನು ವರದಿ ಮಾಡಲು ವಿಶೇಷ ಬಾತ್ಮಿದಾರರನ್ನು ನೇಮಕ ಮಾಡಿದ್ದವು. ಫೋಟೋಗ್ರಫಿ ತಂತ್ರಜ್ಞಾನ ಇನ್ನೂ ಅಷ್ಟಾಗಿ ಅಭಿವೃದ್ಧಿ ಆಗದಿದ್ದ ಅಂದಿನ ಕಾಲದಲ್ಲಿ, ಫೋಟೋ ತೆಗೆದು, ಅದನ್ನು ಡೆವಲಪ್ ಮಾಡಿ, ಮುದ್ರಿಸುವ ಅವಕಾಶ ಯುದ್ಧಸಿಕ್ತ ಪ್ರದೇಶಗಳಲ್ಲಿ ಇರಲಿಲ್ಲ. ಹೀಗಾಗಿ, ಕೆಲವು ಚಿತ್ರಗಾರರನ್ನು ನೇಮಕ ಮಾಡಿ, ಅವರಿಂದ ಯುದ್ಧಸ್ಥಳಗಳ ಚಿತ್ರಗಳನ್ನು ಬರೆಯಿಸಿ ಮುದ್ರಿಸುವ ಸಂಪ್ರದಾಯ ಇತ್ತು. ಈ ರೀತಿ ಬೆಳಕಿಗೆ ಬಂದವರು ಇಟಾಲಿಯನ್ ಚಿತ್ರಕಾರ ಫಾರ್ಚುನ್ನೈನೊ ಮತಾನಿಯ. ದ ಸ್ಫಿಯರ್ ಎನ್ನುವ ಪತ್ರಿಕೆಗೆ ಕೆಲಸ ಮಾಡಿದ ಮತಾನಿಯ, ಮೊದಲ ಮಹಾಯುದ್ಧದ ಬಗೆಗಿನ ಕೆಲವು ಮಹತ್ವದ ಚಿತ್ರಗಳನ್ನು 1917 ರಲ್ಲಿ ರಚಿಸಿದ್ದಾರೆ. ಫ್ರೆಂಚ್ ಸೇನೆಯ ಸರ್ಜನ್ನರು ನೆಲದಡಿಯಲ್ಲಿ ಅಕ್ಷರಶಃ ಭೂಗತರಾಗಿ ಗಾಯಗೊಂಡಿದ್ದ ಸೈನಿಕರ ಚಿಕಿತ್ಸೆ ಮಾಡುತ್ತಿದ್ದ ಸ್ಥಳವನ್ನು ಮತಾನಿಯ ಚಿತ್ರಿಸಿದ್ದಾರೆ. ಯಾವ ಕ್ಷಣದಲ್ಲಾದರೂ ಬಾಂಬುಗಳು ಬಿದ್ದು, ಸೂರು ಕುಸಿದು,

ಜೀವಂತ ಸಮಾಧಿಯಾಗುವ ಸಾಧ್ಯತೆಗಳ ನಡುವೆಯೂ, ಕೇವಲ ನೊಂದ ಸೈನಿಕರ ಸಲುವಾಗಿ ಮಾನವೀಯತೆಯಿಂದ ಕೆಲಸ ಮಾಡುತ್ತಿದ್ದ ವೈದ್ಯಕೀಯ ಸಿಬ್ಬಂದಿಯ ಧೈರ್ಯ ಅಸದಳ.

Fortunino Matania was an Italian artist, who has done some memorable artwork regarding the First world war. In this 1917 oil painting, he depicts a French underground hospital at Verdun. Working for the journal "The Sphere", this image featured in the April 1917 issue, with the lettering "The French army surgeon at work - a scene in front of Verdun, 1917. A French poste de secours in a vaulted gallery beneath one of the forts of Verdun. Deep down in the recesses of the fort is the poste de secours. The vaulted gallery is lit with electric-light, for the dynamos are still running. As the men come in, they are helped to a seat on a box or a pile of coats. Those that can stand are stripped and their wounds promptly dressed. Another, with a severe head wound, takes his seat at the operating table, and is skillfully attended by the doctor in charge". The situation of doctors during the war was always fragile and demanding.

126. Wartime hospitals – Red Cross



"File:World War I; the Royal Army Medical Corps on active service Wellcome L0068379.jpg" is licensed under CC BY 4.0

---

20 ನೆಯ ಶತಮಾನದ ಪ್ರಸಿದ್ಧ ಬ್ರಿಟಿಷ್ ಚಿತ್ರಕಾರ ಹೇಡನ್ ರೆನಾಲ್ಡ್ಸ್ ಮ್ಯಾಕೆ ಅವರು 1918 ರಲ್ಲಿ ರಚಿಸಿರುವ ಮೊದಲನೆಯ ಮಹಾಯುದ್ಧದ ಒಂದು ಘಟನೆ. ಗಾಯಗೊಂಡಿರುವ ಹಲವರು ಒಬ್ಬರ ನೆರವಿನಿಂದ ಮತ್ತೊಬ್ಬರು ನಡೆದು ಹೋಗುತ್ತಿರುವ ದೃಶ್ಯ. ತೋಳಿನ ಮೇಲೆ ರೆಡ್ ಕ್ರಾಸ್ ಪಟ್ಟಿ ಹಾಕಿರುವ ಒಬ್ಬರು ತೀವ್ರವಾಗಿ ಗಾಯಗೊಂಡಿರುವ ಓರ್ವ ಸೈನಿಕರನ್ನು ಸ್ಟ್ರೆಚರ್ ನಲ್ಲಿ ಒಯ್ಯುತ್ತಿದ್ದಾರೆ. ಮುನ್ನೆಲೆಯಲ್ಲಿ ಇಬ್ಬರು ಸೈನಿಕರ ಮೃತದೇಹ ಕಾಣುತ್ತಿದೆ. ಹಿನ್ನೆಲೆಯಲ್ಲಿ ಫಿರಂಗಿ ಪ್ರಯೋಗ ನಡೆಯುತ್ತಿದೆ. ಈ ಮೂರು ಹಂತಗಳು ಸಾಂಕೇತಿಕವಾಗಿ ಯುದ್ಧದ ಘೋರತೆಯನ್ನು ತೋರುತ್ತಿವೆ.

This 1918 oil painting by the famous British artist Haydn Reynolds Mackey shows the active service of the Royal Army Medical Corps during the First World War. The painting has injured transported in stretchers, along with wounded walking with help of crutches. The stretcher carrier has a sign of red-cross on his arm. The path has two dead soldiers. Artillery is being fired in the same picture. The ruthlessness of war is shown in many phases.

127. Wartime hospitals – The Munition Girls



'The Munitions Girls' oil painting, England, 1918. Credit: Science Museum, London. Attribution 4.0 International (CC BY 4.0)

ಸ್ಟಾನ್ಹೊಪ್ ಅಲೆಕ್ಸಾಂಡರ್ ಫೋರ್ಬ್ಸ್ ಎಂಬ ಖ್ಯಾತ ಬ್ರಿಟಿಷ್ ಚಿತ್ರಕಾರ 1918 ರಲ್ಲಿ ರಚಿಸಿದ ತೈಲ ವರ್ಣಚಿತ್ರ. "ಯುದ್ಧಸಾಮಗ್ರಿ ತಯಾರಿಸುತ್ತಿರುವ ಹೆಣ್ಣು ಮಕ್ಕಳು" ಎಂಬ ಶೀರ್ಷಿಕೆಯ ಈ ಚಿತ್ರದಲ್ಲಿ, ಮೊದಲ ಮಹಾಯುದ್ಧದ ಸಮಯದಲ್ಲಿ ಇಂಗ್ಲೆಂಡಿನ ಯಾರ್ಕ್-ಶೈರ್ ಪ್ರಾಂತ್ಯದ ರೋಥರ್ಹ್ಯಾಮ್ ಎಂಬಲ್ಲಿ ಇದ್ದ ಜಾನ್ ಬೇಕರ್ ಎಂಬುವರಿಗೆ ಸೇರಿದ್ದ ಕಿಲ್ನ್ಹರ್ಸ್ಟ್ ಉಕ್ಕಿನ ಕಾರ್ಖಾನೆಯನ್ನು ತೋರಿದೆ. ಯುದ್ಧದ ಸಮಯದಲ್ಲಿ ಅಗತ್ಯವಿರುವ ಶಸ್ತ್ರಗಳ ತಯಾರಿಕೆಗೆ ಇದನ್ನು ಬಳಸಿಕೊಳ್ಳಲಾಯಿತು. ಗಂಡಸರು ಯುದ್ಧದಲ್ಲಿ ನೇರವಾಗಿ ಭಾಗವಹಿಸಿದರೆ, ಹೆಂಗಸರು ಇಂತಹ ಕಾರ್ಖಾನೆಗಳಲ್ಲಿ ದುಡಿದು, ಯುದ್ಧದಲ್ಲಿ ಇಂಗ್ಲೆಂಡ್ ವಿಜಯಿಯಾಗಲು ನೆರವಾದರು. ಆದರೆ, ಯಾವುದೇ ಸುರಕ್ಷತೆಯ ಕ್ರಮಗಳನ್ನು ಪಾಲಿಸದ ಕಾರಣ ಈ

ಹೆಂಗಸರ ಕೂದಲು ಮತ್ತು ಚರ್ಮದ ಮೇಲೆ ಪ್ರತಿಕೂಲ ಪರಿಣಾಮಗಳಾದವು. ನಂತರ ನಡೆದ ಸಂಶೋಧನೆಗಳಲ್ಲಿ, ಈ ರೀತಿಯ ಪರಿಣಾಮಕ್ಕೆ ಕಾರಣ, ಕಾರ್ಖಾನೆಯಲ್ಲಿ ಬಳಸುತ್ತಿದ್ದ "ಗಂಧಕ" ಎಂದು ತಿಳಿದುಬಂದಿತು. ಈ ಮೂಲಕ, ಶರೀರದ ಮೇಲೆ ಗಂಧಕದ ಪರಿಣಾಮಗಳ ಬಗ್ಗೆ ಸಂಶೋಧನೆ ನಡೆದು, ಚರ್ಮದ ಕಾಯಿಲೆಗಳಿಗೆ ಸಂಬಂಧಿಸಿದ ಹಲವಾರು ಔಷಧಗಳಲ್ಲೂ ಗಂಧಕವನ್ನು ಬಳಸುವಂತೆ ಆಯಿತು!

Famous British artist Alexander Stanhope Forbes was commissioned for this oil painting in 1918 by John Baker and Co. The painting titled "The Munition Girls" shows young women working in the Kilnhurst Steelworks of Rotherham, Yorkshire in Britain during the First World War. The factory was used for the manufacture of wartime ammunition. Since most of the men were in the war field, the factories were managed by women, contributing to the British victory. Since the factories did not follow any safety precautions, these women had adverse effects on their skin and hair. In further investigations, Sulphur was implicated as the cause of these problems. Further research showed few therapeutic potentials of Sulphur on skin diseases.

128. Wartime hospitals during the Second World War




media-138091 Edward Ardizzone, Wounded Men being Lifted Off a Jeep. 1942. https://www.iwm.org.uk/corporate/policies/non-commercial-licence

ಎಡ್ವರ್ಡ್ ಆರ್ಡಿಜೋನ್ ಎಂಬ ಬ್ರಿಟಿಷ್ ಕಲಾವಿದ "ಎರಡನೆಯ ಮಹಾಯುದ್ಧ"ದ ವಿಷಯವಾಗಿ 1942 ರಲ್ಲಿ ರಚಿಸಿದ ವರ್ಣಚಿತ್ರ. ಗಾಯಗೊಂಡ ಸೈನಿಕನನ್ನು ಐದು ಮಂದಿ ಸೈನಿಕರು ತಮಗೆ ತೋಚಿದಂತೆ ಎತ್ತಿ ಮಲಗಿಸುತ್ತಿದ್ದಾರೆ. ಮತ್ತೊಬ್ಬ ಸೈನಿಕ ಯಾವುದೋ ಮದ್ದನ್ನು ಮಿಶ್ರ ಮಾಡುತ್ತಿದ್ದಾರೆ. ಹಿಂಬದಿಯಲ್ಲಿ ಸ್ಟ್ರೆಚರ್ ಮೇಲೆ ಮಲಗಿರುವ ಮತ್ತೊಬ್ಬ ಸೈನಿಕ ಇದ್ದಾರೆ. ಸಾಮಗ್ರಿ ಸಾಗಿಸುವ ವಾಹನ, ಟ್ಯಾಂಕರ್, ಓಡುತ್ತಿರುವ ಒಬ್ಬ ಸೈನಿಕ – ಎಲ್ಲವೂ ಬಿಂಬಿತವಾಗಿವೆ. ಯುದ್ಧ ಎನ್ನುವ ಭಯಾನಕ ಸಂಗತಿಯ ಒಂದು ಸಣ್ಣ ನೋಟ.

This 1942 sketch is by the British artist and polymath Edward Ardizzone is a scenario of the Second World War scenario. Five soldiers are haphazardly lifting another wounded soldier to lay him on a table. Another soldier is mixing some medication. There is another wounded soldier on the stretcher. While one soldier is making space in a cargo van, another is seen running. The presence of tankers is showing the ongoing war. These real-life sketches point towards the minimal medical facilities for the wounded soldiers on the battlefield.

129. Wartime hospitals – Treatment of Burn Injuries



www.iwm.org.uk A Bunyan-stannard Irrigation Envelope for the Treatment of Burns. By E Gabain. Art.IWM ART LD 3850. *https://www.iwm.org.uk/corporate/policies/non-commercial-licence*

ಈಥೆಲ್ ಗ್ಯಾಬೆನ್ ಎಂಬ ಫ್ರೆಂಚ್-ಬ್ರಿಟಿಷ್ ಕಲಾವಿದೆಯ "ಎರಡನೆಯ ಮಹಾಯುದ್ಧದ ವೇಳೆಯ" ಚಿತ್ರ. 1943 ರ ಸುಮಾರಿಗೆ ರಚಿಸಿರುವ ಈ ವರ್ಣಚಿತ್ರದಲ್ಲಿ ಸುಟ್ಟ ಗಾಯಗಳಿಗೆ ನೀಡುವ ಚಿಕಿತ್ಸೆಯನ್ನು ತೋರಲಾಗಿದೆ. ಬನ್ಯನ್ ಸ್ಟನಾರ್ಡ್ ಎಂಬ ಉಪಕರಣವನ್ನು ಬಳಸಿ, ಬ್ರಿಟನ್ ನ ಆಸ್ಪತ್ರೆಯೊಂದರಲ್ಲಿ ಸಿಸ್ಟರ್ ರಾಬರ್ಟ್ಸ್ ಎಂಬ ದಾದಿಯೊಬ್ಬರು ಎಡಗೈಯಲ್ಲಿ ಸುಟ್ಟ ಗಾಯಗಳಾಗಿರುವ ಓರ್ವ ಸೈನಿಕನ ಚಿಕಿತ್ಸೆ ಮಾಡುತ್ತಿದ್ದಾರೆ. ನಾಲ್ಕು ಗಾಜಿನ ಶೀಷೆಗಳ ಮೂಲಕ ಹಾಯ್ದು ಬರುವ ದ್ರಾವಣವೊಂದು, ರೋಗಿಯ

ಎಡಗೈಗೆ ಸುತ್ತಿರುವ ಪಟ್ಟಿಯ ಮೂಲಕ ಹಾಯುತ್ತಿದೆ. ಅಂದಿನ ಕಾಲದ ಚಿಕಿತ್ಸೆಯ ವಿಧಾನವನ್ನು ಈ ಚಿತ್ರ ಪರಿಚಯಿಸುತ್ತಿದೆ.

This 1943 painting is by the British-French artist Ethel Leontine Gabain shows a second world war scenario in the Middlesex. A patient with burns of the left hand has been treated using a Bunyan-Stannard irrigation envelope, being applied by Sister Roberts. The solution passing through four glass jars is made to run through the affected area. This was considered an effective intervention during the time of the war crisis.

130. Medicine vendors of Rome



Itinerant medicine vendors in Rome. Oil painting attributed to Dirk Helmbreker. Wellcome Collection. Attribution 4.0 International (CC BY 4.0)

16 ರಿಂದ 18 ನೆಯ ಶತಮಾನದಲ್ಲಿ ಯೂರೋಪಿನಲ್ಲಿ ಔಷಧ ಮಾರಾಟಕ್ಕೆ ಎರಡು ವಿಧಾನಗಳು ಇದ್ದವು. ಒಂದು – ಔಷಧ ಅಂಗಡಿ ನಡೆಸುವ ವ್ಯಾಪಾರಿ. ಅಪೋಥೆಕರಿ ಎನ್ನಲಾಗುತ್ತಿದ್ದ ಇವರು ಸಾಮಾನ್ಯವಾಗಿ ಪಾರಂಪರಿಕ ವೃತ್ತಿನಿರತ ಔಷಧ ವ್ಯಾಪಾರಿಗಳು. ವೈದ್ಯರ ಸೂಚನೆಯ ಮೇರೆಗೋ, ಅಥವಾ ತಾವೇ ಖುದ್ದಾಗಿಯೊ ಔಷಧಗಳನ್ನು ತಯಾರಿಸಿ ಕೊಡುತ್ತಿದ್ದರು. ಇಂದಿನ ಕಾಲದ ಕಾಂಪೌಂಡರ್ ಅಥವಾ ಫಾರ್ಮಸಿಗಳಿಗೆ ಹೋಲಿಸಬಹುದಾದರೂ, ವೈದ್ಯರ ಸಂಖ್ಯೆ ಕಡಿಮೆ ಇದ್ದ ಅಂದಿನ ಕಾಲದಲ್ಲಿ ಇವರ ಸಾಮಾಜಿಕ ಮನ್ನಣೆ ಬಹಳ ದೊಡ್ಡದಿತ್ತು. ಎರಡನೆಯ ವಿಧಾನ – ಅಲೆಮಾರಿಗಳು. ಅಂದಿನ ಕಾಲದಲ್ಲಿ ಸಂಚಾರ ವ್ಯವಸ್ಥೆ ವಿರಳವಾಗಿದ್ದ ಕಾರಣ, ಒಂದು ಪ್ರದೇಶದ ಔಷಧ ಮತ್ತೊಂದು ಪ್ರದೇಶಕ್ಕೆ ತಲುಪುವುದು ಕಷ್ಟವಿತ್ತು. ಇದನ್ನು ಸಾಧಿಸುತ್ತಿದ್ದವರು ಅಲೆಮಾರಿ ಪಂಗಡದ ಜನರು ಮತ್ತು ಅಲೆಮಾರಿ ನಾಟಕ ಕಲಾವಿದರು. ಇವರುಗಳು ಮಾರಾಟ ಮಾಡುತ್ತಿದ್ದ ಔಷಧಗಳಲ್ಲಿ ಸಾಕಷ್ಟು ಉತ್ಪ್ರೇಕ್ಷೆ, ಮೋಸ ಇರುತ್ತಿತ್ತು.

ಸಂತೆಯ, ಜಾತ್ರೆಯ ವೇಳೆ, ಅಥವಾ ತಮ್ಮ ನಾಟಕ ಪ್ರದರ್ಶನಗಳ ಅಂತ್ಯದಲ್ಲಿ ಇವರು ವೇದಿಕೆಯ ಮೇಲಿನಿಂದ ತಮ್ಮಲ್ಲಿ ಇರುವ "ಔಷಧಗಳ"ನ್ನು ಆಕರ್ಷಕವಾಗಿ ವಿವರಿಸಿ ಮಾರಾಟ ಮಾಡುತ್ತಿದ್ದರು. ಕೆಲವೊಮ್ಮೆ ನೈಜ ಔಷಧಗಳು ಇವರ ಬಳಿ ದೊರೆಯುತ್ತಿದ್ದವಾದರೂ, ಬಹುಮಟ್ಟಿಗೆ ಇವೆಲ್ಲಾ ಮೋಸದ, ಉತ್ಪ್ರೇಕ್ಷಿತ ಸರಕುಗಳೇ ಆಗಿದ್ದವು! ಡಿರ್ಕ್ ಹೆಲ್ಬ್ರೆಕರ್ ಎನ್ನುವ 17 ನೆಯ ಶತಮಾನದ ಪ್ರಸಿದ್ಧ ಡಚ್ ಕಲಾವಿದನ ತೈಲ ವರ್ಣಕೃತಿ. ಇದು ರಚನೆ ಆದದ್ದು 1650 ರ ಸುಮಾರಿಗೆ. ಅಲೆಮಾರಿ ಔಷಧ ವರ್ತಕರ ಚಿತ್ರಣ. ವೇದಿಕೆಯ ಮೇಲಿನ ಕೆಂಪು ನಿಲುವಂಗಿ ತೊಟ್ಟ ವ್ಯಕ್ತಿ ಈ ಗುಂಪಿನ ನಾಯಕ. ಔಷಧ ಮಾರಾಟಕ್ಕೆ ರಾಜರ ಆಡಳಿತ ನೀಡಿರುವ ಪರವಾನಗಿಯನ್ನು ಜನರಿಗೆ ತೋರಿಸುತ್ತಿದ್ದಾನೆ. ಆತನದ್ದೇ ಗುಂಪಿನ ಇತರ ಜನರು ತಮಾಷೆಯ ಪ್ರಶ್ನೋತ್ತರ ಮಾದರಿಯಲ್ಲಿ ವಾಗ್ವಾದ ನಡೆಸುತ್ತಾ, ಕಡೆಗೆ "ಈ ಔಷಧ ಬಹಳ ಪರಿಣಾಮಕಾರಿ" ಎಂದು ನೆರೆದಿರುವ ಜನರನ್ನು ನಂಬಿಸುತ್ತಾರೆ! ನೆರೆದಿರುವ ಜನರಲ್ಲಿ ಯಾರಾದರೂ ಹೋಗಲು ಅನುವಾದರೆ, ಈ ತಂಡ ಸಾಕಿರುವ ನಾಯಿಗಳು ಬೊಗಳಿ ಎಚ್ಚರಿಸುತ್ತವೆ! ಚಿತ್ರದಲ್ಲಿನ ಕಟ್ಟಡ ಸಂತ ಪೀಟರ್ ಅವರ ಚರ್ಚು. ಈ ಮೂಲಕ, ಈ ಘಟನೆ ರೋಮ್ ನಗರದಲ್ಲಿ ನಡೆಯುತ್ತಿದೆ ಎಂದು ಸೂಚಿಸಲಾಗಿದೆ!

In the 16-18th Century, there were two ways to sell medicines in Europe. One was the traditional medicine seller called Apothecary. Usually, apothecaries were familial professional medicine sellers with their own established stores and outlets. They would either dispense the prescription of a doctor or make their formulations. Although they can be compared to the present-day compounders or pharmacies, their social reputation was very high in the days when medical facilities were scant. The second way was through vagabonds. Travelling was not easy in Medieval Europe. Hence, medicines could not reach from one place to another very easily. This was partially achieved by such people. Many of them were touring drama artists, who would move from place to place, performing their art. Selling medicine was an additional source of income for them. Most of the medicines they sold were fake! They would announce the extraordinary benefits of their formulations during fests, gatherings, or during the end of drama performance. Although they had few genuine medicines, it was impossible to differentiate the real from fake! An oil painting of 1650 by the Dutch artist Dirck Helmbreker, showing a troupe of traveling medicine sellers. The leader of the troupe in the red overcoat is showing a permission letter for selling the medicines. This may be an attempt to infuse authenticity to the clueless public! Other artists from the troupe talk about the medicine, arguing between themselves about its effects! At the end of their conversation, they end up declaring the medicine being very effective! Their dogs bark and draw atten-

tion if anyone in the crowd tries to leave! St Peter’s church in the background indicates that the event is happening in Rome.

131. Seller of Spectacles



"A Pedlar Selling Spectacles" by lluisribesmateu1969 is licensed under CC BY-NC 2.0

ಕನ್ನಡಕ ವಿಷಯವಾಗಿ ರಚನೆಯಾಗಿರುವ 17 ನೆಯ ಶತಮಾನದ ಪ್ರಸಿದ್ಧ ಡಚ್ ಚಿತ್ರಕಾರ ರೆಂಬ್ರಾಂಟ್

ಅವರ 1624 ರ ಚಿತ್ರವನ್ನೂ ಗಮನಿಸಬಹುದು. ಇದರಲ್ಲಿ ಮೂಗಿನ ಮೇಲೆ ವ್ರಣವಾಗಿ, ಮೂಗು ಊದಿಕೊಂಡಿರುವ ವೃದ್ಧರೊಬ್ಬರು, ತಮಗೆ ಅನುಕೂಲವಾಗಬಲ್ಲ ಕನ್ನಡಕಕ್ಕಾಗಿ ವಿಚಾರಿಸುತ್ತಿದ್ದಾರೆ!

A similar art by the famed Dutch artist Rembrandt in 1624 can be considered here. In his “senses” of paintings, Rembrandt has painted this oil painting showing an old man with a swollen nose asking for a comfortable pair of spectacles from a trader! The wry smile on the face of the seller has drawn various meanings!

132. Testing the Spectacles



"Christoffel Lubieniecki - Seller of spectacles" by irinaraquel is marked with CC PDM 1.0

17-18 ನೆಯ ಶತಮಾನದ ಪೋಲೆಂಡ್ ಚಿತ್ರಕಾರ ಕ್ರಿಸ್ಟೊಫ್ ಲುಬಿಯೆನ್ನಿಕಿ ಅವರು 1710 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಅಂದಿನ ಕಾಲದ ಕನ್ನಡಕ ವ್ಯಾಪಾರಿಗಳ ಚಿತ್ರಣ. ಮಸೂರಗಳ ಬಳಸುವಿಕೆ

ಆರಂಭವಾಗಿ, ಅವನ್ನು ಸಣ್ಣ ಗಾಜಿನ ವರ್ತುಲಾಕಾರದ ರೂಪಕ್ಕೆ ತಂದು, ಲೋಹದ ಪಟ್ಟಿಯಲ್ಲಿ ಭದ್ರ ಮಾಡಿ, ಕಣ್ಣಿನ ಅನುಕೂಲದ ಆಕಾರಕ್ಕೆ ತರುವ ಪ್ರಕ್ರಿಯೆ 17 ನೆಯ ಶತಮಾನದ ಸುಮಾರಿಗೆ ಪಕ್ಕಾ ಆಗಿತ್ತು. ವೃದ್ಧೆಯೊಬ್ಬರು ಇಂತಹ ಕನ್ನಡಕವನ್ನು ಇಟ್ಟುಕೊಂಡು ಕಾಗದದ ಮೇಲಿನ ಅಕ್ಷರಗಳ ಸ್ಪಷ್ಟತೆಯನ್ನು ಗುರುತಿಸುತ್ತಿದ್ದಾರೆ.

This 1710 oil painting by the Polish artist Krzysztof Lubieniecki shows a seller of spectacles. The technique of cutting glass into the shape of a lens and fitting it into a polished frame for convenience of wearing in front of the eyes had begun by the late 17th century. An old lady is shown to test the power of the lens by looking into the letters on a paper.

133. Medicine Vendor of Rotterdam



"IMG_2115K Gerard Dou. 1613-1675. Leiden. Le Quaker. The Quack. 1652. Rotterdam." by jean louis mazieres is licensed under CC BY-NC-SA 2.0

ರೆಂಬ್ರಾಂಟ್ ಅವರ ಶಿಷ್ಯನಾದ ಡಚ್ ಕಲಾವಿದ ಜೆರಾರ್ಡ್ ಡೌ ಅವರು 1652 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಹಾಲೆಂಡ್ ನ ಲೀಡನ್ ನಗರದ ಮುಖ್ಯ ದ್ವಾರದ ಬಳಿ ನಡೆಯುವ ಜಾತ್ರೆಯೊಂದರಲ್ಲಿ ನಕಲಿ ಔಷಧ ಮಾರುವಾತನೊಬ್ಬ ನೆರೆದಿರುವವರಿಗೆ ತನ್ನೊಂದು ಖೊಟ್ಟಿ ಔಷಧವನ್ನು ತೋರುತ್ತಿರುವ ಚಿತ್ರ. ಈ ರೀತಿಯ ಮಾರಾಟಕ್ಕೆ ಸರಕಾರ ನೀಡಿರುವ ಪರವಾನಗಿಯನ್ನು ಚಿತ್ರದ ಬಲಬದಿಯಲ್ಲಿ ತೋರಿದೆ. ಚಿತ್ರದ ಮಧ್ಯದಲ್ಲಿ ಕಂಡೂ ಕಾಣದಂತೆ ಒಂದು ಕಪಿಯನ್ನು ಚಿತ್ರಿಸಿದೆ. ಇದು ಆ ಮಾರಾಟಗಾರ ಜನರನ್ನು ಮಂಗನಾಗಿಸುತ್ತಿದ್ದಾನೆ ಎಂಬುದರ ಸಂಕೇತ. ಈ ಚಿತ್ರದಲ್ಲಿ ಮಾರಾಟಗಾರನ ಹಿಂದೆ ಇರುವುದು ಖುದ್ದು ಚಿತ್ರಗಾರನೇ! ಅಂದಿನ ಕಾಲದ ಜನರ ಕೊಳಕು ಪ್ರವೃತ್ತಿ, ಮೋಸಹೋಗುವ ಮನೋಭಾವ, ಮತ್ತು ಸಾಮಾಜಿಕ ಸ್ಥಿತಿಯನ್ನು ವಿಡಂಬಿಸಲಾಗಿದೆ.

This 1652 oil painting is by the Dutch artist Gerard Dou, who was a disciple of Rembrandt. The painting depicts a trader selling some medicine in the fest near the main entrance of the city of Leiden in Holland. He seems to be displaying the licence granted by the administration for selling medicines. A monkey is a keen witness to the proceedings, as are the people. The artist is behind this medicine seller! A woman is seen cleaning a baby. The nature of filth, deception, and other social factors are on display.

134. Medicine Vendors at Port



Hafenszene_mit_Scharlatan by Jacob De Moor / Public domain https://creativecommons.org/publicdomain/mark/1.0/deed.en

---

ಬಂದರಿನಲ್ಲಿ ಜಾತ್ರೆ! 17 ನೆಯ ಶತಮಾನದ ಯೂರೋಪಿನಲ್ಲಿ ಅತ್ಯಂತ ಮಹತ್ವದ ಸ್ಥಳಗಳು ಎಂದರೆ ನೌಕೆಗಳು ಆಗಮಿಸುವ ಬಂದರು! ಪ್ರತೀ ಬಾರಿ ದೊಡ್ಡ ನೌಕೆಯೊಂದು ಬಂದಾಗ, ಅಲ್ಲಿ ಜಾತ್ರೆ ನೆರೆಯುತ್ತಿತ್ತು. ಆ ನೌಕೆಯಲ್ಲಿ ಬಂದವರು ಹೊರದೇಶಗಳ ಹಲವಾರು ವಸ್ತುಗಳನ್ನು ಮಾರಾಟ ಮಾಡಲು ತರುತ್ತಿದ್ದರು. ಇದರಲ್ಲಿ ಪ್ರಮುಖವಾದದ್ದು ಹೊರದೇಶಗಳಿಂದ ಬರುವ ಔಷಧಗಳು. ಅದನ್ನು ಮಾರಲೆಂದೇ ವಿಶೇಷ ವೇದಿಕೆಗಳು ಇರುತ್ತಿದ್ದವು. ಇಂತಹ ಒಂದು ಜಾತ್ರೆಯ ದೃಶ್ಯವನ್ನು ಜೇಕಬ್ ದ ಮೂರ್ ಎಂಬ ಜರ್ಮನ್ ಚಿತ್ರಗಾರ 1663 ರಲ್ಲಿ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಬಿಂಬಿಸಿದ್ದಾರೆ.

This 1663 oil painting by the German artist Jacob de Moor shows the scenario of a port. In the medieval periods, traveling from one place to another was difficult and dangerous. This applied to people and goods. Whenever a large

ship arrived at a port, the neighboring places would have a festive look! The ship would mainly carry many interesting artefacts from other places. “Exotic medicines from the outside world” would be a major attraction of these ships. Special stages were set for the traders to sell such stuff. This was the main attraction of the festivity at ports.

135. Tax on Quassia



"The triumph of Quassia" by Thomas Fisher Rare Book Library, UofT is licensed under CC BY 2.0

ಕ್ವಾಸಿಯ ಅಮಾರ ಎನ್ನುವ ವೈಜ್ಞಾನಿಕ ಹೆಸರಿನ "ಕವಸ" ಗಿಡ ಮೂಲತಃ ದಕ್ಷಿಣ ಅಮೆರಿಕದ ಸುರಿನಾಮ್ ಮೂಲದ್ದು. ಅತ್ಯಂತ ಕಹಿಯಾದ ತೊಗಟೆ ಮತ್ತು ಎಲೆಗಳ ಈ ಗಿಡವನ್ನು ಹಲವಾರು ಕಾಯಿಲೆಗಳಿಗೆ ಔಷಧವನ್ನಾಗಿ ಬಳಸುತ್ತಿದ್ದರು. ಯುರೋಪಿಯನ್ನರು ದಕ್ಷಿಣ ಅಮೆರಿಕದ ಮೇಲೆ ಆಕ್ರಮಣ ಮಾಡಿ ಅಲ್ಲಿನ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು. ಇಂತಹ ಗುಲಾಮರಲ್ಲಿ ಒಬ್ಬರಾಗಿದ್ದ ಗ್ರಮನ್ ಕ್ವಾಸಿಯ ಎಂಬುವರು ಮೂಲತಃ ಅಲ್ಲಿನ ಮೂಲನಿವಾಸಿಗಳ ವೈದ್ಯ. ಒಮ್ಮೆ ಯುರೋಪಿಯನ್ ಆಕ್ರಮಣಕಾರರಿಗೆ ಜ್ವರ ಬಂದು ನರಳುವಾಗ ಈ ವೈದ್ಯ ಒಂದು ಗಿಡದ ಕಷಾಯವನ್ನು ರೋಗಿಗಳಿಗೆ ಕುಡಿಸಿ ಕಾಯಿಲೆಯನ್ನು ಗುಣಪಡಿಸಿದರು. ಹೀಗಾಗಿ, ಆ ಗಿಡಕ್ಕೆ ಕ್ವಾಸಿಯ ಎನ್ನುವ ಹೆಸರನ್ನೇ ಇಡಲಾಯಿತು. ಕೇವಲ ಜ್ವರವೇ ಅಲ್ಲದೇ, ಹಲವಾರು ಆರೋಗ್ಯ ಸಮಸ್ಯೆಗಳ ನಿವಾರಣೆಗೆ ಈ ಗಿಡ ಪ್ರಯೋಜನಕಾರಿ. ಇದರ ಕಹಿ ಗುಣವನ್ನು ಕೆಲವು ಸಂಸ್ಕರಿತ ಆಹಾರಗಳಲ್ಲಿ, ಪೇಯಗಳಲ್ಲಿ ಬಳಸುತ್ತಿದ್ದರು. 1806 ರಲ್ಲಿ ಬ್ರಿಟಿಷ್ ಸರಕಾರ ಕ್ವಾಸಿಯ ಮೇಲೆ ತೆರಿಗೆ ಹೇರಿತು. ಇದರಿಂದ ಮದ್ಯೋದ್ಯಮಿಗಳು ಕೋಪಗೊಂಡರು. ವ್ಯಂಗ್ಯ ಚಿತ್ರಕಾರ

ಜೇಮ್ಸ್ ಗಿಲ್ರೇ ಅವರು ರಚಿಸಿದ ಈ ಚಿತ್ರದಲ್ಲಿ ಗ್ರಮನ್ ಕ್ವಾಸಿಯ ಅವರನ್ನು ಹಲವಾರು ಸಿರಿವಂತ ಸ್ಥೂಲಕಾಯ ಉದ್ಯಮಿಗಳು ಹೊತ್ತು ತಿರುಗುವಂತೆ ತೋರಲಾಗಿದೆ.

Quassia is another bitter medicine with its native in Suriname, a small country in present-day South America. Europeans discovered the ancient secret of using Quassia for various ailments during their brutal invasions into the New World. The plant was named after Graman Quassi, a native healer, who was enslaved by the British. Quassi recovered some respite after he treated the fever of many of his “white masters” using Quassia. This bitter medicine is used for the treatment of various ailments like fever, ulcers, scalp parasites like lice/fleas, for inducing sedation, as mosquito larvicidal in water, as an insecticide, as food additives to induce mild bitter taste, flavoring drinks, and so on. This 1806 cartoon by the British artist James Gillray satirized a proposed tax on Quassia and its products. They claimed that the decision to tax Quassia would seriously affect the brewers. Graman Quassi is shown to be taken in procession by a few rich obese people, who are identified as certain prominent political figures of the early 19th Century.

136. Politicians as Medicine Vendors



A troupe of quack medicine vendors crying up their wares. Coloured etching by G. Cruikshank after "Nathaniel NoParty", 1812. Credit: Wellcome Collection. Attribution 4.0 International (CC BY 4.0)

1812 ರಲ್ಲಿ ರಚಿತವಾದ ಬ್ರಿಟಿಷ್ ಚಿತ್ರಕಾರ ಜಾರ್ಜ್ ಕ್ರೂಕ್ಶಂಕ್ ಅವರ ಈ ವ್ಯಂಗ್ಯ ಚಿತ್ರದಲ್ಲಿ ಖೊಟ್ಟಿ ಔಷಧ ಮಾರುವ ವರ್ತಕರ ಜೊತೆಯಲ್ಲಿ ವಿರೋಧ ಪಕ್ಷದ ನಾಯಕರನ್ನು ಹೋಲಿಸಿ ಮಾಡಿರುವ ವಿಡಂಬನೆಯಿದೆ. ಯಾವ ರೀತಿ ಖೊಟ್ಟಿ ಔಷಧ ವರ್ತಕರು ಇಲ್ಲಸಲ್ಲದ ಒಳಿತುಗಳನ್ನು ಹೇಳಿ ಔಷಧ ಮಾರಾಟ ಮಾಡುತ್ತಾರೋ, ಹಾಗೆಯೇ ತಾವು ಸಾಧಿಸಲು ಅಶಕ್ಯವಾದ ಭರವಸೆಗಳನ್ನು ನೀಡುತ್ತಾ ಅಧಿಕಾರಕ್ಕೆ ಏರಲು ಹವಣಿಸುವ ವಿರೋಧ ಪಕ್ಷದ ನಾಯಕರನ್ನು ತೋರಲಾಗಿದೆ. ಮೇಜಿನ ಮೇಲೆ ನಿಂತು ಪ್ರಣಾಳಿಕೆ ಹಿಡಿದಿರುವವರು ಸ್ಯಾಮುಯ್ಯಲ್ ವಿಟ್ಬ್ರೆಡ್. ಕುದುರೆಯ ಶರೀರದ ರಾಜಕುಮಾರನ ಮೇಲೆ ಏರಿ ಹೋಗುತ್ತಿರುವ ವೆಲ್ಲೆಸ್ಲಿ ಅವರನ್ನು ಚಿತ್ರಕಾರ ಗೇಲಿ ಮಾಡಿದ್ದಾರೆ. ಸಾಮಾನ್ಯ ಜನರ ಪಾಡು ಹೇಳತೀರದು!

This 1812 cartoon by the British artist George Cruikshank is titled “The Mountebanks or Opposition Show box”. Here, the artist has equated the leaders of opposition with quacks and sellers of fake medicine. The latter is known to embroil lies to sell their stuff. Similarly, the politicians of the opposition keep the promising impossible solution to problems and try to grab power. The politician standing on a dais with raised arms is Samuel Whit-

bred. The Prince regent is shown as a horse, which is raided by Wellesley. The ordeal of common people is nobody's business.

137. Interiors of an Apothecary Shop



Interieur van laboratorium van de apotheek het 'Stoockhuys' Johannes Jelgerhuis, Public domain, via Wikimedia Commons. https://creativecommons.org/publicdomain/mark/1.0/deed.en

---

ಜೋಹಾನಸ್ ಜೆಲ್ಗರ್ಹ್ಯೂಸ್ ಎಂಬ 19 ನೆಯ ಶತಮಾನದ ಮತ್ತೊಬ್ಬ ಪ್ರಸಿದ್ಧ ಡಚ್ ಕಲಾವಿದ ಬಿಡಿಸಿರುವ 1818 ರ ತೈಲ ವರ್ಣಚಿತ್ರ. ಹಾಲೆಂಡ್ ದೇಶದ ಆಮ್ಸ್ಟರ್ಡ್ಯಾಮ್ ನಗರದ ಸ್ಟೂಕ್ಹುಸ್ ಎನ್ನುವ ಪ್ರಸಿದ್ಧ ಅಪೋಥೆಕರಿ ಅಂಗಡಿಯ ಪ್ರಯೋಗಾಲಯದ ಚಿತ್ರ. ಈ ಭಾಗದಲ್ಲಿ ಔಷಧ ತಯಾರಿ ಆಗುತ್ತಿತ್ತು. ಅದರ ಮಾರಾಟ ಅಂಗಡಿಯ ಮುಂಭಾಗದಲ್ಲಿ ಆಗುತ್ತಿತ್ತು. ಈ ಚಿತ್ರ ಆಮ್ಸ್ಟರ್ಡ್ಯಾಮ್ ನಗರದ ರಿಜ್ಕ್ಸ್ ಸಂಗ್ರಹಾಲಯದಲ್ಲಿದೆ.

An 1818 oil painting by the famous Dutch artist Johannes Jelgerhuis, showing the interiors of the famous Stoockhuys apothecary in Amsterdam. The selling counter is seen at the far end of the painting. The original painting is in the Rijks Museum of Amsterdam in the Netherlands.

138. Apothecary as Rubbish of the Village



https://collections.nlm.nih.gov/catalog/nlm:nlmuid-101393659-img Courtesy of the National Library of Medicine. https://creativecommons.org/publicdomain/mark/1.0/

ಜಾರ್ಜ್ ಕ್ರೂಕ್ಶಂಕ್ ಎಂಬ ಬ್ರಿಟಿಷ್ ವ್ಯಂಗ್ಯ ಚಿತ್ರಕಾರರು 1819 ರಲ್ಲಿ ರಚಿಸಿದ ಈ ಚಿತ್ರವನ್ನು ಥಾಮಸ್ ಟೆಗ್ ಎಂಬ ಬ್ರಿಟಿಷ್ ಪ್ರಕಾಶಕರು 1819 ರ ಡಿಸೆಂಬರ್ 15 ರೊಂದು ಹೊರತಂದರು. ಗ್ರಾಮದ ಮೂರು ಅನಾಗರಿಕರು ತಳ್ಳುಗಾಡಿಗಳಲ್ಲಿ ಮೂವರನ್ನು ಕೂರಿಸಿಕೊಂಡು ಗ್ರಾಮದ ಹೊರಗೆ ತಳ್ಳುತ್ತಿದ್ದಾರೆ. ಇದನ್ನು ಇತರ ಗ್ರಾಮಸ್ಥರು ಕೇಕೆ ಹಾಕಿಕೊಂಡು ಸಂಭ್ರಮಿಸುತ್ತಿದ್ದಾರೆ. ಆ ಮೂವರಲ್ಲಿ ಓರ್ವರು ಧಡೂತಿ ದೇಹದ ಸಂಧಿವಾತದ ವ್ಯಕ್ತಿ. ಮತ್ತೊಬ್ಬರು ತೆಳ್ಳಗಿನ ದೇಹದ ಔಷಧ ವ್ಯಾಪಾರಿ. ಮೂರನೆಯವರು ಪ್ರಾಯಶಃ ಗ್ರಾಮಲೆಕ್ಕಿಗ. ಈ ಮೂವರನ್ನು “ರಬ್ಬಿಷ್” ಎಂದು ಸಂಬೋಧಿಸಲಾಗಿದೆ. ಇವರಿಂದ ಗ್ರಾಮಕ್ಕೆ ಯಾವುದೇ ಪ್ರಯೋಜನ ಇಲ್ಲವೆಂಬ ಭಾವನೆ ಈ ಚಿತ್ರದಲ್ಲಿ ಜನಿತವಾಗಿದೆ. ಅಂದಿನ ಕಾಲದ ಜನರ ಭಾವನೆಗಳ ಚಿತ್ರಣ.

British artist George Cruikshank's 1819 cartoon shows three yokels pushing three people in wheeled carts. The three people in the carts are a gouty fat man, the village apothecary, and a man with a bag and few papers (presumably a tax collector). To rejoice of the villagers, these three men are being pushed outside the village. The picture is titled "Villagers shooting out their rubbish", indicating that the people in the carts are useless to the society. The apathy of society towards a few people is being ridiculed here.

139. Portable Medicine Vendors



Bamberg_Maskerade By Unknown author / Public domain. https://creativecommons.org/publicdomain/mark/1.0/deed.en

---

ಅಜ್ಞಾತ ಜರ್ಮನ್ ಕಲಾವಿದನೊಬ್ಬ 1837 ರಲ್ಲಿ ರಚಿಸಿರುವ ಚಿತ್ರ. ಔಷಧ ಅಂಗಡಿಗಳು ನಗರ ಪ್ರದೇಶಗಳಲ್ಲಿ ಜನ್ಮ ತಾಳಿದ ಸಮಯದಲ್ಲಿ, ಈ ರೀತಿ ಕುದುರೆ ಗಾಡಿಗಳಲ್ಲಿ ಕೆಲವು ಔಷಧಗಳನ್ನು ಹೇರಿಕೊಂಡು ಬೇರೆ ಬೇರೆ ಸ್ಥಳಗಳಲ್ಲಿ ಮಾರಾಟ ಮಾಡುವ ಪ್ರಕ್ರಿಯೆ ಕೂಡ ಆರಂಭವಾಯಿತು. ಸ್ಥಳಾವಕಾಶ ಕಡಿಮೆ ಇದ್ದುದರಿಂದ, ಕೆಲವೇ ಮುಖ್ಯ ಔಷಧಗಳು ಮಾತ್ರ ಲಭ್ಯವಾಗುತ್ತಿದ್ದವು. ಇಂತಹ "ಸಂಚಾರಿ ಔಷಧಾಲಯ"ವನ್ನು ಈ ಚಿತ್ರದಲ್ಲಿ ತೋರಿದೆ.

After the advent of traveling medicine sellers, it was the turn of carts! This 1837 art by an unknown German artist shows a horse-driven cart carrying various medicines for dispensing them to far off places. Given the space limitations, only a few widely used medicines could be carried in the cart. One such early model is shown in the artwork.

140. Ladies in the Apothecary Shop



"File:A young male apothecary serving and flirting with two young Wellcome V0010769.jpg" is licensed under CC BY 4.0

ಚಾರ್ಲ್ಸ್ ಫಿಲಿಪೋನ್ ಎಂಬ 19 ನೆಯ ಶತಮಾನದ ಪ್ರಸಿದ್ಧ ಫ್ರೆಂಚ್ ಚಿತ್ರಕಾರ 1850 ರ ಸುಮಾರಿಗೆ ರಚಿಸಿರುವ ತಮಾಷೆಯ ವರ್ಣಚಿತ್ರ. ಆ ವೇಳೆಯ ಸುಮಾರಿಗೆ ಯೂರೋಪಿನಲ್ಲಿ ಸ್ತ್ರೀಯರಿಗೆ ಸ್ವಲ್ಪ ಹಕ್ಕುಗಳು ಬಂದಿದ್ದವು! ಅವುಗಳಲ್ಲಿ ಒಂದು, ಮಾರುಕಟ್ಟೆಗೆ ಹೋಗಿ ತಮಗೆ ಬೇಕಾದ್ದನ್ನು ಖರೀದಿ ಮಾಡುವುದು. ಚಂದದ ಯುವತಿಯರು ಅಂಗಡಿಗೆ ಬಂದರೆ ಅಲ್ಲಿ ಕೆಲಸ ಮಾಡುವ ಯುವಕರ ಉತ್ಸಾಹ ನೂರ್ಮಡಿಯಾಗುತ್ತಿತ್ತು! ಪ್ಯಾರಿಸ್ ನಗರದ ಅಪೋಥೆಕರಿ ಅಂಗಡಿಯ ದೃಶ್ಯವನ್ನು ಇಲ್ಲಿ ತೋರಿದೆ. ಗಾಜಿನ ಡಬ್ಬಿಗಳಲ್ಲಿ ಇದ್ದ ಔಷಧಗಳು, ಔಷಧ ಅಳೆಯುವ ಸಣ್ಣ ಶೀಷೆಗಳು, ನಾರು-ಬೇರು ಕುಟ್ಟಣಿ, ಸಣ್ಣ ತೂಕ ಅಳೆಯುವ ತ್ರಾಸುಗಳು, ಇವನ್ನು ಕುತೂಹಲದಿಂದ ನೋಡುತ್ತಿರುವ ಯುವತಿಯರು, ಆ ಯುವತಿಯರನ್ನು ಕದ್ದು ನೋಡುತ್ತಿರುವ ಅಂಗಡಿಯ ಸಹಾಯಕ ಯುವಕ – ಎಲ್ಲವೂ ಚಂದವಾಗಿ ಮೂಡಿವೆ! ಕಾಲಕ್ರಮೇಣ ಔಷಧ ಅಂಗಡಿಗಳಲ್ಲಿ ಆದ ಪರಿವರ್ತನೆಯನ್ನು ಗಮನಿಸಬಹುದು.

An 1850 painting by the French artist Charles Philipon, showing an apothecary shop managed by a young man and attended by two young women. As the rights for females improved in Europe, few of the women from upper-class families would independently go the market to buy their essentials. This was a feast for young men, who would long for feminine company! The interest of such young men would multiply in the presence of females! The young woman with a large shopping bag is looking at the various instruments of apothecary with interest, while the young man has all his attention towards the ladies! An overall feel-good picture!

141. Salesman of Medicine



A peripatetic medicine vendor entering a house in the Netherlands. Watercolour by R. Craeyvanger, 1866.. Credit: Wellcome Collection. Attribution 4.0 International (CC BY 4.0)

ಒಂದೆಡೆ ಜನಸಂಖ್ಯೆಯ ಹೆಚ್ಚಳ, ಮತ್ತೊಂದೆಡೆ ಕೈಗಾರಿಕಾ ಕ್ರಾಂತಿಗಳ ಕಾರಣದಿಂದ ಯೂರೋಪಿನ ನಗರಗಳಲ್ಲಿ ಅನೇಕ ಭೌಗೋಳಿಕ ಬದಲಾವಣೆಗಳಾದವು. ಜನರ ಆಹಾರ, ನಿದ್ರೆ, ವಿಶ್ರಾಂತಿಗಳೂ ಏರುಪೇರಾದವು. ಅದಕ್ಕೆ ತಕ್ಕಂತೆ ಕಾಯಿಲೆಗಳೂ ಹೆಚ್ಚಾದವು. ಈ ಸಂದರ್ಭಗಳನ್ನು ಬಳಸಿಕೊಂಡು ಹಲವಾರು ವೈದ್ಯರು ತಮ್ಮದೇ ಆದ "ರಹಸ್ಯ ಔಷಧ"ಗಳನ್ನು ತಯಾರಿಸಲು ಆರಂಭಿಸಿದರು. ದಿನನಿತ್ಯದ ಹಲವಾರು ಆರೋಗ್ಯ ಸಮಸ್ಯೆಗಳನ್ನು ನಿವಾರಿಸುತ್ತದೆ ಎಂದು ಆರಂಭವಾದ ಇಂತಹ ಔಷಧಗಳು ನಿಧಾನವಾಗಿ ನಂಬಲಶಕ್ಯವಾದ ಪರಿಹಾರಗಳನ್ನು ಹೇಳಿ ನಗೆಗೀಡಾದವು! ಆರಂಭಿಕ ಸಾಫಲ್ಯದಿಂದ ಪ್ರಭಾವಿತರಾದ ಹಲವಾರು ವೈದ್ಯರು ಇಂತಹ "ರಹಸ್ಯ ಔಷಧ" ತಯಾರಿ ಆರಂಭಸಿದರು. ಇದಕ್ಕೆ ಖೊಟ್ಟಿ ವೈದ್ಯರೂ ಸೇರಿದರು! ಜನರನ್ನು ತಲುಪಲು ಹಲವಾರು ವಿಧಾನಗಳು ಆರಂಭವಾದವು. ಅವುಗಳಲ್ಲಿ ಒಂದು "ಮನೆಮನೆಗೆ ತೆರಳಿ ಔಷಧ ಮಾರುವ ಮಾರಾಟಗಾರರು". 1866 ರಲ್ಲಿ ಹಾಲೆಂಡ್ ದೇಶದ ಕಲಾವಿದ ರೀನರ್ ಕ್ರೇವ್ಯಾಂಗರ್ ರಚಿಸಿರುವ ಜಲವರ್ಣ ಚಿತ್ರದಲ್ಲಿ ಇಂತಹ ಒಂದು ಪ್ರಸಂಗವಿದೆ. ಅಡ್ಡಾದಿಡ್ಡಿ

ಪರಿಹಾರಗಳನ್ನು ಸೂಚಿಸುವ ಈ ಮದ್ದು ಮಾರಾಟಗಾರ ಇಡೀ ಕುಟುಂಬದ ಜನರಲ್ಲಿ ಕಿರುನಗೆ ಮೂಡಿಸುತ್ತಿದ್ದಾನೆ!

This 1866 watercolor painting by the Dutch artist Reinier Craeyvanger shows a medical salesman in a bowler hat with a broad rim trying to sell medicines inside a house. With the commercialization of medical practice in Europe, many physicians and quacks started selling their combination of "secret proprietary medicines", with claims of treating virtually every health problem! Few famous doctors employed medicine sellers to market their medicine. This soon led to such door-to-door salesmen in distinct clothes to sell such medicines for a monetary commission. Some descriptions given by these salesmen were hilarious and unbelievable! The family in the painting seems to be enjoying one such episode!

142. Smallpox Vaccination



"File:Vaccination; 'Dr Jenner performing his first vaccination, 17 Wellcome V0018142.jpg" is licensed under CC BY 4.0

---

17 ನೆಯ ಶತಮಾನದಲ್ಲಿ ಮನುಷ್ಯರ ಸರಾಸರಿ ಆಯಸ್ಸು 39 ವರ್ಷಗಳು! ಇಂದು ಅದು ಏರಿ ಸುಮಾರು 73 ವರ್ಷಗಳಾಗಿವೆ! ನಮ್ಮ ಆಯುಸ್ಸಿನ ಏರಿಕೆಗೆ ಅತೀ ಮುಖ್ಯ ಕಾರಣ ಲಸಿಕೆಗಳು. ಜಗತ್ತಿನ ಅನೇಕ ಹಂತಕ ಕಾಯಿಲೆಗಳನ್ನು ಇಂದು ಲಸಿಕೆಗಳ ನೆರವಿನಿಂದ ನಿಯಂತ್ರಣಗೊಳಿಸಿದ್ದೇವೆ. ಇದು ಆರಂಭವಾದದ್ದು 1796 ರಲ್ಲಿ ಸಿಡುಬು ಕಾಯಿಲೆಗೆ ಲಸಿಕೆ ನೀಡುವ ಮೂಲಕ. ದನಗಳ ಸಿಡುಬಿನ ವ್ರಣಗಳ ಕೀವನ್ನು ಬಳಸಿಕೊಂಡು ಬ್ರಿಟಿಷ್ ವೈದ್ಯ ಎಡ್ವರ್ಡ್ ಜೆನ್ನರ್ ಅವರು ಸಿಡುಬಿನ ಲಸಿಕೆ ಆರಂಭಿಸಿದರು. ಇದು ಜಗತ್ತಿನ ಆದ್ಯಂತ ಅಭೂತಪೂರ್ವ ಯಶಸ್ಸು ಕಂಡಿತು. ಆದರೆ, ಅಂದು ಕೂಡ ಲಸಿಕೆಯ ವಿರೋಧಿಗಳು ಇದ್ದರು. ಎಷ್ಟೇ ಮಹತ್ವದ ಕಾರ್ಯವನ್ನು ನಡೆಸಿದರೂ, ಜೆನ್ನರ್ ಅವರು ಈ ಅವಿಶ್ವಾಸದ ವಿರುದ್ಧ ಜೀವನವಿಡೀ ಹೋರಾಡಬೇಕಾಯಿತು. ತಮ್ಮ ಮೊಟ್ಟ ಮೊದಲ ರೋಗಿ ಜೇಮ್ಸ್ ಫಿಲಿಪ್ಸ್ ಎಂಬ 8 ವರ್ಷದ ಬಾಲಕನಿಗೆ ಮೆ 14, 1796 ರಂದು ಸಿಡುಬಿನ ಲಸಿಕೆ ನೀಡುತ್ತಿರುವ ಎಡ್ವರ್ಡ್ ಜೆನ್ನರ್. ಈ ಘಟನೆಯನ್ನು ಊಹಿಸಿ ಒಂದು ತೈಲ ವರ್ಣಚಿತ್ರವನ್ನು 1910 ರಲ್ಲಿ ಚಿತ್ರಿಸಿದವರು ಬ್ರಿಟಿಷ್ ಚಿತ್ರಕಾರ ಅರ್ನೆಸ್ಟ್ ಬೋರ್ಡ್.

In the 17th century, the average lifespan of humans was 39 years! Today, it has escalated to 73 years. One of the major reasons for this improvement is the development of vaccines. We have controlled many killer diseases affecting humans with the aid of vaccines. The process was started in 1796 with vaccination against Smallpox. Pus from the cowpox lesions was effectively used by the British physician Edward Jenner for Smallpox vaccination. This had unprecedented success all over the world. However, Jenner had to face stiff opposition even during those days, despite the obvious success of vaccination! Edward Jenner vaccinating one of his very first patients, 8-year-old James Philip on 14th May 1796. British artist Ernest Board imagined this scene in 1910 for a re-creation of the event.

143. Vaccination Phobia



Edward Jenner vaccinating patients against smallpox. Credit: Wellcome Collection. Attribution 4.0 International (CC BY 4.0)

ಎಡ್ವರ್ಡ್ ಜೆನ್ನರ್ ಅವರ ಲಸಿಕೆಗಳನ್ನು ವಿರೋಧಿಸುವ ವ್ಯಂಗ್ಯಚಿತ್ರ. 1802 ರಲ್ಲಿ ಜೇಮ್ಸ್ ಗಿಲ್ರೇ ಎಂಬ ಪ್ರಸಿದ್ಧ ಬ್ರಿಟಿಷ್ ವ್ಯಂಗ್ಯಚಿತ್ರಕಾರ ಬರೆದ ಈ ಚಿತ್ರದಲ್ಲಿ ದನಗಳ ಸಿಡುಬಿನ ಕೀವನ್ನು ಲಸಿಕೆಯ ರೂಪದಲ್ಲಿ ಚುಚ್ಚಿಸಿಕೊಂಡವರಿಗೆಲ್ಲಾ ಅವರ ಮೈಮೇಲೆ ದನದ ಶರೀರದ ಭಾಗಗಳು ಬೆಳೆಯುವಂತೆ ತೋರಿದ್ದಾರೆ. ಚಿತ್ರದ ಎಡಭಾಗದಲ್ಲಿ ಜನರು ಬರುತ್ತಿದ್ದಂತೆ, ಅವರಿಗೆ “ಆರಂಭಿಕ ಮಿಶ್ರಣ” ಎಂಬ ದ್ರಾವಣವನ್ನು ಕುಡಿಸುತ್ತಿದ್ದಾರೆ. ಜೆನ್ನರ್ ಅವರ ಪಕ್ಕದಲ್ಲಿ ನಿಂತ ಗಿಡ್ಡ ವ್ಯಕ್ತಿ, ದನಗಳ ವ್ರಣದ ಕೀವನ್ನು ಪಾತ್ರೆಯಲ್ಲಿ ಹಿಡಿದು ನಿಂತಿದ್ದಾರೆ. ಆತನ ಜೇಬಿನಲ್ಲಿ “ಲಸಿಕೆಗಳ ಪ್ರಯೋಜನಗಳು” ಎಂಬ ಕಾಗದವಿದೆ. ಜನರ ಮನಸ್ಸಿನ ಭಯವನ್ನು ಈ ವ್ಯಂಗ್ಯಚಿತ್ರ ನೂರ್ಮಡಿ ಹೆಚ್ಚಿಸುವಂತಿದೆ.

This carton was painted by James Gillray, a famous British cartoonist in 1802. The cartoon opposes the process of vaccination. Edward Jenner is seen vac-

cinating an obese lady using the Cowpox pus held in a container by a dwarf with a pamphlet about the uses of vaccines. People arriving for vaccination are given an “opening mixture”, indicating the pro-vaccination literature! The vaccinated people have developed organs of a cow over their bodies! The blatant anti-vaccine mindset is evident!

144. Vaccination at Home



A man vaccinating a young child held by its mother, with other members of the household looking on. Oil painting by L.-L. Boilly, 1807(?). Credit: Wellcome Collection. Attribution-NonCommercial 4.0 *International* (CC BY-NC 4.0)

18-19 ನೆಯ ಶತಮಾನದ ಪ್ರಸಿದ್ಧ ಫ್ರೆಂಚ್ ಚಿತ್ರಕಾರ ಲೂಯಿಸ್ ಲಿಯೊಪಾಲ್ಡ್ ಬಾಯ್ಲಿ ಅವರು 1807 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಲಸಿಕೆ ನೀಡುವ ಮಂದಿ ಸಿರಿವಂತರ ಮನೆಗೆ ಬಂದು, ಅವರ ಮಕ್ಕಳಿಗೆ ಲಸಿಕೆ ನೀಡಿ ಹೋಗುತ್ತಿದ್ದರು. ಸಾಮಾನ್ಯರಿಗೆ ಊರಿನಲ್ಲಿ ಜಾತ್ರೆಯ ವೇಳೆ ಹೀಗೆ ಗುಂಪಿನಲ್ಲಿ ಲಸಿಕೆ ನೀಡಲಾಗುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಲಸಿಕೆಗಳನ್ನು ನೀಡಲು ಚೆನ್ನಾಗಿ ನುರಿತ, ಅನುಭವಸ್ಥ ಮಂದಿಯನ್ನೇ ನಿಯಮಿಸಲಾಗುತ್ತಿತ್ತು. ಇಡೀ ಕುಟುಂಬದ ಮುಖಭಾವ ಬಹಳ ಚೆನ್ನಾಗಿ ಬಿಂಬಿತವಾಗಿದೆ. ಚಿತ್ರದಲ್ಲಿ ತೋರಿರುವ ನಾಯಿ ಮತ್ತು ಬೆಕ್ಕುಗಳು ಯಾವುದೋ ಸಂಘರ್ಷದ ಸಂಕೇತಗಳು!

This is an 1807 oil painting by the Italian artist Louis Leopold Boilly. As the

practice of smallpox vaccination gained momentum, few doctors started visiting the houses of rich and affluent for delivering vaccination at door-step. This practice was usually done during a festival or gathering, where many families would gather. A senior and trusted physician would deliver the vaccines to all the children. Curiously, the presence of a cat and dog in these paintings involving a doctor was consistent in the paintings of various artists of those times, possibly symbolic of conflicts of values in those times.

145. Vaccination Camps in Germany



Impfstube by Reinhard Sebastian Zimmermann / Public domain https://creativecommons.org/publicdomain/mark/1.0/deed.en

---

ಲಸಿಕಾಕರಣವನ್ನು ಆಸ್ಥೆಯಿಂದ ಪಾಲಿಸಿದ ದೇಶಗಳಲ್ಲಿ ಜರ್ಮನಿ ಪ್ರಮುಖವಾದದ್ದು. ದೇಶದ ಸಣ್ಣ ಸಣ್ಣ ಪಟ್ಟಣಗಳಲ್ಲಿ, ಹಳ್ಳಿಗಾಡುಗಳಲ್ಲಿ "ಲಸಿಕೆ ನೀಡುವ ಕ್ಯಾಂಪ್" ಮಾದರಿಯ ಪ್ರದೇಶಗಳನ್ನು ಸ್ಥಾಪಿಸಿ, ಅಲ್ಲಿ ದಾದಿಯರ ಸವಲತ್ತು ಕಲ್ಪಿಸಿ, ಲಸಿಕೆ ನೀಡುವ ನುರಿತ ಸಹಾಯಕರನ್ನು ನೇಮಕ ಮಾಡಿದ್ದು ಈ ಸಫಲತೆಗೆ ಕಾರಣವಾಯಿತು. ಇದರಿಂದ, ಲಸಿಕೆ ಕೊಡಿಸಲು ಹೆದರುತ್ತಿದ್ದ ತಾಯಂದಿರಿಗೆ ಆತ್ಮವಿಶ್ವಾಸ ಹೆಚ್ಚಾಯಿತು. 1856 ರಲ್ಲಿ ಜರ್ಮನಿಯ ರೀನ್ಹಾರ್ಡ್ ಸೆಬಾಸ್ಟಿಯನ್ ಜಿಮ್ಮರ್ಮನ್ ಎಂಬ ಕಲಾವಿದ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಇಂತಹ ಒಂದು ಕ್ಯಾಂಪ್ ಅನ್ನು ಚಿತ್ರಿಸಲಾಗಿದೆ. ನಗುಮುಖದ ದಾದಿಯರು ಮಕ್ಕಳನ್ನು ನಿರ್ವಹಿಸಿ, ಲಸಿಕೆ ನೀಡಲು ಸಹಕರಿಸುತ್ತಿದ್ದಾರೆ. ಹೀಗಾಗಿ, ಮಕ್ಕಳ ತಾಯಂದಿರಿಗೆ ನಿರಾಳ ಭಾವವಿದೆ!

This 1856 oil painting by Reinhard Sebastian Zimmermann shows a vaccine camp in Germany. The German model of extending vaccination into small cities and villages led to a huge success in reducing smallpox. Such camps had trained nurses and helpers to take care of anxious mothers and crying children. One such camp is shown in this painting. Nurses in uniform are helping mothers and doctors to manage small kids. The mothers appear relaxed and the children are playful.

146. Vaccination Camps in Italy



la_vaccinazione_nelle_campagne by Demetrio Cosola (1851–1895) / Public domain. https://creativecommons.org/publicdomain/mark/1.0/deed.en

---

19 ನೆಯ ಶತಮಾನದ ಇಟಾಲಿಯನ್ ಚಿತ್ರಕಾರ ಡೋಮೆಟ್ರಿಯೊ ಕೊಸೊಲ ಅವರು 1894 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಇಟಲಿಯ ರೋಮ್ ಪ್ರಾಂತ್ಯದಲ್ಲಿ ಮಕ್ಕಳಿಗೆ ಲಸಿಕೆ ನೀಡುವ ತಾಣವನ್ನು ಚಿತ್ರಿಸಲಾಗಿದೆ. ಸಮುದಾಯ ವೈದ್ಯದಲ್ಲಿ ಈ ಮಾದರಿ ಬಹಳ ಉಲ್ಲೇಖಪೂರ್ಣ. ಪ್ರತಿಯೊಂದು ಶಿಶುವನ್ನೂ ವೈದ್ಯರ ಬಳಿ ಕರೆತರುವುದಕ್ಕಿಂತ, ಒಂದು ನಿರ್ದಿಷ್ಟ ತಾಣದಲ್ಲಿ, ನಿರ್ದಿಷ್ಟ ಸಮಯದಲ್ಲಿ ವೈದ್ಯರು ತಮ್ಮೆಲ್ಲ ಉಪಕರಣಗಳ ಜೊತೆಯಲ್ಲಿ ಬಂದಾಗ, ಆ ಸುತ್ತಮುತ್ತಲಿನ ಮಕ್ಕಳನ್ನೆಲ್ಲಾ ಆ ಸ್ಥಳಕ್ಕೆ ತಂದು ಲಸಿಕೆ ಹಾಕಿಸುವ ಸಂಪ್ರದಾಯ ಆರಂಭವಾದದ್ದು ಹೀಗೆ. ಇಂತಹ ಸಂಧರ್ಭಗಳಲ್ಲಿ ಮಕ್ಕಳ ಇತರ ಆರೋಗ್ಯ ಸಮಸ್ಯೆಗಳನ್ನು ಕೂಡ ಅರಿಯಲು ಸಾಧ್ಯವಾಗುತ್ತಿತ್ತು. ಇದೇ ನಂತರ ಪ್ರತ್ಯೇಕ ಮಕ್ಕಳ ಆಸ್ಪತ್ರೆಗಳ ನಿರ್ಮಾಣಕ್ಕೆ ಕಾರಣವಾಯಿತು.

This 1894 oil painting by the Italian artist Demetrio Cosola depicts an Italian pediatric immunization camp in Rome. This marks an important step in community medicine. The practice of taking each child to a doctor for immunization was replaced with the arrival of doctors with all their equipment in

one place, where parents can bring the children and get immunized. This improved the compliance for vaccination and led to a collective movement of inspiring each other in the practices of immunization. Such occasions led to an opportunity for learning health related problems of children. This trend led to the development of separate pediatric hospitals in the future.

147. Wetnursing



"Pieter de Hooch, A Woman Nursing an Infant with a Child and a Dog, 1558-60, Oil on canvas, 68 x 56 cm, Fine Arts Museums of San Francisco, San Francisco" by Emme Debi is licensed under CC BY-NC 2.0

1658 ರಲ್ಲಿ ಡಚ್ ಕಲಾವಿದ ಪೀಟರ್ ದೆ ಹೂಚ್ ಅವರು ರಚಿಸಿರುವ ತೈಲ ವರ್ಣಚಿತ್ರ. ಮಧ್ಯಕಾಲೀನ ಯುರೋಪ್ ನಲ್ಲಿ ಮಗುವಿಗೆ ಹಾಲೂಡಿಸಲು "ವೆಟ್ ನರ್ಸ್" ಎನ್ನುವ ಮಹಿಳೆಯರು ಇರುತ್ತಿದ್ದರು. ಅಂತಹವರು ಸಾಮಾನ್ಯವಾಗಿ ಮನೆಯ ಕೆಲಸ ಮಾಡುವ ಶ್ರಮಜೀವಿ ಹೆಂಗಸರು. ಮಗುವನ್ನು ಹೆತ್ತ ತಾಯಿ ತೀರಿಕೊಂಡರೆ, ತಾಯಿಗೆ ಎದೆಹಾಲು ಬಾರದಿದ್ದರೆ, ಅಥವಾ ತನ್ನ ಹಾಲು ಕುಡಿಸಲು ತಾಯಿ ಒಪ್ಪದಿದ್ದರೆ, ಆ ಕೆಲಸಕ್ಕೆ ಇತರ ಹೆಂಗಸರು ನಿಯುಕ್ತರಾಗುತ್ತಿದ್ದರು. ಹೂಚ್ ಅವರ ಈ ಚಿತ್ರದಲ್ಲಿ ಸಾಧಾರಣ ಬಟ್ಟೆ ತೊಟ್ಟ, ತಲೆಗೆ ಕಪ್ಪು ಬಟ್ಟೆ ಹಾಕಿಕೊಂಡ ಇಂತಹ ಒಬ್ಬರು ಹೆಣ್ಣು ಒಳ್ಳೆಯ ಬಟ್ಟೆ ಹೊದ್ದಿರುವ ಮಗುವಿಗೆ ಹಾಲೂಡಿಸುವುದನ್ನು ತೋರಿದೆ. ಈ ದಿರಿಸಿನಿಂದ ಆ ಮಹಿಳೆ "ವೆಟ್ ನರ್ಸ್" ಎಂದು ಸೂಚಿಸಿದೆ. ಆಕೆಯ ಜೊತೆಯಲ್ಲಿ ಇರುವ ಹೆಣ್ಣು ಮಗುವಿನ ತಲೆಯ ಮೇಲೂ ಬಿಳಿ ಟೊಪ್ಪಿಗೆ ಇದೆ. ಪ್ರಾಯಶಃ ಮಗುವೂ ಯಾವುದೋ ಮನೆಯಲ್ಲಿ ಕೆಲಸ ಮಾಡುತ್ತಿದ್ದಿರಬಹುದು ಎಂದು ವಿವರಣೆ. ಆ ಮನೆಯ ಪರಿಸ್ಥಿತಿ ನೋಡಿದರೆ, ಮಗುವನ್ನು ಈ "ವೆಟ್ ನರ್ಸ್" ಮನೆಗೆ ತಂದು ಹಾಲು ಕುಡಿಸಿ, ಮರಳಿ ಒಯ್ಯುವ ಕೆಲಸ ಎನಿಸುತ್ತದೆ. ಈ ರೀತಿ ಒಂದೇ ಹೆಂಗಸಿನ ಹಾಲು ಕುಡಿದ ಅನೇಕ ಮಕ್ಕಳನ್ನು "ಹಾಲು ಸಂಬಂಧಿಗಳು" ಎಂದು ಕರೆಯಲಾಗುತ್ತಿತ್ತು! ಈ ವೆಟ್ ನರ್ಸ್ ಪದ್ಧತಿ ಬಹಳ ಪ್ರಾಚೀನ ಎಂದೂ, ಸುಮಾರು ಶಕ ಪೂರ್ವ 3000 ದಲ್ಲೇ ಈಜಿಪ್ಟ್ ನಲ್ಲೂ ಈ ಸಂಪ್ರದಾಯ ಇತ್ತು ಎಂದೂ ನಂಬಲಾಗಿದೆ.

This 1658 oil painting by the Dutch artist Pieter de Hooch displays a wet-nurse. This was a common practice in medieval Europe, which can be traced to Ancient Egypt. Wet-nurses were usually peasant women who would breastfeed the babies of rich families. This was a practice followed if the mother of the newborn had died during labor or could not get breastmilk for whatever reason or when the mother refused to feed the newborn. The woman in a black cap is feeding a baby wrapped in rich clothes. Possibly, the child is brought to the house of wet-nurse for feeding. Children with a common wet-nurse were called "milk-cousins". Few historians believe that such practice can be dated back to 3000 years BCE.

148. Reading for the Sick



A girl reads to a convalescent while a nurse brings in the patient's medicine. Watercolour by R.H. Giles. Wellcome Collection. Attribution-NonCommercial 4.0 International (CC BY-NC 4.0)

ಕಾಯಿಲೆಯ ಸಮಯದಲ್ಲಿ ಮತ್ತು ಚೇತರಿಸಿಕೊಳ್ಳುವ ವೇಳೆಯಲ್ಲಿ ಮನಸ್ಸನ್ನು ಪ್ರಫುಲ್ಲಿತವಾಗಿ ಇಟ್ಟುಕೊಳ್ಳಬೇಕು ಎಂಬುದು ಪ್ರಾಚೀನ ಕಾಲದಿಂದ ಹೇಳಲಾಗುವ ಸಲಹೆ. ಇಂತಹ ಸಮಯಗಳಲ್ಲಿ ದೇಹ, ಮನಸ್ಸು ಮತ್ತು ಮೆದುಳಿಗೆ ವಿಶ್ರಾಂತಿ ಅಗತ್ಯ. ಹಿಂದಿನ ಕಾಲದಲ್ಲಿ ಇದನ್ನು ಪಾಲಿಸಲು ಕೆಲವು ಮಾರ್ಗಗಳನ್ನು ಸೂಚಿಸಲಾಗಿತ್ತು. ಆ ಕಾಲದ ಹಲವಾರು ಕತೆ, ಕಾದಂಬರಿಗಳಲ್ಲೂ ಇಂತಹ ಪ್ರಸಂಗಗಳು ಕಾಣುತ್ತವೆ. 19 ನೆಯ ಶತಮಾನದ ಬ್ರಿಟಿಷ್ ಚಿತ್ರಕಾರ ರಾಬರ್ಟ್ ಹಂಫ್ರಿ ಗೈಲ್ಸ್ ಅವರು 1850 ರ ಸುಮಾರಿಗೆ ರಚಿಸಿರುವ ಜಲ ವರ್ಣಚಿತ್ರ. ಇದರಲ್ಲಿ ಕಾಯಿಲೆಯಾದ ತರುಣಿ ಸಾಕಷ್ಟು ಸೊರಗಿದ್ದಾರೆ. ಅವರ ಆರೈಕೆಗೆ ಓರ್ವ ನರ್ಸ್ ಇರುವುದು ತಿಳಿಯುತ್ತಿದೆ. ಮತ್ತೊಬ್ಬ ತರುಣಿ ಈ ರೋಗಿಗಾಗಿ ಏನನ್ನೋ ಓದುತ್ತಿದ್ದಾರೆ. ಮನೆಯ ಹಿರಿಯ ಹೆಂಗಸೊಬ್ಬರು ರೋಗಿಯ ಬದಿಯಲ್ಲೇ ಆಸರೆಯಾಗಿ ನಿಂತಿದ್ದಾರೆ.

This 1850 watercolor painting by the British painter Robert Humphrey Giles depicts the sick room of an ill girl. One of the main reasons for such rooms was the nursing facility made at the house for diseases like tuberculosis, which was rampant in medieval Europe. Such sickrooms were availed for short course illnesses too. Few members of the family took a special interest in caring for the sick and took up a few skills in nursing and dispensing medications. Reading to the sick was a part of cheering them up. This well-preserved painting also shows a professional nurse in the background. The patient looks emaciated, suggestive of chronic illness.

149. Family and medicine



nlm:nlmuid-101460280 by Philip Fleishcer. https://creativecommons.org/publicdomain/mark/1.0/

ಔಷಧಕ್ಕೂ, ಕಹಿ ರುಚಿಗೂ ಅವಿನಾಭಾವ ಸಂಬಂಧ! ಕಹಿ ಇಲ್ಲದಿದ್ದರೆ ಅದು ಔಷಧವೇ ಅಲ್ಲ! ಒಂದು ವೇಳೆ ಔಷಧದಲ್ಲಿ ಸ್ವಾಭಾವಿಕ ಕಹಿ ಇಲ್ಲದಿದ್ದರೆ, ಅದಕ್ಕೆ ಏನನ್ನಾದರೂ ಬೆರೆಸಿ ಕಹಿ ಮಾಡಲಾಗುತ್ತಿತ್ತು! ಔಷಧದ ಮೂಲ ಉದ್ದೇಶ ಅದರ ಗುಣಕಾರಿ ಫಲವೇ ಹೊರತು, ಅದರ ರುಚಿ ಅಲ್ಲ! ಜೊತೆಗೆ, ರುಚಿಯಾದ ಔಷಧವನ್ನು ಹೆಚ್ಚು ಪ್ರಮಾಣದಲ್ಲಿ ಸೇವಿಸಿ, ಅಪಾಯಕ್ಕೆ ಈಡಾಗುವ ಸಾಧ್ಯತೆಯೂ ಇದೆ! ಹೀಗಾಗಿ, ಔಷಧ ಎಂದರೆ ಕಹಿಯೇ! ಆದರೆ, ಮಕ್ಕಳ ಔಷಧಕ್ಕೂ ಇದೇ ಸೂತ್ರ ಪಾಲನೆ ಆಗುತ್ತಿತ್ತು! ಹೀಗಾಗಿ, ಮಕ್ಕಳಿಗೆ ಔಷಧ ಕುಡಿಸುವುದು ಒಂದು ಯಜ್ಞವೇ ಸರಿ! ಮನೆಯ ಹಿರಿಯರ ಉಸ್ತುವಾರಿಯಲ್ಲಿ, ಎಲ್ಲಾ ಸದಸ್ಯರೂ ಭಾಗವಹಿಸಿ, ಸಣ್ಣ ಮಕ್ಕಳಿಗೆ ಔಷಧ ಕುಡಿಸುವುದು ವಾಡಿಕೆ! ಮಗು ಅದನ್ನು ಕುಡಿದರೆ, ಸಾಧನೆ; ಅದನ್ನು ಕಕ್ಕಿ, ವಾಂತಿ ಮಾಡಿದರೆ, ಯಾತನೆ! 1894 ರಲ್ಲಿ ಫಿಲಿಪ್ ಫ್ಲೇಶರ್ ಎಂಬ ಅಮೆರಿಕನ್ ಚಿತ್ರಕಾರನ ಈ ಕೃತಿಯಲ್ಲಿ ಮೇಲೆ ಹೇಳಿದ ಎಲ್ಲಾ ಅಂಶಗಳೂ ಮನೋಜ್ಞವಾಗಿ ಮೂಡಿವೆ!

Medicines have always been equated to bitterness! If the medicines are not naturally bitter, then they are deliberately embittered! The basic purpose of medicine was curative and never taste. This notion was ideal to prevent toxicity resulting from excess consumption. However, the principle was extended to the medicines used for children! Thus, delivering medicine to children was no less than a ritual! Almost the entire family participated in this ritual, with one of the senior members of the family holding the forte! There was always the danger of vomiting soon after forcing the medicine to the child. All these elements are depicted in this 1894 painting by the American artist Philip Fleishcer.

150. Proprietary Medicines



"File:Isaac Swainson promoting his 'Velnos syrup', facing an onsla Wellcome V0010912.jpg" is licensed under CC BY 4.0

1780 ರ ಸುಮಾರಿಗೆ ಔಷಧಗಳಲ್ಲಿ ಪಾದರಸದ ಬಳಕೆ ಬಹಳವಾಗಿತ್ತು. ಪಾದರಸ ಘೋರ ವಿಷ. ಸಣ್ಣ ಪ್ರಮಾಣದಲ್ಲೂ ಪ್ರಾಣ ತೆಗೆಯಬಲ್ಲ ಆ ವಿಷವನ್ನು “ಪ್ರತಿಯೊಂದು ವಿಷವೂ ಔಷಧ” ಎಂದು ನಂಬಿದ್ದ ಅನೇಕರು ಬಳಸುತ್ತಿದ್ದರು. ಹೀಗಾಗಿ, ಪಾದರಸದ ಪ್ರತಿಪಾದಕರ ಹಾರಾಟ ಜೋರಾಗಿತ್ತು! ಅದೇ ಸುಮಾರಿಗೆ ಫ್ರೆಂಚ್ ವೈದ್ಯ ಜೀನ್ ಜೋಸೆಫ್ ವೆಲ್ನಾಸ್ ಎಂಬುವರು ಅನೇಕ ತರಕಾರಿಗಳ ಸಾರವನ್ನು ಬಳಸಿ ಒಂದು ಕಷಾಯ ತಯಾರಿಸಿದರು. ಈ ಕಷಾಯದ ಹಕ್ಕುಗಳನ್ನು ಖರೀದಿಸಿ, ಅದನ್ನು ಬ್ರಿಟನ್ ನಲ್ಲಿ “ವೆಲ್ನಾಸ್ ಕಷಾಯ” ಎಂಬ ಹೆಸರಿನಲ್ಲಿ ಪ್ರಚಾರಗೊಳಿಸಿದ್ದು ಫ್ರಿಥ್ ರಸ್ತೆಯಲ್ಲಿ ಕ್ಲಿನಿಕ್ ಹೊಂದಿದ್ದ ಐಸ್ಯಾಕ್ ಸ್ವೈನ್ಸನ್ ಎಂಬ ವೈದ್ಯ. “ಈ ಕಷಾಯದಲ್ಲಿ ಏನಿದೆ” ಎಂಬುದನ್ನು ರಹಸ್ಯವಾಗಿ ಇರಿಸಿದ್ದ ಸ್ವೈನ್ಸನ್, ಇದರಿಂದ ಹಲವಾರು ರೋಗಗಳು ಗುಣವಾಗುತ್ತವೆ ಎಂದು ಪತ್ರಿಕೆಗಳ ಮೂಲಕ 1788 ರಲ್ಲಿ ಅಬ್ಬರದ ಪ್ರಚಾರ ಮಾಡಿದರು. ಇದಕ್ಕಾಗಿ ಅಂದಿನ ಕಾಲದ ಅನೇಕ ವೈದ್ಯರ ಕೋಪವನ್ನು ಎದುರಿಸಬೇಕಾಯಿತು! 17-18 ನೆಯ ಶತಮಾನದ ಪ್ರಸಿದ್ಧ ಬ್ರಿಟಿಷ್ ವ್ಯಂಗ್ಯಚಿತ್ರಕಾರ ಥಾಮಸ್ ರೋಲ್ಯಾಂಡ್ಸನ್ 1789 ರಲ್ಲಿ ರಚಿಸಿದ ಈ ವ್ಯಂಗ್ಯಚಿತ್ರದಲ್ಲಿ ಸ್ವೈನ್ಸನ್ ಅವರ ಮೇಲೆ ಹಲವಾರು ವೈದ್ಯರು ಮತ್ತು ಸ್ವಯಂ ರೋಮನ್ ದೇವತೆ ಮರ್ಕ್ಯುರಿ ಖುದ್ದಾಗಿ ಜಗಳಕ್ಕೆ ಬರುವಂತೆ ಚಿತ್ರಿಸಲಾಗಿದೆ!

This 1789 cartoon by the British artist Thomas Rowlandson has an interesting history! By the late 18th century, the use of mercury in medicines was rampant. Although it was known from time immemorial that mercury was a lethal poison, it was still used in medicine with an understanding that "every poison is medicine when used in right doses". However, no one knows this "right dose"! The proponents of mercury were widespread. At this time, a French physician Jean-Joseph Velnos had prepared a tonic made of vegetable essence. The rights for this popular tonic was bought by Isaac Swainson, a British physician who had a clinic at Frith street. This was marketed as Velnos syrup. Dr. Swainson had kept the formulation of this syrup a secret, but claimed huge therapeutic qualities to it. He published advertisement for this syrup in local newspapers. This angered the medical community, especially those who promoted mercury. The cartoon depicts the "mercury brigade", led by Roman God Mercury, ambushing Dr. Swainson near his clinic.

151. Patients and Doctors



A cynical doctor describes the contents of his new cough mixture. Coloured lithograph by C. Jacque, 1844. Credit: Wellcome Collection. Attribution 4.0 International (CC BY 4.0)

ಚಾರ್ಲ್ಸ್ ಎಮಿಲಿ ಜಾಕ್ ಎನ್ನುವ ಫ್ರೆಂಚ್ ವ್ಯಂಗ್ಯಚಿತ್ರಕಾರನ 1844 ರ ವರ್ಣಚಿತ್ರ. ಆ ಕಾಲದಲ್ಲಿ ಕೆಲವು ವೈದ್ಯರು ತಮ್ಮದೇ ಆದ ಸೂತ್ರದ ನೆರವಿನಿಂದ ಔಷಧಗಳ ಮಿಶ್ರಣ ಮಾಡಿ, ಅದನ್ನು "ವಿಶೇಷ ಔಷಧ" ಎಂದು ಪ್ರಚಾರ ಮಾಡುತ್ತಿದ್ದರು. ಈ ಚಿತ್ರದಲ್ಲೂ ಅಂತಹ ಒಬ್ಬ ವೈದ್ಯನನ್ನು ತೋರಿದೆ. ಮಿಶ್ರಣ ಏನೇ ಇದ್ದರೂ, ಅದನ್ನು ಪತ್ರಿಕೆಗಳಲ್ಲಿ ಸರಿಯಾಗಿ ಸಿಂಪಡಿಸುವುದು ಮುಖ್ಯ ಎಂಬ ಮಾತಿದೆ! ಅಂದರೆ, "ವಿಶೇಷ" ಎನ್ನುವುದು ಔಷಧದ ಪ್ರಚಾರದಲ್ಲಿ ಇದೆಯೇ ಹೊರತು, ಔಷಧದ ಸಾಮಗ್ರಿಯಲ್ಲಿ ಅಲ್ಲ ಎನ್ನುವ ಭಾವ! ಈ ಚಿತ್ರವನ್ನು ಹಲವಾರು ಮಂದಿ ಬೇರೆ ವಿವರಣೆಯ ಜೊತೆಯಲ್ಲಿ ಬಳಸಿದ್ದಾರೆ ಎನ್ನಲಾಗಿದೆ.

This 1844 colored lithograph by the French artist Charles-Emile Jacque is titled "Patients and Doctors". Physicians and apothecaries of those times used to prepare a "special proprietary secret formulation" and patent them. This was advertised as a special remedy for many diseases. There was no way of testing the veracity of their claims. The end-user experience was considered as the test of efficacy. This picture shows one such combination of a physician with an apothecary, who feel that the marketing of the new paste is more important than whether it acts or not! Many pictures are conveying the same feeling in different expressions.

152. Ayer's Pills



"Vintage Advertising Card For Ayer's Pills - Early 1900s" by France1978 is licensed under CC BY-SA 2.0

ಔಷಧಗಳ ಜಾಹೀರಾತು ಹಲವಾರು ಹಂತಗಳನ್ನು ದಾಟಿ ಹೋಗಿದೆ! ಅದು ಒಂದು ಕಾಲದಲ್ಲಿ ಸೈನ್ಯವನ್ನೂ

ಬಿಟ್ಟಿರಲಿಲ್ಲ! 1880 ರ ಸುಮಾರಿಗೆ ಅಜ್ಞಾತ ಕಲಾವಿದನೊಬ್ಬನಿಂದ ತಯಾರಾಗಿರುವ ಈ ಚಿತ್ರದಲ್ಲಿ ಇಬ್ಬರು ಅಶ್ವಾರೋಹಿ ಸೈನಿಕರನ್ನು ತೋರಲಾಗಿದೆ. ಬಾವುಟ ಹಿಡಿದ ಸೈನಿಕ ಮತ್ತೊಬ್ಬನ ತಲೆಯನ್ನು ತರಿಯುತ್ತಿದ್ದಾನೆ. ಆ ಸೈನಿಕನ ಕೈಲಿ ಇರುವುದು ಯಾವುದೋ ದೇಶದ ಬಾವುಟವಲ್ಲ; ಬದಲಿಗೆ, ಆಯೇರ್ ಎಂಬ ಮಾತ್ರೆಗಳ ಹೆಸರು! ಈ ಮಾತ್ರೆಗಳು ಮಲಬದ್ಧತೆ, ಅಜೀರ್ಣ, ಹುಳಿತೇಗು, ಹೊಟ್ಟೆ ನೋವು, ಹೊಟ್ಟೆ ಉಬ್ಬರ, ತಲೆನೋವು, ಅತಿಸಾರ, ಕಾಮಾಲೆ – ಎಲ್ಲಕ್ಕೂ ಔಷಧ ಎಂದು ಹೇಳಿದೆ! ಅಸಲೀ ಔಷಧ ಕೊಳ್ಳಬೇಕೆಂದು ಮನವಿ ಕೂಡ ಇದೆ!

Advertising a proprietary medicine is an old method. This 1880 advertisement designed by an unknown artist shows two soldiers on horseback. The one holding a flag is beheading the other. He is not fighting for any specific country, but seems to be promoting a medicine! The flag has the caption of “Ayer’s pills”, which was advertised as a cure for constipation, dyspepsia, stomach ache, indigestion, flatulence, headache, vomiting, diarrhea, jaundice – and many more! There is a request to reject the counterfeit and go for the original!

153. Vegetable Blood Purifier




Advertisement: Swift's specific vegetable blood purifier. Wellcome Collection. Attribution 4.0 International (CC BY 4.0)

ಚರ್ಮದ ತುರಿಕೆಯಿಂದ ಹಿಡಿದು ಕ್ಯಾನ್ಸರ್ ವರೆಗೆ ಎಲ್ಲಾ ಕಾಯಿಲೆಗಳನ್ನೂ ಗುಣಪಡಿಸುವ ಮದ್ದು ಉಂಟೇ? ಇಂದು ಈ ಪ್ರಶ್ನೆಯೇ ಹಾಸ್ಯಾಸ್ಪದ ಅನಿಸುತ್ತದೆ! ಆದರೆ, ಅಂತಹ ಒಂದು ಮದ್ದನ್ನು ಪ್ರಚಾರ ಮಾಡಿ, ಸಿಕ್ಕಾಪಟ್ಟೆ ಸಂಪಾದನೆ ಮಾಡಿ, ದೊಡ್ಡ ಸಂಸ್ಥೆಯೊಂದನ್ನು ಕಟ್ಟಿದ ಉದಾಹರಣೆ 1889 ರಲ್ಲಿ ಆಗಿತ್ತು! "ಮಲಿನ ರಕ್ತದ ಕಾರಣದಿಂದಲೇ ಎಲ್ಲಾ ರೋಗಗಳೂ ಬರುತ್ತವೆ. ರಕ್ತವನ್ನು ಶುದ್ಧ ಮಾಡಿದರೆ ಎಲ್ಲಾ ಕಾಯಿಲೆಗಳೂ ಮಾಯವಾಗುತ್ತವೆ. ರಕ್ತವನ್ನು ಶುದ್ಧ ಮಾಡುವ ಇಂತಹ ಔಷಧವನ್ನು ಅಮೆರಿಕನ್ ಮೂಲನಿವಾಸಿಗಳಿಂದ ಪಡೆದಿದ್ದೇವೆ" ಎಂದು ಪ್ರಚಾರ ಮಾಡಿ, ರಕ್ತ ಶುದ್ಧೀಕರಣ ಮಾಡುವ, ತರಕಾರಿ ಮೂಲದ ಔಷಧವನ್ನು ಮಾರುಕಟ್ಟೆಗೆ ಬಿಟ್ಟಿದ್ದು ಸ್ವಿಫ್ಟ್ ಎಂಬ ಸಂಸ್ಥೆ. ಈ ಔಷಧದ ದೆಸೆಯಿಂದ ಆ ಸಂಸ್ಥೆ ವಿಶಾಲವಾಗಿ ಬೆಳೆಯಿತು! ಆ ಜಾಹೀರಾತನ್ನು ಇಂದು ನೋಡಿದರೆ ಅದರ ಸುಳ್ಳಿನ ಬಂಡವಾಳ ಚೆನ್ನಾಗಿ ತಿಳಿಯುತ್ತದೆ. ಆದರೆ, ವಿಜ್ಞಾನವಾಗಲೀ, ವಿದ್ಯಾಭ್ಯಾಸವಾಗಲೀ ಅಷ್ಟಾಗಿ ಬೆಳವಣಿಗೆ ಆಗದಿದ್ದ ಕಾಲದಲ್ಲಿ ಇದನ್ನು ನಂಬುವ ಮಂದಿ ಬಹಳ ಇದ್ದರು.

Can there be a single medicine which would treat eczema and cancer? The idea seems ridiculous today. However, in 1889, Swift Specific company of London made huge profits by selling a "vegetable blood purifier" derived from Native Americans, which claimed such extraordinary powers! Toxic elements in blood was claimed to be the source of all the ailments of the body. Purifying the blood was claimed to be a remedy for all such problems. The success of this product metamorphized Swift Specific company into a huge

corporate! The blatant lies of this claim is evident today. However, when neither the education nor the science was optimal, many people strongly believed such advertisements.

154. Advertising Secret Formulations



https://collections.nlm.nih.gov/catalog/nlm:nlmuid-101402380-img Dr. Kilmer's Indian Cough Cure Consumption Oil - Courtesy of the National Library of Medicine. https://creativecommons.org/publicdomain/mark/1.0/

ಜಾದೂ ಮಾದರಿಯ ಔಷಧಗಳನ್ನು ನಂಬುವವರು ಅಂದೂ ಇದ್ದರು; ಇಂದೂ ಇದ್ದಾರೆ! ವಿವಿಧ ದೇಶಗಳಲ್ಲಿ ಇದು ಬೇರೆ ಬೇರೆ ಸ್ವರೂಪ ಪಡೆಯುತ್ತದೆ. ನಮ್ಮ ದೇಶದಲ್ಲಿ ಸಾಧು-ಸಂತರ ಹೆಸರಿನಲ್ಲಿ; ಯೂರೋಪಿನಲ್ಲಿ ಅಲೆಮಾರಿ ಜಿಪ್ಸಿಗಳ ಹೆಸರಿನಲ್ಲಿ; ಅಮೆರಿಕದಲ್ಲಿ ಮೂಲ ನಿವಾಸಿಗಳ ಹೆಸರಿನಲ್ಲಿ ಇಂತಹ "ಅದ್ಭುತ ಪರಿಣಾಮದ ಔಷಧಗಳು" ಜಾಹೀರಾಗುತ್ತಿದ್ದವು! 19 ನೆಯ ಶತಮಾನದಲ್ಲಿ ಇದ್ದ ಅಂತಹುದೇ ಒಂದು ಜಾಹೀರಾತು ಇದು. ಇಲ್ಲಿ ಇಂಡಿಯನ್ ಎಂದರೆ ಭಾರತೀಯರಲ್ಲ; ಭಾರತೀಯರು ಎಂದು ಯುರೋಪಿಯನ್ನರು ಭ್ರಮಿಸಿದ್ದ ಅಮೆರಿಕನ್ ಮೂಲನಿವಾಸಿಗಳು! ಅವರ ಅನೇಕ ಔಷಧಗಳು ಅತ್ಯಂತ ಪರಿಣಾಮಕಾರಿ ಎನಿಸಿದ್ದವು. ಮಲೇರಿಯಾ ರೋಗವನ್ನು ಮೊದಲ ಬಾರಿ ಗೆದ್ದ ಕ್ವಿನೀನ್ ಕೂಡ ಅಮೆರಿಕನ್ ಮೂಲನಿವಾಸಿಗಳ ಔಷಧವೇ! ಹೀಗಾಗಿ, ಅವರ ಹೆಸರಿನಲ್ಲಿ ಅನೇಕ ಔಷಧಗಳು ಮಾರುಕಟ್ಟೆಗೆ ಬರುತ್ತಿದ್ದವು. ಔಷಧಗಳ ವಿಷಯದಲ್ಲಿ ಯಾವುದೇ ಕಟ್ಟುನಿಟ್ಟು ಇಲ್ಲದ ಕಾಲದಲ್ಲಿ ಈ ರೀತಿಯ "ರಹಸ್ಯ ಔಷಧ" ಬಹಳ ಜನಪ್ರಿಯವಾಗುತ್ತಿತ್ತು. ಅದು ಪರಿಣಾಮಕಾರಿ ಹೌದೋ ಅಲ್ಲವೋ ಬೇರೆ ಮಾತು! ಇಂದು ಕೂಡ ನಾವು ಜಾಹೀರಾತು ನೋಡಿ ಸುಳ್ಳನ್ನು ನಂಬುವಂತೆ, ಅಂದಿನ ಜನ ಕೂಡ ಜಾಹೀರಾತಿನಿಂದ ಮದ್ದು ಖರೀದಿಸುತ್ತಿದ್ದರು!

Magical medicines are a fad among people for a long time! Each country has different beliefs, but the same mindset behind it! Such medicines are marketed in the names of saints in India, gypsies in Europe, and Native Indians in the American continents. In one of the American advertisements of the 19^{th} century, a secret medicine obtained from the native Indians is marketed. Some medicines used by the Native Indians were indeed effective. Hence, marketing in their name was a way of believable advertisement strategy! When there were no regulations over the medications, such formulations would become popular for the sheer power of effective marketing, irrespective of their efficacy! Although advertisement for medications is banned in many countries, such marketing trends, in general, are in vogue even today!

155. Old Medicine in a New Bottle



Scott & Bowne's Palatable Castor Oil (front)" by Boston Public Library is licensed under CC BY 2.0

ಮಲಬದ್ಧತೆಗೆ ಹರಳೆಣ್ಣೆ ಬಹಳ ಪುರಾತನ ಚಿಕಿತ್ಸೆ. ಪೌರಾತ್ಯ ದೇಶಗಳಲ್ಲಿನ ಈ ಚಿಕಿತ್ಸೆ ಪಶ್ಚಿಮ ದೇಶಗಳಿಗೆ ವಿಸ್ತರಿಸಿತ್ತು. ಅಧಿಕ ಪ್ರೊಟೀನ್ ಸೇವನೆ ಮಾಡುವ, ನಾರಿನ ಪದಾರ್ಥಗಳನ್ನು ಕಡಿಮೆ ಸೇವಿಸುವ ದೇಶಗಳಲ್ಲಿ ಮಲಬದ್ಧತೆ ದೊಡ್ಡ ಸಮಸ್ಯೆ. 19 ನೆಯ ಶತಮಾನದಲ್ಲಿ ಹರಳೆಣ್ಣೆಯ ಸೇವನೆ ಮಲಬದ್ಧತೆಯನ್ನು ಕಡಿಮೆ ಮಾಡುತ್ತದೆ ಎಂದು ತಿಳಿದ ಮೇಲೆ ಅದನ್ನು ಚಿಕಿತ್ಸೆಯಲ್ಲಿ ವ್ಯಾಪಕವಾಗಿ ಬಳಸಲಾಯಿತು. ಅಮೆರಿಕದಲ್ಲಿ 19 ನೆಯ ಶತಮಾನದಲ್ಲಿ ಪ್ರಚಲಿತವಿದ್ದ ಹರಳೆಣ್ಣೆಯ ಬಗೆಗಿನ ಒಂದು ಜಾಹೀರಾತು!

This advertisement for a laxative is from the late 19th century. The use of vegetable-based oils as a laxative is an oriental practice, which traveled to the western world with time. The practice of castor oil as a laxative is still prevalent in India. The use of a limerick was a common way to entice people to remember the product. This chromolithograph by an unknown artist was for

Scott & Bowne's Palatable Castor Oil, which was a patented brand in the USA during the late 19^{th} century.

156. Anesthesia – Wells’ Debacle



Wells_operation by Unknown author / Public domain https://creativecommons.org/publicdomain/mark/1.0/deed.en

---

ನೈಟ್ರಸ್ ಆಕ್ಸೈಡ್ ಎಂಬ ಅನಿಲವನ್ನು ಸ್ವಲ್ಪ ಕಾಲ ಉಸಿರಾಡಿದರೆ ಬಹಳ ನಗು ಬಂದಂತಾಗಿ, ಎಚ್ಚರ ತಪ್ಪಿ, ನಿದ್ರೆ ಬರುತ್ತದೆ. ಆ ವೇಳೆಯಲ್ಲಿ ಯಾವುದೇ ನೋವಿನ ಅನುಭವ ಆಗುವುದಿಲ್ಲ. ಈ ಗುಣವನ್ನು ಬಳಸಿ, ಆ ಅನಿಲವನ್ನು ಅರಿವಳಿಕೆ ರೂಪದಲ್ಲಿ ಬಳಸಬಹುದು ಎಂದು 19 ನೆಯ ಶತಮಾನದ ಅಮೆರಿಕನ್ ದಂತ ವೈದ್ಯ ಹೋರೇಸ್ ವೆಲ್ಸ್ ಪ್ರತಿಪಾದಿಸಿದರು. ಈ ಬಗ್ಗೆ 1846 ರಲ್ಲಿ ಹಲವಾರು ವೈದ್ಯರನ್ನು ಆಹ್ವಾನಿಸಿ, ಸಾರ್ವಜನಿಕ ಪ್ರದರ್ಶನವನ್ನೂ ಏರ್ಪಡಿಸಿದರು. ಅವರ ದುರದೃಷ್ಟಕ್ಕೆ, ಅವರು ಆಯ್ದುಕೊಂಡ ರೋಗಿಗೆ ಆ ಅನಿಲ ಕೆಲಸ ಮಾಡಲೇ ಇಲ್ಲ. ಸಾರ್ವಜನಿಕವಾಗಿ ಅವಹೇಳನಕ್ಕೆ ಒಳಗಾದ ವೆಲ್ಸ್, ಇದೇ ಕೊರಗಿನಲ್ಲಿ ಮರಣಿಸಿದರು. ಆದರೆ ಭವಿಷ್ಯದಲ್ಲಿ ನೈಟ್ರಸ್ ಆಕ್ಸೈಡ್ ಅನಿಲ ಬಹಳ ಒಳ್ಳೆಯ ಅರಿವಳಿಕೆ ಎಂಬುದು ಸಾಬೀತಾಯಿತು. ವೆಲ್ಸ್ ಅವರ ಪ್ರಯೋಗ ವಿಫಲವಾದ ಪ್ರಸಂಗವನ್ನು ಆ ಚಿತ್ರದಲ್ಲಿ ಅಜ್ಞಾತ ಕಲಾವಿದರೊಬ್ಬರು ಬಿಂಬಿಸಿದ್ದಾರೆ.

This 1846 picture by an unknown artist shows the failure of Nitrous Oxide anesthesia of the American Dentist, Horace Wells. Nitrous Oxide was known as "laughing gas" and would cause temporary unconsciousness after inhaling for some time. Wells imagined that such a temporary time phase can be used for surgical procedures. However, his public demonstration in the year 1846 for the same failed, and he was severely ridiculed by other doctors and the press. Wells was driven into depression and died soon. Later, his ideas were found correct. Nitrous Oxide became a very popular anesthetic agent. Such instances are in plenty in the history of medicine. Some analysis, patience, and sympathy would have saved Wells.

157. Dr. William Morton's Ether



The first use of ether in dental surgery, 1846. Oil painting by Ernest Board. Wellcome Collection. Attribution 4.0 International (CC BY 4.0)

ಪ್ರಸ್ತುತ ಕಾಲದಲ್ಲಿ ಶಸ್ತ್ರಚಿಕಿತ್ಸೆಗಳ ಸಾಫಲ್ಯಕ್ಕೆ ಅನೇಕ ಕಾರಣಗಳಿವೆ. ಅದರಲ್ಲಿ ಬಹಳ ಮುಖ್ಯವಾದದ್ದು ಅನೆಸ್ಥೇಸಿಯಾ ಅಥವಾ ಅರಿವಳಿಕೆ. 1846 ರ ಅಕ್ಟೋಬರ್ 16 ರಂದು ಅಮೆರಿಕನ್ ದಂತವೈದ್ಯ ಡಾ. ವಿಲಿಯಮ್ ಮಾರ್ಟಿನ್ ಅವರು ಈಥರ್ ಎನ್ನುವ ರಾಸಾಯನಿಕವನ್ನು ಮೊದಲ ಬಾರಿಗೆ ಹಲವರು ವೈದ್ಯರ ಸಮ್ಮುಖದಲ್ಲಿ ಅಧಿಕೃತವಾಗಿ ಪ್ರಯೋಗಿಸಿದರು. ಅರಿವಳಿಕೆಯ ಪ್ರಯೋಜನಗಳು ಅರಿವಾಗುತ್ತಿದ್ದಂತೆ, ಅವುಗಳ ಪ್ರಯೋಗದಲ್ಲಿ ನಿರ್ದಿಷ್ಟತೆ ಬಂದಿತು. ಅದಕ್ಕೆ ವಿಶೇಷ ಉಪಕರಣಗಳು ಬಂದವು. ಹೊಸ ಹೊಸ ರಾಸಾಯನಿಕಗಳ ಅಭಿವೃದ್ಧಿ ಆಯಿತು. ಸುರಕ್ಷತೆಯ ಹೊಸ ವಿಧಾನಗಳು ಬೆಳೆದವು. ವೈದ್ಯಕೀಯ ವ್ಯಾಸಂಗದಲ್ಲಿ ಇಂದು ಅರಿವಳಿಕೆ ಒಂದು ಸ್ವತಂತ್ರ ವಿಶೇಷತೆಯಾಗಿದೆ. ಅದರಲ್ಲಿ ಮತ್ತಷ್ಟು ಅಭಿವೃದ್ಧಿಗಳು ಕಾಣುತ್ತಿವೆ. ಇದೆಲ್ಲಾ ಆರಂಭವಾದದ್ದು 200 ವರ್ಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ! ಬಾಸ್ಟನ್ ನಗರದ ಡಾ. ವಿಲಿಯಮ್ ಮಾರ್ಟಿನ್ 1846 ರ ಸೆಪ್ಟೆಂಬರ್ 30 ರಂದು ಎಬೆನ್ ಫ್ರಾಸ್ಟ್ ಎಂಬ ರೋಗಿಗೆ ಹಲ್ಲು ಕೀಳುವ ಮುನ್ನ ಈಥರ್ ಅರಿವಳಿಕೆ ನೀಡುತ್ತಿರುವ ದೃಶ್ಯ. ಈ ತೈಲಚಿತ್ರವನ್ನು ಅರ್ನೆಸ್ಟ್ ಬೋರ್ಡ್ ಎಂಬ ಬ್ರಿಟಿಷ್ ಚಿತ್ರಕಾರರು 1920 ರಲ್ಲಿ ರಚಿಸಿದ್ದಾರೆ. ಈಥರ್ ನ ಮೊದಲ ಪ್ರಯೋಗವಾದ್ದರಿಂದ, ಯಾವುದೇ ಸಲಕರಣೆ ಇಲ್ಲ, ಬಟ್ಟೆಯ ಸಹಾಯದಿಂದ ಈಥರ್ ನೀಡಲಾಗಿದೆ. ಇದು ಸುರಕ್ಷಿತವಲ್ಲ ಎಂದು ತಿಳಿದ ಮೇಲೆ, ಅರಿವಳಿಕೆಯ ಪ್ರಮಾಣವನ್ನು ನಿಯಂತ್ರಿಸಬಲ್ಲ ಉಪಕರಣಗಳು ಬಂದವು. ಈ ಪ್ರಸಂಗದ ಬಗ್ಗೆ

ವೈದ್ಯರ ಕ್ಲಿನಿಕ್ ನ ಪುಸ್ತಕದಲ್ಲಿ ರೋಗಿ ಹೀಗೆ ಬರೆದಿದ್ದಾರೆ: “ನನಗೆ ಅಸಾಧ್ಯವಾದ ಹಲ್ಲುನೋವು ಇತ್ತು. ಇಂದು ಮುಂಜಾನೆ 9 ಗಂಟೆಗೆ ಡಾ. ಮಾರ್ಟಿನ್ ಅವರ ಕ್ಲಿನಿಕ್ ಗೆ ಚಿಕಿತ್ಸೆಗಾಗಿ ಬಂದೆ. ಅವರು ಹೊಸ ಔಷಧವನ್ನು ವಿವರಿಸಿ, ಕರವಸ್ತ್ರದಲ್ಲಿ ಅದನ್ನು ಹಾಕಿ, ನನ್ನ ಮೂಗಿಗೆ ಹಿಡಿದರು. ಸುಮಾರು ಅರ್ಧ ನಿಮಿಷ ಕಾಲ ಆ ಔಷಧವನ್ನು ಉಸಿರಾಡಿದ ನನಗೆ ಬಹಳ ನಿದ್ರೆ ಬಂದಿತು. ನಾನು ಎದ್ದಾಗ ನೋವು ಕೊಡುತ್ತಿದ್ದ ನನ್ನ ಹಲ್ಲು ನೆಲದ ಮೇಲಿತ್ತು. ನನಗೆ ಯಾವ ರೀತಿಯ ನೋವೂ ತಿಳಿಯಲಿಲ್ಲ. ಎಚ್ಚರವಾದ ನಂತರ 20 ನಿಮಿಷ ಕಾಲ ನಾನು ವೈದ್ಯರ ಕ್ಲಿನಿಕ್ ನಲ್ಲೇ ಉಳಿದಿದ್ದೆ. ಇಂದಿನ ಚಿಕಿತ್ಸೆಯಿಂದ ನನಗೆ ಯಾವ ಅಹಿತಕರ ಅನುಭವವೂ ಆಗಲಿಲ್ಲ.”

One of the major causes of the tremendous success of current surgical procedures is Anesthesia. The first application of anesthesia dates back to 1846 when a dental surgeon from Boston used Ether. Very soon, the utility of anesthesia was realized and got standardized. New devices were designed for the proper delivery of anesthetic agents. Newer drugs found their way into pharmacopeia. Safety measures were defined. Today, anesthesia is an independent specialty ramified into super-specialty. All this happened in less than 200 years! Dr. William Morton, a dentist from Boston used Ether anesthesia on Mr. Eben Frost before a dental extraction on 30th September 1846. The oil painting of this epoch-making event was made by the British painter Ernest Board in 1920. The first-time application of Ether did not have any instrument. A simple handkerchief was used to deliver the drug. The patient made the following note in the register of dentist clinic: “This is to certify that I applied to Dr. Morton, at 9 o'clock this evening, suffering under the most violent toothache; that Dr. Morton took out his pocket-handkerchief, saturated it with a preparation of his, from which I breathed for about half a minute, and then was lost in sleep. In an instant more I awoke and saw my tooth lying upon the floor. I did not experience the slightest pain whatever. I remained twenty minutes in his office afterward, and felt no unpleasant effects from the operation.”

158. Ether Dome



Ether_Day,_or_The_First_Operation by Robert C. Hinckley / Public domain https://creativecommons.org/publicdomain/mark/1.0/deed.en

---

19-20 ನೆಯ ಶತಮಾನದ ಸುಪ್ರಸಿದ್ಧ ಅಮೆರಿಕನ್ ಚಿತ್ರಕಾರ ರಾಬರ್ಟ್ ಹಿಂಕ್ಲೇ ಅವರು 1887 ರ ಸುಮಾರಿಗೆ ಚಿತ್ರಿಸಿರುವ ತೈಲ ವರ್ಣಚಿತ್ರ. ಈ ಘಟನೆ ನಡೆದದ್ದು 1846 ರ ಅಕ್ಟೋಬರ್ 16 ರಂದು ಅಮೆರಿಕದ ಮೆಸಚುಸೆಟ್ಸ್ ಸಾರ್ವಜನಿಕ ಆಸ್ಪತ್ರೆಯಲ್ಲಿ. ವಿಲಿಯಮ್ ಮಾರ್ಟಿನ್ ಎಂಬ ದಂತವೈದ್ಯರು ನೀಡಿದ ಈಥರ್ ಅರಿವಳಿಕೆ ಬಳಸಿ, ಜಾನ್ ವಾರೆನ್ ಎಂಬ ವೈದ್ಯರು ಎಡ್ವರ್ಡ್ ಅಬಾಟ್ ಎಂಬ ರೋಗಿಗೆ ಪ್ರಜ್ಞೆ ತಪ್ಪಿಸಿ, ರೋಗಿಯ ಗಂಟಲಿನ ಭಾಗದಲ್ಲಿದ್ದ ಊತದ ಗಂತಿಯನ್ನು ರೋಗಿಯ ಅರಿವು ಇಲ್ಲದೆ, ನೋವಿನ ಬಾಧೆ ಇಲ್ಲದೆ ತೆಗೆದುಹಾಕುವ ಶಸ್ತ್ರಚಿಕಿತ್ಸೆ ಮಾಡಿದ ದೃಶ್ಯ. ಅರಿವಳಿಕೆ ಶಾಸ್ತ್ರ ಬೆಳೆದದ್ದು ಈ ಪ್ರಸಂಗದಿಂದಲೇ! ಅಂದಿನ ಕಾಲದ ಕೆಲವು ಘಟಾನುಘಟಿ ವೈದ್ಯರು ಈ ಘಟನೆಯನ್ನು ಖುದ್ದು ವೀಕ್ಷಿಸಿ ಈ ಐತಿಹಾಸಿಕ ಪ್ರಸಂಗಕ್ಕೆ ಸಾಕ್ಷಿಯಾದರು.

A painting of “Ether Dome”! This famous 1887 painting by the American artist Thomas Hinckley depicts the even held on 16th October 1846, when the first public demonstration of Ether anesthesia was performed in the Massachusetts General Hospital in America. With the help of anesthesia by a local dental surgeon William Morton, a tumor in the neck of a patient named Edward

Abbott was painlessly removed by the surgeon John Collins Warren. This event was the pioneer for the development of anesthesia. Few important names in medicine of that time were witnesses to this epoch-making event.

159. Ether Delivery System




Image from page 172 of "Anaesthetics : t" (Public Domain) by Internet Archive Book Images



Clovers Portable Inhaler. Wellcome Collection. Attribution 4.0 International (CC BY 4.0)

1914 ರಲ್ಲಿ ಡಾ. ಡಡ್ಲಿ ಬಕ್ಸ್ಟನ್ ಎಂಬ ವೈದ್ಯರು ಬರೆದಿರುವ ಅನೆಸ್ಥೇಸಿಯಾ ಬಗೆಗಿನ ಪುಸ್ತಕದಲ್ಲಿನ ಚಿತ್ರ. ಮೇಯರ್ ಮತ್ತು ಮೆಲ್ಟ್ಜರ್ ಕಂಪನಿ ತಯಾರಿಸಿದ ಜೋಸೆಫ್ ಥಾಮಸ್ ಕ್ಲೋವರ್ಸ್ ಎನ್ನುವವರು ನಿರ್ಮಿಸಿದ್ದ ಈಥರ್ ನೀಡುವ ನಿಯಂತ್ರಣ ಉಪಕರಣ. ರೋಗಿಯ ಉಸಿರನ್ನು ಸೇರುವ ಈಥರ್ ಪ್ರಮಾಣವನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದಾದ ಕವಾಟಗಳು ಈ ಉಪಕರಣದಲ್ಲಿ ಇದ್ದವು. ಫಿಲಡೆಲ್ಫಿಯಾ ದ ಬ್ಲಾಕಿಸ್ಟನ್ ಪ್ರಕಾಶನದ ಈ ಪುಸ್ತಕದಲ್ಲಿನ ಈ ಚಿತ್ರ ಬರೆದ ಕಲಾವಿದನ ಹೆಸರು ನಮೂದಾಗಿಲ್ಲ. ಉಪಕರಣದ ಫೋಟೋ ಇಲ್ಲಿದೆ.

A picture by an unknown artist from a 1914 Textbook titled "Anesthetics: Their uses and administration" by Dudley Wilmot Buxton, published by Blakiston's and Son. The instrument was designed by Joseph Thomas Clovers and manufactured by Mayer and Meltzer company, meant to deliver a controlled dose of Ether using valves to maintain the delivery. The actual photograph of the instrument is also appended.

160. A Gouty Bachelor




"File:A physician (William Cullen?) taking the pulse of a gouty ba Wellcome L0014564.jpg" is licensed under CC BY 4.0

18-19 ನೆಯ ಶತಮಾನದ ಸ್ಕಾಟ್ಲ್ಯಾಂಡ್ ನ ಹೆಸರಾಂತ ಚಿತ್ರ ಕಲಾವಿದ ಜಾನ್ ಕೇ ಅವರು 1770 ರ

ಸುಮಾರಿಗೆ ರಚಿಸಿದ್ದಾರೆ ಎನ್ನಲಾದ ತೈಲ ವರ್ಣಚಿತ್ರ. ಇದೊಂದು ರೀತಿಯ ತಮಾಷೆಯ ಪ್ರಸಂಗ. ಇದರಲ್ಲಿ ಓರ್ವ ಗರ್ಭಿಣಿ ಹುಡುಗಿಯ ಜೊತೆಗೆ ಆಕೆಯ ತಾಯಿ ಒಬ್ಬ ಯುವಕನ ಮನೆಗೆ ಬಂದಿದ್ದಾರೆ. ಆ ಹುಡುಗಿಯ ಗರ್ಭಕ್ಕೆ ಆ ಯುವಕನೇ ಕಾರಣ ಎಂದು ಅವರ ಅಹವಾಲು. ಆ ಯುವಕ ಗೆಡ್ಡೆವಾತ (ಗೌಟ್) ಕಾಯಿಲೆಯಿಂದ ಬಳಲುತ್ತಿದ್ದಾನೆ. ಆತನ ಬಲಗಾಲು ಮತ್ತು ಎಡಗೈ ಈ ಕಾಯಿಲೆಯಿಂದ ಊದಿವೆ. ಆತ ಅಸಾಧ್ಯ ನೋವಿನಲ್ಲಿದ್ದಾನೆ. ಆತನನ್ನು ಚಿಕಿತ್ಸೆ ಮಾಡಲು ಅಂದಿನ ಕಾಲದ ಪ್ರಸಿದ್ಧ ವೈದ್ಯ ಡಾ. ವಿಲಿಯಮ್ ಕಲ್ಲೆನ್ ಆತನ ಮನೆಗೆ ಬಂದಿದ್ದಾರೆ (ಅಷ್ಟು ದೊಡ್ಡ ವೈದ್ಯ ಮನೆಗೆ ಬಂದಿದ್ದಾರೆ ಎಂದರೆ, ಆ ಯುವಕ ಭಾರಿ ಶ್ರೀಮಂತನೇ ಇರಬೇಕು ಎಂದು ಸೂಚನೆ!) ಡಾ. ಕಲ್ಲೆನ್ ಅವರು ಆ ಯುವಕನ ನಾಡಿ ನೋಡುತ್ತಿರುವಾಗ ಆತ “ತನ್ನ ಈ ಪರಿಸ್ಥಿತಿಯಲ್ಲಿ ಆ ಯುವತಿಯ ಸ್ಥಿತಿಗೆ ತಾನು ಕಾರಣ ಆಗಲು ಸಾಧ್ಯವೇ?” ಎಂದು ಡಾ. ಕಲ್ಲೆನ್ ಅವರನ್ನೇ ಪ್ರಶ್ನೆ ಮಾಡುತ್ತಿದ್ದಾನೆ! ಡಾ. ಕಲ್ಲೆನ್ ಅವರಿಗೆ ಇದು ಅನಿರೀಕ್ಷಿತ ಧರ್ಮಸಂಕಟ! ಎಷ್ಟೇ ಮುಚ್ಚಿಟ್ಟುಕೊಂಡರೂ, ಅವರ ಮುಖದ ಮೇಲೆ ಒಂದು ಕಿರುನಗೆಯಿದೆ! ಈ ಪ್ರಸಂಗದ ಅಂತ್ಯವನ್ನು ನೋಡುಗರ ಊಹೆಗೆ ಬಿಡಲಾಗಿದೆ! ರೋಗ, ರೋಗಿ, ಸಾಮಾಜಿಕ ಪರಿಸ್ಥಿತಿ, ಅನುಷಂಗಿಕವಾಗಿ ಯಾವುದೋ ಪರಿಸ್ಥಿತಿಯಲ್ಲಿ ವೈದ್ಯನೊಬ್ಬ ಸಿಲುಕಿಕೊಳ್ಳುವ ಪ್ರಸಂಗ – ಇವೆಲ್ಲಾ ಇಲ್ಲಿ ಬಿಂಬಿತವಾಗಿವೆ.

This 1770 oil painting is attributed to the Scottish artist John Kay. The physician in the painting is said to be Dr. William Cullen, who was a very famous physician and known to visit only the rich and famous. The painting depicts painful humor! Dr. Cullen is checking the pulse of a gouty bachelor with swelling of Left hand and Right foot. He is bothered by an intense pain due to gout exacerbated in winter. At the same time, he is being accused of impregnating a girl! The pregnant girl has come with her mother to the house of this gouty bachelor. The man is questioning Dr. Cullen if any such act can be performed with so much from his condition. Dr. Cullen seems to be forcibly hiding his amusement, but cannot stop a wry smile! The options of how this incident may end are open to the viewer! The painting reflects a disease and its sufferer with the social conditions of those times, and the inadvertent conditions to which a physician may get subjected!

161. The Gout



James Gillray, 'The Gout'. Wellcome Collection. Attribution 4.0 International (CC BY 4.0)

ಬ್ರಿಟಿಷ್ ಚಿತ್ರಕಾರ ಜೇಮ್ಸ್ ಗಿಲ್ರೆ ಅವರ ಮೇ 14, 1799 ರ ವರ್ಣ ಚಿತ್ರ. ಗೌಟ್ ಅಥವಾ ಗೆಡ್ಡೆವಾತವನ್ನು ವಿವರಿಸುವ ಚಿತ್ರ. ಕಾಲಿನ ಅಂಗುಷ್ಟವನ್ನು ಹೆಚ್ಚು ಕಾಡುತ್ತಿದ್ದ ಈ ಕಾಯಿಲೆ, ಕೀಲುಗಳ ಒಳಗೆ ಕೆಟ್ಟ ಅಂಶಗಳು ಸೇರಿಕೊಂಡು ಆಗುವ ಕ್ರಿಯೆ ಎಂದು ನಂಬಲಾಗಿತ್ತು. ಅಂದಿನ ಕಾಲದಲ್ಲಿ ಇದಕ್ಕೆ ಚಿಕಿತ್ಸೆ ಇರಲಿಲ್ಲ. ಆದರೂ, ಶರೀರದ ಅಂಶಗಳನ್ನು ಸರಿಪಡಿಸುವ ಪಥ್ಯ, ಆಯಾ ಅಂಗದಿಂದ ರಕ್ತ ತೆಗೆಯುವ ಕ್ರಿಯೆಗಳು ಚಿಕಿತ್ಸೆಯ ಭಾಗವಾಗಿದ್ದವು. ಕಾಲ್ಚಿಸಿನ್ ಎಂಬ ಸಸ್ಯ ಒಳ್ಳೆಯ ಪರಿಣಾಮ ತೋರುತ್ತಿತ್ತು. ಕೆಲವರು ಬಂಗಾರದ ಅಂಶ ಉಳ್ಳ ಔಷಧಗಳ ಚಿಕಿತ್ಸೆಯನ್ನೂ ಬಳಸುತ್ತಿದ್ದರು. ಪ್ರಸ್ತುತ ಗೌಟ್ ಕಾಯಿಲೆಗೆ ಕಾರಣವೂ ತಿಳಿದಿದೆ; ಚಿಕಿತ್ಸೆಯೂ ಇದೆ! ಆದರೆ, ಶತಮಾನಗಳ ಕಾಲ ಈ ಕಾಯಿಲೆ ಮಾಡಿದ ತೊಂದರೆ ಅಷ್ಟಿಷ್ಟಲ್ಲ! ಈ ಚಿತ್ರದಲ್ಲೂ ಗೌಟ್ ಕಾಯಿಲೆಯ ರೋಗಿಗೆ ದೆವ್ವವೊಂದು ಕಚ್ಚುತ್ತಿರುವಂತೆ ಬಿಂಬಿಸಿದೆ. ಇದರಿಂದ ಕಾಲಿನ ಅಂಗುಷ್ಟದ ಕೀಲು ಊದಿ ಕೆಂಪಾಗಾಗಿದೆ.

This colored lithograph was published on 14th May 1799 by the British artist James Gillray titled “The Gout”. The great toe is a common part affected by gout. It was presumed that few bad elements accumulated inside the joints and affected them. There was no treatment for this. Phlebotomy was used to remove the bad elements. Few advised a strict diet. A plant called colchicine is used to show some therapeutic effect. Many physicians had tried gold-based medicine for treating gout with variable success. At present, gout has been studied well; both the cause and the treatment are known. Gout has affected people for centuries. This picture depicts a devil biting the joint leading to inflammation.

162. Punch as Panacea



An obese gouty man drinking punch with two companions. Coloured etching by J. Gillray, 1799. Wellcome Collection. Attribution 4.0 International (CC BY 4.0)

ಬ್ರಿಟಿಷ್ ಚಿತ್ರಕಾರ ಜೇಮ್ಸ್ ಗಿಲ್ರೆ ಅವರ ಜುಲೈ 13, 1799 ರ ವರ್ಣ ಚಿತ್ರ. ಪಂಚ್ ಎನ್ನುವುದು ಅಂದಿನ ಕಾಲದ ಒಂದು ಪೇಯ. ಅದರಲ್ಲಿ ಕೆಲವರು ಮದ್ಯವನ್ನು ಬೆರೆಸಿ ಸೇವಿಸುತ್ತಿದ್ದರು. ಆ ಚಟವನ್ನು ಬಿಡಲಾರದೇ, ಅದಕ್ಕೆ ಔಷಧ ಗುಣವಿದೆ ಎಂದು ಆರೋಪಿಸಿ, ಕುಡಿತ ಮುಂದುವರೆಸುತ್ತಿದ್ದರು. ಇಂತಹ ಮೂವರನ್ನು ಈ ಚಿತ್ರದಲ್ಲಿ ತೋರಿದೆ. ಬಲಬದಿಯಲ್ಲಿನ ಧಡೂತಿ ವ್ಯಕ್ತಿ ಗೌಟ್ ಪೀಡಿತ; ಆತನ ಬದಿಯ ಹೆಂಗಸು ಸೊಂಟದ ಭಾಗ ಕಿರಿದಾಗಿಸುವ ಕೋರ್ಸೆಟ್ ಎಂಬ ಉಪಕರಣವನ್ನು ಧರಿಸಿ ಅದರಿಂದ ಉಂಟಾದ ಹೊಟ್ಟೆನೋವಿನ ರೋಗಿ; ಆಕೆಯ ಬದಿಯಲ್ಲಿರುವ ವ್ಯಕ್ತಿ ಕೆಮ್ಮು ಪೀಡಿತ- ಪ್ರಾಯಶಃ ಕ್ಷಯರೋಗದಿಂದ ಬಳಲುತ್ತಿದ್ದಾನೆ. ಒಟ್ಟಾರೆ ವಾತಾವರಣ ಸಾಕಷ್ಟು ಸ್ಥಿತಿವಂತರನ್ನು ತೋರುತ್ತಿದೆ. ಸಿರಿವಂತ ಬುದ್ಧಿಹೀನರ ಲೇವಡಿ ಗಿಲ್ರೆ ಅವರಿಗೆ ಬಹಳ ಪ್ರಿಯ!

This colored lithograph was published on 13th July 1799 by the British artist James Gillray. Punch was a mixture of few juices and made a popular drink. Few preferred to add wine to that. This led to an addiction. Difficulty to overcome the addiction, few would attribute medicinal qualities to the drink and would continue! The picture shows three such people. The obese gouty man, the lady in the middle with pain abdomen caused by chronic use of corset, and the emaciated man to her right, possibly affected by chronic tuberculosis. Despite being rich, these people were not wise enough to understand what is good for them. Gillray is a master of such sarcasm.

163. Troubled with Gout



A decrepit man screaming in pain from gout, rheumatism and catarrh; represented as three tormenting devils. Coloured etching by J. Cawse, 1809, after G.M. Woodward. Wellcome Collection. Attribution 4.0 International (CC BY 4.0)

ಚಳಿಗಾಲದ ದೆವ್ವಗಳು! 18 ನೆಯ ಶತಮಾನದ ಪ್ರಸಿದ್ಧ ವೈದ್ಯ ವಿಲಿಯಮ್ ಬುಖಾನ್ ಮತ್ತು ಆತನ ಸಮಕಾಲೀನ ಹಾಸ್ಯ ಲೇಖಕ ಜಾರ್ಜ್ ವುಡ್ವರ್ಡ್ ಅವರು ಚಳಿಗಾಲದ ಆರೋಗ್ಯ ಸಮಸ್ಯೆಗಳ ಬಗ್ಗೆ ಕೆಲವು ಲೇಖನಗಳನ್ನು ಬರೆದಿದ್ದರು. ಅದನ್ನು ಆಧರಿಸಿ 19 ನೆಯ ಶತಮಾನದ ಪ್ರಸಿದ್ಧ ಬ್ರಿಟಿಷ್ ಚಿತ್ರಕಾರ ಜಾನ್ ಕಾಸ್ ಅವರು ಈ ವ್ಯಂಗ್ಯಚಿತ್ರವನ್ನು 1809 ರಲ್ಲಿ ರಚಿಸಿದರು. ಧಡೂತಿ ದೇಹಿಗಳನ್ನು ಚಳಿಗಾಲದಲ್ಲಿ ಮೂರು "ದೆವ್ವ"ಗಳು ಬಾಧಿಸುತ್ತವೆ. ಒಂದು – ಕೀಲುಗಳನ್ನು ಬಾಧಿಸುವ ಸಂಧಿವಾತ ಅಥವಾ ಹ್ರುಮ್ಯಾಟಿಸಮ್; ಎರಡು – ಸತತ ನೆಗಡಿ ಮತ್ತು ಮೂಗು ಸೋರುವಿಕೆ; ಮೂರು – ಗೆಡ್ಡೆವಾತ ಅಥವಾ ಗೌಟ್! ಈ ಮೂರು ದೆವ್ವಗಳ ಕಾಟದಿಂದ ನರಳುತ್ತಿರುವ ಆ ವ್ಯಕ್ತಿ, ಕೆಲವು ಸೀಸೆ ಔಷಧ ಇಟ್ಟಿದ್ದಾರೆ. ನೆಲಹಾಸಿನ ಮೇಲೆ ಬುಖಾನ್ ಅವರ ಲೇಖನವಿದೆ. ಋತುವಿನ ಶುಭಾಶಯಗಳು ಎಂಬ ವ್ಯಂಗ್ಯ ಶೀರ್ಷಿಕೆಯನ್ನು ಈ ಚಿತ್ರಕ್ಕೆ ನೀಡಲಾಗಿದೆ.

This color etching was done in 1809 by the British artist John Cawse, based on works by Dr. William Buchan and George Woodward, regarding the health problems of winter. The obese had to face many health issues like Rheumatism, Catarrh, and Gout, exacerbating during winter. These three problems are seen as three devils in this cartoon, which is satirically titled "The compliments of the season"!

164. Falloppius and the Cardianal Duke



"Gabriel Falloppius [Fallopius] explaining one of his discoveries to the Cardinal Duke of Ferrara". Oil painting by Francis James Barraud. Wellcome Collection. Attribution 4.0 International (CC BY 4.0)

ಫ್ರಾನ್ಸಿಸ್ ಜೇಮ್ಸ್ ಬರ್ರಾಡ್ ಎಂಬ ಬ್ರಿಟಿಷ್ ಚಿತ್ರಕಾರ (ಎಚ್ ಎಂ ವಿ ಆಡಿಯೋ ಕಂಪೆನಿಗೆ ಗ್ರಾಮಾಫೋನ್ ಮುಂದೆ ಕುಳಿತ ನಾಯಿಯ ಚಿತ್ರ ತೆಗೆದು ಪ್ರಸಿದ್ಧನಾದವ) 1895 ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಈ ಚಿತ್ರದಲ್ಲಿ 16 ನೆಯ ಶತಮಾನದ ಇಟಲಿ ದೇಶದ ಪ್ರಸಿದ್ಧ ಅಂಗರಚನ ಶಾಸ್ತ್ರಜ್ಞ ಗೆಬ್ರಿಯಲ್ ಫಲೋಪಿಯೊ ತನ್ನ ಸಂಶೋಧನೆಯ ವಿವರಗಳನ್ನು ಫೆರ್ರಾರದ ಕಾರ್ಡಿನಲ್ ಡ್ಯೂಕ್ ಆದ ಎರ್ಕೊಲ್ ದ'ಎಸ್ತೇ ಅವರಿಗೆ ವಿವರಿಸುವಂತೆ ಚಿತ್ರಿಸಲಾಗಿದೆ. ಇಟಲಿಯ ಪಿಸ ಮತ್ತು ಪಾಡುವ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದ ಫಲೋಪಿಯೊ ಅವರು ಮೂಲತಃ ಕ್ಯಾಥೊಲಿಕ್ ಚರ್ಚ್ ಗೆ ಸಂಬಂಧಿಸಿದ ಪಾದ್ರಿಯಾಗಿದ್ದರು. ಹೀಗಾಗಿ, ಚರ್ಚ್ ನಲ್ಲಿನ ತಮ್ಮ ಉಸ್ತುವಾರಿ ಅಧಿಕಾರಿಗಳ ಅನುಮತಿ ಪಡೆದ ನಂತರವೇ ತಮ್ಮ ಸಂಶೋಧನೆಗಳನ್ನು ಜಗತ್ತಿಗೆ ತಿಳಿಸಬೇಕಿತ್ತು. ಈ ಚಿತ್ರದಲ್ಲಿ ಇಂತಹ ಒಂದು ಪ್ರಸಂಗದ ವಿವರಗಳಿವೆ. ಫಲೋಪಿಯೊ ಅವರ

ಹೆಸರನ್ನು ಸ್ತ್ರೀಯರ ಶರೀರದಲ್ಲಿ ಅಂಡಾಶಯ ಮತ್ತು ಗರ್ಭಕೋಶವನ್ನು ಸಂಪರ್ಕಿಸುವ ನಾಳಕ್ಕೆ ಇಡಲಾಗಿದೆ.

Famous British painter Francis James Barraud (of HMV Logo fame) created this oil painting by 1895. The painting depicts an event of the 16^{th} century, where the renowned Italian anatomist Gabriel Falloppius is shown explaining the findings of his research to the Cardinal Duke of Ferrara Ercole d'Este. Falloppius was a professor of anatomy in the universities of Pisa and Padua but was also a priest at the Catholic Church. It was essential for him to get the official permission from church authorities before publishing them to the world. One such incident is depicted here. Falloppius is eulogized by the Fallopian tube of the female reproductive tract.

165. The Advent of Microscope



"File:Leeuwenhoek with his microscope. Oil painting by Ernest Boar Wellcome V0018134.jpg" is licensed under CC BY 4.0

ಸೂಕ್ಷ್ಮಜೀವಿಗಳಿಗೂ, ಮಾನವರಿಗೂ, ಪ್ರಕೃತಿಗೂ ನಡುವಣ ಇರುವ ಸಂಬಂಧದ ಬಗ್ಗೆ ಇಂದು ನಾವು

ಸಾಕಷ್ಟು ತಿಳಿದಿದ್ದೇವೆ. ಆದರೆ, ಈ ಸೂಕ್ಷ್ಮಜೀವಿಗಳ ಅಸ್ತಿತ್ವ ಕೂಡ ತಿಳಿಯದ ಕಾಲವೊಂದಿತ್ತು! ಅವುಗಳ ಇರುವಿಕೆಯನ್ನು ಮನಗಾಣಿಸಲು ಸೂಕ್ಷ್ಮದರ್ಶಕ ಯಂತ್ರದ ಆವಿಷ್ಕಾರ ಆಗಬೇಕಿತ್ತು. ಇದನ್ನು ಸಾಧಿಸಿದವರು 17 ನೆಯ ಶತಮಾನದ ಹಾಲೆಂಡ್ ದೇಶದ ಮಸೂರಗಳ ತಯಾರಕರಾದ ಅಂಟೋನಿಯೊ ವಾನ್ ಲೀವನ್ಹೊಕ್! ವಿಜ್ಞಾನ ಅಧ್ಯಯನ, ಸಂಶೋಧನೆಗಳ ಬಗ್ಗೆ ಯಾವುದೇ ಪ್ರಾಥಮಿಕ ಜ್ಞಾನ ಇಲ್ಲದ ಲೀವನ್ಹೊಕ್ ತಮ್ಮ ಸಹಜ ಕುತೂಹಲಗಳ ಕಾರಣದಿಂದ ಸೂಕ್ಷ್ಮದರ್ಶಕ ಯಂತ್ರವನ್ನು ತಯಾರಿಸಿ, ಒಂದು ಅಗೋಚರ ಲೋಕಕ್ಕೆ ನಮ್ಮ ಜ್ಞಾನವನ್ನು ವಿಸ್ತರಿಸಿದರು! ವಿಜ್ಞಾನದ ಅಧ್ಯಯನ ಇಲ್ಲದಿದ್ದರೂ, ಸೂಕ್ಷ್ಮದರ್ಶಕದ ಅಡಿಯಲ್ಲಿ ತಾವು ಕಂಡ ಸೂಕ್ಷ್ಮಜೀವಿಗಳನ್ನು ಕರಾರುವಾಕ್ಕಾಗಿ ವಿವರಿಸಿದರು! ಆರ್ನೆಸ್ಟ್ ಬೋರ್ಡ್ ಎಂಬ ಬ್ರಿಟಿಷ್ ಕಲಾವಿದರು 1912 ರಲ್ಲಿ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಲೀವನ್ಹೊಕ್ ಅವರ ಅಧ್ಯಯನದ ಒಂದು ಘಳಿಗೆಯನ್ನು ತೋರಲಾಗಿದೆ.

The invention of the microscope was an epoch-making event in the history of medicine! The interaction of microbial organisms in human health and disease cannot be over-emphasized. The microscope led to the visualization of hitherto unseen. This led to a systematic and scientific approach to understanding the disease. This 1912 oil painting by the British artist Ernest Board shows the 17th-century Dutch lens-maker, Antonie Philips van Leeuwenhoek, with one of his microscopes and his meticulous note keeping. Despite not being trained in science, Leeuwenhoek had an impeccable understanding of scientific methods. His disciplined observations and punctilious record-keeping helped the inculcation of microscope into the scientific studies.

166. William Harvey and Circulation



"File:William Harvey demonstrating his theory of circulation of Wellcome V0018138.jpg" is licensed under CC BY 4.0

ಮಾನವ ಶರೀರದ ರಕ್ತಪರಿಚಲನೆಯನ್ನು ಮೊದಲ ಬಾರಿಗೆ ಸಫಲವಾಗಿ ವಿವರಿಸಿದ ಕೀರ್ತಿ ಬ್ರಿಟಿಷ್ ವೈದ್ಯ ವಿಲಿಯಮ್ ಹಾರ್ವೆ ಅವರದ್ದು. ಮೃತ ಶರೀರವನ್ನು ಕತ್ತರಿಸಿದಾಗ ದಪ್ಪ ಧಮನಿಗಳು ಖಾಲಿ ಇರುತಿದ್ದವು. ತೆಳುವಾದ ಧಮನಿಗಳಲ್ಲಿ ಹೆಪ್ಪುಗಟ್ಟಿದ ರಕ್ತ ಇರುತ್ತಿತ್ತು. ಶರೀರದ ಒಳಗಿನ ಧಮನಿಗಳ ಕೆಲಸ ತಿಳಿಯದ ಕಾಲದಲ್ಲಿ ಖಾಲಿ ಧಮನಿಗಳಲ್ಲಿ ಗಾಳಿ ಸಂಚಾರ ಮಾಡುತ್ತದೆ ಎಂದು ನಂಬಲಾಗಿತ್ತು. ಶುದ್ಧ ಮತ್ತು ಅಶುದ್ಧ ರಕ್ತದ ಪರಿಚಲನೆಯನ್ನು ಹಾರ್ವೆ ನಿಖರವಾಗಿ ಗುರುತಿಸಿ, ಈ ತಪ್ಪು ನಂಬಿಕೆಯನ್ನು ಹೋಗಲಾಡಿಸಿದರು. 1912 ರಲ್ಲಿ ಬ್ರಿಟಿಷ್ ಚಿತ್ರಕಾರ ಆರ್ನೆಸ್ಟ್ ಬೋರ್ಡ್ ಅವರು 17 ನೆಯ ಶತಮಾನದಲ್ಲಿ ವಿಲಿಯಮ್ ಹಾರ್ವೆಯವರು ರಕ್ತ ಪರಿಚಲನೆಯ ಬಗ್ಗೆ ಬ್ರಿಟನ್ ನ ಅಂದಿನ ದೊರೆ ಮೊದಲನೆಯ ಚಾರ್ಲ್ಸ್ ಅವರಿಗೆ ವಿವರಿಸುತ್ತಿರುವುದನ್ನು ಚಿತ್ರಿಸಿದ್ದಾರೆ.

This 1912 painting by the British artist Ernest Board depicts William Harvey demonstrating his theory of the circulation of the blood before Charles I during the early 17th century. For a long time, the real purpose of arteries and veins were not known. Even the function of the heart was speculated to multiple theories. William Harvey was a British anatomist. He studied the vascular structures in detail and speculated the function of them. This led to an accurate understanding of the cardiovascular system. In this painting, Harvey is communicating the details of his findings to the King.

167. Intravenous Access by Sir Christopher Wren




"File:Christopher Wren making his first demonstration of a method Wellcome V0018136.jpg" is licensed under CC BY 4.0

ಅರ್ನೆಸ್ಟ್ ಬೋರ್ಡ್ ಎಂಬ ಬ್ರಿಟಿಷ್ ಚಿತ್ರಕಾರರು 1912 ರ ಸುಮಾರಿಗೆ ರಚಿಸಿರುವ ತೈಲ ವರ್ಣಚಿತ್ರ. ಇಂದು ರಕ್ತನಾಳಗಳಿಗೆ ಸೀದಾ ಔಷಧ ನೀಡುವ ಪರಿಪಾಠ ಸಾಮಾನ್ಯ. ಇದನ್ನು ಮೊದಲ ಬಾರಿಗೆ ಮಾಡಿದ್ದು 1667 ರಲ್ಲಿ. ಸರ್ ಕ್ರಿಸ್ಟೋಫರ್ ರೆನ್ ಎನ್ನುವ ಬ್ರಿಟಿಷ್ ವಿಜ್ಞಾನಿ ಡಾ. ಥಾಮಸ್ ವಿಲ್ಲಿಸ್ ಅವರ ಮುಂದೆ ಪ್ರಾಣಿಯೊಂದರ ರಕ್ತನಾಳದ ಒಳಗೆ ಸೀದಾ ಔಷಧ ಚುಚ್ಚುವ ವಿಧಾನವನ್ನು ಪ್ರಾಯೋಗಿಕವಾಗಿ ತೋರಿಸಿದ್ದನ್ನು ಈ ಚಿತ್ರ ಬಿಂಬಿಸುತ್ತಿದೆ. ವೈದ್ಯಕೀಯ ವಿಜ್ಞಾನದ ಅತ್ಯಂತ ಮಹತ್ವದ ಘಟನೆಗಳಲ್ಲಿ ಒಂದು ಎನ್ನಲಾದ ಈ ಪ್ರಯೋಗ ಮುಂದೆ ಔಷಧ ವಿಜ್ಞಾನದ ಅಪಾರ ಬೆಳವಣಿಗೆಗೆ ಕಾರಣವಾಯಿತು.

This is a 1912 re-creation of an event in 1667, by the British artist Ernest Board. Intravenous injections are a very common way of delivering medications and fluids nowadays. It started in 1667. Sir Christopher Wren is demonstrating the technique of intravenous cannulation and delivery of medications in an experimental animal in front of Dr. Thomas Willis. This is an important event in the field of medical therapeutics, which led to a huge impact on the development of medications and fine instruments.

168. Rhinoplasty in India



Cowasjee, a man who had his nose reconstructed with the aid of plastic surgery. Credit: Wellcome Collection. Attribution 4.0 International (CC BY 4.0)

ಮೂಗು ಕುಯ್ಯುವುದು ಪ್ರಾಚೀನ ಭಾರತದಲ್ಲಿ ಚಾಲ್ತಿ ಇದ್ದ ಶಿಕ್ಷೆ. ಮೂಗಿನ ಸುರೂಪಿ ಚಿಕಿತ್ಸೆಯ ಮೊದಲ ಉಲ್ಲೇಖ ಶಕಪೂರ್ವದಲ್ಲೇ ರಚಿಸಿದ್ದ ಸುಶ್ರುತ ಸಂಹಿತೆ. ಭಾರತದಿಂದಲೇ ಈ ಚಿಕಿತ್ಸೆ ಈಜಿಪ್ಟ್ ಮೂಲಕ ರೋಮನ್ನರನ್ನು ತಲುಪಿತು ಎನ್ನಲಾಗಿದೆ. 16 ನೆಯ ಶತಮಾನದ ಪ್ರಸಿದ್ಧ ಖಗೋಳ ವಿಜ್ಞಾನಿ ಟೈಕೊ ಬ್ರಾಹೆ, ಒಮ್ಮೆ ದ್ವಂದ್ವ ಯುದ್ಧದಲ್ಲಿ ಮೂಗು ಕಳೆದುಕೊಂಡು, ನಂತರ ಚಿನ್ನದ, ಬೆಳ್ಳಿಯ, ತಾಮ್ರದ, ಹಿತ್ತಾಳೆಯ, ಇಲ್ಲವೇ ಮರದ ಕೃತಕ ಮೂಗುಗಳನ್ನು ಧರಿಸುತ್ತಿದ್ದರು ಎಂದು ಉಲ್ಲೇಖವಿದೆ! ಅದೇ ವೇಳೆಯಲ್ಲಿ ಸಿಫಿಲಿಸ್ ರೋಗದ ಕಾರಣದಿಂದ ಮೂಗಿನ ಮೃದ್ವಸ್ಥಿ ಗೋಡೆ ಕುಸಿದು, ಮೂಗು ವಿಕಾರವಾದಾಗ, ಯೂರೋಪಿನಲ್ಲಿ ಈ ಚಿಕಿತ್ಸೆಗೆ ಬಹಳ ಬೇಡಿಕೆ ಬಂದಿತ್ತು! ಭಾರತೀಯ ಪದ್ಧತಿಯಲ್ಲಿ ಹಣೆಯ ಚರ್ಮದಿಂದ ಮೂಗಿನ ಹೊರಭಾಗವನ್ನು ಕಸಿ ಮಾಡುವ ವಿಧಾನವಿತ್ತು. ಹಣೆಗೆ ಮುಂಡಾಸು ಕಟ್ಟಿಕೊಳ್ಳುವ ಪದ್ಧತಿ ಇದ್ದ ಭಾರತೀಯರಿಗೆ ಹಣೆಯ ಮೇಲಿನ ಗಾಯ ಅದರಿಂದ ಮುಚ್ಚುತ್ತಿತ್ತು. ಆದರೆ, ಮುಂಡಾಸು ಸುತ್ತುವ ಪದ್ಧತಿ ಇಲ್ಲದ ಯೂರೋಪಿಯನ್ನರಿಗೆ ಬೇರೆಯೇ ವಿಧಾನ ಬೇಕಿತ್ತು! ಶಕ 1412 ರಲ್ಲಿ ಸಿಸಿಲಿಯ ಗುಸ್ತಾವೊ ಬ್ರಂಕ ಮತ್ತು ಆತನ ಮಗ ಅಂಟೊನಿಯೋ ಬ್ರಂಕ ಅವರು ತೋಳಿನ ಚರ್ಮವನ್ನು ಬಳಸಿ ಮುರಿದ ಮೂಗನ್ನು ಚಿಕಿತ್ಸೆ ಮಾಡುವ ವಿಧಾನದಲ್ಲಿ ಯಶಸ್ವಿಯಾದರು. ಕೈಗಳ ಆಧಾರಕ್ಕೆ ಬೇಕಾದ ಪಟ್ಟಿಗಳ ವಿನ್ಯಾಸವನ್ನೂ ರೂಪಿಸಿದರು. ಇದನ್ನು ಮುಂದೆ ಪ್ರಷ್ಯಾ ಮತ್ತು ಇಟಲಿಯ ಶಸ್ತ್ರಚಿಕಿತ್ಸಕರು ಬಳಸಿಕೊಂಡರು. 1818 ರಲ್ಲಿ ಜರ್ಮನ್ ವೈದ್ಯ ಕಾರ್ಲ್ ವಾನ್ ಗ್ರಾಫೆ ಈ ಪದ್ಧತಿಯನ್ನು ಮತ್ತಷ್ಟು ಸುಧಾರಿಸುವವರೆಗೂ ಹಿಂದಿನ ವಿಧಾನವೇ ಬಳಕೆಯಲ್ಲಿ ಇತ್ತು. ಗ್ರಾಫೆ ಅವರ ಪದ್ದತಿಯ 90 ವರ್ಷಗಳ ನಂತರ ಕೃತಕ ಮೂಗುಗಳ ಬಳಕೆ ಆರಂಭವಾಯಿತು.


1794 ರಲ್ಲಿ ಇಂಗ್ಲೆಂಡಿನ The Gentleman's Magazine ನಲ್ಲಿನ ಚಿತ್ರ. ಕೊವಸ್ಜೀ ಎಂದು ಗುರುತಿಸಿರುವ ಈ ವ್ಯಕ್ತಿ, ಮೂರನೆಯ ಆಂಗ್ಲೊ-ಮೈಸೂರು ಕದನದಲ್ಲಿ ಬ್ರಿಟಿಷರ ಪರವಾಗಿ ಎತ್ತಿನ ಬಂಡಿ ಓಡಿಸುತ್ತಿದ್ದ ಸ್ಥಳೀಯ. ಯುದ್ಧದಲ್ಲಿ ಸೆರೆ ಸಿಕ್ಕಿದಾಗ ಟಿಪ್ಪು ಸುಲ್ತಾನನ ಸೈನಿಕರು ಆತನ ಮೂಗನ್ನು ತರಿದರು. ಆತನ ಹಣೆಯ ಚರ್ಮವನ್ನು ಬಳಸಿ, ಭಾರತೀಯ ವೈದ್ಯರು ಆತನ ಮೂಗನ್ನು ಮರುಸೃಷ್ಟಿ ಮಾಡಿದರು. ಶಸ್ತ್ರಚಿಕಿತ್ಸೆಯ 10 ತಿಂಗಳ ನಂತರದ ಈ ಚಿತ್ರದಲ್ಲಿ ಹಣೆಯ ಮೇಲಿನ ಗಾಯ ಮಾಗಿದಂತೆ ಕಾಣುತ್ತದೆ. ಇದನ್ನು ಬ್ರಿಟಿಷ್ ಅಧಿಕಾರಿಗಳಾದ ಮಿ. ಆರ್ಬನ್ ಮತ್ತು ಜನರಲ್ ಲ್ಯುಕಸ್ ಎಂಬುವರು ದಾಖಲಿಸಿದ್ದಾರೆ.

The first authentic documentation of rhinoplasty is "Sushruta Samhita", the ancient Hindu medical text of Ayurveda. The nose was historically associated with pride in ancient India. Hence, cutting the nose was a severe form of punishment to curtail the ego of the culprit. This led to therapeutic intervention in the form of rhinoplasty or reconstruction of the nose. The technique of Indian rhinoplasty must have reached Egypt and traveled further to Rome. Tycho Brahe, one of the famous astronomers of the 16th century, had lost his nose in a duel. He had artificial noses made of gold, silver, copper, brass, and even wood! By then, syphilis had reached Europe from the "New World". One of the effects of syphilis was the collapse of the nasal bridge and disfiguration of the nose. This led to a demand for rhinoplasty in Europe. The traditional Indian system of rhinoplasty utilized the pedicle graft turned

down from the forehead. Since Indians covered their forehead with a turban, the scar was covered. However, the turban-less Europeans needed an alternative. In 1412, Gustavo Branca and his son Antonio Branca of Sicily used the skin graft from the forearm to reconstruct the nose. They also designed the support system for the forearm for the best comfort. Surgeons from Prussia and Italy improved this technique further. Their modifications were in vogue until Karl Von Grafe, a German surgeon improvised the rhinoplasty further. By the beginning of the 20^{th} century, artificial noses came to picture.

In 1794, “The Gentleman’s Magazine” of the UK published a report of one Mr. Cowasjee. This native gentleman was a driver of carts for the British during the Third Anglo Mysore war against Tipu. He was captured and had his nose cut down by Tipu’s army. Few local surgeons (who worked as carpenters and blacksmiths) reconstructed his nose using the ancient Indian techniques. The engraving is after 10 months of surgery. The scar on the forehead is visible in the picture. The incidence was reported by Mr. Urban and General Lucas of the British regiment in India.

169. Rhinoplasty in Europe



"Image from page 1434 of "Modern surgery," (Public Domain) by Internet Archive Book Images

---

1919 ರಲ್ಲಿ ಪ್ರಕಟವಾದ ಜಾನ್ ಚಾಲ್ಮರ್ಸ್ ಅವರ Modern Surgery – General and Operative ಎಂಬ ಕೃತಿಯ 1434 ನೆಯ ಪುಟದಲ್ಲಿ ಇರುವ, ಅಜ್ಞಾತ ಕಲಾವಿದನ ಚಿತ್ರ (ಆ ಪುಸ್ತಕದಲ್ಲಿನ ಚಿತ್ರ ಸಂಖ್ಯೆ

928). ಈ ರೀತಿಯ ಮೂಗಿನ ಶಸ್ತ್ರಚಿಕಿತ್ಸೆಯನ್ನು ಆ ಪುಸ್ತಕದಲ್ಲಿ “ಟ್ಯಾಗ್ಲಿಯಕೋಟಿಯನ್ ಇಟಾಲಿಯನ್ ಪದ್ಧತಿ” ಎಂದು ಗುರುತಿಸಲಾಗಿದೆ. ಒಂದು ವಿಶೇಷ ಪಟ್ಟಿಯಿಂದ ಕೈಯನ್ನು ಮೂಗಿನ ಬಳಿ ಬರುವಂತೆ ಬಿಗಿದು, ಕೈನ ಚರ್ಮವನ್ನು ಪೋಷಕ ರಕ್ತನಾಳಗಳ ಸಮೇತ ಆಂಶಿಕವಾಗಿ ಬೇರ್ಪಡಿಸಿ, ಅದನ್ನು ಮೂಗಿನ ಬಳಿ ಕಸಿ ಮಾಡುವ ವಿಧಾನ. ಇದರಿಂದ, ಮೂಗಿನ ಚರ್ಮ ಮತ್ತೆ ಕೂಡುತ್ತಿತ್ತು. ಒಮ್ಮೆ ಮೂಗಿನ ಕಸಿ ಆದ ನಂತರ, ಆ ಚರ್ಮವನ್ನು ಕೈನಿಂದ ಬೇರ್ಪಡಿಸುತ್ತಿದ್ದರು. ನಂತರ, ಕೈನ ಗಾಯ ನಿಧಾನವಾಗಿ ತಾನೇ ಕೂಡಿಕೊಳ್ಳುತ್ತಿತ್ತು. ಈ ಪದ್ಧತಿಯಲ್ಲಿ ಹಣೆಯ ಚರ್ಮಕ್ಕೆ ಯಾವುದೇ ಘಾಸಿಯಿಲ್ಲ. ಕೈನ ಗಾಯ ಬಟ್ಟೆಯಿಂದ ಮುಚ್ಚುತ್ತಿತ್ತು. ಸ್ವಲ್ಪ ಕಷ್ಟವಾದರೂ, ಇದು ಮುಖದ ಸುರೂಪದ ದೃಷ್ಟಿಯಿಂದ ಪರಿಣಾಮಕಾರಿ ವಿಧಾನ.

“Modern Surgery – General and Operative” was a textbook authored by John Chalmers in 1919. This picture by an unknown artist was found on page 1434 (figure no 928) of this textbook. It is recognized as the “Tagliacotian Italian technique” in the textbook. Binders are applied in such a way that the forearm is brought close to the nose. The forearm skin is cut deeply with its vascularity intact, to restructure the nose. Once the nasal skin is reconstructed, the skin pedicle was separated. The wound over the forearm wound would heal with time. This is a cosmetically more acceptable technique.

170. Electrotherapy



Dispensing of medical electricity (electrotherapy). Oil painting by Edmund Bristow, 1824. Credit: Wellcome Collection. Attribution 4.0 International (CC BY 4.0)

ಎಡ್ಮಂಡ್ ಬ್ರಿಸ್ಟೊ ಎಂಬ ಬ್ರಿಟಿಷ್ ಚಿತ್ರಕಾರ 1824 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ವಿದ್ಯುತ್ ಶಕ್ತಿಯ ಬಳಕೆ ಆರಂಭವಾದ ದಿನಗಳಲ್ಲಿ, ಶರೀರದ ಕೆಲವು ಆರೋಗ್ಯ ಸಮಸ್ಯೆಗಳನ್ನು ವಿದ್ಯುತ್ ನೀಡಿ ಪರಿಹರಿಸಬಹುದು ಎಂಬ ಭಾವನೆ ಇತ್ತು. ಈ ರೀತಿಯ ಪ್ರಯೋಗಗಳು ಹಲವೆಡೆ ನಡೆದಿದ್ದವು. ಅಂತಹ ಒಂದು ಪ್ರಯೋಗವನ್ನು ಸೂಚಿಸುವ ಚಿತ್ರ. ಎಲಕ್ಟ್ರೋಥೆರಪಿ ಎನ್ನುವ ಹೆಸರಿನ ಈ ಚಿಕಿತ್ಸೆಯನ್ನು ಇಲ್ಲಿ ಪ್ರಾಯಶಃ ಬಲ ಮಂಡಿಯ ಸಂಧಿವಾತಕ್ಕೆ ನೀಡಲಾಗುತ್ತಿದೆ.

This 1824 oil painting by the British artist Edmund Bristow shows the application of "electrotherapy" or "dispensing medical electricity". When electricity was invented, there was a general feeling that it can be used as a therapeutic alternative for few chronic health problems which had no other treatment. This painting depicts one such occasion. The electrotherapy is being applied to the arthritic right knee of this hapless patient. The terrified patient is probably scaring the next patient in the queue, who is peeping through the door!

171. Louis Pastuer in his Laboratory



"Musee d'Orsay" by Jasperdo is licensed under CC BY-NC-ND 2.0

ಫಿನ್ಲೆಂಡ್ ದೇಶದ ಪ್ರಸಿದ್ಧ ಚಿತ್ರಕಾರ ಆಲ್ಬರ್ಟ್ ಎಡೆಲ್ಫೆಲ್ಟ್ ಅವರು 1885 ರಲ್ಲಿ ರಚಿಸಿರುವ ಲೂಯಿ ಪಾಸ್ತರ್ ಅವರ ತೈಲ ವರ್ಣಚಿತ್ರ. ಪಾಸ್ತರ್ ಅವರ ಖ್ಯಾತಿ ಹೆಚ್ಚುತ್ತಿದ್ದಂತೆ, ಈ ಚಿತ್ರಕ್ಕೆ ಜಗತ್ತಿನ ಆದ್ಯಂತ ಅಪಾರ ಬೇಡಿಕೆ ಬಂದಿತು. ವಿಜ್ಞಾನಿಗಳ ಚಿತ್ರಗಳ ಪೈಕಿ ಬಹಳ ಬಾರಿ ಮುದ್ರಣವಾಗಿರುವ ಚಿತ್ರಗಳಲ್ಲಿ ಇದೂ ಒಂದು. ಪ್ಯಾರಿಸ್ ನ ಒಂದು ಚಿತ್ರ ಸಂಗ್ರಹಾಲಯದಲ್ಲಿ ಇದರ ಮೂಲಪ್ರತಿ ಇದೆ. ಪಾಸ್ತರ್ ಅವರು ತಮ್ಮ ಪ್ರಯೋಗಾಲಯದಲ್ಲಿ ಯಾವುದೋ ಪ್ರಯೋಗದಲ್ಲಿ ಮಗ್ನರಾಗಿರುವ ಚಿತ್ರ.

This very famous oil painting of Louis Pasteur was done by the Finnish artist Albert Edelfelt in 1885. The demand for this painting increased as the fame of Pasteur soared! A huge number of copies of this painting are made. This is one of the highest sought after pictures of any scientist in the world! The original painting is in a museum in Paris. It was done when Pasteur was involved with one of his experiments with a serious facial expression.

172. Patrick Manson experimenting with filaria



Patrick Manson experimenting with filaria sanguinis-hominis in Amoy (Xiamen), China. Oil painting by E. Board, ca. 1912. Wellcome Collection. Attribution 4.0 International (CC BY 4.0)

ಭೂಮಿಯ ಎಲ್ಲಾ ಪ್ರಾಂತ್ಯಗಳ ಪೈಕಿ ಭೂಮಧ್ಯರೇಖೆಯ ಇಕ್ಕೆಲಗಳಲ್ಲಿ ಇರುವ ಉಷ್ಣವಲಯದ ಜೀವವೈವಿಧ್ಯಗಳಂತೆಯೇ ಕಾಯಿಲೆಗಳ ಸಂಖ್ಯೆ ಕೂಡ ಅಪಾರ. ಹೀಗಾಗಿ, ಉಷ್ಣವಲಯದ ಸಾಂಕ್ರಾಮಿಕ ಕಾಯಿಲೆಗಳ ಅಧ್ಯಯನ ಬಹಳ ಮಹತ್ವಪೂರ್ಣ. ಈ ಅಧ್ಯಯನದಲ್ಲಿ ಅತೀ ಮುಖ್ಯ ಹೆಸರು ಬ್ರಿಟಿಷ್ ವೈದ್ಯ ಡಾ. ಪ್ಯಾಟ್ರಿಕ್ ಮ್ಯಾನ್ಸನ್. ಆನೆಕಾಲು ರೋಗದ ಬಗ್ಗೆ ಚೀನಾ ದೇಶದಲ್ಲಿ 19 ನೆಯ ಶತಮಾನದ ಅಂತ್ಯದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಅವರ ಸಹಾಯಕನೊಬ್ಬನಿಗೆ ಅದೇ ರೋಗ ತಗುಲಿತು. ಆಗ ಡಾ. ಮ್ಯಾನ್ಸನ್ ಅವರು ತಮ್ಮ ಸಹಾಯಕನ ಮನವೊಲಿಸಿ ಆತನನ್ನು ಪ್ರಯೋಗಕ್ಕೆ ಬಳಸಿಕೊಂಡರು. "ಆನೆಕಾಲು ರೋಗ ಉಂಟುಮಾಡುವ ಸೂಕ್ಷ್ಮಜೀವಿಯನ್ನು ಹರಡುವ ವಾಹಕಗಳು ಯಾವುವು?" ಎಂಬ ಪ್ರಶ್ನೆಗೆ ಅದುವರೆಗೆ ಉತ್ತರ ದೊರೆತಿರಲಿಲ್ಲ. ಇದಕ್ಕೆ ಕಾರಣ ಕ್ಯುಲೆಕ್ಸ್ ಜಾತಿಯ ಸೊಳ್ಳೆಗಳು ಎಂದು ಈ ಪ್ರಯೋಗದಿಂದ

ಪತ್ತೆಯಾಯಿತು. ಆರ್ನೆಸ್ಟ್ ಬೋರ್ಡ್ ಎಂಬ ಬ್ರಿಟಿಷ್ ಕಲಾವಿದರು 1912 ರಲ್ಲಿ ರಚಿಸಿದ ಈ ತೈಲ ವರ್ಣಚಿತ್ರದಲ್ಲಿ ಡಾ. ಮ್ಯಾನ್ಸನ್ ಅವರ ಈ ಪ್ರಯೋಗವನ್ನು ಚಿತ್ರಿಸಲಾಗಿದೆ.

This 1912 oil painting by the British artist Ernest Board shows the famous British Infectious-disease specialist Dr. Patrick Manson experimenting with *Filaria sanguinis-hominis* in 1876-1877. Dr. Manson persuaded his gardener, who was infected with filariae, to allow himself to be fed on by the mosquito *Culex fatigans*. By dissecting the mosquitos, Dr. Manson discovered in them the embryo worm called *Filaria sanguinis-hominis*, and thus proved for the first time the involvement of an arthropod (the mosquito) in the life-cycle of a parasite.

173. Diphtheria Serum




Die_Gewinnung_des_Diphtherieserums by Fritz Gehrke (1855-1916) / Public domain https://creativecommons.org/publicdomain/mark/1.0/deed.en

---

ಹಲವಾರು ಸಾಂಕ್ರಾಮಿಕ ರೋಗಗಳಿಗೆ ವಿರುದ್ಧವಾಗಿ ಶರೀರದಲ್ಲಿ ಪ್ರತಿಕಾಯಗಳು ಉತ್ಪತ್ತಿ ಆಗುತ್ತವೆ. ಇತರರ ದೇಹದಲ್ಲಿ ತಯಾರಾದ ಇಂತಹ ಪ್ರತಿಕಾಯಗಳನ್ನು ರೋಗಿಗೆ ನೀಡಿದರೆ, ಆಯಾ ರೋಗದ ವಿರುದ್ಧ ಸೆಣಸುವ ಸಾಮರ್ಥ್ಯವನ್ನು ರೋಗಿಗೆ ನೀಡಿದಂತೆ ಆಗುತ್ತದೆ. 19 ನೆಯ ಶತಮಾನದ ಕೊನೆಯ ವೇಳೆಗೆ ಇಂತಹ ಚಿಕಿತ್ಸೆಯನ್ನು ಪತ್ತೆ ಮಾಡಲಾಗಿತ್ತು. ರೋಗಕಾರಕ ಸೂಕ್ಷ್ಮಜೀವಿಗಳನ್ನು ಪ್ರಯೋಗಾಲಯದಲ್ಲಿ ಬೆಳೆಸಿ, ಅವನ್ನು ಕುದುರೆಗಳಿಗೆ ಚುಚ್ಚಿ, ಸ್ವಲ್ಪ ಕಾಲದ ನಂತರ ಆ ಕುದುರೆಗಳ ರಕ್ತಸಾರ (serum) ಪ್ರತ್ಯೇಕಿಸಿದರೆ, ಆ ರಕ್ತಸಾರದಲ್ಲಿ ರೋಗದ ವಿರುದ್ಧ ಹೊಡೆದಾಡಬಲ್ಲ ಪ್ರತಿಕಾಯಗಳು ದೊರೆಯುತ್ತವೆ ಎಂದು ತಿಳಿದುಬಂದಿತು. ಈ ರೀತಿಯ ರಕ್ತಸಾರ ಚಿಕಿತ್ಸೆಯನ್ನು ತೀವ್ರವಾದ ರೋಗಗಳ ಚಿಕಿತ್ಸೆಯಲ್ಲಿ ಬಳಸುತ್ತಿದ್ದರು. 1890 ರಲ್ಲಿ ಜರ್ಮನ್ ಚಿತ್ರಕಾರ ಫ್ರೀಜ್ ಗೆರ್ಖೆ ಅವರು ರಚಿಸಿರುವ ಈ ಚಿತ್ರದಲ್ಲಿ ಕುದುರೆಗಳ ದೇಹದಿಂದ ರಕ್ತವನ್ನು ತೆಗೆದು, ಡಿಫ್ತೀರಿಯಾ ರೋಗದ ವಿರುದ್ಧದ ಚಿಕಿತ್ಸೆಯಲ್ಲಿ ಬಳಸುವ ಪ್ರಕ್ರಿಯೆಯನ್ನು ತೋರಲಾಗಿದೆ.

This 1890 painting by the German artist Fritz Gehrke shows siphoning of blood from horses. It was known that the body produces antibodies against diseases. It was learned that the injection of these antibodies can be therapeutic against the disease. Hence, the disease-causing organisms were grown in laboratories, injected into horses, and allowed to develop antibodies. The blood of such horses would be drawn, serum separated, and used for the treatment of humans. This particular set-up was for collecting antibodies against diphtheria.

174. Sweating Therapy



"Image from page 681 of "A treatise on th" (Public Domain) by Internet Archive Book Images

---

1916 ರಲ್ಲಿ ಅಮೆರಿಕದ ಫಿಲಡೆಲ್ಫಿಯದಲ್ಲಿ ಪ್ರಕಟವಾದ ಡಾ. ಆರ್ಥರ್ ರಾಬಿನ್ ಎಡ್ವರ್ಡ್ಸ್ ಎಂಬುವರು ಬರೆದ ವೈದ್ಯಕೀಯ ಪಠ್ಯ ಪುಸ್ತಕದಲ್ಲಿನ ಚಿತ್ರ. ಮೂತ್ರಪಿಂಡಗಳ ಸಮಸ್ಯೆ ಇದ್ದು, ಮೂತ್ರ ವಿಸರ್ಜನೆ ಕಡಿಮೆ ಆಗಿದ್ದಾಗ, "ಶರೀರದ ಮಾಲಿನ್ಯಗಳು ಬೇರೆ ದಾರಿಯಲ್ಲಿ ಹೊರಗೆ ಹೋಗಬೇಕು; ಅದರಿಂದ ಮೂತ್ರಪಿಂಡಗಳಿಗೆ ಬಿಡುವು ದೊರೆತು, ಅವು ಚೇತರಿಸಿಕೊಳ್ಳುತ್ತವೆ" ಎನ್ನುವ ಕಾರಣಕ್ಕೆ ರೋಗಿ ಹೆಚ್ಚು ಬೆವರುವಂತೆ ಮಾಡುವ ವಿಧಾನ. ಹೀಗೆ ಮಾಡಿದಾಗ ಶರೀರದ ಮಾಲಿನ್ಯಗಳು ಬೆವರಿನ ಮೂಲಕ ಹೊರಹೋಗುತ್ತವೆ ಎಂಬ ನಂಬಿಕೆ. ಇಲ್ಲಿ ಮಂಚದ ವಿನ್ಯಾಸ ಗಮನಾರ್ಹ. ರೋಗಿಯ ದೇಹಕ್ಕೆ ಅಧಿಕ ಉಷ್ಣತೆಯನ್ನು ತಲುಪಿಸುವ ವ್ಯವಸ್ಥೆ ಕಾಣುತ್ತದೆ. ತಲೆಯ ಭಾಗ ಮಾತ್ರ ಈ ವ್ಯವಸ್ಥೆಯಿಂದ ಹೊರಗಿದೆ. ತಲೆಯ ಅಡಿಯಲ್ಲಿ ಮಂಜುಗಡ್ಡೆಯ ಚೀಲ ಇಟ್ಟು, ಮೆದುಳು ತಂಪಾಗಿ ಇರುವಂತೆ ನೋಡಲಾಗುತ್ತಿತ್ತು. 20-30 ನಿಮಿಷಗಳ ಕಾಲದ ಇಂತಹ ಪ್ರತೀ ಚಿಕಿತ್ಸೆಯಲ್ಲೂ ಸುಮಾರು ಒಂದು ಲೀಟರ್ ನಷ್ಟು ಬೆವರನ್ನು ತೆಗೆದುಹಾಕುತ್ತಿದ್ದರು.

This image is from a 1916 medical textbook titled "A Treatise on the principles and practice of medicine" by Dr. Arthur Robin Edwards, who shows a sweat bath. As skin performs excretory function through sweating, few doctors considered using it to compensate for kidney dysfunction. In cases of damage to kidneys due to any cause, it cannot produce adequate urine. This leads to the accumulation of contaminants inside the body. In such cases, the idea was to increase sweat production, enabling the excretion of contaminants through the skin. This was believed to compensate for the kidney damage and allow kidneys to recover. The bed was specially designed to enable sweating. The head was kept outside the assembly and was supported with a bag of ice to ensure that the brain would be cool. A session of 20-30 minutes would remove about one liter of sweat. After realizing a few dangers of this arrangement, few other methods were designed for the same purpose.

175. Early Hospitals in Europe



"File:'The Abbaye of Saint Antoine, the Sologne, France. Pilgrims Wellcome V0018146.jpg" is licensed under CC BY 4.0

ಬ್ರಿಟಿಷ್ ಚಿತ್ರಕಾರ ಅರ್ನೆಸ್ಟ್ ಬೋರ್ಡ್ ಅವರು 1905 ರ ಸುಮಾರಿಗೆ ರಚಿಸಿರುವ ತೈಲ ವರ್ಣಚಿತ್ರ. "ಸಂತ

ಅಂಟೋನಿಯ ಬೆಂಕಿ" ಎಂದು ಹೆಸರಾಗಿದ್ದ ಎರ್ಗಾಟ್-ಯುಕ್ತ ಧಾನ್ಯಗಳ ಸೇವನೆ, ಯುರೋಪಿನ ಹಲವಾರು ಪ್ರದೇಶಗಳನ್ನು ಮಧ್ಯಕಾಲೀನ ಯುಗದಲ್ಲಿ ಕಂಗೆಡಿಸಿತ್ತು. ಈ ಕಾಯಿಲೆಯಿಂದ ನರಳುತ್ತಿದ್ದ ರೋಗಿಗಳು ಫ್ರಾನ್ಸ್ ನ ಸೋಲೋನ್ ಪ್ರಾಂತ್ಯದಲ್ಲಿದ್ದ ಸಂತ ಆಂಟೋನಿ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದರು. ಈ ಆಸ್ಪತ್ರೆ ಮೂಲತಃ ಸಂತ ಅಂಟೋನಿಯ ಮೃತಶರೀರವನ್ನು ಸಮಾಧಿ ಮಾಡಿದ್ದ ಸ್ಥಳ. ಆ ಸಂತನ ಪ್ರಭಾವದಿಂದ ಈ ರೋಗ ಗುಣವಾಗುತ್ತದೆ ಎಂದು ನಂಬಲಾಗಿತ್ತು. ರೋಗಿಗಳ ಪರಿಸ್ಥಿತಿ, ಅಂದಿನ ಕಾಲದ ಸಾಮಾಜಿಕ ಚಿತ್ರಣಗಳನ್ನು ಬಹಳ ನೈಜವಾಗಿ ಊಹೆ ಮಾಡಲಾಗಿದೆ.

This 1905 oil painting by the British artist Ernest Board depicts the patients suffering from Ergot toxicity taking a pilgrimage to The Abbaye of St Antoine at Sologne, France. The famous infirmary had the relics and bones of the saint, which were trusted to cure the dreaded condition of ergotism which affected the poor of medieval Europe. The plight of the visitors and the overall living conditions of medieval Europe are realistically depicted in the painting.

176. Early Hospitals in Europe - Santa Maria Della Scala



"File:Pellegrinaio di santa maria della scala 05, domenico di bartolo, governo e cura degli invermi.JPG" by Combusken is licensed under CC BY-SA 3.0

15 ನೆಯ ಶತಮಾನದ ಇಟಲಿಯ ಸಿಯೆನ ಪ್ರಾಂತ್ಯದ ಪ್ರಖ್ಯಾತ ಕಲಾವಿದ ಡೊಮೆನಿಕೊ ದೆ ಬಾರ್ತಲೋ 1440 ರಲ್ಲಿ ರಚಿಸಿದ ಗೋಡೆಯ ಮೇಲಿನ ಬಣ್ಣ ಹಚ್ಚಿದ ಉಬ್ಬುಚಿತ್ರ. ರೋಮ್ ನ ಸಂತ ಮರಿಯ ಚರ್ಚ್ ಆಸ್ಪತ್ರೆಯಲ್ಲಿ ಇರುವ ಇಂತಹ ಆರು ಕೃತಿಗಳ ಪೈಕಿ ಇದು ಮೊದಲನೆಯದು. ಇದು ಯುರೋಪಿನ ಮೊಟ್ಟ ಮೊದಲ ಆಸ್ಪತ್ರೆಗಳಲ್ಲಿ ಒಂದು. ಬಹಳ ಪ್ರಸಿದ್ಧ ಮತ್ತು ಪ್ರಭಾವಶಾಲಿ ಜನ ಈ ಆಸ್ಪತ್ರೆಯ ಪೋಷಕರಾಗಿದ್ದರು. ಈ ಉಬ್ಬುಚಿತ್ರದಲ್ಲಿ ಆಸ್ಪತ್ರೆಯ ಒಳಾಂಗಣವನ್ನು ಸಮರ್ಥವಾಗಿ ತೋರಲಾಗಿದೆ. ವೈದ್ಯರು ಮತ್ತು ದಾದಿಯರು ಬಹಳ ಕರುಣೆಯಿಂದ ರೋಗಿಗಳ ಸೇವೆ ಮಾಡುತ್ತಿದ್ದಾರೆ. ಅಂದಿನ ಕಾಲದ ದಿರುಸುಗಳು ಬಹಳ ಚೆನ್ನಾಗಿ ನಿರೂಪಿತವಾಗಿವೆ. ಒಂದು ನಾಯಿ-ಬೆಕ್ಕಿನ ಚಿತ್ರಣವೂ ಇದೆ! ಚಿತ್ರಕಾರನ ಸೂಚನೆ ಮತ್ತೇನೋ ಇದೆ ಎಂದು ಊಹಿಸಲಾಗಿದೆ!

This famous fresco at the Santa Maria Della Scala in Siena, Italy. It was created by the renowned Italian painter Domenico Di Bartolo in 1440. It is the first among the six frescos of this place. This place is considered as one of the first hospitals in Europe, backed by powerful and influential citizens of those times. The fresco is an effective representation of the interiors of the hospital. Doctors and nurses are shown in a very kind light. Costumes of the era are realistic. A cat and dog in this fresco might be pointing to something else the painter wishes to convey!

177. Early Hospitals in Europe - Theatre



A "theatre" of medicine and surgery. Watercolour by Johann Heinrich Ramberg, ca. 1800. Wellcome Collection. Attribution-NonCommercial 4.0 International (CC BY-NC 4.0)

ಜೊಹಾನ್ ಹೀನ್ರಿಕ್ ರಾಂಬರ್ಗ್ ಎಂಬ ಜರ್ಮನ್ ಕಲಾವಿದ 1800 ರಲ್ಲಿ ರಚಿಸಿದ ಜಲವರ್ಣಚಿತ್ರ. ಅಂದಿನ ಕಾಲದಲ್ಲಿ ಪ್ರಸ್ತುತವಿದ್ದ ಶಸ್ತ್ರಚಿಕಿತ್ಸೆಯ ಕ್ರೂರ ವಿಧಾನಗಳ ಚಿತ್ರಣ. ಇಬ್ಬರು ವ್ಯಕ್ತಿಗಳಿಗೆ ಕಾಲು ಕಡಿಯುತ್ತಿದ್ದಾರೆ. ಅಂದಿನ ಕಾಲದಲ್ಲಿ ಇನ್ನೂ ಅರಿವಳಿಕೆ ಆರಂಭವಾಗಿರಲಿಲ್ಲ. ಹೀಗಾಗಿ, ಇದು ಅಪಾರ ವೇದನೆಯ ಕೆಲಸವಾಗಿತ್ತು. ಅಲ್ಲದೇ, ಅಂದಿನ ಶಸ್ತ್ರಚಿಕಿತ್ಸೆಯ ಪದ್ದತಿಗಳು ತೀರಾ ಒರಟು. ಈ ಚಿತ್ರದಲ್ಲಿ ಪಾದ್ರಿಗಳು ಕೂಡ ಕಾಣುತ್ತಾರೆ. ಓರ್ವ ವೃದ್ಧ ಸ್ತ್ರೀ ಮಾಟಗಾತಿಯ ವೇಷದಲ್ಲಿದ್ದಾರೆ. ಓರ್ವ ಹೆಂಗಸಿಗೆ ಸಮ್ಮೋಹನ ನಡೆಯುತ್ತಿದೆ. ಕ್ರೌರ್ಯ ನೋಡಲಾರದೆ ಒಬ್ಬ ವ್ಯಕ್ತಿ ಓಡಿಹೋಗುತ್ತಿದ್ದಾರೆ; ಮತ್ತೋರ್ವ ಸ್ತ್ರೀ ಪ್ರಜ್ಞೆ ತಪ್ಪಿ ಬೀಳುತ್ತಿದ್ದಾರೆ. ಅಂದಿನ ಕಾಲದಲ್ಲಿ ವಿಶಾಲವಾದ ಪ್ರಾಂಗಣಗಳಲ್ಲಿ ಇಂತಹ ಕೆಲಸಗಳು ನಡೆಯುತ್ತಿದ್ದವು. ದೊಡ್ಡ ಆಸ್ಪತ್ರೆಗಳ ಆರಂಭದ ದಿನಗಳು ಯಾವ ರೀತಿ ಇದ್ದವು ಎಂಬುದರ ಕಲ್ಪನೆ ಈ ಚಿತ್ರದಿಂದ ದೊರೆಯುತ್ತದೆ.

This 1800 watercolor painting by the German artist Johann Heinrich Ramberg shows an extraordinary cruel scenario of a hospital. Surgery without anesthesia was mere butchery but performed amidst great agony in those times. The artist ridicules the presence of a priest trying to pacify a man going through the amputation of the leg. Another lady is being hypnotized. While a man is running away in disgust, another lady is fainting. All this is happening in a large hall with no concern for hygiene or cleanliness. This shows how the concept of hospitals started in medieval Europe.

178. First Eye Hospital in China




"File:Portrait of Thomas Richardson Colledge Wellcome L0017163.jpg" by George Chinnery is licensed under CC BY 4.0

ತಮ್ಮ ಜೀವನದ ಬಹುಭಾಗವನ್ನು ಭಾರತ ಮತ್ತು ಚೀನಾಗಳಲ್ಲಿ ಕಳೆದಿದ್ದ 18-19 ನೆಯ ಶತಮಾನದ ಪ್ರಸಿದ್ಧ ಬ್ರಿಟಿಷ್ ಚಿತ್ರಕಾರ ಜಾರ್ಜ್ ಚಿನ್ನರಿ ಅವರು 1834 ರಲ್ಲಿ ರಚಿಸಿದ ತೈಲ ವರ್ಣಚಿತ್ರ. 19 ನೆಯ ಶತಮಾನದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಚೀನಾದ ಮಕೌ ಪ್ರಾಂತ್ಯದಲ್ಲಿ ಕೆಲಸ ಮಾಡುತ್ತಿದ್ದ ಡಾ. ಥಾಮಸ್ ರಿಚರ್ಡ್ಸನ್ ಕಾಲೆಜ್ ಎಂಬ ನೇತ್ರತಜ್ಞರ ಚಿತ್ರ. ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿದ್ದ ಓರ್ವ ರೋಗಿಯನ್ನು ಡಾ. ಕಾಲೆಜ್ ಪರೀಕ್ಷೆ ಮಾಡುತ್ತಿದ್ದಾರೆ. ವೈದ್ಯರ ಸಹಾಯಕ ಅಫುನ್ ಎಂಬಾತ ವೈದ್ಯರ ಮಾತುಗಳನ್ನು

ರೋಗಿಗೆ ಚೀನಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳುತ್ತಿದ್ದಾರೆ. ರೋಗಿಯ ಮಗ ಮಂಡಿಯೂರಿ ವೈದ್ಯರಿಗೆ ಧನ್ಯವಾದ ತಿಳಿಸುವ ಪತ್ರ ನೀಡುತ್ತಿದ್ದಾರೆ. ಬದಿಯಲ್ಲಿ ಮತ್ತೊಬ್ಬ ರೋಗಿ ಪರೀಕ್ಷೆಗೆ ಸಿದ್ಧವಿದ್ದಾರೆ. 1827 ರಲ್ಲಿ ಮಕೌ ಪ್ರಾಂತ್ಯದಲ್ಲಿ ಕಣ್ಣಿನ ಆಸ್ಪತ್ರೆಯನ್ನು ಪ್ರಾರಂಭಿಸಿದ್ದು ಡಾ. ಕಾಲೆಜ್.

British painter George Chinnery had lived a major part of his life in India and China. In his 1834 oil painting, Chinnery depicts the famous eye surgeon, Dr. Thomas Richardson Colledge, with his patients at Macau province in China. Dr. Colledge opened the first “eye hospital” in Asia in that region. In this painting, while Dr. Colledge is examining a post-operative patient, his assistant and translator Mr. Afun is helping him convey instruction to locals. The son of the patient is handing over a letter of appreciation to the Doctor. Another patient is ready for examination.

179. Picture Charts of Florence Nightingale



ಕ್ರಿಮಿಯನ್ ಯುದ್ಧದ ವೇಳೆ ಏಪ್ರಿಲ್ 1854 ರಿಂದ ಮಾರ್ಚ್ 1856 ರವರೆಗೆ ಬ್ರಿಟಿಷ್ ಸೈನ್ಯದ ಪೂರ್ವ ದಿಕ್ಕಿನ ತುಕಡಿಯ ತಿಂಗಳುವಾರು ಸಾವಿನ ಕಾರಣಗಳನ್ನು ಚಿತ್ರಿಸಿರುವ ಫ್ಲಾರೆನ್ಸ್ ನೈಟಿಂಗೇಲ್ ಅವರ ಚಿತ್ರ-ಗಣಿತ. ಗುಲಾಬಿ ಬಣ್ಣವು ಗಾಯಗಳಿಂದ ಮೃತಪಟ್ಟವರನ್ನೂ, ಬೂದುನೀಲಿ ಬಣ್ಣವು ಸಾಂಕ್ರಾಮಿಕ ಕಾಯಿಲೆಗಳಿಂದ ಮರಣಹೊಂದಿದವರನ್ನೂ, ಕಂದು ಬಣ್ಣವು ಇತರೆ ಕಾರಣಗಳಿಂದ ಸತ್ತವರನ್ನೂ ಸೂಚಿಸುತ್ತವೆ. ಈ ಮಾಪನಗಳಿಂದ, ಆಸ್ಪತ್ರೆಗಳಲ್ಲಿ ಇರಬೇಕಾದ ಸೌಲಭ್ಯಗಳ ಬಗ್ಗೆ, ಸ್ವಚ್ಛತೆಯ ಬಗ್ಗೆ ಫ್ಲಾರೆನ್ಸ್ ನೈಟಿಂಗೇಲ್ ಅವರು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟರು. ಇದನ್ನು ಉಲ್ಲೇಖಿಸಿ ಬರೆದ ಲೇಖನವನ್ನು 1858 ರಲ್ಲಿ ವಿಕ್ಟೋರಿಯಾ ರಾಣಿಯವರ ಅವಗಾಹನೆಗೆ ಕಳಿಸಲಾಯಿತು. ಬ್ರಿಟಿಷ್ ಆಸ್ಪತ್ರೆಗಳ ಉನ್ನತಿಗೆ ಈ ವಿವರಗಳು ಬಹಳ ಸಹಾಯಕವಾದವು.

During the Crimean war, Florence Nightingale drafted these pictorial math-

ematical representations depicting the cause of deaths in the Eastern regiment of British soldiers from April 1854 to March 1856. For the cause of death, injuries are represented in rose color; contagious diseases in light blue; miscellaneous causes in brown color. Using such descriptive data representation, Florence Nightingale could communicate the need for appropriate facilities in the hospitals to healthcare officials. The data with the article written on this was sent for the perusal of Queen Victoria in 1858. Her contribution to this issue helped in the elevation of facilities in the British hospitals.

180. Wounded officers being carried on stretchers



Wounded officers being carried on stretchers, Simla, Himachal Pradesh, India. Coloured lithograph. Wellcome Collection. Attribution 4.0 International (CC BY 4.0)

---

19 ನೆಯ ಶತಮಾನದಲ್ಲಿ ಅಜ್ಞಾತ ಕಲಾವಿದರೊಬ್ಬರು ರಚಿಸಿದ ಈ ವರ್ಣಚಿತ್ರದಲ್ಲಿ ಭಾರತದ ಹಿಮಾಚಲದ ಶಿಮ್ಲಾ ಪ್ರಾಂತ್ಯದಲ್ಲಿ ಗಾಯಗೊಂಡ ಅಧಿಕಾರಿಗಳನ್ನು ಮೇನೆಗಳಲ್ಲಿ ಸಾಗಿಸುತ್ತಿರುವ ದೃಶ್ಯವನ್ನು ವಿವರಿಸಿದೆ. ಜೊತೆಗೆ, ಊರುಗೋಲುಗಳ ನೆರವಿನಿಂದ ನಡೆಯುತ್ತಿರುವ ಇನ್ನಿಬ್ಬರನ್ನು ತೋರಿದೆ. ಪ್ರಾಯಶಃ, ರಸ್ತೆ ನಿರ್ಮಾಣದ ಸಮಯದಲ್ಲಿ ಆದ ಅವಗಢ ಎಂದು ಶಂಕೆ. ಇಬ್ಬರು ಅಶ್ವಾರೋಹಿಗಳು ಜೊತೆಯಲ್ಲಿ ಇರುವುದರಿಂದ, ಈ ಅಧಿಕಾರಿ ಸಾಕಷ್ಟು ಪ್ರಬಲರು ಎನ್ನಬಹುದು. ಈ ಪ್ರಕ್ರಿಯೆಯಲ್ಲಿ ರೋಗಿಯ ಅನುಕೂಲವನ್ನು ಪರಿಗಣಿಸುವ ವಿನ್ಯಾಸವನ್ನು ಗಮನಿಸಬಹುದು.

This 19th century colored lithograph by an unknown artist shows the transporting of an injured officer of the British Raj on a stretcher in the Simla region of India. One person is walking with the help of crutches. Two horsemen accompanying the wounded man indicate a higher level of the hierarchy. The comfort of the injured has been taken care of in this situation. The accident might have occurred during the construction of the road in this region.

181. St Thomas Hospital in London



"File:St Thomas' Hospital, London. Oil painting. Wellcome V0017211.jpg" is licensed under CC BY 4.0

ಆಸ್ಪತ್ರೆಗಳ ಆರಂಭವನ್ನು ಶಕಪೂರ್ವಕ್ಕೆ ಒಯ್ಯಬಹುದು. ಆದರೆ, ಆರೋಗ್ಯ ನಿರ್ವಹಣೆ ಎನ್ನುವುದು ವೈಜ್ಞಾನಿಕವಾಗಿ ಆರಂಭವಾದ ನಂತರ ಆಸ್ಪತ್ರೆಗಳ ಸ್ವರೂಪ ಬದಲಾಯಿತು. ಬ್ರಿಟನ್ ನ ಅತ್ಯಂತ ಹಳೆಯ ಆಸ್ಪತ್ರೆಗಳಲ್ಲಿ ಒಂದಾದ ಸಂತ ಥಾಮಸ್ ಅವರ ಆಸ್ಪತ್ರೆಯ ಬಗ್ಗೆ 13 ನೆಯ ಶತಮಾನದಲ್ಲೇ ಉಲ್ಲೇಖವಿದೆ. 18 ನೆಯ ಶತಮಾನದಲ್ಲಿ ಅಜ್ಞಾತ ಕಲಾವಿದನೊಬ್ಬನ ತೈಲವರ್ಣಚಿತ್ರ ಲಂಡನ್ ನಗರದ ಸೌತ್-ವಾರ್ಕ್ ನಲ್ಲಿದ್ದ ಆಸ್ಪತ್ರೆಯ ಕಟ್ಟಡವನ್ನು ತೋರಿದೆ. ಬಡವರ, ನಿರ್ಗತಿಕರ, ಮತ್ತು ರೋಗಿಗಳ ಆಶ್ರಯತಾಣವಾಗಿ

ಆರಂಭವಾದ ಈ ಸಂಸ್ಥೆ ನಿಧಾನವಾಗಿ ಸಂಪೂರ್ಣ ಆಸ್ಪತ್ರೆಯಾಗಿ ಬದಲಾಯಿತು. ರೈಲು ನಿಲ್ದಾಣ ನಿರ್ಮಾಣಕ್ಕೆ ಜಾಗ ಒದಗಿಸಲು ಈ ಆಸ್ಪತ್ರೆಯನ್ನು 1862 ರಲ್ಲಿ ಸ್ಥಳಾಂತರಿಸಲಾಯಿತು.

This oil painting of St Thomas Hospital in London's Southwark by an unknown artist was probably created during the 18th Century. One of the oldest hospitals in London, St Thomas hospital was well known in the 13th Century. From being a provided shelter and treatment for the poor, sick, and homeless, this magnificent hospital served the needy patients for centuries. The hospital left Southwark in 1862 for the construction of a railway station.

182. Baths at Cauquenes, Chile



Two travellers and a patient on a stretcher travel towards the baths at Cauquenes, Chile. Coloured lithograph by G. Scharf. Credit: Wellcome Collection. Attribution 4.0 International (CC BY 4.0)

ದಕ್ಷಿಣ ಅಮೆರಿಕದ ಪಶ್ಚಿಮ ಗಡಿಯ ಉದ್ದಕ್ಕೂ ಇರುವ ಚಿಲಿ ದೇಶದ ಕಾಕ್ವೆನ್ಸ್ ಎಂಬ ಪ್ರಾಂತ್ಯದ ಬಿಸಿನೀರಿನ ಊಟೆಗಳ ಸ್ನಾನ ಆರೋಗ್ಯವರ್ಧಕ ಎಂದು ಪ್ರಸಿದ್ಧವಾಗಿತ್ತು. ಹೀಗಾಗಿ, ಅಲ್ಲಿ ಸ್ನಾನ ಮಾಡಲು ಹಲವಾರು ಮಂದಿ ಬರುತ್ತಿದ್ದರು. 19 ನೆಯ ಶತಮಾನದ ಪ್ರಸಿದ್ಧ ಬ್ರಿಟಿಷ್ ಚಿತ್ರಕಾರ ಸರ್ ಜಾರ್ಜ್ ಶಾರ್ಫ್ ಅವರು 1850 ರ ಸುಮಾರಿಗೆ ಜನರಲ್ ಪರೋಯ್ಸಿಯೆನ್ ಎಂಬುವರ ಸಹಯೋಗದಲ್ಲಿ ಈ ಜಲ ವರ್ಣಚಿತ್ರವನ್ನು ರಚಿಸಿದರು. ಕುದುರೆಗಳ ಮೇಲೆ ಪ್ರವಾಸಿಗರು ಬರುತ್ತಿದ್ದಾರೆ. ಅವರ ಜೊತೆ ಹೊರೆ ಹೊತ್ತಿರುವ ಕತ್ತೆ ಒಂದಿದೆ. ಓರ್ವ ರೋಗಿಯನ್ನು ಸ್ನಾನದ ಆವಾಸಕ್ಕೆ ಸ್ಟ್ರೆಚರ್ ನಲ್ಲಿ ಒಯ್ಯುತ್ತಿದ್ದಾರೆ. ಕೆಲವು ಸ್ಥಳೀಯರೂ ಇದ್ದಾರೆ. ಸುತ್ತಲಿನ ಪ್ರಕೃತಿ ಬಹಳ ರಮ್ಯವಾಗಿದೆ.

This 1850 colored lithograph is titled “Baths of Cauquenes”, which shows the province in Chile, South America. This province was known for its natural geysers with healing qualities. Bathing in these geysers was very popular and drew people from far and wide. This picture by Sir George Scharf and General Paroissien shows travelers on horseback with mules carrying the burden. One patient is being carried on the stretcher for bathing. Few natives are also seen. The depiction of the surrounding nature is pleasing.

183. Pediatric Wards in Hospitals



Surgery_in_hospital by Anna Sahlsten / Public domain https://creativecommons.org/publicdomain/mark/1.0/deed.en

---

ಫಿನ್ಲೆಂಡ್ ನ ಅನ್ನಾ ಸಾಲ್ಸ್ಟೆನ್ ಎಂಬ ಚಿತ್ರಗಾರ್ತಿ 1893 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಅಂದಿನ ಕಾಲದ ಮಕ್ಕಳ ಆಸ್ಪತ್ರೆಯ ಚಿತ್ರಣ. ಶಿಶುವೈದ್ಯ ಎನ್ನುವ ಪ್ರತ್ಯೇಕ ವಿಭಾಗ ಬೆಳೆಯುತ್ತಿದ್ದ ಕಾಲ ಅದು. ಹೀಗಾಗಿ, ಮಕ್ಕಳಿಗೆ ಪ್ರತ್ಯೇಕವಾದ ವಾರ್ಡ್ ನಿರ್ಮಾಣ ಯೂರೋಪಿನಲ್ಲಿ ಆಗುತ್ತಿತ್ತು. ದೊಡ್ಡ ಕಿಟಕಿಗಳು, ಸಾಕಷ್ಟು ಗಾಳಿ-ಬೆಳಕು, ವಿಶೇಷ ವಿನ್ಯಾಸದ ಮಂಚಗಳು, ಮಗುವಿನ ಬದಿಯಲ್ಲಿ ತಾಯಿ ಕೂರಲು ಉಪಕರಣ, ಮಕ್ಕಳಿಗೆ ಪ್ರತ್ಯೇಕ ಅಡಿಗೆ – ಹೀಗೆ ಬದಲಾವಣೆಗಳು ಆದವು. “ಮಕ್ಕಳು ಎಂದರೆ ಗಾತ್ರದಲ್ಲಿ ಚಿಕ್ಕದಾಗಿರುವ ವಯಸ್ಕರಲ್ಲ; ಅವರ ಆವಶ್ಯಕತೆಗಳೇ ಬೇರೆ” ಎಂಬ ಭಾವ ಮೂಡುತ್ತಿದ್ದ ಕಾಲಘಟ್ಟದ ಚಿತ್ರಣ ಇದು.

This 1893 oil painting by the Finnish artist Anna Sahlsten shows one of the

first pediatric wards in hospitals. Child health was developing as a separate specialty during those times. Hence, separate wards were created for children with attention to large windows, plenty of air and sunlight, specially designed beds with railings, a place for the mother to sit adjacent to the bed, separate diet for pediatric needs – were few changes brought about. "Children are not miniature adults; they have different needs" was the principle on which the developments were made.

184. The Sick Child in a Hospital



"J Bond Francisco - The Sick Child [1893]" by Gandalf's Gallery is licensed under CC BY-NC-SA 2.0

“ಅಸ್ವಸ್ಥ ಮಗು” ಎಂಬ ಶೀರ್ಷಿಕೆಯ ಈ ಪ್ರಸಿದ್ಧ ಚಿತ್ರ ಒಂದು ಕಾಲದಲ್ಲಿ ಹಲವಾರು ಆಸ್ಪತ್ರೆಗಳ ಗೋಡೆಗಳ ಮೇಲೆ ಕಾಣುತ್ತಿತ್ತು. 1893 ರಲ್ಲಿ ಅಮೆರಿಕದ ಕಲಾವಿದ ಜಾನ್ ಫ್ರಾನ್ಸಿಸ್ಕೊ ರಚಿಸಿದ ಈ ವರ್ಣಚಿತ್ರದಲ್ಲಿ ಕಾಯಿಲೆಯಿಂದ ಬಳಲುತ್ತಿರುವ ಮಗುವನ್ನು ತೋರಿದೆ. ಮಗುವಿನ ಕಣ್ಣುಗಳು ಮುಚ್ಚಿದ್ದರೂ ನಿದ್ರಿಸಿದಂತಿಲ್ಲ. ಕೈಲಿ ಹಿಡಿದಿರುವ ಗೊಂಬೆಯ ಮೇಲಿನ ಹಿಡಿತ ಜಾರುತ್ತಿದೆ. ಅದು ಮಗುವಿನ ಜೀವನದ ಮೇಲಿನ ಹಿಡಿತದ ಸಂಕೇತ ಎಂದು ಹೇಳಲಾಗಿದೆ. ಬಣ್ಣಗಳ ಬಳಕೆಯಲ್ಲಿ ಚಿತ್ರಗಾರನ ಪರಿಣತಿ ಎದ್ದು ಕಾಣುತ್ತದೆ.

This 1893 painting by the American painter John Bond Francisco is titled “The Sick Child”. This painting had found a huge following, was widely reproduced and hung on the walls of doctors' offices and hospitals. The artist has used color combinations for a striking effect. The green walls and

pale sheets emphasize the boy's flushed skin. He does not appear to rest comfortably despite the closed eyes. His grip on the silk clown dangling upside down by one leg is feeble. Few have interpreted this as symbolic of his grip on life.

185. Physiotherapy Unit at the Bath War Hospital



"File:Physical therapy at Bath War Hospital. Watercolour by E. Wellcome V0017313.jpg" is licensed under CC BY 4.0

ಸಾರಾ ಎಲಿಜಬೆತ್ ಹೊರ್ಟನ್ ಎಂಬ ಬ್ರಿಟಿಷ್ ಕಲಾವಿದೆ 1918 ರಲ್ಲಿ ರಚಿಸಿದ ಜಲ ವರ್ಣಚಿತ್ರ. ಮೂಳೆ ಮತ್ತು ಕೀಲುಗಳ ಚಿಕಿತ್ಸೆಗೆ ಯುದ್ಧಕಾಲದ ಬಾತ್ ಆಸ್ಪತ್ರೆಯಲ್ಲಿ ನಿರ್ಮಿಸಲಾದ ಹೊಸ ಕಟ್ಟಡದಲ್ಲಿನ ಚಿತ್ರಣ. ಸೆಡ್ರಿಕ್ ಶಿವರ್ಸ್ ಎಂಬ ಸಿರಿವಂತ ಉದ್ಯಮಿ ಮ್ಯಾಕ್ಆಲಿಸ್ಟರ್ ಎಂಬುವರ ಸಲಹೆಯ ಮೇರೆಗೆ ಈ ರೀತಿಯ ಉಪಕರಣಗಳನ್ನು ಆಸ್ಪತ್ರೆಗೆ ನೀಡಿದರು ಎಂದು ಹೇಳಿದೆ. ಇಂದು ನಾವು "ಫಿಸಿಯೊಥೆರಪಿ" ಎಂದು ಕರೆಯುವ ವಿಧಾನದ ಆರಂಭಿಕ ಚಿತ್ರಣ. ಮೂಳೆ, ಮಾಂಸಖಂಡ, ಕೀಲುಗಳ ಸಮಸ್ಯೆ ಇದ್ದಾಗ ಕೀಲುಗಳ ಚಲನೆ ಕಡಿಮೆಯಾಗಿ, ಬಿಗುವು ಆವರಿಸುತ್ತದೆ. ಅದನ್ನು ವ್ಯವಸ್ಥಿತವಾಗಿ ಸರಿಪಡಿಸಲು ಈ ವಿಧಾನ.

This 1918 watercolor painting by the British artist Sarah Elizabeth Horton

shows the physiotherapy unit at the Bath War Hospital. On the advice of Mr. McAlister, these instruments were donated to the hospital by a rich industrialist named Cedric Shivers. This led to the science of Physiotherapy. Muscles stiffen during some diseases of bone and joints, or the immobility due to injuries or chronic diseases. Physiotherapy uses systematic graded exercises to undo this stiffening. The prototype of many such instruments that are used today is seen in this painting.

186. Operation at the Military Hospital



media-141613 By Francis Dodd / Public domain. An Operation at the Military Hospital, Endell Street - Dr L Garrett, Dr Flora Murray, Dr W Buckley. IWMART4084 *https://www.iwm.org.uk/corporate/policies/non-commercial-licence*

ಫ್ರಾನ್ಸಿಸ್ ಎಡ್ಗರ್ ಡೋಡ್ ಎಂಬ ಬ್ರಿಟಿಷ್ ಕಲಾವಿದ 1920 ರಲ್ಲಿ ರಚಿಸಿದ ತೈಲ ವರ್ಣಚಿತ್ರ. ಮೊದಲನೆಯ ಮಹಾಯುದ್ಧದ ವೇಳೆ ಲಂಡನ್ ನ ಎಂಡೆಲ್ ರಸ್ತೆಯಲ್ಲಿದ್ದ ಮಿಲಿಟರಿ ಆಸ್ಪತ್ರೆಯ ವೈದ್ಯರಾದ ಡಾ. ಲೂಸಿಯಾ ಗ್ಯಾರೆಟ್, ಡಾ. ಫ್ಲೋರ ಮರ್ರೆ ಮತ್ತು ಡಾ. ಬಕ್ಲಿ ಅವರು ಶಸ್ತ್ರಚಿಕಿತ್ಸೆ ಮಾಡುತ್ತಿರುವ ದೃಶ್ಯ ಅರಿವಳಿಕೆ ತಜ್ಞರು ರೋಗಿಯನ್ನು ಪರೀಕ್ಷಿಸುತ್ತಿದ್ದಾರೆ. ರೋಗಿಯ ಕಾಲಿನ ಬದಿಯಲ್ಲಿ ನಿಂತ ಓರ್ವ ಸಹಾಯಕನನ್ನು ಬಿಟ್ಟರೆ, ಉಳಿದೆಲ್ಲರೂ ಮಹಿಳೆಯರು. 1920 ರ ಸುಮಾರಿಗೆ ಶಸ್ತ್ರಚಿಕಿತ್ಸೆಯ ರಂಗದಲ್ಲೂ ಮಹಿಳೆಯರ ಕಾಣಿಕೆ ಬಹಳವಿತ್ತು.

This 1920 oil painting by the British artist Francis Edgar Dodd shows the scenario of operation at the military hospital at Endell Street in London. Apart from an assistant at the foot end of the patient, the entire team comprises women. Dr. Loisia Garrett is operating and being assisted by Dr. Flora Murray and Dr. Buckley. Anesthesia is also handled by an unnamed lady doctor. By the first world war, women had become an integral part of the medical practice in Europe, including surgery.

187. Beginning of Plastic Surgery



media-284762 by Zinkeisen, Anna Katrina / Public domain. Art.IWM ART LD 6001 https://www.iwm.org.uk/corporate/policies/non-commercial-licence

---

20 ನೆಯ ಶತಮಾನದ ಸ್ಕಾಟ್ಲ್ಯಾಂಡ್ ನ ಚಿತ್ರಗಾರ್ತಿ ಅನ್ನಾ ಕತ್ರೀನಾ ಜೀನ್ಕೆಸಿನ್ ಅವರು 1944 ರಲ್ಲಿ ರಚಿಸಿದ್ದ ವರ್ಣಚಿತ್ರ. ಪ್ರಸಿದ್ಧ ಬ್ರಿಟಿಷ್ ಸುರೂಪಿ ಶಸ್ತ್ರಚಿಕಿತ್ಸಕ ಆರ್ಕಿಬಾಲ್ಡ್ ಮ್ಯಾಕಿಂಡೋ ಅವರು ಸಸ್ಸೆಕ್ಸ್ ನ ಆಸ್ಪತ್ರೆಯೊಂದರಲ್ಲಿ ರೋಗಿಯ ಎಡಗೈಗೆ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾರೆ. ಅರಿವಳಿಕೆ ವ್ಯವಸ್ಥೆ ಮತ್ತು ಅರಿವಳಿಕೆ ತಜ್ಞರು ಈ ವೇಳೆಗೆ ಚೆನ್ನಾಗಿ ಚಾಲ್ತಿಗೆ ಬಂದಿದ್ದಾರೆ. ಎರಡನೆಯ ಮಹಾಯುದ್ಧದ ವೇಳೆ ಸೈನಿಕರ ಆರೋಗ್ಯಕ್ಕೆ ಸರಕಾರ ನೀಡಿದ ಸವಲತ್ತುಗಳ ಕಾರಣದಿಂದ ಹಲವಾರು ತಾಂತ್ರಿಕ ಪ್ರಗತಿಗಳು ನಡೆದವು. ಸುರೂಪಿ ಶಸ್ತ್ರಚಿಕಿತ್ಸೆ ಕೂಡ ಅದರಲ್ಲಿ ಒಂದು.

This 1944 painting by the Scottish artist Anna Katrina Zinkeisen shows the

operating theatre of the famous British plastic surgeon Archibald McIndoe, operating on the left hand of a patient in a hospital in Sussex. The equipped anesthesia set-up with a dedicated anesthetist is seen in the painting. As the Government extended huge support to the treatment of wounded soldiers during the Second World War, medical technology and techniques saw a quantum leap. One of these was the development of Plastic surgery.

188. The Sick Child



"IMG_0858A Gabriel Metsu .1629 1667. Leyde et Amsterdam" by jean louis mazieres is licensed under CC BY-NC-SA 2.0

ಗೆಬ್ರಿಯಲ್ ಮೆಟ್ಸು ಎಂಬ ಡಚ್ ಕಲಾವಿದ 1660 ರಲ್ಲಿ ರಚಿಸಿದ "ಅಸ್ವಸ್ಥ ಮಗು" ಎಂಬ ತೈಲ ವರ್ಣ

ಕಲಾಕೃತಿ. ತಾಯಿಯ ಮಡಿಲಲ್ಲಿ ಸುಸ್ತಾಗಿ ಕುಳಿತಿರುವ ಮಗು ಪೇಲವವಾಗಿದೆ. ತೊಡೆಯ ಮಾಂಸಖಂಡಗಳ ಗುಳಿ, “ಮಗು ಕೆಲವು ಕಾಲದಿಂದ ಅನಾರೋಗ್ಯಪೀಡಿತವಾಗಿದೆ” ಎಂದು ತಿಳಿಸುತ್ತದೆ. ತಾಯಿಯ ತಲೆಯ ಮೇಲಿನ ಕಪ್ಪು ಟೋಪಿ, ಆಕೆ ಸಂಸಾರಸ್ಥ ಹೆಂಗಸು ಎಂದು ತಿಳಿಸುವಂತಿದೆ. ಪ್ರಾಯಶಃ ಕುಟುಂಬದ ಜವಾಬ್ದಾರಿಗಳ ಕಾರಣದಿಂದ ಮಗುವಿಗೆ ಒಂದೇ ಸಮನೆ ಗಮನ ನೀಡಲು ಆಕೆಗೆ ಸಾಧ್ಯವಾಗಿಲ್ಲ. ಮೇಜಿನ ಮೇಲೆ ಮಣ್ಣಿನ ಮಡಕೆಯಲ್ಲಿ ಪ್ರಾಯಶಃ ಗಂಜಿ ಇದೆ. ಮಗುವಿನ ಎಡಭಾಗದಲ್ಲಿ ಚಂದದ ಕುಲಾವಿ ಇದೆ. ಅಸ್ವಸ್ಥ ಮಗುವಿಗೆ ಖುಷಿಯಾಗಲಿ ಎಂದು ಯಾರೋ ಅದನ್ನು ನೀಡಿರಬೇಕು ಎಂದು ಊಹಿಸಲಾಗಿದೆ.

This 1660 oil painting by the Dutch artist Gabriel Metsu is titled “The Sick Child”. A pale child is sick and lying on the lap of the mother. The baby is emaciated, indicating sickness of some duration. The black cap on the mother shows that she is married. Possibly due to her responsibilities towards the family, she is unable to attend to the illness of the child. The earthen pot on the table may have some porridge. A rich cap next to the baby might have been gifted to please the sick child.

189. Cheating the Medical fee!




A broker feigning deafness to avoid paying the doctor who cured him. Coloured etching, 1786. Wellcome Collection. Attribution 4.0 International (CC BY 4.0)

ವೈದ್ಯರಿಗೆ ಫೀಸು ನೀಡದೆ ಟೋಪಿ ಹಾಕುವ ರೋಗಿಗಳು ಬಹಳ ಹಿಂದಿನ ಕಾಲದಲ್ಲೂ ಇದ್ದರು! ಸಂಸ್ಕೃತ

ಸಾಹಿತ್ಯದಲ್ಲೂ ಇಂತಹವರ ಪ್ರಸ್ತಾಪ ಹೇರಳವಾಗಿ ಬರುತ್ತದೆ! 1786 ರಲ್ಲಿ ಅಜ್ಞಾತ ಕಲಾವಿದರೊಬ್ಬರಿಂದ ರಚಿತವಾಗಿರುವ ಈ ವ್ಯಂಗ್ಯಚಿತ್ರವನ್ನು ಲಂಡನ್ ನ ರೋಜರ್ ಸಾಯರ್ ಎಂಬುವರು ಮುದ್ರಿಸಿದ್ದಾರೆ. ಕಿವುಡು ಗುಣಪಡಿಸುವ ವೈದ್ಯರಿಗೆ "ತನ್ನ ಕಿವುಡು ಗುಣವಾಗಿಲ್ಲ" ಎಂದು ಸುಳ್ಳು ಹೇಳಿ, ಅವರಿಗೆ ನೀಡಬೇಕಾದ ಹಣವನ್ನು ನೀಡದೆ ಮೋಸ ಮಾಡಲು ಹವಣಿಸುವ ಓರ್ವ ದಳ್ಳಾಳಿಯ ಪ್ರಸಂಗವನ್ನು ಚಿತ್ರಿಸಲಾಗಿದೆ!

Cheating the doctors by not paying their fee was a common practice in Europe! This happened to the doctors who promised a remedy and asked their patients to pay only if the treatment was effective. Few patients took advantage of such a policy and would feign that their health problems did not resolve! This cartoon by an unknown artist was published by Rojer Sayer of London in 1786. This cartoon ridicules a doctor who promised a cure for deafness, but could not collect his fee from a stockbroker who feigned persistence of deafness!

190. Self-administering Hydrotherapy



A man self-administering hydrotherapy, sitting outside in a barrel. Coloured lithograph. Wellcome Collection. Attribution 4.0 International (CC BY 4.0)

ವೈದ್ಯಕೀಯದಲ್ಲಿ ಸ್ವಸಹಾಯ ಪದ್ಧತಿ ಅತ್ಯಂತ ಅಪಾಯಕಾರಿ! ಆದರೆ, ವೈದ್ಯರ ಫೀಸು ಉಳಿಸಲು, ಅಥವಾ ರಣವೈದ್ಯದ ಹೆದರಿಕೆಯಿಂದ, ಇಲ್ಲವೇ ಅಪನಂಬಿಕೆಯಿಂದ ಕೆಲವರು ಏನೇನೋ ಓದಿ, ಸ್ವಯಂವೈದ್ಯ ಮಾಡಿಕೊಳ್ಳುವುದು ಉಂಟು. ಅಂತಹ ಒಂದು ಪ್ರಸಂಗದ ಲೇವಡಿ ತೋರಲಾಗಿದೆ. ಹೊಗ್ಸನ್ ಎಂಬ ಮುದ್ರಕರು ಪ್ರಕಟಿಸಿರುವ 1880 ರ ಸುಮಾರಿನ ಅಜ್ಞಾತ ಕಲಾವಿದನ ಈ ಚಿತ್ರದಲ್ಲಿ ಜ್ವರದ ಚಿಕಿತ್ಸೆಯಾಗಿ ನೀರಿನ ಹಂಡೆಯಲ್ಲಿ ಕೂತು, ತಲೆಯ ಮೇಲೆ ಕೊಳವೆಯಿಂದ ತಣ್ಣೀರು ಹರಿಸಿಕೊಳ್ಳುವ ವಿಧಾನವನ್ನು ವಿಡಂಬನೆ ಮಾಡಿದೆ. “ಗುಣವಾಗುವವರೆಗೆ ಇದನ್ನು ಮಾಡಬೇಕು” ಎನ್ನುವ ಷರಾ ಬೇರೆ! ಆ ವ್ಯಕ್ತಿಯ ಬದಿಯಲ್ಲಿ ಕಟ್ಟಿರುವ ಜೇಡನಬಲೆ, ಆತನ ಚಿಕಿತ್ಸೆಯ ಕಾಲಾವಧಿಯನ್ನು, ಮತ್ತು ಅದರ ನಿರರ್ಥಕತೆಯನ್ನು ಸೂಚಿಸುತ್ತಿದೆ.

Self-treatment is a dangerous method, especially if one does not understand the basics of treatment! However, few people follow it to save medical fees or for the fear of extreme treatments or due to mistrust of physicians. This poster ridicules the concept of self-treatment, which was promoted by a few people in early 19th century Europe. Published by Hodgson in 1880, this picture by an unknown artist shows a person sitting in a tub of water with a spout from the top pouring water on his head. The clause on the pamphlet says “…till you feel better” and the presence of cobweb mocks this statement and shows how ineffective such methods are.

191. Problems with Corset



A woman suffering the pain of cholic ; illustrated by demons tugging on a rope wound around her stomach. Coloured etching after G. Cruikshank after Captain F. Marryat. Wellcome Collection. Attribution 4.0 International (CC BY 4.0)

ಫ್ರೆಡ್ರಿಕ್ ಮ್ಯಾರಿಯಟ್ ಮತ್ತು ಜಾರ್ಜ್ ಕ್ರೂಕ್ಯಂಕ್ ಅವರು 1830 ರ ಸುಮಾರಿಗೆ ರಚಿಸಿದ ವರ್ಣಚಿತ್ರ. ಇದರಲ್ಲಿ ಓರ್ವ ವೃದ್ಧ ಮಹಿಳೆಯ ಹೊಟ್ಟೆನೋವಿಗೆ ಕಾರಣ ಕೆಲವು ದೆವ್ವಗಳು ಎಂಬುದನ್ನು ಸೂಚಿಸಲಾಗಿದೆ! ಹಗ್ಗದಿಂದ ಬಿಗಿದು ಜಗ್ಗಿದಂತೆ ಆಕೆಗೆ ಭಾಸವಾಗುತ್ತಿದೆ. ಜೊತೆಗೆ, ತಿವಿತದ ಬಾಧೆ ಬೇರೆ. ಆಕೆ ಹಾಕಿಕೊಂಡಿರುವ ದಿರುಸು, ಇರುವ ಮನೆ, ಆಕೆ ಶ್ರೀಮಂತ ಹೆಣ್ಣು ಎಂದು ಸೂಚಿಸುತ್ತಿದೆ. ನಡುವನ್ನು ಸಣ್ಣದಾಗಿ ತೋರಲು ದೀರ್ಘ ಕಾಲದಿಂದ ಬಳಸುತ್ತಿದ್ದ ದಿರುಸುಗಳು ಬಹಳ ಯಾತನೆ ತರುತ್ತಿದ್ದವು. ಆಕೆಯ ಮೇಜಿನ ಮೇಲೆ ಮದ್ಯವೂ ಇದೆ. ನೋವನ್ನು ಮರೆಯಲು ಆಕೆ ಅದನ್ನು ಬಳಸಿರಬಹುದು. ಅಥವಾ, ಆಕೆಯ ಹೊಟ್ಟೆ ನೋವಿಗೆ ಮದ್ಯವೂ ಒಂದು ಕಾರಣ ಆಗಿರಬಹುದು.

This 1830 colored etching by the British artists Fredrick Marryat and George

Cruikshank shows an old lady suffering pain abdomen as if she is troubled by few devils! Her costumes and the interiors of her house indicate her rich lineage. In pursuit of having a narrow waist, she is immensely troubled by her corset. The painting on the wall is of an obese lady. Liquor on the table might be to relieve her pain or might be the reason!

192. Skeletal Changes by Corset




FIG. 17

Deformed by corsets, showing condition of bones in women who habitually wear tight corsets

"Effects of Corset Wearing" by perpetualplum is licensed under CC BY 2.0

ಮಧ್ಯಕಾಲೀನ ಯೂರೋಪಿನಲ್ಲಿ ಸ್ತ್ರೀಯರ ಆಕಾರದ ಬಗ್ಗೆ ಕೆಲವು ಪೂರ್ವನಿರ್ಧಾರಿತ

ಅಭಿಪ್ರಾಯಗಳಿದ್ದವು. ಸುಂದರ ಯುವತಿ ಎಂದರೆ ಆಕೆಗೆ ಸಣ್ಣ ನಡು ಇರಲೇಬೇಕು ಎನ್ನುವ ಅಭಿಪ್ರಾಯ ಇದರಲ್ಲೊಂದು! ಇದನ್ನು ಸಾಧಿಸುವುದಕ್ಕೆ ಬಹಳಷ್ಟು ಮಂದಿ ತರುಣಿಯರು ಕೋರ್ಸೆಟ್ ಎನ್ನುವ ಬಿಗಿಯಾದ ಕವಚವನ್ನು ತೊಡುತ್ತಿದ್ದರು. ಇದರಿಂದ ಸೊಂಟದ ಭಾಗ ಸಣ್ಣಗೆ ಕಾಣುತ್ತಿತ್ತು. ಆದರೆ ಇದರ ದುಷ್ಪರಿಣಾಮಗಳು ವಿಪರೀತವಾಗಿದ್ದವು. ಮೂಳೆಗಳ ರಚನೆಯಲ್ಲಿ ವೈಪರೀತ್ಯ, ಹೊಟ್ಟೆ / ಕರುಳಿನ ಮೇಲೆ ದುಷ್ಪರಿಣಾಮ ಇತ್ಯಾದಿಗಳು ಆಗುತ್ತಿದ್ದವು. ಇದರ ದೀರ್ಘಕಾಲೀನ ಪರಿಣಾಮಗಳ ಅರಿವಿಲ್ಲದೆ ಬಹಳ ಮಂದಿ ಸ್ತ್ರೀಯರು ತಮ್ಮ ಇಳಿವಯಸ್ಸಿನಲ್ಲಿ ಅನೇಕ ಬಾಧೆಗಳನ್ನು ಅನುಭವಿಸುತ್ತಿದ್ದರು. 1913 ರಲ್ಲಿ ಪ್ರಕಟವಾದ ಒಂದು ವೈದ್ಯಕೀಯ ಪುಸ್ತಕದಲ್ಲಿ ಫ್ರೆಡ್ರಿಕ್ ರೋಸಿಟರ್ ಎಂಬ ಲೇಖಕರು ಈ ಚಿತ್ರವನ್ನು ಪ್ರಕಟಿಸಿದ್ದಾರೆ. ಮೂಲ ಚಿತ್ರಕಾರರ ಹೆಸರು ತಿಳಿಯದು.

One of the prejudices in medieval Europe was about the hourglass shape associated with beautiful women. To fit such a notion, many women wore a corset – which was a tight armor-like structure around their waist. This helped them to look in the socially accepted shape. However, the use of corsets came with many adverse effects. Their skeletal structure changed with the chronic use of corsets, which led to many health-related issues of the gastrointestinal system in the later age. The image by an unknown artist is found in a book titled "The practical guide to health" by Frederick Magee Rossiter, published in the year 1913.

193. Affection of mind



La-demencia-de-Isabel-de-Portugal by Pelegrí Clavé / Public domain. https://creativecommons.org/publicdomain/mark/1.0/deed.en


---

19 ನೆಯ ಶತಮಾನದ ಸ್ಪಾನಿಷ್ ಚಿತ್ರಕಾರ ಪೆಲೆಗ್ರಿ ಕ್ಲಾವೆ ಅವರ 1850 ರ ಸುಮಾರಿಗೆ ರಚಿತವಾದ ತೈಲ ವರ್ಣಚಿತ್ರ. ಇದರಲ್ಲಿ ಕಾಣುವವರು ಪೋರ್ಚುಗಲ್ ನ ರಾಣಿ ಇಸಬೆಲ್ಲಾ. ಹಲವಾರು ರಾಜಕೀಯ ಒತ್ತಡಗಳನ್ನು ಸಹಿಸಿ ಬದುಕಿದ ರಾಣಿಗೆ, ತನ್ನ ಪತಿಯ ಮರಣದ ನಂತರ ಮಾನಸಿಕ ಒತ್ತಡಗಳನ್ನು ತಡೆಯಲಾಗಲಿಲ್ಲ. ಹಲವಾರು ಬಾರಿ ಉನ್ಮಾದದ ಲಕ್ಷಣಗಳನ್ನು ತೋರುತ್ತಿದ್ದ ರಾಣಿ, ಕಡೆಕಡೆಗೆ ಮತಿವಿಕಲ್ಪಕ್ಕೆ ಒಳಗಾದರು. ಉನ್ಮಾದದ ಒಂದು ಘಟನೆಯ ನಂತರ ಅರೆ-ಎಚ್ಚರದ ಅವಸ್ಥೆಯಲ್ಲಿ ಕುಳಿತ ರಾಣಿಯನ್ನು ಈ

ಚಿತ್ರದಲ್ಲಿ ತೋರಲಾಗಿದೆ. ರಾಣಿಯ ಬಲಭಾಗದಲ್ಲಿ ಕಾಣುವುದು ಆಕೆಯ ಮಗ ರಾಜಕುಮಾರ ಅಲ್ಫಾನ್ಸೋ ರಾಣಿಯ ಎಡಭಾಗದಲ್ಲಿ ಇರುವುದು ಆಕೆಯ ಹಿರಿಯ ಮಗಳು. ಈಕೆ ಮುಂದೆ ತಾಯಿಯ ಹೆಸರನ್ನೇ ಪರಿಗ್ರಹಿಸಿ ರಾಣಿಯಾದರು. ರಾಣಿಯ ಸುತ್ತ ಮುತ್ತ ಇರುವ ಆಕೆಯ ಪರಿವಾರದ ಜೊತೆಯಲ್ಲಿ ಆಕೆಯನ್ನು ರಾಜ್ಯದಿಂದ ಹೊರಹಾಕಲಾಯಿತು. ಮಾನಸಿಕ ಒತ್ತಡದ ರೋಗಿಯನ್ನು ಮೊದಲುಗೊಂಡು, ಎಲ್ಲರ ಮುಖಭಾವಗಳನ್ನೂ ಬಹಳ ಚೆನ್ನಾಗಿ ತೋರಲಾಗಿದೆ.

This 1850 oil painting by the Spanish artist Pelegri Clave depicts Isabel, the queen of Portugal at the center. The queen had managed many torments during her reign. However, after the demise of her husband, she could not control the psychological balance. She would often suffer bouts of mania which eventually led to depression. The painting depicts the status of the queen after one such event of mania. Next to her is her son Prince Alfonso de Castilla and her elder daughter, who took the name of her mother and became the future Queen. On the pretext of the mental status of the queen, she was banished with her retinue from the country. The facial expressions of everyone in the picture are very realistic.

194. Insecurity and Love



resource.nlm.nih.gov/101393087 Jealousy by George Cruikshank November 1, 1825 The National Library of Medicine ID A021460 https://creativecommons.org/publicdomain/mark/1.0/

“ಕೀಳರಿಮೆ ಮತ್ತು ಪ್ರೇಮ” ಎಂದು ಆಗಾಗ ಬಿಂಬಿತವಾಗುವ 1825 ರಲ್ಲಿ ರಚಿತವಾದ ಈ ಚಿತ್ರದಲ್ಲಿ ಬ್ರಿಟಿಷ್ ಚಿತ್ರಕಾರ ಜಾರ್ಜ್ ಕ್ರೂಕ್ಶ್ಯಂಕ್ ಅವರು ಹಲವಾರು ಸಾಧ್ಯತೆಗಳನ್ನು ತೋರಿದ್ದಾರೆ. ತನ್ನ ಮೇಲೆ ತನಗೇ ನಂಬಿಕೆ ಇಲ್ಲದ ಈ ಯುವಕ ಓರ್ವ ಚಂದದ ಹುಡುಗಿಯ ಪ್ರೇಮದಲ್ಲಿ ಬಿದ್ದಿದ್ದಾನೆ. ಅಚ್ಚರಿ ಎನ್ನುವಂತೆ, ಆಕೆ ಒಪ್ಪಿಗೆ ಸೂಚಿಸಿದ್ದಾಳೆ. ಆದರೆ, ಆಕೆಯನ್ನು ಉಳಿಸಿಕೊಳ್ಳಬಲ್ಲೆನೇ ಎಂಬ ಶಂಕೆ ಆ ಯುವಕನಿಗೆ. ಮನಸ್ಸಿನ ದೆವ್ವಗಳು ಆತನಿಗೆ ಹಲವಾರು ಕೆಟ್ಟ ಸಾಧ್ಯತೆಗಳನ್ನು ಕಾಣಿಸುತ್ತಿವೆ. ಆಕೆ ಬೇರೊಬ್ಬನೊಡನೆ ಓಡಿ ಹೋಗಬಹುದು; ಪಾದ್ರಿಗಳು ನಿರಾಕರಿಸಬಹುದು; ಕಾನೂನು ಕ್ರಮ ಆಗಬಹುದು; ದ್ವಂದ್ವ ಯುದ್ಧದಲ್ಲಿ ಆಕೆಯ ಮನೆಯವರು ತನ್ನನ್ನು ಮುಗಿಸಬಹುದು; ಆಕೆಗೆ ಈಗಾಗಲೇ ಬೇರೆ ಪ್ರಿಯಕರ ಇದ್ದಿರಬಹುದು; ಕಡೆಗೆ ತಾನು ನೇಣು ಹಾಕಿಕೊಂಡು ಸಾಯುವಂತೆ ಆಗಬಹುದು – ಇಂತಹ ಆಲೋಚನೆಗಳು ಆತನನ್ನು ಕಂಗಾಲು ಮಾಡಿವೆ. ಕೀಳರಿಮೆ ಮತ್ತು ಖಿನ್ನತೆಯ ಹಲವಾರು ಚಿತ್ರಣಗಳನ್ನು ಚಿತ್ರಕಾರ ಇಲ್ಲಿ ತೋರಿದ್ದಾರೆ. ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ಶುರುವಾಗಿದ್ದ ಆರಂಭಿಕ ದಿನಗಳ ಒಂದು ಚಿತ್ರಣ.

This 1825 carton by the British artist George Cruikshank is often titled "Insecurity and Love". This insecure man has proposed to a fair young lady, who has surprisingly said "yes" to him! Now he is ridden with thoughts of losing her. He is not sure if he can retain her love for him. His mind has become a devil's workshop! His mind is ridden thinking with multiple possibilities, like - her eloping with someone; a priest declining his marriage with her; legalities obstructing him from her; one of her family members challenging this man to a duel and killing him; her possible affair with someone else; suicide and so on. He is ridden by all his thought and suffering as a consequence. Many features of depression are shown in this cartoon. Those were the times with little attention to psychiatric illness. This cartoon is a timely reminder of the need for mental health services.

195. The ill Painter



"File:Ill painter by A.Korin (1892, Tretyakov gallery) FRAME.JPG" by Aleksey Korin is licensed under CC BY-SA 3.0

19-20 ನೆಯ ಶತಮಾನದ ರಷ್ಯಾದ ಪ್ರಸಿದ್ಧ ಚಿತ್ರಕಾರ ಅಲೆಕ್ಸಿ ಮಿಖಾಯಿಲೊವಿಚ್ ಕೊರಿನ್ ಅವರ ಸ್ವಂತ ಭಾವಚಿತ್ರ. 1892 ರಲ್ಲಿ ರಚಿತವಾದ ಈ ತೈಲ ವರ್ಣಚಿತ್ರದಲ್ಲಿ, ಬಣ್ಣಗಳಲ್ಲಿ ಬಳಸುತ್ತಿದ್ದ ಸೀಸದ ಪರಿಣಾಮವನ್ನು ಕಲಾವಿದರ ಮೇಲೆ ಗುರುತಿಸಲಾಗಿದೆ. ರಕ್ತಹೀನತೆ, ಮಾನಸಿಕ ತುಮುಲ, ಹೊಟ್ಟೆ ಶೂಲೆ, ಅನಾಸಕ್ತಿ, ಸುಸ್ತು ಮೊದಲಾದ ಲಕ್ಷಣಗಳು ಶರೀರದ ಮೇಲೆ ಸೀಸದ ವಿಷಕಾರಿ ಪ್ರಭಾವವನ್ನು ತೋರುತ್ತವೆ.

Self-portrait of the Russian painter Aleksey Mikhailovich Korin dated 1882, titled "The sick artist". Few experts have identified the effect of lead used in paints on the artists. Anemia, mood disorders, abdominal cramps, prostration, inattentiveness – indicate the effects of lead on humans. The paint-

ing has been analyzed in detail. The painting is on display in the Tretyakov Gallery.

196. Migraine - Triggers



nlm.nih.gov/101434180 la migraine The National Library of Medicine Image ID A028304 https://creativecommons.org/publicdomain/mark/1.0/

---

19 ನೆಯ ಶತಮಾನದ ಶತಾಯುಷಿ ಫ್ರೆಂಚ್ ಚಿತ್ರಗಾರ ಪಿಯರೆ ಲ್ಯಾಂಗ್ಲ್ಯೂಮ್ ಅವರು 1830 ರ ಸುಮಾರಿಗೆ ರಚಿಸಿರುವ ಮೈಗ್ರೆನ್ ತಲೆನೋವಿನ ಕುರಿತಾದ ವರ್ಣಚಿತ್ರ. ಬಿಳಿಯ ದಿರುಸು ತೊಟ್ಟ ಯುವತಿಗೆ ತಲೆನೋವು ಕಾಡುತ್ತಿದೆ. ಆಕೆಯ ಮುಖಭಾವ ಮೈಗ್ರೆನ್ ರೋಗಿಯ ಲಕ್ಷಣಗಳನ್ನು ಬಿಂಬಿಸುತ್ತಿದೆ. ವೃದ್ಧ ಸಹಾಯಕನೊಬ್ಬ ಕೋಣೆಯನ್ನು ಬೆಚ್ಚಗೆ ಇರಿಸುವ ಬೆಂಕಿಯ ಬೆಳಕಿಗೆ ಅಡ್ಡ ಹಾಕಿ, ಹೆಚ್ಚಿನ ಬೆಳಕು ಆಕೆಯ ಮೇಲೆ ಬೀಳದಂತೆ ಪ್ರಯತ್ನಿಸುತ್ತಿದ್ದಾರೆ. ಸೇವಕಿಯೊಬ್ಬರು ಮಗುವಿಗೆ ತಮಟೆ ಬಾರಿಸದಂತೆ ತಡೆಯುತ್ತಿದ್ದಾರೆ. ಮತ್ತೊಬ್ಬರು ಹಾಸಿಗೆಯನ್ನು ಜೋಪಾನವಾಗಿ ಸ್ವಚ್ಛ ಮಾಡುತ್ತಿದ್ದಾರೆ. ಯುವಕನೊಬ್ಬ ತನ್ನ ಬೂಟುಗಳನ್ನು ತೆಗೆದು, ಸದ್ದಾಗದಂತೆ ತುದಿಗಾಲಿನ ಮೇಲೆ ಹೆಜ್ಜೆ ಇಡುತ್ತಿದ್ದಾರೆ. ಯಾವ್ಯಾವ ಕಾರಣಗಳಿಂದ ಮೈಗ್ರೆನ್ ತಲೆನೋವು ಹೆಚ್ಚಾಗಬಹುದು ಎಂದು ಈ ಚಿತ್ರ ಚೆನ್ನಾಗಿ ಸೂಚಿಸುತ್ತಿದೆ.

This 1830 painting by the centurion French artist Pierre Langlume depicts a patient suffering from migraine headaches. The young lady in a white gown wearing a red headdress is holding her right hand over her head, appears to be in pain. An old assistant is blocking the light from the hearth. Another lady is preventing a child from beating his drum. A servant is seen cleaning the bed and preparing it for the young woman to rest. One young man is seen cautiously walking on tiptoes across the room, holding his shoes in hand to avoid the tapping sound with a worried look towards the suffering lady. Factors that can increase the migraine headache are shown by suggestion in this artwork.

197. Devils of Migraine



Devils besiege a man's head; symbolising headache. Lithograph by C. Ramelet after H. Daumier, c. 1833.. Wellcome Collection. Attribution 4.0 International (CC BY 4.0)

ಹೊನೊರೆ ಡೌಮಿಯರ್ ಮತ್ತು ಚಾರ್ಲ್ಸ್ ರಮೆಲೆಟ್ ಎಂಬ ಫ್ರೆಂಚ್ ಚಿತ್ರಕಾರರು 1833 ರ ಸುಮಾರಿಗೆ ರಚಿಸಿದ್ದ ಈ ಚಿತ್ರವನ್ನು ಗೆಬ್ರಿಯಲ್ ಔಬರ್ಟ್ ಎಂಬ ಪ್ರಕಾಶಕರು ಪ್ಯಾರಿಸ್ ನಲ್ಲಿ ಮುದ್ರಿಸಿದ್ದಾರೆ. ಮೈಗ್ರೇನ್ ರೋಗಿಯ ಪರಿಸ್ಥಿತಿಯನ್ನು ತೋರುವ ಈ ಚಿತ್ರದಲ್ಲಿ ಎಂಟು ಸಣ್ಣ ದೆವ್ವಗಳು ರೋಗಿಯನ್ನು ಕಾಡುತ್ತಿರುವಂತೆ ತೋರಲಾಗಿದೆ. ಮೈಗ್ರೇನ್ ಲಕ್ಷಣಗಳಾದ ತಲೆಗೆ ಸುತ್ತಿಗೆಯಲ್ಲಿ ಕುಟ್ಟುವಂತಹ ನೋವು, ಮುಳ್ಳಿನಿಂದ ಚುಚ್ಚುವ ಅನುಭವ, ಗಂಟೆ ಬಾರಿಸಿದಂತಹ ಸದ್ದು, ತಲೆಯೊಳಗೆ ಎಳೆದಂತಹ ನೋವು – ಇವುಗಳನ್ನು ಬಿಂಬಿಸಿದೆ. ರೋಗಿಯ ಮುಖ ಲಕ್ಷಣಗಳು ಕಾಯಿಲೆಗೆ ಹೊಂದುತ್ತವೆ. ಮೇಜಿನ ಮೇಲೆ ಇಟ್ಟಿರುವ ಮದ್ದುಗಳು ಪ್ರಾಯಶಃ ರೋಗಿಗೆ ಯಾವುದೇ ಪರಿಹಾರ ತಂದಿಲ್ಲ.

This 1833 lithograph by Charles Ramelet and Daumier Honore was published by Gabriel Aubert in Paris. Titled “Headache”, this lithograph depicts eight small devils bothering a patient with each of them depicting a classical symptom of migraine. The facial features indicate intense pain. Medicines on the table might not have given any remedy.

198. Lady of Charity



"IMG_3135C Jean Baptiste Greuze. 1723-1805. Paris. La Dame de charité. The Lady of Charity. 1775. Lyon. Musée des Beaux Arts." by jean louis mazieres is licensed under CC BY-NC-SA 2.0

ರೋಗದಿಂದ ಬಳಲುತ್ತಿರುವ ಬಡವರಿಗೆ ದೇಣಿಗೆ ನೀಡುವ ಶ್ರೀಮಂತರು ಎಲ್ಲಾ ಕಾಲಗಳಲ್ಲೂ ಇದ್ದರು. ಕೆಲವು ಮನೆತನಗಳು ಇದನ್ನು ಬಹಳ ನಿಷ್ಠೆಯಿಂದ ಪಾಲಿಸುತ್ತವೆ. 18 ನೆಯ ಶತಮಾನದ ಪ್ರಸಿದ್ಧ ಫ್ರೆಂಚ್ ಚಿತ್ರಕಾರ ಜೀನ್ ಬ್ಯಾಪ್ಟಿಸ್ಟೆ ಗ್ರೂಜ್ ಅವರು 1774 ರ ಸುಮಾರಿಗೆ ರಚಿಸಿರುವ ತೈಲ ವರ್ಣಚಿತ್ರ. ಬಡ ರೋಗಿಯೊಬ್ಬರಿಗೆ ಶ್ರೀಮಂತ ಮನೆತನದ ಮಹಿಳೆಯೊಬ್ಬರು ತಮ್ಮ ಮಗುವಿನ ಮೂಲಕ ಹಣಸಹಾಯ ಮಾಡುತ್ತಿದ್ದಾರೆ. ರೋಗಿಯ ಸಮೀಪ ಹೋಗಲು ಮಗು ಹೆದರುತ್ತಿದೆ. ರೋಗಿಯ ಪತ್ನಿಯ ಮುಖದಲ್ಲಿನ ದೈನ್ಯತೆ ಎದ್ದು ಕಾಣುತ್ತಿದೆ.

This oil painting by the French artist Jean-Baptiste Greuze in 1774 is titled

“The Lady of Charity”. Poor people were omnipresent in medieval Europe. It was a common practice for rich families to donate some money to the poor at the time of need. One such occasion is depicted in this painting. The poverty of the family is shown very effectively. The rich donor is asking the child to hand over a small bag of coins to the poor patient. The child has probably never seen such a person and is afraid to approach the man despite encouragement from the mother. Facial expressions of the characters in the picture speak stories.

199. The True Companion



"File:Guglielmo Stella (1828-1888), Gemälde, Der treue Gefährte 1878, D2035.jpg" by Detlef Dauer is licensed under CC BY-SA 4.0

“ನೈಜ ಸಂಗಾತಿ” ಎಂಬ ಹೆಸರಿನ ಈ ಪ್ರಸಿದ್ಧ ತೈಲ ವರ್ಣಚಿತ್ರವನ್ನು 1880 ರ ಸುಮಾರಿಗೆ ರಚಿಸಿದವರು 19 ನೆಯ ಶತಮಾನದ ಇಟಾಲಿಯನ್ ಚಿತ್ರಕಾರ ಗುಗ್ಲಿಯೆಲ್ಮೊ ಸ್ಟೆಲ್ಲ. ಚಿತ್ರಕಲೆಯ ಯಾವುದೇ ತರಬೇತಿ ಇಲ್ಲದೇ, ಸ್ವಂತ ಅಭಿರುಚಿಯಿಂದ ಕಲೆಗಾರಿಕೆಯಲ್ಲಿ ಪಳಗಿದ ಪ್ರತಿಭೆ. ಕೆಲಸ ಮಾಡುವಾಗ ಎಡಗೈಗೆ ಪೆಟ್ಟಾಗಿ, ಮೂಳೆ ಮುರಿದು, ಕೆಲಕಾಲ ಆಸ್ಪತ್ರೆಯಲ್ಲಿ ಇದ್ದ ತನ್ನ ಯಜಮಾನ ಮರಳಿ ಮನೆಗೆ ಬಂದಾಗ ಆಪ್ಯಾಯತೆ ತೋರುತ್ತಿರುವ ಆತನ ಸಾಕುನಾಯಿಯ ಚಿತ್ರಣ ಮನೋಜ್ಞವಾಗಿದೆ. ಆ ಮನೆಯಲ್ಲಿನ ಬಡತನ ಎದ್ದು ಕಾಣುತ್ತಿದೆ. ಆದರೆ, ಪ್ರೀತಿ-ವಿಶ್ವಾಸಗಳಿಗೂ, ಆರ್ಥಿಕ ಸ್ಥಿತಿಗೂ ಸಂಬಂಧ ಇಲ್ಲವೆಂಬ ಸತ್ಯ ಈ ಚಿತ್ರದಲ್ಲಿದೆ. ಆ ಕಾಲದ ಸಾಮಾನ್ಯ ಜನಜೀವನದ ಸ್ಥಿತಿ, ದುಡಿಯುವ ಯಜಮಾನನಿಗೆ ಸ್ವಲ್ಪ ಅನಾರೋಗ್ಯವಾದರೂ ಯಾವ ರೀತಿ ಮನೆಯ ಪರಿಸ್ಥಿತಿ ಬದಲಾಗುತ್ತಿತ್ತು - ಮೊದಲಾದ ಒಳನೋಟಗಳನ್ನು ನೀಡುವ ಚಿತ್ರ.

This 1880 oil painting by the Italian artist Guglielmo Stella is titled "True Companion". Stella had no formal training in painting but learned the art through sheer dedication and practice. The painting depicts the feelings of the family dog when the master returned from a hospital after an injury to his left hand. The state of poverty in the house is striking. However, there is no dearth of love and affection. The painting elaborates on the social structure of the society in those times. Any health issue of the earning member of the family would have created havoc in the financial and other harmonies in the family.

200. Gratitude to the Legacy



"The incision: a tribute to research". Oil painting by Richard Bannister. Wellcome Collection. Attribution 4.0 International (CC BY 4.0)

ರಿಚರ್ಡ್ ಬ್ಯಾನಿಸ್ಟರ್ ಎಂಬ ಬ್ರಿಟಿಷ್ ಚಿತ್ರಕಾರ 1980 ರ ಸುಮಾರಿಗೆ ರಚಿಸಿದ ತೈಲ ವರ್ಣಚಿತ್ರ. ಬಹಳ ಸಾಂಕೇತಿಕ ಮಹತ್ವದ ಈ ಚಿತ್ರದಲ್ಲಿ, "ಜಗತ್ತಿನ ಯಾವುದೇ ವೈದ್ಯ ಒಂದು ಶಸ್ತ್ರಚಿಕಿತ್ಸೆ ಮಾಡುವಾಗ ಆತನ ಬೆನ್ನಲ್ಲಿ ಸಾವಿರಾರು ವರ್ಷಗಳ ಸಾಧಕರ ಇತಿಹಾಸವಿರುತ್ತದೆ" ಎಂದು ತೋರುವ ಚಿತ್ರ. ಚಿತ್ರದ ಅಡಿಯಲ್ಲಿ ಈ ಎಲ್ಲಾ ಮಹನೀಯರನ್ನೂ ಚಿತ್ರಕಾರರು ಸ್ಮರಿಸಿದ್ದಾರೆ. ಇದಕ್ಕೆ ಬೆಂಬಲವಾಗಿ ನಿಂತ ಹಲವಾರು ಸಾಧನಗಳನ್ನೂ ಚಿತ್ರಿಸಿದ್ದಾರೆ. ಮಹಾನ್ ವ್ಯಕ್ತಿತ್ವಗಳ ಹೆಗಲಿನ ಮೇಲೆ ನಾವಿಂದು ನಿಂತು, ನಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಂಡಿದ್ದೇವೆ ಎಂಬ ಮಾತಿನ ಸೂಚಕ ಈ ಚಿತ್ರ.

This famous 1980 oil painting by the British artist Richard Bannister carries a huge symbolic value. Titled “The Incision: a Tribute to Research”, the painting implies that behind every incision of a surgeon, there is a legacy of centuries. The artist has mentioned some of the biggest historical names in the field of surgery, along with many instruments crafted by them. The painting reminds us of the shoulders of the giants that we are standing for a wider vision of the horizon.

201. Compassion and Gratitude



"Colantonio, Saint Jerome in his Study by Sofia AtmatzidouEulgem is licensed under CC BY-NC-SA 2.0

ನಿಕೊಲೊ ಕೊಲಾಂಟೊನಿಯೊ ಎಂಬ ಇಟಲಿಯ ಚಿತ್ರಕಾರ 1445 ರ ಸುಮಾರಿಗೆ ಈ ಚಿತ್ರವನ್ನು ರಚಿಸಿದರು. 4 ನೆಯ ಶತಮಾನದಲ್ಲಿ ಬಾಳಿದ್ದ ಸಂತ ಜೆರೊಮ್ ಮೃದು ಮನಸ್ಸಿನ ವೈದ್ಯರೆಂದು ಖ್ಯಾತರಾಗಿದ್ದರು. ಅವರು ಒಂದು ದಿನ ತಮ್ಮ ಅಧ್ಯಯನದಲ್ಲಿ ನಿರತರಾಗಿರುವಾಗ ಯಾರೋ ನರಳುವ ಸದ್ದು ಕೇಳಿತು. ಕುತೂಹಲದಿಂದ ಬಾಗಿಲು ತೆರೆದು ನೋಡಿದರೆ, ಪಾದಕ್ಕೆ ಚುಚ್ಚಿರುವ ಮುಳ್ಳಿನಿಂದ ನೋವು ಅನುಭವಿಸುತ್ತಿರುವ ಸಿಂಹವೊಂದು ನಿಂತಿತ್ತು. ಭಯವನ್ನು ಬದಿಗಿಟ್ಟು ತಮ್ಮ ಕರ್ತವ್ಯವನ್ನು ಮುಂದೆ ಮಾಡಿದ ಸಂತ ಜೆರೊಮ್, ಆ ಸಿಂಹದ ಕಾಲಿನ ಮುಳ್ಳನ್ನು ತೆಗೆದು, ವ್ರಣಕ್ಕೆ ಔಷಧ ಹಚ್ಚಿ, ಉಪಚಾರ ಮಾಡಿದರು. ಉಪಕಾರ ಸ್ಮರಣೆಯಿಂದ ಆ ಸಿಂಹ ತನ್ನ ಜೀವನವೆಲ್ಲಾ ಸಂತ ಜೆರೊಮ್ ಅವರ

ಅನುಯಾಯಿಯಾಗಿ ಬಾಳಿತು ಎಂದು ಐತಿಹ್ಯ! ಒಳಿತಿನಿಂದ ಒಳಿತು ಪಸರಿಸಿ ಇಡೀ ಪ್ರಪಂಚವನ್ನು ತುಂಬಲಿ ಎನ್ನುವುದೇ ಮಾನವತೆಯ ಮೂಲ ಮಂತ್ರ.

The legacy of spreading good extends beyond humans! This 1445 painting by the Italian painter Niccolò Colantonio depicts the story of compassion broadening the realms of humanity. Saint Jerome, who lived in the 4th century, was a doctor known for his tender-heartedness. One day, he heard a cry outside his study. On opening the door, he found a lion with a thorn stuck at its paw. Saint Jerome lived up to his principles of helping every life. He carefully removed the thorn, cleaned, and dressed the wound. Overcome with gratitude, the lion became a loyal and gentle companion to Saint Jerome for life. "Good begets good" can be the mantra for a happier world!

ಲೇಖಕರ ಬಗ್ಗೆ | About the Author



ಡಾ. ಕಿರಣ್ ವಿ. ಎಸ್. ವೃತ್ತಿಯಿಂದ ವೈದ್ಯರು. ವೈದ್ಯಕೀಯ ಇತಿಹಾಸ ಅವರ ಆಸಕ್ತಿ. ವಿಜ್ಞಾನ ಸಂವಹನದಲ್ಲಿ ವಿಶೇಷ ಆಸ್ಥೆ ಉಳ್ಳವರು. ವೈದ್ಯಕೀಯ ವಿಜ್ಞಾನದ ವಿಷಯಗಳನ್ನು ಸರಳವಾಗಿಸುವ ಪ್ರಕ್ರಿಯೆಯಲ್ಲಿ ಶ್ರಮಿಸುತ್ತಿದ್ದಾರೆ. ಅವರ "ಸೆರೆಂಡಿಪಿಟಿ – ವೈದ್ಯಲೋಕದ ಅದ್ಭುತ ಆಕಸ್ಮಿಕಗಳು" ಎಂಬ ಇ-ಪುಸ್ತಕ ವೈದ್ಯಕೀಯ ಆಕಸ್ಮಿಕ ಅಚ್ಚರಿಗಳ ಪ್ರಪಂಚದ ಅತೀ ದೊಡ್ಡ ಸಂಗ್ರಹ. "ಸೆರೆಂಡಿಪಿಟಿ" ಇ-ಪುಸ್ತಕ ಓದುಗರ ಮುಕ್ತಕಂಠದ ಪ್ರಶಂಸೆ ಗಳಿಸಿದೆ. ಪ್ರಸ್ತುತ "ನಿರಾಮಯ" ಎನ್ನುವ ದ್ವಿಭಾಷಾ ಇ-ಪುಸ್ತಕ ವೈದ್ಯಕೀಯ ಇತಿಹಾಸವನ್ನು ಪ್ರಸಿದ್ಧ ಚಿತ್ರಗಳ ಮೂಲಕ ಬಿಂಬಿಸುವ ವಿನೂತನ ಪ್ರಯತ್ನ.

Dr. Kiran V. S. is a medical practitioner with a passion for medical history. He is avidly working at improving science communication to those with non-science backgrounds. His earlier e-book in Kannada (an Indian language spoken by over 60 million people) "Serendipity", a collection of 50 incidental discoveries in the field of medicine, has been received with a lot of fervour by readers and had raving reviews. The present bilingual book "Nirāmaya" is another attempt in taking the medical history to the readers in a unique way through famous works of art.